

ಮೈಸೂರು ಮಿತ್ರ

ಮೈಸೂರು-ಮಂಡ್ಯ-ಚಾಮರಾಜನಗರ-ಕೊಡಗು-ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಮಾರ್ಚ್ 10 ಮಂಗಳವಾರ 2026

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್.ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ-ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸಂಪುಟ: 46 | ಸಂಚಿಕೆ: 319 | ಪುಟಗಳು: 12
ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹4



ತಿ.ನರಸೀಪುರ ಕೆಎಸ್‌ಐಸಿ ಆವರಣದಲ್ಲಿ ಕ್ರೀಡಾಂಗಣ ಯೋಜನೆ ಕೈಬಿಟ್ಟ ಸರ್ಕಾರ

■ ವಿಧಾನಸಭೆಯಲ್ಲಿ ಶಾಸಕ ಶ್ರೀವತ್ಸ, ವಿಪಕ್ಷ ನಾಯಕ ಆರ್. ಅಶೋಕ್ ಪ್ರಸ್ತಾವಕ್ಕೆ ರೇಷ್ಮೆ ಸಚಿವ ಕೆ. ವೆಂಕಟೇಶ್ ಘೋಷಣೆ ■ ಮುಖ್ಯಮಂತ್ರಿಗಳಿಗೆ ತಪ್ಪು ಮಾಹಿತಿ ನೀಡಿದ್ದ ಅಧಿಕಾರಿಗಳು! ■ ರೇಷ್ಮೆ ಸೀರೆ ಉತ್ಪಾದನೆ ಹೆಚ್ಚಳಕ್ಕೆ ನಿರ್ಧಾರ

ಬೆಂಗಳೂರು, ಮಾ. 9(ಕೆಎಂಶಿ)- ತಿ.ನರಸೀಪುರದ ರೇಷ್ಮೆ ನೂಲು ಬಿಚ್ಚಣಿಕೆ ಕಾರ್ಖಾನೆಯ ಆವರಣದಲ್ಲಿ ನಿರ್ಮಾಣ ಮಾಡಲು ಉದ್ದೇಶಿಸಿದ್ದ ಕ್ರೀಡಾಂಗಣ ಯೋಜನೆಯ ಕೈಬಿಡಲಾಗಿದೆ ಎಂದು ರೇಷ್ಮೆ ಸಚಿವರೂ ಆದ ಕೆ. ವೆಂಕಟೇಶ್ ಇಂದು ವಿಧಾನಸಭೆಯಲ್ಲಿ ಪ್ರಕಟಿಸಿದರು.

ಮೈಸೂರು ಕೃಷ್ಣರಾಜ ಕ್ಷೇತ್ರದ ಶಾಸಕ ಶ್ರೀವತ್ಸ ಹಾಗೂ ವಿಪಕ್ಷ ನಾಯಕ ಆರ್. ಅಶೋಕ್ ಅವರ ಪ್ರಶ್ನೆಗೆ ಪ್ರತಿಕ್ರಿಯಿಸಿದ ಅವರು, ತಿ.ನರಸೀಪುರ ರೇಷ್ಮೆ ನೂಲು ಬಿಚ್ಚಣಿಕೆ ಕಾರ್ಖಾನೆಯನ್ನು ಮುಚ್ಚುವುದಿಲ್ಲ. ಕ್ರೀಡಾಂಗಣದ ವಿಚಾರದಲ್ಲಿ ಅಧಿಕಾರಿಗಳು ಮುಖ್ಯಮಂತ್ರಿ ಸಿದ್ದರಾಮಯ್ಯರಿಗೆ ತಪ್ಪು ಮಾಹಿತಿ ನೀಡಿದ್ದರು.


ಕೆ. ವೆಂಕಟೇಶ್

ಇಲ್ಲಿ ಕ್ರೀಡಾಂಗಣ ನಿರ್ಮಿಸುವ ಪ್ರಸ್ತಾವವನ್ನು ಈಗ ಕೈಬಿಡಲಾಗಿದೆ ಎಂದು ತಿಳಿಸಿದರು. ತಿ.ನರಸೀಪುರದ ಈ ರೇಷ್ಮೆ ಕಾರ್ಖಾನೆ 12.11 ಎಕರೆ ಪ್ರದೇಶದಲ್ಲಿ ಕಾರ್ಯಾಚರಿಸುತ್ತಿದ್ದು, ಇದರಲ್ಲಿ 5.08 ಎಕರೆ ಜಾಗದಲ್ಲಿ ಕ್ರೀಡಾಂಗಣ ನಿರ್ಮಾಣ ಮಾಡಲು ಸರ್ಕಾರ ನಿರ್ಧರಿಸಿತ್ತು. ಈ ಪ್ರಸ್ತಾಪದ ವಿರುದ್ಧ ಪರಿಸರವಾದಿಗಳು, ಕಾರ್ಖಾನೆಗಳ ಕಾರ್ಮಿಕರು, ಸಾರ್ವಜನಿಕರು ತೀವ್ರ ಹೋರಾಟ ನಡೆಸಿ, ಇಲ್ಲಿ ಕ್ರೀಡಾಂಗಣ ನಿರ್ಮಾಣ ಪ್ರಯತ್ನ ಕೈಬಿಡುವಂತೆ ಆಗ್ರಹಿಸಿದರು. ಅಂತೂ ಹೋರಾಟಕ್ಕೆ ಸರ್ಕಾರ ಮಣಿದಿದೆ.

ರೇಷ್ಮೆ ಸೀರೆ ಉತ್ಪಾದನೆ ಹೆಚ್ಚಳ: ಕೆಎಸ್‌ಐಸಿ ಸೀರೆಗಳ ಉತ್ಪಾದನೆ ಹೆಚ್ಚಿಸಲು ಕ್ರಮಕೈಗೊಳ್ಳಲಾಗುವುದು ಎಂದು ರೇಷ್ಮೆ ಸಚಿವ ಕೆ.ವೆಂಕಟೇಶ್ ಇದೇ ವೇಳೆ ಸ್ಪಷ್ಟಪಡಿಸಿದರು. ಶ್ರೀವತ್ಸ ಟಿ.ಎಸ್ ಅವರ ಪ್ರತ್ಯೇಕ ಪ್ರಸ್ತಾವಕ್ಕೆ ಉತ್ತರಿಸಿದ ಅವರು, ಈ ದಿನವೊಂದಕ್ಕೆ 350ರಿಂದ 400 ಸೀರೆಗಳನ್ನು ಉತ್ಪಾದಿಸುತ್ತಿದ್ದೇವೆ. ಎಲ್ಲವೂ ■ 6ನೇ ಪುಟಕ್ಕೆ



ಸಂಘಟಿತ ಹೋರಾಟಕ್ಕೆ ಸಂದ ಜಯ

"ತಿ.ನರಸೀಪುರದ ಕೆಎಸ್‌ಐಸಿ ಫಿಲೇಚರ್ ಕಾರ್ಖಾನೆ ಆವರಣದಲ್ಲಿ ನಿರ್ಮಿಸಲು ಉದ್ದೇಶಿಸಲಾಗಿದ್ದ ಕ್ರೀಡಾಂಗಣ ಯೋಜನೆಯನ್ನು ಸರ್ಕಾರ ಕೈಬಿಟ್ಟಿದ್ದು ನಿಜಕ್ಕೂ ಸಂತಸದ ಸುದ್ದಿ. ಸರ್ಕಾರದ ಈ ತೀರ್ಮಾನವನ್ನು ಸ್ವಾಗತಿಸುತ್ತೇನೆ. ಇದು ಸಂಘಟಿತ ಹೋರಾಟಕ್ಕೆ ಸಿಕ್ಕಿರುವ ಜಯ. ಕಾರ್ಮಿಕರು ನಡೆಸುತ್ತಿದ್ದ ಪ್ರತಿಭಟನೆಯಲ್ಲಿ ನಾನೂ ಸೇರಿದಂತೆ ನಮ್ಮ ಬಿಜೆಪಿಯ ಹಲವಾರು ನಾಯಕರು ಭಾಗವಹಿಸಿದ್ದರು. ಮುಖ್ಯಮಂತ್ರಿಯವರನ್ನು ಭೇಟಿ ಮಾಡಿ, ಯೋಜನೆ ಕೈಬಿಡುವಂತೆ ವೈಯಕ್ತಿಕವಾಗಿ ಮನವಿ ಮಾಡಿದ್ದೆ.

- ಯದುವೀರ್, ಸಂಸದ



ಎತ್ತಿನಹೊಳೆ, ಮೇಕೆದಾಟು ವಿಳಂಬಕ್ಕೆ ರಾಜ್ಯ ಕಾಂಗ್ರೆಸ್ ಸರಕಾರವೇ ಕಾರಣ

ರಾಜ್ಯಸಭೆಯಲ್ಲಿ ಮಾಜಿ ಪ್ರಧಾನಿ ದೇವೇಗೌಡರು ಗುಡುಗು

- ತನ್ನ ತಪ್ಪುಗಳನ್ನು ಮರೆಮಾಚಿಕೊಳ್ಳಲು ಕೇಂದ್ರವನ್ನು ದೂರಲಾಗುತ್ತಿದೆ
- ಕೋಲಾರ, ಚಿಕ್ಕಬಳ್ಳಾಪುರಕ್ಕೆ ಎತ್ತಿನಹೊಳೆ ಬದಲು ಬೆಂಗಳೂರಿನ ಕೊಳಚೆ ನೀರು ಪೂರೈಕೆ



ನವದೆಹಲಿ, ಮಾ.9- ಕರ್ನಾಟಕದಲ್ಲಿ ನೀರಾವರಿ ಯೋಜನೆಗಳನ್ನು ಸಕಾಲಕ್ಕೆ ಕಾರ್ಯಗತ ಮಾಡಲಾಗದೇ ರಾಜ್ಯ ಕಾಂಗ್ರೆಸ್ ಸರ್ಕಾರವು ಕೇಂದ್ರ ಸರ್ಕಾರವನ್ನು ಅನಗತ್ಯವಾಗಿ ದೂರುತ್ತಿದೆ. ಸುಖಾಸುಮ್ಮನೆ ಅಪಪ್ರಚಾರ ಮಾಡುತ್ತಿದೆ ಎಂದು ಮಾಜಿ ಪ್ರಧಾನಿ ಹೆಚ್.ಡಿ. ದೇವೇಗೌಡರು ದೂರಿದರು.

ರಾಜ್ಯಸಭೆಯಲ್ಲಿ ಸೋಮವಾರ ಬಜೆಟ್ ಅಧಿವೇಶನದ ಮೇಲಿನ ಚರ್ಚೆಯಲ್ಲಿ ಭಾಗವಹಿಸಿ ಮಾತನಾಡಿದ ಅವರು, ಎತ್ತಿನಹೊಳೆ, ಮೇಕೆದಾಟು ಯೋಜನೆಗಳ ವಿಳಂಬಕ್ಕೆ ರಾಜ್ಯ ಸರಕಾರವೇ ನೇರ ಕಾರಣ. ಅದನ್ನು ಮರೆಮಾಚಿಕೊಳ್ಳಲು ಕೇಂದ್ರವನ್ನು ದೂರುತ್ತಿದೆ ಎತ್ತಿನಹೊಳೆ ಯೋಜನೆ ಕಾರ್ಯಗತ ■ 6ನೇ ಪುಟಕ್ಕೆ

ಬೇಸಿಗೆಯಲ್ಲಿ ಕುಡಿಯುವ ನೀರು ಪೂರೈಕೆಗೆ ನಿರಂತರ ವಿದ್ಯುತ್

ಬೆಂಗಳೂರು, ಮಾ. 9(ಕೆಎಂಶಿ)- ಬೇಸಿಗೆಯಲ್ಲಿ ಕುಡಿಯುವ ನೀರಿನ ಸಮಸ್ಯೆ ಆಗದಂತೆ ನೋಡಿಕೊಳ್ಳಲು ನಿರಂತರ ವಿದ್ಯುತ್ ಸರಬರಾಜು ಮಾಡುವುದಾಗಿ ಇಂಧನ ಸಚಿವ ಕೆ.ಜೆ.ಜಾರ್ಜ್ ವಿಧಾನ ಪರಿಷತ್ತಿನಲ್ಲಿಂದು ತಿಳಿಸಿದ್ದಾರೆ.

ಇದೇ ಕಾರಣಕ್ಕಾಗಿ ಗರಿಷ್ಠ ಸಾಮರ್ಥ್ಯದ 30,000 ವಿದ್ಯುತ್ ಪರಿವರ್ತಕಗಳನ್ನು ಕರ್ನಾಟಕ ವಿದ್ಯುತ್ ಕಾರ್ಖಾನೆಯಿಂದ ಖರೀದಿ ಮಾಡುತ್ತಿರುವುದಾಗಿ ಹೇಳಿದ್ದಾರೆ.


ಪ್ರಶ್ನೋತ್ತರ ವೇಳೆಯಲ್ಲಿ ಎಸ್.ರವಿಕುಮಾರ್ ಹಾಗೂ ಟಿ.ಎನ್.ಜವರಾಯಿಗೌಡ ಅವರ ಪ್ರತ್ಯೇಕ ಪ್ರಸ್ತಾವನೆಗೆ ಉತ್ತರಿಸಿದ

ಕೈಗಾರಿಕಾ ಫೀಡರ್‌ಗೆ 24x7 ಕರೆಂಟ್


ಕೆ.ಜೆ.ಜಾರ್ಜ್

ಸಚಿವರು, ವಿದ್ಯುತ್ ಸರಬರಾಜಿಗೆ ಅಡಚಣೆ ಆಗದಂತೆ ನಿಯಮಿತವಾಗಿ ಎಲ್ಲ ವಿದ್ಯುತ್ ಉಪಕೇಂದ್ರಗಳ ಹಾಗೂ 11 ಕೆವಿ ವಿದ್ಯುತ್ ಮಾರ್ಗಗಳ ನಿರ್ವಹಣೆ ಕಾರ್ಯ ಮಾಡಲಾಗುತ್ತಿದೆ.

ಕೈಗಾರಿಕಾ ಫೀಡರ್‌ಗೆ 24 ಗಂಟೆ ವಿದ್ಯುತ್: ನಗರ ಮತ್ತು ಗ್ರಾಮೀಣ ಪ್ರದೇಶದಲ್ಲಿ ಗುಣಮಟ್ಟದ ವಿದ್ಯುತ್ ಹರಿಸುವುದರ ಜೊತೆಗೆ ಕೈಗಾರಿಕಾ ಫೀಡರ್‌ಗಳು ನಿರಂತರ ಜ್ಯೋತಿ ಅಡಿ 24 ಗಂಟೆ ವಿದ್ಯುತ್ ಸರಬರಾಜು ಮಾಡಲಾಗುತ್ತಿದೆ. ವರ್ಷದಿಂದ ವರ್ಷಕ್ಕೆ ■ 6ನೇ ಪುಟಕ್ಕೆ



ನೂತನ ಸರ್ವೋಚ್ಚ ನಾಯಕನ ಪದಗ್ರಹಣದ ಬೆನ್ನಲ್ಲೇ

ಇರಾನ್ ಮೇಲೆ ಮುಗಿಬಿದ್ದ ಇಸ್ರೇಲ್-ಅಮೆರಿಕಾ

ರಷ್ಯಾ ಇರಾನ್‌ಗೆ ಬೆಂಬಲ; ಟ್ರಂಪ್ ಕೆಂಡಾಮಂಡಲ

ನವದೆಹಲಿ: ಇರಾನ್ ನೂತನ ಸರ್ವೋಚ್ಚ ನಾಯಕರಾಗಿ ಆಗಿ ಮೊಜ್ತಾಬಾ ಖಮೇನಿ ಅಧಿಕಾರ ವಹಿಸಿಕೊಂಡ ಬೆನ್ನಲ್ಲೇ ಇರಾನ್ ಮತ್ತು ಅಮೆರಿಕ-ಇಸ್ರೇಲ್ ನಡುವಿನ ಸಂಘರ್ಷ ಮತ್ತಷ್ಟು ತಾರಕಕ್ಕೇರಿದೆ.


ಟ್ರಂಪ್

ಇಸ್ರೇಲ್ ಪ್ರಧಾನಿ ಬೆಂಜಮಿನ್ ನೆತನ್ಯಾಹು ಅವರೊಂದಿಗಿನ ಮಾತುಕತೆಯಲ್ಲಿ ಪರಸ್ಪರ ನಿರ್ಧಾರದ ಬಳಿಕವೇ ಇರಾನ್ ಮೇಲಿನ ಸಮರವನ್ನು ನಾವು ಕೊನೆಗೊಳಿಸುವುದು ಎಂದು ಅಮೆರಿಕ ಅಧ್ಯಕ್ಷ ಟ್ರಂಪ್ ಹೇಳಿದ್ದರು. ಇದಕ್ಕೆ ಪ್ರತಿಕ್ರಿಯೆ ಎಂಬಂತೆ ಅಮೆರಿಕದ ವಿರುದ್ಧ ದಶಕಗಳ ಕಾಲ ಯುದ್ಧ ಮಾಡಲು ನಾವು ಸಿದ್ಧರಿದ್ದೇವೆ ಎಂದು ಇರಾನ್ ಘೋಷಿಸಿದೆ.

ರಷ್ಯಾ ಬೆಂಬಲ: ಇರಾನ್‌ನ ನೂತನ ಸರ್ವೋಚ್ಚ ನಾಯಕರಾಗಿ ಅಧಿಕಾರ ಸ್ವೀಕರಿಸಿರುವ ಮೊಜ್ತಾಬಾ ಖಮೇನಿ ಅವರಿಗೆ ರಷ್ಯಾ ಅಧ್ಯಕ್ಷ ವ್ಲಾಡಿಮಿರ್ ಪುಟಿನ್ ಬಹಿರಂಗ ಬೆಂಬಲ ಘೋಷಿಸಿದ್ದಾರೆ. ಅಮೆರಿಕ ಮತ್ತು ■ 6ನೇ ಪುಟಕ್ಕೆ

ಮೈಸೂರು ಅಭಿವೃದ್ಧಿ ಪ್ರಾಧಿಕಾರದಲ್ಲಿ 220 ಕೋಟಿ ಉಳಿತಾಯ ಬಜೆಟ್

ಎಂಡಿಎ ಆಯುಕ್ತ ರಕ್ಷಿತ್‌ರಿಂದ 2026-27ನೇ ಸಾಲಿನ ಆಯ-ವ್ಯಯ ಮಂಡನೆ

● ಒಟ್ಟು ಆದಾಯ 799 ಕೋಟಿ ● ಬಡಾವಣೆಗಳ ಅಭಿವೃದ್ಧಿಗೆ 519 ಕೋಟಿ ವೆಚ್ಚ ● ಕೆರೆಗಳ ಪುನರುಜ್ಜೀವನಕ್ಕೆ ಹೆಚ್ಚು ಒತ್ತು ● ಜನಪ್ರತಿನಿಧಿಗಳಿಲ್ಲದೇ ಅಧಿಕಾರಿಗಳ ಕಾರುಬಾರು!

ಮೈಸೂರು, ಮಾ.9(ಬಿಎಲ್‌ಯು)- ಮೈಸೂರು ಅಭಿವೃದ್ಧಿ ಪ್ರಾಧಿಕಾರದ, 220 ಕೋಟಿ ರೂಪಾಯಿಗಳ ಉಳಿತಾಯ ಬಜೆಟ್ ಅನ್ನು ಪ್ರಾಧಿಕಾರದ ಆಯುಕ್ತ ಕೆ.ಆರ್.ರಕ್ಷಿತ್ ಇಂದು ಮಂಡಿಸಿದರು.

ಮೈಸೂರು ಅಭಿವೃದ್ಧಿ ಪ್ರಾಧಿಕಾರದ ಸಭಾಂಗಣದಲ್ಲಿ ಇಂದು ಪ್ರಾಧಿಕಾರದ ಅಧ್ಯಕ್ಷರೂ ಆದ ಜಿಲ್ಲಾಧಿಕಾರಿ ಜಿ.ಲಕ್ಷ್ಮಿಕಾಂತರೆಡ್ಡಿ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ರಕ್ಷಿತ್ ಅವರು 2026-27ನೇ ಸಾಲಿನ ಬಜೆಟ್ ಮಂಡಿಸಿ, ಆಯ-ವ್ಯಯದ ವಿವರ ನೀಡಿದರು.

ಪ್ರಸಕ್ತ ಆರ್ಥಿಕ ವರ್ಷದಲ್ಲಿ ಸಂಪನ್ಮೂಲಗಳ ಎಲ್ಲಾ ಮೂಲಗಳಿಂದ ಒಟ್ಟು 799.90 ಕೋಟಿ ಆದಾಯ ನಿರೀಕ್ಷೆ ಮಾಡಲಾಗಿದೆ. ಬಡಾವಣೆಗಳಲ್ಲಿ ಅಭಿವೃದ್ಧಿ ಕಾರ್ಯ ಕೈಗೊಳ್ಳಲು 579.18 ಕೋಟಿ ವೆಚ್ಚ ಪ್ರಸ್ತಾಪಿಸಲಾಗಿದೆ. ಈ ಮೂಲಕ ಪ್ರಾಧಿಕಾರಕ್ಕೆ 220.72 ಕೋಟಿ ಉಳಿತಾಯ ಉದ್ದೇಶಿಸಲಾಗಿದೆ ಎಂದು ರಕ್ಷಿತ್ ತಿಳಿಸಿದರು.

ನೀರು ಸರಬರಾಜು ಸೇವಾ ಶುಲ್ಕ, ರಿಂಗ್ ರಸ್ತೆಯ ಸರ್ ಚಾರ್ಜ್, ಕೊಳಚೆ ಪ್ರದೇಶದ ಸುಧಾರಣಾ ಸೆಸ್, ಯೋಜನೆ ಮತ್ತು ಮೂಲ ಸೌಕರ್ಯ ಅಭಿವೃದ್ಧಿಯಿಂದ ಸ್ವೀಕರಿಸುವ ಶುಲ್ಕ ಸೇರಿದಂತೆ ಸರ್ಕಾರದ ನಿರ್ದೇಶನದಂತೆ ವಸೂಲು ಮಾಡುವ ಇತರೆ ಶಾಸನಬದ್ಧ ಶುಲ್ಕದಿಂದ ಒಟ್ಟು 227. ಕೋಟಿ ನಿರೀಕ್ಷೆ ಮಾಡಲಾಗಿದೆ ಎಂದು ಹೇಳಿದರು.

ವಾಣಿಜ್ಯ, ಬಿಡಿ ಮತ್ತು ಮೂಲೆ ನಿವೇಶನಗಳ ಹರಾಜಿನಿಂದ ಬರುವ ಲಾಭ, ವಾಣಿಜ್ಯ ಸಂಕೀರ್ಣ, ಭೂಮಿ, ಕಟ್ಟಡದಿಂದ ಸ್ವೀಕೃತವಾಗುವ ಬಾಡಿಗೆ, ಗುತ್ತಿಗೆಯಿಂದ ಸ್ವೀಕರಿಸುವ ಹಣ, ಬೆಟರ್‌ಮೆಂಟ್ ಟ್ಯಾಕ್ಸ್ ಸೇರಿದಂತೆ ಇತರೆ ಮೂಲದಿಂದ 407 ಕೋಟಿ ರೂ. ನಿರೀಕ್ಷೆ ಮಾಡಲಾಗಿದೆ ಎಂದು ರಕ್ಷಿತ್ ಮಾಹಿತಿ ನೀಡಿದರು. ■ 6ನೇ ಪುಟಕ್ಕೆ


ಮೈಸೂರು ಅಭಿವೃದ್ಧಿ ಪ್ರಾಧಿಕಾರದ ಸಭಾಂಗಣದಲ್ಲಿ ಸೋಮವಾರ ಪ್ರಾಧಿಕಾರದ ಆಯುಕ್ತ ಕೆ.ಆರ್.ರಕ್ಷಿತ್ ಅವರು 2026-27ನೇ ಸಾಲಿನ ಬಜೆಟ್ ಮಂಡಿಸಿದರು. ಪ್ರಾಧಿಕಾರದ ಅಧ್ಯಕ್ಷರೂ ಆದ ಜಿಲ್ಲಾಧಿಕಾರಿ ಜಿ.ಲಕ್ಷ್ಮಿಕಾಂತರೆಡ್ಡಿ ಅವರನ್ನು ಚಿತ್ರದಲ್ಲಿ ಕಾಣಬಹುದು.

ನಿವೇಶನಾಕಾಂಕ್ಷಿಗಳಿಗೆ ಗುಡ್ ನ್ಯೂಸ್

ಬೊಮ್ಮೇನಹಳ್ಳಿ, ಕಮರಹಳ್ಳಿಯಲ್ಲಿ ಬಡಾವಣೆ ಅಭಿವೃದ್ಧಿಗೆ 460 ಕೋಟಿ

● ಶೇಕಡ 50: 50 ಅನುಪಾತದಲ್ಲಿ ರೈತರು, ಎಂಡಿಎಗೆ ನಿವೇಶನ ಹಂಚಿಕೆ ● ಬಡಾವಣೆ ನಿರ್ಮಾಣಕ್ಕೆ 500 ಎಕರೆ ಭೂಮಿ ನೀಡಲು ರೈತರ ಸಮ್ಮತಿ ● ಭೂಮಿ ನೀಡಲು ಮತ್ತಷ್ಟು ರೈತರ ಒಲವು ● ಒಟ್ಟಾರೆ ಒಂದು ಸಾವಿರ ಎಕರೆ ಭೂಮಿ ಹೊಂದಿಸುವ ನಿರೀಕ್ಷೆ

ಮೈಸೂರು, ಮಾ.9(ಬಿಎಲ್‌ಯು)- ಮೈಸೂರಿನ ನಿವೇಶನಾಕಾಂಕ್ಷಿಗಳಿಗೆ ಗುಡ್ ನ್ಯೂಸ್. ಹಲವು ವರ್ಷಗಳ ನಂತರ ಹೊಸ ಬಡಾವಣೆ ಅಭಿವೃದ್ಧಿಗೆ ಮೈಸೂರು ಅಭಿವೃದ್ಧಿ ಪ್ರಾಧಿಕಾರ (ಎಂಡಿಎ) ಪ್ರಕ್ರಿಯೆ ಆರಂಭಿಸಿದೆ. ನೂತನ ಬಡಾವಣೆ ನಿರ್ಮಾಣಕ್ಕೆ ಬಜೆಟ್‌ನಲ್ಲಿ 470 ಕೋಟಿ ಹಣ ಕೂಡ ಮೀಸಲಿಟ್ಟಿದೆ.

ಮೈಸೂರು ಅಭಿವೃದ್ಧಿ ಪ್ರಾಧಿಕಾರದ ಸಭಾಂಗಣದಲ್ಲಿ ಇಂದು ನಡೆದ ಸಭೆಯಲ್ಲಿ ಪ್ರಾಧಿಕಾರದ ಆಯುಕ್ತ ಕೆ.ಆರ್. ರಕ್ಷಿತ್ ಈ ಸಂಬಂಧ ಸಮಗ್ರ ವಿವರ ನೀಡಿದರು. ಮೈಸೂರು ಅಭಿವೃದ್ಧಿ ಪ್ರಾಧಿಕಾರದ ವ್ಯಾಪ್ತಿಯಲ್ಲಿ ಬರುವ ಬೊಮ್ಮೇನಹಳ್ಳಿ, ಕಮರಹಳ್ಳಿ ಹಾಗೂ ಇತರೆ ಗ್ರಾಮಗಳಲ್ಲಿ ರೈತರ ■ 6ನೇ ಪುಟಕ್ಕೆ

ಕ್ಷುಲ್ಲಕ ಕಾರಣಕ್ಕೆ ನೇಣು ಬಿಗಿದುಕೊಂಡು ದಂಪತಿ ಆತ್ಮಹತ್ಯೆ

ಆಶ್ಚರ್ಯಕರ ರೀತಿ ಬದುಕುಳಿದ ಎರಡು ವರ್ಷದ ಪುತ್ರಿಯಿಂದಲೇ ತಂದೆ ತಾಯಿಯ ಅಂತ್ಯ ಸಂಸ್ಕಾರ

ಕೆ.ಆರ್.ಪೇಟೆ, ಮಾ.9- ಕ್ಷುಲ್ಲಕ ಕಾರಣಕ್ಕೆ ದಂಪತಿ ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಆದರೆ ಎರಡು ವರ್ಷದ ಮಗು ಆಶ್ಚರ್ಯಕರ ರೀತಿ ಪಾರಾಗಿದೆ. ಈ ಘಟನೆ ಪಟ್ಟಣದ ಜಯನಗರ ಬಡಾವಣೆಯ ಶ್ರೀ ಲಕ್ಷ್ಮಿವೆಂಕಟೇಶ್ವರ ಸಮುದಾಯ ಭವನದ ಹಿಂಭಾಗದ ಬಾಡಿಗೆ ಮನೆಯಲ್ಲಿ ಸೋಮವಾರ ಮುಂಜಾನೆ ನಡೆದಿದೆ.

ಜಯನಗರ ಬಡಾವಣೆಯ ನಿವಾಸಿಗಳಾದ ದರ್ಶನ್ (29) ಮತ್ತು ಎನ್.ಎಲ್. ದಿವ್ಯ(25) ಆತ್ಮಹತ್ಯೆ ಮಾಡಿಕೊಂಡ ದಂಪತಿಯಾಗಿದ್ದು, ಇವರ ಎರಡು ವರ್ಷದ ಮಗು ಖಾಸಗಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದಿದೆ.

ನಾಟನಹಳ್ಳಿ ಗ್ರಾಮದ ಲಕ್ಷ್ಮಣಗೌಡ ಮತ್ತು ಸುನಂದ ದಂಪತಿಯ ಪುತ್ರಿ ದಿವ್ಯ ಫಾರ್ಮಸಿ ವ್ಯಾಸಂಗ ಮಾಡಿದ್ದು, ಟ್ಯಾಕ್ಸಿ ಚಾಲಕ ಹೊಸಕೋಟೆ ಗ್ರಾಮದ ಗಣೇಶಗೌಡ ಮತ್ತು ಮಂಜುಳಾ ದಂಪತಿಯ ಪುತ್ರ ದರ್ಶನ್ ಪ್ರೀತಿಸುತ್ತಿದ್ದರು. ಕಳೆದ 3 ವರ್ಷಗಳ ಹಿಂದೆ ಎರಡು ಕುಟುಂಬದವರ ಸಮ್ಮತಿಯಂತೆ ವಿವಾಹವಾಗಿ ಜಯನಗರ ಬಡಾವಣೆಯಲ್ಲಿ ವಾಸವಾಗಿದ್ದರು.


ದಿವ್ಯ ಮತ್ತು ದರ್ಶನ್

ಪತ್ನಿ ದಿವ್ಯ ತಾನೂ ಫಾರ್ಮಸಿ ವ್ಯಾಸಂಗ ಮಾಡಿದ್ದು, ಸ್ವಂತ ಮೆಡಿಕಲ್ ಸ್ಟೋರ್ ಇಟ್ಟುಕೊಡುವಂತೆ ಗಂಡನನ್ನು ಆಗಾಗ ಪೀಡಿಸುತ್ತಿದ್ದಳು. ಗಂಡ ಈಗ ಮನೆ ಕಟ್ಟಿಸುತ್ತಿರುವುದಾಗಿಯೂ ಮುಂದೆ ಮಾಡಿಕೊಡುವ ಭರವಸೆ ನೀಡಿದ್ದಾರೆ. ಇದೇ ವಿಚಾರವಾಗಿ ಇಂದು ಬೆಳಗ್ಗೆ ಸಹ ಜಗಳವಾಗಿದೆ ಎನ್ನಲಾಗಿದೆ. ■ 6ನೇ ಪುಟಕ್ಕೆ

ಕನಸು ರಂಗ ತಂಡದಿಂದ ಮೈಸೂರಲ್ಲಿ ಮಕ್ಕಳಿಗೆ ವಿಶೇಷ ಬೇಸಿಗೆ ಶಿಬಿರ



ಮೈಸೂರು, ಮಾ.9(ಜಿಎ)–ಮೈಸೂರಿನ ಕನಸು ರಂಗತಂಡದಿಂದ ಮಕ್ಕಳಿಗಾಗಿ ವಿಶೇಷ ಬೇಸಿಗೆ ಶಿಬಿರ ಆಯೋಜಿಸಲಾಗಿದೆ ಎಂದು ಜೆಡಿಎಸ್ ನಗರ ಅಧ್ಯಕ್ಷ ಎಸ್‌ಬಿಎಂ ಮಂಜು ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕನಸು ರಂಗತಂಡದ ಪ್ರತಿಭಾ ಪಲ್ಲವ ವಿಭಾಗವು ಈ ಬಾರಿ ಮಕ್ಕಳಿಗಾಗಿ ವಿಶಿಷ್ಟವಾಗಿ 'ವನದ ಮನಗಳು' ಎಂಬ ಶೀರ್ಷಿಕೆಯೊಂದಿಗೆ ಶಿಬಿರ ಆಯೋಜಿಸಲಾಗಿದೆ ಎಂದರು.

ಶಿಬಿರವು ಏ.5 ರಿಂದ ಮೇ.10ವರೆಗೆ ಒಟ್ಟು 35 ದಿನಗಳ ಕಾಲ ಗೋಕುಲಂ 3ನೇ ಹಂತ ಮೈಸೂರು ಒನ್ ಹತ್ತಿರದ ಸಾಂಸ್ಕೃತಿಕ ಭವನದಲ್ಲಿ ನಡೆಯಲಿದೆ. ಈ ಬಾರಿಯ ಬೇಸಿಗೆ ಶಿಬಿರವನ್ನು ವೃಕ್ಷ ಮಾತೆ ಹಾಗೂ ಪದ್ಮಶ್ರೀ ಪುರಸ್ಕೃತರಾದ ಸಾಲುಮರದ ತಿಮ್ಮಕ್ಕ ಅವರಿಗೆ ಸಮರ್ಪಿಸುತ್ತಿದ್ದೇವೆ. 6ರಿಂದ 15 ವರ್ಷದೊಳಗಿನ ಮಕ್ಕಳಿಗೆ ಮಾತ್ರ ಶಿಬಿರದಲ್ಲಿ ಭಾಗವಹಿಸಲು ಅವಕಾಶ ಕಲ್ಪಿಸಲಾಗಿದೆ ಎಂದರು.

ಹೆಚ್ಚಿನ ಮಾಹಿತಿಗಾಗಿ 8123816347, 9902987805 ಸಂಪರ್ಕಿಸಿ ಎಂದರು.

ಸುದ್ದಿಗೋಷ್ಠಿಯಲ್ಲಿ ಚಂದ್ರಶೇಖರ್, ಶ್ರೇಯಸ್ ಉಪಸ್ಥಿತರಿದ್ದರು.



ಶಿಬಿರದಲ್ಲಿ ಮಕ್ಕಳಿಗಾಗಿ ಹಲವು ಸೃಜನಾತ್ಮಕ ಮತ್ತು ದೈಹಿಕ ಚಟುವಟಿಕೆಗಳನ್ನು ಆಯೋಜಿಸಲಾಗಿದ್ದು ಅಭಿನಯ, ಸಂಗೀತ, ಕ್ಲೇ ವರ್ಕ್, ಮಲ್ಲಗಂಬ, ವಾರಾಂತ್ಯ ನಾಟಕ ಪ್ರದರ್ಶನಗಳು, ಆರೋಗ್ಯ ಪ್ರವಾಸ ಸೇರಿದಂತೆ ಇನ್ನೂ ಅನೇಕ ಚಟುವಟಿಕೆಗಳು ನಡೆಯಲಿವೆ. ಈ ಕಾರ್ಯಕ್ರಮಗಳ ಮೂಲಕ ಮಕ್ಕಳಲ್ಲಿ ಸೃಜನಶೀಲತೆ, ಆತ್ಮವಿಶ್ವಾಸ, ಶಾರೀರಿಕ ಸಾಮರ್ಥ್ಯ ಮತ್ತು ಪ್ರಕೃತಿಯೊಂದಿಗೆ ನಂಟು ಬೆಳೆಸುವ ಉದ್ದೇಶವಾಗಿದೆ. –ಎಸ್‌ಬಿಎಂ ಮಂಜು

ಬ್ಯಾಗ್, ಪುಸ್ತಕಗಳ ವಿತರಣೆ



ಮೈಸೂರಿನ ವಿಜಯನಗರ 4ನೇ ಹಂತ 1ನೇ ಘಟ್ಟದಲ್ಲಿರುವ ಕಲಿಕೆ ಎಜುಕೇಷನ್ ಟ್ರಸ್ಟ್ ವತಿಯಿಂದ 2ನೇ ವಾರ್ಷಿಕೋತ್ಸವದ ಪ್ರಯುಕ್ತ ವಿದ್ಯಾರ್ಥಿಗಳಿಗೆ ಉಚಿತ ಬ್ಯಾಗ್, ಪುಸ್ತಕಗಳನ್ನು ವಿತರಿಸಲಾಯಿತು. ಈ ಸಂದರ್ಭದಲ್ಲಿ ಮಾಜಿ ಸಂಸದ ಪ್ರತಾಪ್ ಸಿಂಹ, ಟ್ರಸ್ಟ್‌ನ ಸಂಸ್ಥಾಪಕ ಮದಕರಿ ನಾಯಕ ಹಾಗೂ ಶ್ರೀಮತಿ ಅಮೂಲ್ಯ ಮದಕರಿ ನಾಯಕ, ಮೈಸೂರಿನ ಕರ್ನಾಟಕ ಗ್ರಾಮೀಣ ಬ್ಯಾಂಕಿನ ನಿವೃತ್ತ ಹಿರಿಯ ವ್ಯವಸ್ಥಾಪಕ ಬಿ.ಎಲ್.ರಾಮೇಗೌಡ, ಉದ್ಯಮಿ ನಿಂಗರಾಜು ಎನ್.ಬೆಳತೂರು, ರಂಗರಾಜು ಹಾಗೂ ಮತ್ತಿತರರು ಉಪಸ್ಥಿತರಿದ್ದರು.

ಬೇರೆಯವರ ಹೆಸರಿನ ದಾಖಲೆ ನೀಡಿ ಜಾಮೀನು ನೀಡಲೆತ್ನಿಸಿದ ಆರೋಪಿ ಬಂಧನ

ಮೈಸೂರು, ಮಾ.9(ಎಸ್‌ಪಿಎನ್)– ಪ್ರಕರಣವೊಂದರ ಆರೋಪಿಗೆ ಜಾಮೀನು ನೀಡಲು ಬೇರೆಯವರ ಹೆಸರಿನ ದಾಖಲೆ ನೀಡಿ ನ್ಯಾಯಾಲಯವನ್ನು ವಂಚಿಸಲೆತ್ನಿಸಿದ ಆರೋಪಿಯನ್ನು ಲಕ್ಷ್ಮೀಪುರಂ ಠಾಣೆ ಪೊಲೀಸರು ಬಂಧಿಸಿದ್ದಾರೆ.

ತುಮಕೂರು ಜಿಲ್ಲೆ ಶೆಟ್ಟಿಹಳ್ಳಿ ಗ್ರಾಮದ ನಿವಾಸಿ ಲೇಟ್ ಕೃಷ್ಣಮೂರ್ತಿ ಅವರ ಪುತ್ರ ನರಸಿಂಹರಾಜು(64) ಬಂಧಿತ ಆರೋಪಿ. ಈತ 6ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ ನ್ಯಾಯಾಲಯದಲ್ಲಿ 2026ರ ಮಾ.6ರಂದು ಸಿಸಿ ಸಂಖ್ಯೆ:1304/2023ರ ಪ್ರಕರಣದ ಆರೋಪಿಗೆ ಜಾಮೀನು ನೀಡಲು ಇಮ್ತಿಯಾಜ್ ಹೆಸರಿನಲ್ಲಿ ಹಾಜರಾಗಿ, ಆಧಾರ್ ಕಾರ್ಡ್ ಸಲ್ಲಿಸಿದ್ದಾರೆ.

ಈ ವೇಳೆ ನರಸಿಂಹರಾಜು ಸಲ್ಲಿಸಿರುವ ಆಧಾರ್ ಕಾರ್ಡ್ ನಕಲಿ ಎಂಬುದನ್ನು ಗುರುತಿಸಿದ ನ್ಯಾಯಾಲಯ, ಈತನ ವಿರುದ್ಧ ಪ್ರಕರಣ ದಾಖಲಿಸುವಂತೆ ಲಕ್ಷ್ಮೀಪುರಂ ಠಾಣೆ ಪೊಲೀಸರಿಗೆ ಸೂಚಿಸಿದೆ. ಪ್ರಕರಣ ದಾಖಲಿಸಿಕೊಂಡ ಲಕ್ಷ್ಮೀಪುರಂ ಪೊಲೀಸರು, ಆರೋಪಿ ಎಸ್.ಕೆ.ನರಸಿಂಹರಾಜ(64)ನನ್ನು ಮಾ.7ರಂದು ಬಂಧಿಸಿ, ಜೆಎಂಎಫ್‌ಸಿ ನ್ಯಾಯಾಲಯಕ್ಕೆ ಹಾಜರುಪಡಿಸಲಾಗಿ, ಆತನಿಗೆ ಮಾ.18ರವರೆಗೆ ನ್ಯಾಯಾಂಗ ಬಂಧನ ವಿಧಿಸಲಾಗಿದೆ. ಈ ಪ್ರಕರಣದಲ್ಲಿ ನಂಜನಗೂಡು ತಾಲೂಕಿನ ದೊಡ್ಡಕವಲಂದೆ ಗ್ರಾಮದ ನಿವಾಸಿ ಅಬ್ದುಲ್ ಅಜೀಜ್ ಅವರ ಪುತ್ರ ಇಮ್ತಿಯಾಜ್(49) ಪಾತ್ರದ ಬಗ್ಗೆ ಪರಿಶೀಲನೆ ನಡೆಸಲಾಗುತ್ತಿದೆ.

ನಿಧನ

ಪ್ರಭಾವತಿ



ಮೈಸೂರು,ಮಾ.9–ಮೈಸೂರಿನ ಗಾಂಧಿನಗರದ ಶ್ರೀ ಚಾಮುಂಡೇಶ್ವರಿ ದೇವಸ್ಥಾನದ ರಸ್ತೆ ನಿವಾಸಿ ಮತ್ತು ಲೇಟ್ ಪಾಂಡು ಅವರ ಧರ್ಮಪತ್ನಿ ಶ್ರೀಮತಿ ಪ್ರಭಾವತಿ (80 ವರ್ಷ) ಅವರು ಕಳೆದ ಶನಿವಾರ ರಾತ್ರಿ ನಿಧನರಾದರು. ಮೃತರು ಮಕ್ಕಳಾದ ಡಾ.ಸವಿತಾ, ಡಾ.ಬಬಿತಾ, ಜೀವಿತಾ, ಶಶಿಕುಮಾರ್, ಅಳಿಯಂದಿರಾದ ಸಂತೋಷ್, ಬಾಲಾಜಿ ಹಾಗೂ ಅಪಾರ ಬಂಧು ಬಳಗವನ್ನು ಆಗಲಿದ್ದಾರೆ. ಅಂತ್ಯಕ್ರಿಯೆಯು ಭಾನುವಾರ ಮಧ್ಯಾಹ್ನ 2ಮೈಸೂರಿನ ಗಾಂಧಿನಗರದ ಆದಿಜಾಂಬವ ರುದ್ರಭೂಮಿಯಲ್ಲಿ ನೆರವೇರಿಸಲಾಯಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಯಶೋಧಮ್ಮ



ಸಾಲಿಗ್ರಾಮ ತಾಲೂಕಿನ ಮಿರ್ಲೆ ಗ್ರಾಮದ ಯಶೋಧಮ್ಮ (80) ವಯೋಸಹಜ ಕಾಯಿಲೆಯಿಂದ ಭಾನುವಾರ ನಿಧನರಾದರು.

ಮೃತರು ಸಾಲಿಗ್ರಾಮ ತಾಲೂಕಿನ ತಂದ್ರೆ ಸರ್ಕಾರಿ ಪ್ರೌಢ ಶಾಲೆಯ ಸಹ ಶಿಕ್ಷಕ ಎಂ.ಕೆ.ಸತೀಶ್ ಸೇರಿದಂತೆ ಇಬ್ಬರು ಪುತ್ರರು, ಓರ್ವ ಪುತ್ರಿ ಹಾಗೂ ಅಪಾರ ಬಂಧುಗಳನ್ನು ಅಗಲಿದ್ದಾರೆ.

ಜಿಪಂ ಮಾಜಿ ಅಧ್ಯಕ್ಷ ಸಾರಾ ನಂದೀಶ್, ಸರ್ಕಾರಿ ನೌಕರರ ಸಂಘದ ಜಿಲ್ಲಾಧ್ಯಕ್ಷ ಅರುಣ್‌ಕುಮಾರ್, ಪತ್ರಕರ್ತರ ಸಂಘದ ಮಾಜಿ ಅಧ್ಯಕ್ಷ ವಡ್ಡರಕೊಪ್ಪಲು ಶಿವರಾಮು ಸೇರಿದಂತೆ ಶಿಕ್ಷಕ ಸಂಘದ ಪದಾಧಿಕಾರಿಗಳು, ಶಿಕ್ಷಕರು ಅಂತಿಮ ದರ್ಶನ ಪಡೆದರು.

ಸಂತಾಪ: ಮಾಜಿ ಸಚಿವ ಸಾರಾ ಮಹೇಶ್, ವಸ್ತು ಪ್ರದರ್ಶನ ಪ್ರಾಧಿಕಾರದ ಮಾಜಿ ಅಧ್ಯಕ್ಷ ಮಿರ್ಲೆ ಶ್ರೀನಿವಾಸ್‌ಗೌಡ, ಸಾಲಿಗ್ರಾಮ ಜೆಡಿಎಸ್ ಅಧ್ಯಕ್ಷ ಮೆಡಿಕಲ್ ರಾಜಣ್ಣ, ಜಿಪಂ ಮಾಜಿ ಸದಸ್ಯೆ ಕಲ್ಪನಾ ಧನಂಜಯ, ಗ್ರಾಮ ಪಂಚಾಯಿತಿ ಮಾಜಿ ಅಧ್ಯಕ್ಷ ಬಾಲು ಸಂತಾಪ ಸೂಚಿಸಿದ್ದಾರೆ. ಅಂತ್ಯಕ್ರಿಯೆ ಮಿರ್ಲೆ ಗ್ರಾಮದ ಅವರ ಜಮೀನಿನಲ್ಲಿ ಸೋಮವಾರ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಪ್ರೊ.ದೇವರಾಜು



ಮೈಸೂರು, ಮಾ.9– ಮೈಸೂರಿನ ವಿಜಯನಗರ ನಾಲ್ಕನೇ ಹಂತದ ನಿವಾಸಿ, ಯುವರಾಜ ಕಾಲೇಜು ರಸಾಯನಶಾಸ್ತ್ರ ವಿಭಾಗದ ಪ್ರೊ.ದೇವರಾಜು(52) ಅವರು ಅನಾರೋಗ್ಯದಿಂದ ಭಾನುವಾರ(ಮಾ.8) ನಿಧನರಾದರು. ಇವರು ಪತ್ನಿ ರಂಜಿನಿ, ಪುತ್ರಿ ಸಾನ್ವಿ, ಪುತ್ರ ರಿಷಿಕ್ ಸೇರಿದಂತೆ ಅಪಾರ ಬಂಧು–ಬಳಗ, ವಿದ್ಯಾರ್ಥಿಗಳನ್ನು ಅಗಲಿದ್ದಾರೆ. ವಿಜಯನಗರದ ಮುಕ್ತಿಧಾಮದಲ್ಲಿ ಅಂತ್ಯಕ್ರಿಯೆ ನೆರವೇರಿಸಲಾಯಿತು ಎಂದು ಮೃತರ ಕುಟುಂಬದ ಮೂಲಗಳು ತಿಳಿಸಿವೆ.

ಹೆಚ್.ಎಂ.ಸರ್ವಮಂಗಳ



ನಂಜನಗೂಡು ಪಟ್ಟಣದ 11ನೇ ಕ್ರಾಸ್ ನಿವಾಸಿ ಪ್ರೊ.ಸಿ. ಸುಬ್ಬಣ್ಣ ಅವರ ಧರ್ಮಪತ್ನಿ ಶ್ರೀಮತಿ ಹೆಚ್.ಎಂ.ಸರ್ವಮಂಗಳ ಅವರು ಸೋಮವಾರ ನಿಧನರಾದರು. ಮೃತರು ಕುಟುಂಬವರ್ಗ ಹಾಗೂ ಅಪಾರ ಬಂಧು ಮಿತ್ರರನ್ನು ಅಗಲಿದ್ದಾರೆ. ಇವರ ಅಂತ್ಯಕ್ರಿಯೆ ಕುರಹಳ್ಳಿಯಲ್ಲಿ ನಾಳೆ (ಮಾ.10) ಮಧ್ಯಾಹ್ನ 12 ಗಂಟೆಗೆ ನೆರವೇರಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಗೌರವಧನ ಹೆಚ್ಚಳಕ್ಕೆ ಆಗ್ರಹಿಸಿ ಅಂಗನವಾಡಿ ಕಾರ್ಯಕರ್ತೆಯರ ಪ್ರತಿಭಟನೆ



ಮೈಸೂರು ಡಿಸಿ ಕಚೇರಿ ಎದುರು ಕರ್ನಾಟಕ ರಾಜ್ಯ ಅಂಗನವಾಡಿ ಕಾರ್ಯಕರ್ತೆಯರ ಮತ್ತು ಸಹಾಯಕಿಯರ ಫೆಡರೇಷನ್ ಮೈಸೂರು ಜಿಲ್ಲಾ ಸಮಿತಿ ವತಿಯಿಂದ (ಎಐಟಿಯುಸಿ ಅಂತರ್ಗತ) ಸೋಮವಾರ ಪ್ರತಿಭಟನೆ ನಡೆಸಲಾಯಿತು.

ಮೈಸೂರು, ಮಾ.9(ಎಂಕೆ)– ಸೀರೆ ನೀಡುವ ಪ್ರಸ್ತಾಪವನ್ನು ಬಿಟ್ಟು, ಗೌರವ ಧನ ಹೆಚ್ಚಿಸುವಂತೆ ಆಗ್ರಹಿಸಿ ಕರ್ನಾಟಕ ರಾಜ್ಯ ಅಂಗನವಾಡಿ ಕಾರ್ಯಕರ್ತೆಯರ ಮತ್ತು ಸಹಾಯಕಿಯರ ಫೆಡರೇಷನ್ ಮೈಸೂರು ಜಿಲ್ಲಾ ಸಮಿತಿ ವತಿಯಿಂದ (ಎಐಟಿಯುಸಿ ಅಂತರ್ಗತ) ಸೋಮವಾರ ಪ್ರತಿಭಟನೆ ನಡೆಸಲಾಯಿತು.

ಮೈಸೂರಿನ ಸಿದ್ಧಾರ್ಥನಗರದ ಜಿಲ್ಲಾಧಿಕಾರಿ ಕಚೇರಿ ಎದುರು ಜಮಾಯಿಸಿದ ಅಂಗನವಾಡಿ ಕಾರ್ಯಕರ್ತೆಯರು, ಸರ್ಕಾರದ ವಿರುದ್ಧ ಧಿಕ್ಕಾರ ಕೂಗಿ ಆಕ್ರೋಶ ಹೊರಹಾಕಿದರು. ರಾಜ್ಯ ಸರ್ಕಾರ ಅಧಿಕಾರಕ್ಕೆ ಬರುವ ಮುನ್ನ ಚುನಾವಣಾ ಪ್ರಣಾಳಿಕೆಯಲ್ಲಿ ನೀಡಿದ ಭರವಸೆಯಂತೆ 6ನೇ ಗ್ಯಾರಂಟಿಯಾಗಿ ಘೋಷಿಸಿರುವ ಅಂಗನವಾಡಿ ಕಾರ್ಯಕರ್ತೆಯರಿಗೆ ಮತ್ತು ಸಹಾಯಕಿಯರಿಗೆ ಗೌರವಧನ ಹೆಚ್ಚಿಸುವ ಪ್ರಸ್ತಾಪವನ್ನು ಈ ಬಾರಿಯ ಬಜೆಟ್‌ನಲ್ಲೂ ಕೈ ಬಿಡಲಾಗಿದೆ ಎಂದು ಖಂಡಿಸಿದರು.

2011ನೇ ಇಸವಿಯಿಂದ ಅಂಗನವಾಡಿಗಳಲ್ಲಿ ದುಡಿದು ನಿವೃತ್ತರಾಗಿರುವ ವಯೋವೃದ್ಧ ಕಾರ್ಯಕರ್ತೆಯರು ಮತ್ತು ಸಹಾಯಕಿಯರಿಗೆ ಗ್ರಾಚ್ಯುಟಿ ಸೌಲಭ್ಯ ಜಾರಿ ಮಾಡದೆ, 2023ರ ನಂತರ ನಿವೃತ್ತಿ ಹೊಂದಿದವರಿಗೆ ಅನ್ವಯವಾಗುವಂತೆ ಗ್ರಾಚ್ಯುಟಿ ಜಾರಿಗೊಳಿಸಿರುವುದು ಖಂಡನೀಯ. ಇದರಿಂದಾಗಿ ಸುಮಾರು 15ರಿಂದ 20 ಸಾವಿರದಷ್ಟು ನಿವೃತ್ತ ವಯೋವೃದ್ಧ ಅಂಗನವಾಡಿ ಕಾರ್ಯಕರ್ತೆಯರು ಮತ್ತು ಸಹಾಯಕಿಯರಿಗೆ ಕಾನೂನು ಬದ್ಧವಾಗಿ ದೊರೆಯಬೇಕಿದ್ದ ಗ್ರಾಚ್ಯುಟಿ ಸೌಲಭ್ಯ ಇಲ್ಲದಂತಾಗಿದೆ. ಆದ್ದರಿಂದ ಸರ್ಕಾರ ಕೂಡಲೇ ಈ ವ್ಯತ್ಯಾಸವನ್ನು ಸರಿಪಡಿಸಬೇಕೆಂದು ಒತ್ತಾಯಿಸಿದರು.

2011ರಿಂದ ನಿವೃತ್ತರಾದ ವಯೋ ವೃದ್ಧರಿಗೆ ಗ್ರಾಚ್ಯುಟಿಯನ್ನು ಸರಕಾರ ಘೋಷಿಸಲಿದೆ ಎಂಬ ನಿರೀಕ್ಷೆ ಪ್ರಸಕ್ತ ಸಾಲಿನ ಬಜೆಟ್‌ನಲ್ಲಿ ಹುಸಿಯಾಗಿದೆ. ಆದರೆ ನಮ್ಮ ಶ್ರಮಕ್ಕೆ ತಕ್ಕ ಪ್ರತಿಫಲ ನೀಡುವ ಗೌರವ ಧನ ಹೆಚ್ಚಳ ಮಾಡದೆ ಸೀರೆ ನೀಡುವುದಾಗಿ ಘೋಷಿಸುವ ಮೂಲಕ ನಮ್ಮ ದುಡಿಮೆಗೆ ತಕ್ಕ ಪ್ರತಿಫಲ ನೀಡದೆ ಮಹಿಳಾ ಕಾರ್ಮಿಕರಿಗೆ ಕನಿಷ್ಟ ವೇತನದ ನಿರಾಕರಣೆ ಮಾಡಿದಂತಾಗಿದೆ ಎಂದು ಟೀಕಿಸಿದರು.

"ಬಸವರಾಜ ಬೊಮ್ಮಾಯಿ ಅವರ ನೇತೃತ್ವದ ಬಿಜೆಪಿ ಸರಕಾರ ತನ್ನ ಕೊನೆಯ ಬಜೆಟ್‌ನಲ್ಲಿ ಅಂಗನವಾಡಿ ಕಾರ್ಯಕರ್ತೆಯರಿಗೆ ಒಂದು ಸಾವಿರ ರೂ. ಗೌರವ ಧನ ಹೆಚ್ಚಿಸುವುದಾಗಿ ಘೋಷಿಸಿತ್ತು. ಆದರೆ, ಘೋಷಣೆ ಅನುಷ್ಠಾನಕ್ಕೆ ಬರಲಿಲ್ಲ. ಕಾಂಗ್ರೆಸ್ ಸರಕಾರ ಅಧಿಕಾರಕ್ಕೆ ಬಂದು 2 ವರ್ಷಗಳೇ ಕಳೆದರೂ ನೀಡಿದ ಭರವಸೆಯನ್ನು ಈಡೇರಿಸಿಲ್ಲ. ಈ ವರ್ಷದ ಬಜೆಟ್‌ನಲ್ಲಾದರೂ ಗೌರವ ಧನ ಹೆಚ್ಚಿಸುತ್ತಾರೆಂದು, ಸೀರೆ ನೀಡಲು ಮುಂದಾಗಿದ್ದಾರೆ. **–ಪ್ರತಿಭಟನಾಕಾರರು**

ಕರ್ನಾಟಕ ರಾಜ್ಯ ಅಂಗನವಾಡಿ ಕಾರ್ಯಕರ್ತೆಯರ ಮತ್ತು ಸಹಾಯಕಿಯರ ಫೆಡರೇಷನ್ ಮೈಸೂರು ಜಿಲ್ಲಾ ಸಮಿತಿ ಅಧ್ಯಕ್ಷೆ ಪಿ.ಎಂ.ಸರೋಜಮ್ಮ ಪ್ರಧಾನ ಕಾರ್ಯದರ್ಶಿ ವೈಮಹದೇವಮ್ಮ, ಖಜಾಂಚಿ ಗಿರಿಜಾ ಮತ್ತಿತರರು ಉಪಸ್ಥಿತರಿದ್ದರು.

ಮಾ.12ರಿಂದ ಪ್ರಾಣಾಯಾಮ ಕುರಿತು ರಾಷ್ಟ್ರೀಯ ಸಮ್ಮೇಳನ



ಮೈಸೂರು, ಮಾ.9(ಜಿಎ)–ಸೈಂಟಿಫಿಕ್ ಪ್ರಾಣಾಯಾಮ ಫೌಂಡೇಶನ್ ವತಿಯಿಂದ ಮಾ.12 ಮತ್ತು 13ರಂದು ಎಟಿಎಂಇ ಇಂಜಿನಿಯರಿಂಗ್ ಕಾಲೇಜಿನ ಆವರಣದಲ್ಲಿ ಪ್ರಾಣಾಯಾಮ ಕುರಿತು ರಾಷ್ಟ್ರೀಯ ಸಮ್ಮೇಳನ ಏರ್ಪಡಿಸಲಾಗಿದೆ ಎಂದು ಫೌಂಡೇಷನ್ ಅಧ್ಯಕ್ಷೆ ಡಾ.ದೇವಕಿ ಮಾದವ್ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಅಂದಿನ ಕಾರ್ಯಕ್ರಮದಲ್ಲಿ ಪೇಜಾವರ ಮಠದ ಶ್ರೀ ವಿಶ್ವಪ್ರಸನ್ನ ತೀರ್ಥ ಸ್ವಾಮೀಜಿ ದಿವ್ಯ ಸಾನ್ನಿಧ್ಯ ವಹಿಸಲಿದ್ದಾರೆ. ಮುಖ್ಯ ಅತಿಥಿಗಳಾಗಿ ಪದ್ಮಶ್ರೀ ಪುರಸ್ಕೃತ ಡಾ.ಹೆಚ್.ಆರ್.ನಾಗೇಂದ್ರ, ವಿದ್ಯಾವರ್ಧಕ ಇಂಜಿನಿಯರಿಂಗ್ ಕಾಲೇಜಿನ ಪ್ರಾಂಶುಪಾಲ ಡಾ.ಸದಾಶಿವ ಗೌಡ, ಜಿಲ್ಲಾ ಆಯುಷ್ ಅಧಿಕಾರಿ ಡಾ.ರೇಣುಕಾ ದೇವಿ, ಮೊರಾರ್ಜಿ ದೇಸಾಯಿ ರಾಷ್ಟ್ರೀಯ ಯೋಗ ಸಂಸ್ಥೆ ಮಾಜಿ ನಿರ್ದೇಶಕ ಡಾ.ಈಶ್ವರ್ ವಿ.ಬಸವರೆಡ್ಡಿ, ಪತಂಜಲಿ ವಿವಿ ಪ್ರಾಧ್ಯಾಪಕ ಡಾ.ವಿನೋದ್ ಕುಮಾರ್ ಕಟಿಯಾರ್ ಆಗಮಿಸಲಿದ್ದಾರೆ. ಎಟಿಎಂಇ ಕಾಲೇಜಿನ ಅಧ್ಯಕ್ಷ ಎಲ್.ಅರುಣ್ ಕುಮಾರ್ ಅಧ್ಯಕ್ಷತೆ ವಹಿಸಲಿದ್ದಾರೆ ಎಂದರು.

ಮಾ.13ರಂದು ಮಧ್ಯಾಹ್ನ 3.30ಕ್ಕೆ ಸಮಾರೋಪ ಸಮಾರಂಭ ನಡೆಯಲಿದ್ದು, ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ದಿವ್ಯ ಸಾನ್ನಿಧ್ಯ ವಹಿಸಲಿದ್ದಾರೆ. ಮುಖ್ಯ ಅತಿಥಿಗಳಾಗಿ ಯೋಗ ಯೂನಿವರ್ಸಿಟಿ ಆಫ್ ಭಾರತ್ ಡಾ.ರಾಜಶೇಖರ ರೆಡ್ಡಿ ಪೋರೆಡ್ಡಿ, ಎಸ್ ವಿವೈಎಎಸ್ ಮಾಜಿ ಕುಲಪತಿ ಡಾ.ಸುಬ್ರಮಣ್ಯ ಸ್ವಾಮಿ, ಕೈವಲ್ಯಧಾಮದ ಪ್ರಾಧ್ಯಾಪಕ ಡಾ.ಶರಚ್ಚಂದ್ರ ಭಾಲೇಕರ್, ಕ್ರೀಡಾ ತರಬೇತಿ ವೈದ್ಯ ಡಾ.ಪ್ರಹ್ಲಾದರಾವ್ ಆಗಮಿಸಲಿದ್ದಾರೆ ಎಂದರು.

ಸುದ್ದಿಗೋಷ್ಠಿಯಲ್ಲಿ ಡಾ.ಎಲ್.ಬಸವರಾಜು, ಡಾ.ಭಾಗ್ಯಶ್ರೀ, ಸೀತಾ ರಮೇಶ್ ಉಪಸ್ಥಿತರಿದ್ದರು.

ಅಧಿಕಾರ ಸ್ವೀಕರಿಸಿದ ಪ್ರಾಚಾರ್ಯರಿಗೆ ಸನ್ಮಾನ



ಮೈಸೂರಿನ ಶಾರದಾ ವಿಲಾಸ ಬಿಇಡಿ ಕಾಲೇಜಿನಲ್ಲಿ ಉಪನ್ಯಾಸಕರಾಗಿದ್ದ ಡಾ.ಸುಮಿತ್ರ ಅವರು ಅದೇ ಕಾಲೇಜಿನ ಪ್ರಾಚಾರ್ಯರಾಗಿ ಅಧಿಕಾರ ಸ್ವೀಕರಿಸಿದ ಸಂದರ್ಭದಲ್ಲಿ ಹಿರಣ್ಮಯಿ ಪ್ರತಿಷ್ಠಾನದ ವತಿಯಿಂದ ಸನ್ಮಾನಿಸಲಾಯಿತು. ಈ ಸಂದರ್ಭದಲ್ಲಿ ಪ್ರತಿಷ್ಠಾನದ ಟಿ.ಎ.ಕಾಳಮ್ಮ, ಚಿನ್ನಮ್ಮ ಉಪಸ್ಥಿತರಿದ್ದರು.

ಸಿಎ ಫೌಂಡೇಶನ್ ಪರೀಕ್ಷೆಯಲ್ಲಿ ಎಸ್‌ವಿಜಿ ವಿದ್ಯಾರ್ಥಿಗಳ ಸಾಧನೆ

ಮೈಸೂರು, ಮಾ. 9 – ಮೈಸೂರಿನ ಬೋಗಾದಿಯ ಎಸ್‌ವಿಜಿ ಸೆಂಟರ್ ಆಫ್ ಎಕ್ಸಲೆನ್ಸ್‌ನ ನಿಹಾರ್ ವಿ ಭಾಗವತ್ ಮತ್ತು ಆದಿಬಾ ಎಸ್ ವಿದ್ಯಾರ್ಥಿಗಳು ತಮ್ಮ ಮೊದಲ ಪ್ರಯತ್ನದಲ್ಲೇ ಸಿಎ ಫೌಂಡೇಶನ್ ಪರೀಕ್ಷೆಯಲ್ಲಿ ಉತ್ತೀರ್ಣರಾಗಿದ್ದಾರೆ.



ನಿಹಾರ್ ಭಾಗವತ್



ಆದಿಬಾ ಎಸ್.

ಸುಪ್ರೀಂಕೋರ್ಟ್ ಆದೇಶ ಉಲ್ಲಂಘಿಸಿ ಮನೆ, ವಾಣಿಜ್ಯ ಕಟ್ಟಡಗಳಿಗೆ ಶಾಶ್ವತ ವಿದ್ಯುತ್ ಸಂಪರ್ಕ

- ಸೆಸ್ಕಾಂ ವಿರುದ್ಧ ತಾಪಂ ಮಾಜಿ ಉಪಾಧ್ಯಕ್ಷ ಆರೋಪ
- ಕೆಇಆರ್‌ಸಿ ಸಭೆಯಲ್ಲಿ ದೂರು ನೀಡಿದರೂ ಪ್ರಯೋಜನವಿಲ್ಲ

ಮೈಸೂರು, ಮಾ.9(ಜಿಎ)–ಸೆಸ್ಕಾಂ ವ್ಯಾಪ್ತಿಯಲ್ಲಿ ಸುಪ್ರಿಂಕೋರ್ಟ್ ಆದೇಶ ಉಲ್ಲಂಘಿಸಿ ಅಧಿಕಾರಿಗಳು ಶಾಶ್ವತ ವಿದ್ಯುತ್ ಸಂಪರ್ಕ ನೀಡುತ್ತಿದ್ದಾರೆ ಎಂದು ಹೆಚ್.ಡಿ.ಕೋಟೆ ತಾಲೂಕು ಪಂಚಾಯಿತಿ ಮಾಜಿ ಉಪಾಧ್ಯಕ್ಷ ಹೆಚ್.ವಿ.ಸುಬ್ಬೇಗೌಡ (ಸೋಮು) ಆರೋಪಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ನ್ಯಾಯಲಯ ಆದೇಶದಂತೆ ಕಟ್ಟಡದ ಆಕ್ಯುಪೆನ್ಸಿ ಪ್ರಮಾಣ ಪತ್ರ(ಓಸಿ), ಪೂರ್ಣಗೊಂಡ ಪ್ರಮಾಣ ಪತ್ರ(ಸಿಸಿ) ಸಲ್ಲಿಸಿದ ನಂತರವೇ ಶಾಶ್ವತ ವಿದ್ಯುತ್ ಸಂಪರ್ಕ ನೀಡಬೇಕು. ಆದರೆ, ಮೈಸೂರಿನಲ್ಲಿ ಈ ನಿಯಮವನ್ನು ಕಡೆಗಣಿಸಿ ಸಂಪರ್ಕ ನೀಡುತ್ತಿದ್ದಾರೆ. ಈ ಬಗ್ಗೆ ಫೆ.16ರಂದು ಜಿಲ್ಲಾ ಪಂಚಾಯತ್ ಸಭಾಂಗಣದಲ್ಲಿ ನಡೆದ ಕೆಇಆರ್‌ಸಿ ಸಭೆಯಲ್ಲಿ ದೂರು ಸಲ್ಲಿಸಿದರೂ ಈವರೆಗೂ ಯಾವುದೇ ಪ್ರತಿಕ್ರಿಯೆ ಬಂದಿಲ್ಲ ಎಂದು ದೂರಿದರು.

ಮೈಸೂರಿನ ಸೆಸ್ಕಾಂ ವ್ಯಾಪ್ತಿಯ ಕೆಲವೆಡೆ 7 ಅಂತಸ್ತು, ವಾಣಿಜ್ಯ ಕಟ್ಟಡಗಳಿಗೂ ಸಂಪರ್ಕ ನೀಡಿದ್ದಾರೆ. ಅಧಿಕಾರಿಗಳು ಕೆಲವು ಗುತ್ತಿಗೆದಾರರ ಅರ್ಜಿಗಳಿಗೆ ಅಂದರೆ, ರಾಜ್ಯ ಗುತ್ತಿಗೆದಾರರ ಸಂಘದ ರಾಜ್ಯಾಧ್ಯಕ್ಷರನ್ನು ಸೇರಿಸಿಕೊಂಡು ಓಸಿ, ಸಿಸಿ ಇಲ್ಲದಿದ್ದರೂ ವಿದ್ಯುತ್ ಸಂಪರ್ಕ ನೀಡುತ್ತಿದ್ದಾರೆ. ಆದರೆ, ಇತರೆ ಗುತ್ತಿಗೆದಾರರ ಮೂಲಕ ಸಲ್ಲಿಸುವ ಅರ್ಜಿಗಳಿಗೆ ಓಸಿ, ಸಿಸಿ ಇದ್ದರೆ ಮಾತ್ರ ವಿದ್ಯುತ್ ಮಂಜೂರಾತಿ ಮಾಡಲಾಗುತ್ತದೆ ಎಂದು ಕಿಡಿಕಾರಿದರು.

ಸಂಘದ ರಾಜ್ಯಾಧ್ಯಕ್ಷ ಸಿ.ರಮೇಶ್ ಹಾಗೂ ಅವರ ಕಡೆಯವರಿಗೆ ವಿದ್ಯುತ್ ಸಂಪರ್ಕ ನೀಡಿರುವ ನಿಯಮಗಳನ್ನೇ ಅಥವಾ ಪದ್ಧತಿಯನ್ನೇ ಅನುಸರಿಸಿ ರಾಜ್ಯಾದ್ಯಂತ ಎಲ್ಲಾ ವಿದ್ಯುತ್ ಗುತ್ತಿಗೆದಾರರು ಸಲ್ಲಿಸುವ ಅರ್ಜಿಗಳಿಗೆ ವಿದ್ಯುತ್ ಸಂಪರ್ಕ ಕೊಡಿಸಬಹುದಾಗಿತ್ತು. ಆದರೆ, ಇದನ್ನು ಬಿಟ್ಟು ಮಾ.11ರಂದು ಪ್ರತಿಭಟನೆ ಮಾಡಲು ಮುಂದಾಗಿದ್ದಾರೆ. ಅದು ಯಾರ ವಿರುದ್ಧ ಏಕೆ ಎಂಬುದರ ಬಗ್ಗೆ ಮಾಹಿತಿಯೇ ಇಲ್ಲ. ನ್ಯಾಯಾಲಯದ ಆದೇಶಕ್ಕೆ ಮಸಿ ಬಳಿಯುವ ಪ್ರಯತ್ನ ಮಾಡಿದ್ದಾರೆ ಎಂದರು.

ಸೆಸ್ಕಾಂ ಅಧಿಕಾರಿಗಳು ನ್ಯಾಯಾಲಯದ ಆದೇಶದ ವಿರುದ್ಧ ವಿದ್ಯುತ್ ಸಂಪರ್ಕ ನೀಡಿರುವುದು ಸರಿ ಎನ್ನುವುದಾದರೆ, ಅದನ್ನೇ ಅನುಸರಿಸಿ ಎಲ್ಲಾ ಕಟ್ಟಡಗಳಿಗೂ ಇದೇ ನಿಯಮವನ್ನು ಅನುಸರಿಸಿನೊಂದ ಗ್ರಾಹಕರು ಹಾಗೂ ಗುತ್ತಿಗೆದಾರರಿಗೂ ಅನುಕೂಲ ಮಾಡಿ ಕೊಡಿ ಇಲ್ಲದಿದ್ದರೆ ಈ ಬಗ್ಗೆ ಲೋಕಾಯುಕ್ತಕ್ಕೆ ಸದ್ಯದಲ್ಲಿಯೇ ದೂರು ಸಲ್ಲಿಸುತ್ತೇವೆ ಎಂದು ಸುಬ್ಬೇಗೌಡ ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ನಾಗರಾಜ್, ಶ್ರೀನಿವಾಸ್, ಆಲೂರು ನಟೇಶ್ ಮತ್ತಿತರರು ಉಪಸ್ಥಿತರಿದ್ದರು.

ಮಾ.12, ಮೈಸೂರಲ್ಲಿ ಡಿ.ಕೆ.ಶ್ರೀನಿವಾಸ್ 'ಬಾಳ ಸಂಜೆಯಲ್ಲಿ ಬದುಕಿಗೊಂದು ಅರ್ಥ' ಕೃತಿ ಬಿಡುಗಡೆ

ಮೈಸೂರು,ಮಾ.9(ಜಿಎ)–ಮೈಸೂರಿನ ಸ್ವಸ್ತ ಪ್ರಕಾಶನದ ವತಿಯಿಂದ ಮಾ.12ರಂದು ಬೆಳಗ್ಗೆ 10.30ಕ್ಕೆ ರೇಸ್ ಕ್ಲಬ್ ಕಣ್ಣಿನ ಆಸ್ಪತ್ರೆ ಸಮೀಪದ ವಿನಯ ಮಾರ್ಗದಲ್ಲಿರುವ ಬೃಂದಾವನ ಮಹಲಿನ ಆವರಣದಲ್ಲಿ ಡಿ.ಕೆ.ಶ್ರೀನಿವಾಸ್ ಅವರು ರಚಿಸಿರುವ 'ಬಾಳ ಸಂಜೆಯಲ್ಲಿ ಬದುಕಿಗೊಂದು ಅರ್ಥ' ಕೃತಿ ಬಿಡುಗಡೆ ಕಾರ್ಯಕ್ರಮ ಆಯೋಜಿಸಲಾಗಿದೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಪತ್ರಕರ್ತ ಗಣೇಶ್ ಅಮೀನ್‌ಗಡ ಈ ವಿಷಯ ತಿಳಿಸಿ, ಕೃತಿಯನ್ನು ಸಂಸ್ಕೃತಿ ಚಿಂತಕ ಪ್ರೊ.ಪ್ರಧಾನ ಗುರುದತ್ ಬಿಡುಗಡೆಗೊಳಿಸಲಿದ್ದಾರೆ. ಕೃತಿ ಪರಿಚಯವನ್ನು ಪ್ರೊ.ಓ.ಎಲ್.ನಾಗಭೂಷಣ್, ಪ್ರೊ.ಜಿ.ಎಸ್.ಜಯದೇವ್, ಪ್ರೊ.ಕೃಷ್ಣಮೂರ್ತಿ ಹನೂರು, ಪ್ರೊ.ಕೆ.ಕಿರಣ್‌ಕುಮಾರ್, ಡಾ.ಹೆಚ್.ಎಲ್.ಚಂದ್ರಶೇಖರ್ ಪರಿಚಯ ಮಾಡಲಿದ್ದಾರೆ. ಈ ಸಂದರ್ಭದಲ್ಲಿ ಪ್ರೊ.ಶಿವಾಜಿ ಜೋಯಿಸ್ ಉಪಸ್ಥಿತರಿರಲಿದ್ದಾರೆ ಎಂದರು.

ಲೇಖಕ ಶ್ರೀನಿವಾಸ್ ಮಾತನಾಡಿ, ಈ ಕೃತಿ ಮುಪ್ಪಿನಲ್ಲಿ ಹಿರಿಯರು ಅನುಭವಿಸುವ ಆತಂಕಗಳನ್ನೊಳಗೊಂಡಿದ್ದು, ಇದು ಕೇವಲ ಹಿರಿಯ ನಾಗರಿಕರಿಗೆ ಮಾತ್ರ ಸೀಮಿತವಲ್ಲ ಎಲ್ಲಾ ವಯೋಮಾನದವರಿಗೂ ಸಲ್ಲುತ್ತದೆ ಎಂದರು.



ಅಭಿನಂದನೆ...

ಮೈಸೂರು ತಾಲೂಕು ಜಯಪುರ ಪೊಲೀಸ್ ಠಾಣೆ ನೂತನ ಪಿಎಸ್‌ಐ ಆಗಿ ಪ್ರಕಾಶ್ ಯತ್ತಿನಮನಿ ಅವರು ಮೈಸೂರು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಮಲ್ಲಿಕಾರ್ಜುನ ಬಾಲದಂಡಿ ಅವರಿಗೆ ಹೂಗುಚ್ಛ ನೀಡಿ, ಅಭಿನಂದಿಸಿ, ಜಯಪುರ ಠಾಣೆಗೆ ಆಗಮಿಸಿ ಕರ್ತವ್ಯಕ್ಕೆ ಹಾಜರಾದರು.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

10.3.2026 ಮಂಗಳವಾರ, ಮಳೆ ನಕ್ಷತ್ರ: ಪೂರ್ವಾಭಾದ್ರ 4.03.2026 ರಿಂದ 17.03.2026
ವಿಶ್ವಾವಸು ನಾಮ ಸಂವತ್ಸರ, ಉತ್ತರಾಯಣ, ಶಿಶಿರ ಋತು, ಫಾಲ್ಗುಣ ಮಾಸ, ಕೃಷ್ಣ ಪಕ್ಷ,
ತಿಥಿ: ಸಪ್ತಮಿ, ನಕ್ಷತ್ರ: ಅನೂರಾಧ, ರಾಹುಕಾಲ: ಮಧ್ಯಾಹ್ನ 3ರಿಂದ 4.30ರವರೆಗೆ

■ **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ:** ಬೆಳಗ್ಗೆ 6.30ರಿಂದ ದೇಹ–ಮನಸ್ಸುಗಳ ಆರೋಗ್ಯಕ್ಕಾಗಿ ಯೋಗಾಭ್ಯಾಸ ತರಗತಿ, ಬೆಳಗ್ಗೆ 9.30ರಿಂದ ಕಿಡ್ನಿ ಆರೋಗ್ಯ ತಪಾಸಣೆ ಮತ್ತು ವಸಂತ ವಮನ ದೇಹಶುದ್ಧಿ ಚಿಕಿತ್ಸಾ ಶಿಬಿರ, ಪಿಸಿಓಡಿ ತೊಂದರೆಗೆ ಚಿಕಿತ್ಸಾ ಶಿಬಿರ, ಸ್ಥಳ: ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ, ಆಲನಹಳ್ಳಿ.

■ **ಕಾವೇರಿ ಆಯುರ್ವೇದ ಆಸ್ಪತ್ರೆ:** ಪಿಸಿಓಡಿ ಮತ್ತು ಕುತ್ತಿಗೆ ನೋವು ಬಗ್ಗೆ ಉಚಿತ ತಪಾಸಣೆ ಮತ್ತು ಚಿಕಿತ್ಸಾ ಶಿಬಿರ, ಸ್ಥಳ: ಕಾವೇರಿ ಆಯುರ್ವೇದ ಆಸ್ಪತ್ರೆ, ದೇವೇಗೌಡ ಸರ್ಕಲ್ ಹತ್ತಿರ, ಬೆಳಗ್ಗೆ 10ರಿಂದ.

■ **ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾ, ಜಿಲ್ಲಾ ಮಹಿಳಾ ಘಟಕ :** ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆ, ಸಾನ್ನಿಧ್ಯ : ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಉದ್ಘಾಟನೆ : ಎಡಿಸಿ ಡಾ.ಪಿ.ಶಿವರಾಜು, ಅಧ್ಯಕ್ಷತೆ: ಮಹಾಸಭಾ ಅಧ್ಯಕ್ಷ ಎಚ್.ವಿ. ಬಸವರಾಜು, ಸ್ಥಳ: ರಾಜೇಂದ್ರ ಭವನ, ಜೆಎಸ್‌ಎಸ್ ಆಸ್ಪತ್ರೆ ಆವರಣ, ಬೆಳಗ್ಗೆ 10ಕ್ಕೆ.

■ **ಮಹಾರಾಣಿ ಮಹಿಳಾ ಕಲಾ ಕಾಲೇಜು, ಸ್ನಾತಕ ಮತ್ತು ಸ್ನಾತಕೋತ್ತರ ಕೇಂದ್ರ:** ಪ್ರಿನ್ಸೆಸ್ ಅಥ್ಲೆಟಿಕ್ಸ್ ಕ್ರೀಡಾಕೂಟ, ಉದ್ಘಾಟನೆ: ಪೊಲೀಸ್ ಆಯುಕ್ತರಾದ ಸೀಮಾ ಲಾಟ್ಕರ್, ಅಧ್ಯಕ್ಷತೆ: ಕಾಲೇಜು ಪ್ರಿನ್ಸಿಪಾಲ್ ಪ್ರೊ. ಎಂ.ಎಸ್.ಅನಿತಾ, ಉಪಸ್ಥಿತರು : ಡಾ.ಸಿ.ಎಸ್.ಮೋಹನ್‌ಕುಮಾರ್, ಡಾ.ಕೆ.ಎಸ್. ಭಾಸ್ಕರ್, ಕೆ.ವೆಂಕಟೇಶ್, ಸ್ಥಳ: ಓವಲ್ ಮೈದಾನ, ಮೈಸೂರು ವಿವಿ, ಬೆಳಗ್ಗೆ 10ಕ್ಕೆ.

■ **ಮೈಸೂರು ವಿಶ್ವವಿದ್ಯಾನಿಲಯ, ಮಾಳವಿಯ ಮಿಷನ್ ಶಿಕ್ಷಕರ ತರಬೇತಿ ಕೇಂದ್ರ :** ಯುಜಿಸಿ ಪ್ರಾಯೋಜಿತ ಬೋಧಕೇತರ ಸಿಬ್ಬಂದಿಗೆ ಅಲ್ಪಾವಧಿ ಶಿಬಿರ, ಉದ್ಘಾಟನೆ : ಮೈಸೂರು ವಿವಿ ಕುಲಸಚಿವೆ ಎಂ.ಕೆ. ಸವಿತಾ, ಅಧ್ಯಕ್ಷತೆ : ಕೇಂದ್ರದ ನಿರ್ದೇಶಕರಾದ ಪ್ರೊ. ಹೆಚ್.ಪಿ.ಜ್ಯೋತಿ, ಉಪಸ್ಥಿತರು : ಸಹಾಯಕ ಪ್ರಾಧ್ಯಾಪಕ ಡಾ. ಎಲ್. ನಂಜುಂಡಸ್ವಾಮಿ, ಸ್ಥಳ: ಎಂಎಂಟಿಟಿಸಿ ಸಭಾಂಗಣ, ಮಾನಸಗಂಗೋತ್ರಿ, ಬೆಳಗ್ಗೆ 10ಕ್ಕೆ.

■ **ಮಹಿಳಾ ದೌರ್ಜನ್ಯ ವಿರೋಧ ಸಮಿತಿ, ಮಹಾರಾಜ ಕಾಲೇಜು :** ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆ ಪ್ರಯುಕ್ತ ನವಸಮಾಜದ ನಿರ್ಮಾಣದಲ್ಲಿ ಯುವಜನಾಂಗದ ಪಾತ್ರ ಕುರಿತು ಉಪನ್ಯಾಸ, ಸಂವಾದ ಕಾರ್ಯಕ್ರಮ, ಮುಖ್ಯ ಅತಿಥಿಗಳು: ಒಡನಾಡಿ ಸಂಸ್ಥಾಪಕ ನಿರ್ದೇಶಕರಾದ ಸ್ಟ್ಯಾನ್ಲಿ, ಪರಶುರಾಮ, ಅಧ್ಯಕ್ಷತೆ: ಡಾ.ಷಣ್ಮುಗಂ, ಸ್ಥಳ: ಜೂನಿಯರ್ ಬಿ.ಎ. ಹಾಲ್, ಕಾಲೇಜು ಆವರಣ, ಬೆಳಗ್ಗೆ 11ಕ್ಕೆ.

■ **ವ್ಯವಸ್ಥಾಪಕರು :** ದಿವಂಗತ ಎಂ. ಸಣ್ಣಯ್ಯ ಅವರ ಜನ್ಮ ಶತಮಾನೋತ್ಸವ ಸ್ಮರಣೆ ಕಾರ್ಯಕ್ರಮ, ಮುಖ್ಯ ಅತಿಥಿಗಳು : ಶಾಸಕರಾದ ಜಿ.ಟಿ. ದೇವೇಗೌಡ, ಹೆಚ್. ವಿಶ್ವನಾಥ್, ಮಾಜಿ ಶಾಸಕ ಎಂ.ಕೆ. ಸೋಮಶೇಖರ್, ಸ್ಥಳ: ಬಿಲ್ಡರ್ಸ್ ಅಸೋಸಿಯೇಷನ್ ಆಫ್ ಇಂಡಿಯಾ, ವಿಶ್ವೇಶ್ವರನಗರ, ಸಂಜೆ 5.30 ರಿಂದ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.35 ಮತ್ತು ಸಂಜೆ 6.10 ಸಾಧಕರ ಸೋಪಾನ – ಲೇಖನ ಮತ್ತು ಪ್ರಸ್ತುತಿ: ಟಿ.ಎಸ್. ಗೋಪಾಲ್, ಪ್ರಾಯೋಜಕರು: ಸಹಬಾಳ್ವೆ, ಬೆಂಗಳೂರು, 6.40 ಅರಿವಿನ ಶಿಖರ–ಸರ್ವಜ್ಞನ ತ್ರಿಪದಿಗಳನ್ನಾಧರಿಸಿದ ಬಾನುಲಿ ಸರಣಿ, ಗಾಯನ : ಶಾಂತಲಾ ವಟ್ಟಂ, ವ್ಯಾಖ್ಯಾನ–ಡಾ.ಮ. ರಾಮಕೃಷ್ಣ, 6.50 ರೈತರಿಗೆ ಸಲಹೆ, 7.15 ಮತ್ತು ಸಂಜೆ 5.40 ಪ್ರಾಯೋಜಿತ ಕಾರ್ಯಕ್ರಮ ಕೆ.ಎಸ್.ಓ.ಯು. ಮುಕ್ತವಾಣಿ, ಪ್ರಾಯೋಜಕರು : ಪ್ರಸಾರಾಂಗ, ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾ ನಿಲಯ, ಮೈಸೂರು, ಕರ್ನಾಟಕ ಮುಕ್ತ ವಿಶ್ವವಿದ್ಯಾನಿಲಯದ ಕನ್ನಡ ಅಧ್ಯಯನ ಮತ್ತು ಸಂಶೋಧನಾ ವಿಭಾಗದ ಸಹ ಪ್ರಾಧ್ಯಾಪಕರಾದ ಡಾ. ಪಿ.ಮಣಿ ಅವರೊಂದಿಗೆ ಸಂದರ್ಶನದ ಮೊದಲ ಭಾಗ ಸಂದರ್ಶಕರು–ಲಕ್ಷ್ಮೀನಾರಾಯಣ .ಎಸ್., ನಿರ್ಮಾಣ: ಎನ್. ಕೇಶವಮೂರ್ತಿ, 8.30 ಕರೆಗೊಂದು ಗೀತೆ, ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ಕಾರ್ಯಕ್ರಮ, 10.00 ಕರ್ನಾಟಕ ಶಾಸ್ತ್ರೀಯ ಸಂಗೀತ: ಎಂ.ಜಿ. ಶ್ರೀಧರ್ ಮತ್ತು ಸಂಗಡಿಗರಿಂದ ನಾದಸ್ವರ ವಾದನ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ ಹೊಂಗಿರಣ ವಿಕಸಿತ ಹಾದಿಗೊಂದು ಸೋಪಾನ, ಪ್ರಸ್ತುತಿ: ಆರ್.ಲೋಕೇಶ್ವರಿ ಬಿ. ಜಿ. ಕವಿತಾ ಹಾಗೂ ಲಕ್ಷ್ಮೀನಾರಾಯಣ

ಮಧ್ಯಾಹ್ನ: 12.05 ವನಿತಾ ವಿಹಾರ – ಅಂತರಾಷ್ಟ್ರೀಯ ಮಹಿಳಾ ದಿನಾಚರಣೆಯ ಸಂದರ್ಭದಲ್ಲಿ ಮೈಸೂರಿನ ಶ್ರೀರಾಂಪುರದ ಗಾಯತ್ರಿ ಮಹಿಳಾ ಸಮಾಜದ ಸದಸ್ಯರಿಂದ ಕಾರ್ಯಕ್ರಮ ವೈವಿಧ್ಯ, 12.35 ದೇವರನಾಮ –ಶುಭ ರಾಘವೇಂದ್ರ, 12.45 ಕನ್ನಡದಲ್ಲಿ ಭಾಷಣ, 1.00 ಪ್ರಗತಿ ಪಥ–ಕೇಂದ್ರ ಸರ್ಕಾರದ ವಿವಿಧ ಅಭಿವೃದ್ಧಿ ಯೋಜನೆಗಳ ಕುರಿತು ಸರಣಿ, 1.20 ಭಾವಗೀತೆಗಳು–ವೈಷ್ಣವಿ ಟಿ.ಎಂ., 2.40 ಚಿತ್ರಗೀತೆಗಳು, 3.00 ಕರ್ನಾಟಕ ಶಾಸ್ತ್ರೀಯ ಸಂಗೀತ, ಪದ್ಮಶಂಕರ್–ವೈಯೋಲಿನ್ ವಾದನ, 3.30 ರಾಷ್ಟ್ರೀಯ ಶೈಕ್ಷಣಿಕ ಕಾರ್ಯಕ್ರಮ–ಉಮಂಗ್, 4.00 ಕಥಾಕಾಲಕ್ಷೇಪ–ಮೂರುವರೆ ವಜ್ರಗಳು, ಪ್ರಸ್ತುತಿ–ವಿದ್ವಾನ್ ಗುರುರಾಜುಲು ನಾಯ್ಡು, 5.00 ಪ್ರಾಯೋಜಿತ ಕಾರ್ಯಕ್ರಮ : ನಿರಾಮಯ ನಿಮ್ಮ ಆರೋಗ್ಯ ನಮ್ಮ ಮಾತು, ಪ್ರಾಯೋಜಕರು : ನಿರಾಮಯ ಹೆಲ್ತ್ ಕೇರ್, ಸರಸ್ವತಿಪುರಂ, ಮೈಸೂರು, ಭಾಗವಹಿಸುತ್ತಾರೆ– ಡಾ. ಸಂಗೀತಾ ಕೆ.ಎನ್., ವಿಷಯ–ಲೂಪಸ್ ಲಕ್ಷಣಗಳು ಮತ್ತು ಚಿಕಿತ್ಸೆ, ಪ್ರಸ್ತುತಿ–ಡಾ.ಕುಲದೀಪ್.ಎನ್ ಹಾಗೂ ತೇಜಸ್ವಿನಿ ಗಿರೀಶ್, 5.35 ಸಂದೇಶ ಆಧಾರಿತ ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ಕಾರ್ಯಕ್ರಮ, 6.50 ಕೃಷಿರಂಗ–ಕಿಸಾನ್‌ವಾಣಿ, ಭಾರತ ಸರ್ಕಾರದ ಕೃಷಿ ಹಾಗೂ ರೈತ ಕಲ್ಯಾಣ ಸಚಿವಾಲಯ ಪ್ರಾಯೋಜಿತ ಕಾರ್ಯಕ್ರಮ. ಸಮಗ್ರ ಕೃಷಿಯ ಪ್ರಾಮುಖ್ಯತೆ ಕುರಿತು ಸಂವಾದ ಭಾಗವಹಿಸುತ್ತಾರೆ ನಂಜನಗೂಡು ತಾಲೂಕು, ಕಸಬಾ ಹೋಬಳಿ ಸೂರಹಳ್ಳಿ ಗ್ರಾಮದ ಎಸ್.ಜಿ. ಸುಬ್ಬಣ್ಣ ಮತ್ತು ಅವರ ಮಗ ಎಸ್.ಎಸ್. ಮಹೇಶ್, ಪ್ರಸ್ತುತಿ : ಎನ್.ಕೇಶವಮೂರ್ತಿ, 7.45 ಮೈಸೂರು ಜಂಕ್ಷನ್–ಸಾಪ್ತಾಹಿಕ ಸಂಚಿಕೆ, ಪ್ರಸ್ತುತಿ–ದಿಗ್ವಿಜಯ್ ಬಿ, 8.00 ಹಿಂದೂಸ್ಥಾನಿ ಶಾಸ್ತ್ರೀಯ ಸಂಗೀತ, 8.30 ಹಿಂದಿ ಚಿತ್ರಗೀತೆಗಳು, 9.30 ಕರ್ನಾಟಕ ಶಾಸ್ತ್ರೀಯ ಸಂಗೀತ, ಹರಿಣಿ .ಆರ್–ಹಾಡುಗಾರಿಕೆ, 10.00 ಚೈತ್ರವನ–ಲಕ್ಷ್ಮೀಶನ ಜೈಮಿನಿ ಭಾರತದ ಸಮಗ್ರ ವಾಚನ ಹಾಗೂ ವ್ಯಾಖ್ಯಾನ, ಪ್ರಸ್ತುತಿ–ಡಾ. ಎ.ಎಸ್. ಶಂಕರನಾರಾಯಣ, 10.30 ಸವಿನೆನಪು

ವರಕೋಡಿನಲ್ಲಿಂದು

■ **ವರಕೋಡು ಗ್ರಾಮಸ್ಥರು:** ಶ್ರೀ ಬೀರೇಶ್ವರಸ್ವಾಮಿ ದೇವಸ್ಥಾನದ ಪುನರ್‌ಪ್ರತಿಷ್ಠಾಪನೆ ಕುಂಭಾಭಿಷೇಕ ಪೂಜಾ ಮಹೋತ್ಸವ, ಶ್ರೀ ಬನ್ನಿಮಹಾಕಾಳೇಶ್ವರಿ ದೇವಾಲಯದಲ್ಲಿ ಹೋಮ, ಸ್ಥಳ: ವರಕೋಡು, ವರುಣಾ ಹೋಬಳಿ, ಮೈಸೂರು ತಾಲೂಕು.

ಮೈಸೂರು ಮಿತ್ರ

ಮಂಗಳವಾರ 10 ಮಾರ್ಚ್ 2026

ಮಹಿಳಾ ಮೆಕ್ಯಾನಿಕ್‌ಗಳ ಕೈ ಚಳಕ

ಮಹಿಳಾ ದಿನಾಚರಣೆ ವಿಶೇಷ

● ಮೈಸೂರಿನ ಕೆಎಸ್‌ಆರ್‌ಟಿಸಿ ವರ್ಕ್‌ಶಾಪ್‌ನಲ್ಲಿ ಇದ್ದಾರೆ 22 ಮಹಿಳಾ ಮೆಕ್ಯಾನಿಕ್‌ಗಳು ! ● ಬಸ್‌ಗಳ ಬ್ರೇಕ್, ಕ್ಲಚ್, ಪಂಪಿಂಗ್, ವೈರಿಂಗ್, ಸೀಟ್, ಸ್ಟಿಕ್ಕರಿಂಗ್, ಪೇಯಿಂಟ್ ಹೀಗೆ ನಾನಾ ವಿಭಾಗದಲ್ಲಿ ಇವರದೇ ಚಮತ್ಕಾರ



ಕೆಎಸ್‌ಆರ್‌ಟಿಸಿ ಡಿಪೋದಲ್ಲಿ ಪ್ರಮುಖ ಜವಾಬ್ದಾರಿ ನಿರ್ವಹಿಸುವ ಮಹಿಳಾ ಮೆಕ್ಯಾನಿಕ್‌ಗಳಾದ (ಎಡದಿಂದ) ಬಿಂದು, ಆಶಾ, ಪಾರ್ವತಿ, ರಮ್ಯಾ, ಮಲ್ಲಮ್ಮ ಸಿಂಗನಳ್ಳಿ, ಪ್ರೇಮವ್ವ ಪಾದನಕಟ್ಟಿ, ಶ್ರೀದೇವಿ, ವಾಣಿ, ಪ್ರೇಮಮ್ಮ, ಗೀತಾ ಮತ್ತು ಬಿ.ಎಂ. ರಾಧಮ್ಮ ಅವರನ್ನು ಕಾಣಬಹುದು.

■ **ಎಂ.ಟಿ.ಯೋಗೇಶ್‌ಕುಮಾರ್**

ಮೈಸೂರು, ಮಾ.9– ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ ಮೈಸೂರು ಗ್ರಾಮಾಂತರ ವಿಭಾಗದ ಬಸ್‌ಗಳ ನಿರ್ವಹಣೆ ಹೊಣೆ ಸಾಹಸಿ 22 ಮಹಿಳಾ ಮಣಿಗಳ ಕೈಯ್ಯಲ್ಲಿದೆ. ಇವರು ನಾರಿಶಕ್ತಿ ಮಹಾಶಕ್ತಿ ಎಂಬುದನ್ನು ಸಾಬೀತುಪಡಿಸಿ ಪ್ರಶಂಸೆಗೆ ಪಾತ್ರರಾಗಿದ್ದಾರೆ.

ಮೈಸೂರಿನ ಗ್ರಾಮಾಂತರ ಬಸ್ ನಿಲ್ದಾಣದಿಂದ ಸಾವಿರಾರು ಬಸ್‌ಗಳು ಸಂಚರಿಸುತ್ತವೆ. ವಿವಿಧೆಡೆ ಪ್ರತಿದಿನ ಸಾವಿರಾರು ಪ್ರಯಾಣಿಕರು ಇಂತಹ ಬಸ್‌ಗಳಲ್ಲಿ ಪ್ರಯಾಣಿಸುತ್ತಾರೆ, ಪ್ರಯಾಣಿಕರ ಸುರಕ್ಷಿತ ಪ್ರಯಾಣಕ್ಕಾಗಿ 'ಮಹಿಳಾ ಪಡೆ' ತೆರೆ–ಮರೆಯಲ್ಲಿ ಅವಿರತ ಶ್ರಮಿಸುತ್ತಿದೆ. ಆ ಮೂಲಕ ಶಕ್ತಿ ಯೋಜನೆಯಿಂದಾಗಿ ಸಾರಿಗೆ ಸಂಸ್ಥೆ ಬಸ್‌ಗಳಲ್ಲಿ ಮಹಿಳಾ ಪ್ರಯಾಣಿಕರೇ ಕಿಕ್ಕಿರಿದು ಪ್ರಯಾಣಿಸುತ್ತಾರೆ ಎಂದು ಮೂಗುಮುರಿಯುವ ಮಂದಿಗೆ **'ಮಹಿಳಾ ಪವರ್'** ಏನು ಎಂಬುದನ್ನು ಇವರ ನೋಡಿಯೇ ಅರಿಯಬೇಕಿದೆ.

ಗ್ರಾಮಾಂತರ ವಿಭಾಗದಲ್ಲಿ ವಿವಿಧ ಡಿಪೋಗಳಿಂದ 650ಕ್ಕೂ ಹೆಚ್ಚು ಬಸ್‌ಗಳಿದ್ದು, ಅವುಗಳಲ್ಲಿ ಪ್ರತಿದಿನ 3–4 ಬಸ್‌ಗಳು ವಿವಿಧ ತಾಂತ್ರಿಕ ಸಮಸ್ಯೆಯಿಂದ ವರ್ಕ್‌ಶಾಪ್ (ಕಾರ್ಯಾಗಾರ)ಗೆ ಬರುತ್ತವೆ. ಚಾಲಕರು ಹೇಳುವ ಸಣ್ಣ ಹಾಗೂ ದೊಡ್ಡಮಟ್ಟದ ಸಮಸ್ಯೆ ನಿವಾರಣೆ ಮಾಡುವುದು ಮೆಕ್ಯಾನಿಕ್‌ಗಳ ಜವಾಬ್ದಾರಿ. ಯಾವುದು ಅತ್ಯಂತ ಕಷ್ಟಕರ, ಅದರಲ್ಲೂ ಬಸ್ ರಿಪೇರಿ ಮಾಡುವ ಕೆಲಸ ತುಂಬಾ ಕಷ್ಟ ಎಂದು ಹೇಳುತ್ತಾರೋ ಅದೇ ಕಾರ್ಯಕ್ಕೆ ಈಗ ಮಹಿಳೆಯರು ಅಡಿಯಿಟ್ಟಿದ್ದಾರೆ. ಹೀಗೆ ಬನ್ನಿಮಂಟಪದ ಡಿಪೋ ಬಳಿಯಿರುವ ಗ್ರಾಮಾಂತರ ವಿಭಾಗದ ವರ್ಕ್ ಶಾಪ್‌ನಲ್ಲಿ ಒಟ್ಟು 42 ಮಂದಿ ಸಿಬ್ಬಂದಿಯಿದ್ದು, ಅವರಲ್ಲಿ ಅರ್ಧಕ್ಕೂ ಹೆಚ್ಚು, 22 ಮಂದಿ ಮಹಿಳಾ ಸಿಬ್ಬಂದಿಯೇ ವಿವಿಧ ವಿಭಾಗಗಳಲ್ಲಿ ಕ್ಲಿಷ್ಟಕರ ಕೆಲಸವನ್ನು ನಿಭಾಯಿಸುವ ಮೂಲಕ ಸಾರಿಗೆ ಬಸ್‌ಗಳ ಸುಸ್ಥಿತಿಯಲ್ಲಿಡಲು ಶ್ರಮಿಸುತ್ತಿದ್ದಾರೆ.

ಸಾರಿಗೆ ಸಂಸ್ಥೆಯ ವರ್ಕ್‌ಶಾಪ್‌ನಲ್ಲಿ ಸ್ಟಿಕ್ಕರಿಂಗ್, ಗ್ಲಾಸ್, ಗೇರ್ ಬಾಕ್ಸ್, ಪಂಪ್, ಬ್ರೇಕ್ ಸೆಕ್ಷನ್, ಪ್ರಶರ್ ಪ್ಲೇಟ್, ಕ್ಲಚ್ ಪ್ಲೇಟ್, ಜಾಯಿಂಟ್, ಮಿಷಿನ್ ಶಾಪ್(ಲೇತ್), ಸ್ಟಾರ್ಟರ್ ಆಲ್ಟರ್‌ನೇಟರ್, ಸೀಟ್, ಪೇಂಟಿಂಗ್, ಎಸಿ ಎಲೆಕ್ಟ್ರಿಷಿಯನ್, ಡಿಸಿ ವೈಯರಿಂಗ್, ಕಟ್ಟೆ ಸೆಕ್ಷನ್‌ಗಳಿದ್ದು, ಅವುಗಳಲ್ಲಿ ಪ್ರಮುಖ ವಿಭಾಗಗಳಲ್ಲಿ ಮಹಿಳಾ ಸಿಬ್ಬಂದಿ ಕಾರ್ಯ ನಿರ್ವಹಿಸುತ್ತಿದ್ದಾರೆ. ಅಲ್ಲದೆ, ಸಾರಿಗೆ ಸಂಸ್ಥೆಗೆ ಬರುವ ವಿವಿಧ ಕಂಪನಿಗಳ ಬಸ್‌ಗಳ ಬಿಡಿಭಾಗಗಳು ವಿಭಿನ್ನವಾಗಿದ್ದು, ಆಯಾಯ ಬಸ್‌ಗಳ ಅವುಗಳ ತಂತ್ರಜ್ಞಾನಕ್ಕೆ ಅನುಗುಣವಾಗಿ ಕೆಎಸ್‌ಆರ್‌ಟಿಸಿ ವರ್ಕ್‌ಶಾಪ್ ಸಿಬ್ಬಂದಿ ದುರಸ್ತಿಸಂಬಂಧ ಪ್ರಾವೀಣ್ಯತೆ ಹೊಂದುವ ಮೂಲಕ ಸಾರಿಗೆ ಬಸ್‌ಗಳ ಸುಸ್ಥಿತಿಯಲ್ಲಿಡುವಲ್ಲಿ ಪ್ರಮುಖ ಪಾತ್ರವಹಿಸುತ್ತಿದ್ದಾರೆ.

ವರ್ಕ್‌ಶಾಪ್ ಮೇಲ್ವಿಚಾರಕರೂ ಮಹಿಳೆಯೇ..



ಬಸ್‌ಗಳ ಡೇಟಾ ಪರಿಶೀಲಿಸುತ್ತಿರುವ ಮೇಲ್ವಿಚಾರಕಿ ಶ್ರೀದೇವಿ.

ವರ್ಕ್‌ಶಾಪ್ ಮೇಲ್ವಿಚಾರಕರಾಗಿರುವ **ಶ್ರೀದೇವಿ** ಸಾರಿಗೆ ಸಂಸ್ಥೆಯಲ್ಲಿ 18 ವರ್ಷದಿಂದ ಕೆಲಸ ಮಾಡುತ್ತಿದ್ದು, ಮೆಕ್ಯಾನಿಕ್ ಹುದ್ದೆಯಿಂದ ಈಗ ಮೇಲ್ವಿ ಚಾರಕರಾಗಿ(ಸೂಪರ್‌ವೈಸರ್) ಬಡ್ತಿ ಪಡೆದು ಸೇವೆ ಸಲ್ಲಿಸುತ್ತಿದ್ದಾರೆ. 22 ಮಹಿಳಾ ಸಿಬ್ಬಂದಿ ಸೇರಿದಂತೆ 42 ಸಿಬ್ಬಂದಿ ಹೊಂದಿರುವ ವರ್ಕ್‌ಶಾಪ್ ಮೇಲುಸ್ತುವಾರಿ ನೋಡಿಕೊಳ್ಳುತ್ತಿದ್ದಾರೆ. ಈ ಕುರಿತು ಮಾತನಾಡಿದ ಶ್ರೀದೇವಿ ಅವರು, ವರ್ಕ್‌ಶಾಪ್‌ಗೆ ಸಾರಿಗೆ ಬಸ್ ಬಂದಾಗ ಏನೇನು ಕೆಲಸವಿದೆ ಎಂದು ಪರಿಶೀಲಿಸಲಾಗುತ್ತದೆ. ಡಿಪೋದಿಂದ ಬಸ್ ಸಮಸ್ಯೆ ಗುರುತಿಸಿ ಕಳುಹಿಸುತ್ತಾರೆ. ಅದನ್ನು ದುರಸ್ತಿ ಮಾಡುವುದು ನಮ್ಮ ಕರ್ತವ್ಯವಾಗಿದೆ. ಬಸ್ ಎಫ್‌ಸಿಗೆ ಕಳುಹಿಸುವಾಗ ಎಲ್ಲವನ್ನು ಪರಿಶೀಲಿಸಿ ಕಳುಹಿಸುವ ಜವಾಬ್ದಾರಿ ನಮ್ಮದಾಗಿದೆ. ವರ್ಕ್‌ಶಾಪ್‌ನಲ್ಲಿರುವ 22 ಮಹಿಳಾ ಸಿಬ್ಬಂದಿ ತಮ್ಮ ಕಾರ್ಯವನ್ನು ಜವಾಬ್ದಾರಿ ಯಿಂದ ನಿರ್ವಹಿಸುತ್ತಿದ್ದಾರೆ. ಮಹಿಳಾ ಸಿಬ್ಬಂದಿಗೆ ಶಿಶುಪಾಲನ ರಜೆ ಸೇರಿದಂತೆ ವಿವಿಧ ಅಗತ್ಯ ರಜೆ ಸೌಲಭ್ಯವೂ ಸಿಗುತ್ತಿರುವುದರಿಂದ ಮಹಿಳಾ ಸಿಬ್ಬಂದಿಗಳು ಉತ್ತಮವಾಗಿ ಕೆಲಸ ಮಾಡುತ್ತಿದ್ದಾರೆ. ಇದಕ್ಕೆ ಪುರುಷ ಸಿಬ್ಬಂದಿಗಳು ಮಹಿಳಾ ಸಿಬ್ಬಂದಿಗೆ ಬೆಂಬಲವಾಗಿ, ಸಹಕಾರ ನೀಡುತ್ತಿದ್ದಾರೆ ಎಂದು ತಿಳಿಸಿದರು.

ಕೆಲಸ ಹೆವಿ ಅಂತಾ ಸುಮ್ಮನೆ ಕೂರಲಾದೀತೆ...

ವರ್ಕ್‌ಶಾಪ್‌ನಲ್ಲಿ ಮೆಕ್ಯಾನಿಕ್ ಆಗಿ 18 ವರ್ಷದಿಂದ ಕೆಲಸ ಮಾಡುತ್ತಿರುವ **ಬಿ.ಎಂ.ರಾಧಮ್ಮ** ಮಾತನಾಡಿ, ಮೊದಲು ಡಿಪೋದಲ್ಲಿ ಡಾಕಿಂಗ್ ಸೆಕ್ಷನ್‌ನಲ್ಲಿ ಕೆಲಸ ಮಾಡುತ್ತಿದ್ದೆ. ಈಗ ವರ್ಕ್‌ಶಾಪ್‌ನಲ್ಲಿ ಪೇಯಿಂಟ್ ಸೆಕ್ಷನ್‌ನಲ್ಲಿ ಕೆಲಸ ಮಾಡುತ್ತಿದ್ದೇನೆ. ಎಫ್‌ಸಿ ಬಸ್ ಕಳುಹಿಸಬೇಕಾದರೆ ಪೇಯಿಂಟ್ ಮಾಡಬೇಕು. ಅಲ್ಲದೆ, ಬೇರೆ ಬೇರೆ ಕಾರಣಗಳಿಂದ ಬಸ್‌ಗಳಿಗೆ ಹಾನಿಯಾಗಿ ವರ್ಕ್‌ಶಾಪ್‌ಗೆ ಬರುವ ಬಸ್‌ಗಳಿಗೂ ಬಣ್ಣ ಬಳಿಯಬೇಕು. ಕೆಲಸ ಹೆವಿ ಎಂದು ಸುಮ್ಮನೆ ಕೂರಲು ಸಾಧ್ಯವಿಲ್ಲ. ಪೇಯಿಂಟ್ ಮಾಡುವಾಗ ಹೆಚ್ಚು ವಾಸನೆ ಬರಲಿದ್ದು, ಮಾಸ್ಕ್ ಧರಿಸುವುದು ಸೇರಿದಂತೆ ಅಗತ್ಯ ಮುಂಜಾಗ್ರತಾ ಕ್ರಮ ಕೈಗೊಂಡು ಪೇಯಿಂಟಿಂಗ್ ಕೆಲಸ ಮಾಡುತ್ತಿದ್ದೇನೆ. ನನಗೆ ಇಬ್ಬರು ಮಕ್ಕಳಿದ್ದು, ಓರ್ವ ವಿಶೇಷಚೇತನ. ಮನೆಯವರು(ಪತಿ) ಪೊಲೀಸ್ ವೃತ್ತಿಗೆ ರಾಜೀನಾಮೆ ನೀಡಿ ಮಕ್ಕಳ ಪಾಲನೆ ಮಾಡುತ್ತಿದ್ದಾರೆ. ನಾನು ಕೆಎಸ್‌ಆರ್‌ಟಿಸಿಯಲ್ಲಿ ಸೇವೆ ಸಲ್ಲಿಸುತ್ತಿದ್ದೇನೆ ಎಂದು ತಿಳಿಸಿದ ಅವರು, ಹೆಣ್ಣು ಮಕ್ಕಳು ಹೆಚ್ಚಿನ ಸಂಖ್ಯೆಯಲ್ಲಿ ಎಲ್ಲಾ ಕ್ಷೇತ್ರಗಳಲ್ಲೂ ಕೆಲಸ ಮಾಡುತ್ತಿದ್ದಾರೆ. ಪುರುಷರಿಗೆ ಸರಿ ಸಮನಾಗಿ ಕೆಲಸ ಮಾಡುತ್ತಿದ್ದಾರೆ. ಇನ್ನಷ್ಟು ಮಂದಿ ವೃತ್ತಿಪರರಾಗಲು ಮುಂದೆ ಬರಬೇಕು ಎಂದು ಸಲಹೆ ನೀಡಿದರು.

ಮನಸ್ಸಿದ್ದರೆ ಮಾರ್ಗ...: ಸೇವಾ ಅನುಭವ ಕುರಿತು 'ಮೈಸೂರು ಮಿತ್ರ' ನೊಂದಿಗೆ ಮಾತನಾಡಿದ ಪಿ.ಪ್ರೇಮಮ್ಮ, ಐಟಿಐ ಓದಿದ್ದ ನಾನು 2001ರಲ್ಲಿ ಸಾರಿಗೆ ಸಂಸ್ಥೆಗೆ ಮೆಕ್ಯಾನಿಕ್ ಆಗಿ ಕೆಲಸಕ್ಕೆ ಸೇರಿದೆ. 25 ವರ್ಷ ಪೂರೈಸಿದ್ದೇನೆ. ಈ ಹಿಂದೆ ಬ್ರೇಕ್ ಸೆಕ್ಷನ್, ಸೀಟ್ ಸೆಕ್ಷನ್‌ನಲ್ಲಿ ಕೆಲಸ ನಿರ್ವಹಿಸಿದ್ದೇನೆ. ಈಗ ಕ್ಲಚ್ ಸೆಕ್ಷನ್‌ನಲ್ಲಿ ಕೆಲಸ ಮಾಡುತ್ತಿದ್ದೇನೆ. ಎಲ್ಲಾ ಸೆಕ್ಷನ್‌ನಲ್ಲೂ ಕೆಲಸ ಕಲಿತು ಕೆಲಸ ಮಾಡಿದ್ದೇನೆ. ಆಸಕ್ತಿಯಿದ್ದರೆ ಎಲ್ಲಾ ಕೆಲಸ ಕಲಿಯಬಹುದು. ಭಾರ ಎತ್ತುವಾಗ ಕೆಲವೊಮ್ಮೆ ಹೆವಿ ಅನ್ನಿಸುತ್ತದೆ. ಇಷ್ಟ ಪಟ್ಟು ಮಾಡಿದರೆ ಕಷ್ಟ ಎನ್ನಿಸಲ್ಲ. ಆರಂಭದಲ್ಲಿ ಎಲೆಕ್ಟ್ರಿಷಿಯನ್ ಆಗಿ ಕೆಲಸ ಮಾಡಿದ್ದೆ. ಆ ನಂತರ ವೈರಿಂಗ್ ಮಾಡುತ್ತಿದ್ದೆ. ಬಳಿಕ ಸೀಟ್ ಸೆಕ್ಷನ್‌ನಲ್ಲೂ ಕೆಲಸ ಮಾಡಿದ್ದೇನೆ. ಎಲ್ಲಾ ಕ್ಷೇತ್ರಗಳಲ್ಲೂ ಹೆಣ್ಣು ಮಕ್ಕಳು ಕೆಲಸ ಮಾಡಬಹುದು. ಹೆಲ್ಪರ್–ಬಿ ಹುದ್ದೆಯಿಂದ ಕೆಲಸ ಆರಂಭಿಸಿ, ಹೆಲ್ಪರ್–ಎ, ಅಸಿಸ್ಟೆಂಟ್ ಆರ್ಟಿಜನ್ ಬಡ್ತಿ ಪಡೆದು, ಈಗ ಆರ್ಟಿಜನ್ ಆಗಿ ಕೆಲಸ ಮಾಡುತ್ತಿದ್ದೇನೆ ಎಂದರು.

ಪ್ರತಿದಿನ ಬೆಳಗ್ಗೆ 8 ಗಂಟೆಯಿಂದ ಸಂಜೆ 5 ಗಂಟೆವರೆಗೆ ಡ್ಯೂಟಿ ಸಮಯವಿದ್ದು, ಮನೆ ಮತ್ತು ಮಕ್ಕಳನ್ನು ನಿಭಾಯಿಸಿ ಕರ್ತವ್ಯಕ್ಕೆ ಬರುತ್ತೇನೆ. ಸಾರಿಗೆ ಬಸ್ ಸುರಕ್ಷಿತಕ್ಕೆ ಪ್ರಯಾಣ ಕ್ಲಚ್ ಮತ್ತು ಬ್ರೇಕ್ ಪ್ರಮುಖ ಪಾತ್ರವಹಿಸುತ್ತದೆ. ವರ್ಕ್‌ಶಾಪ್‌ನಲ್ಲಿ ಬಸ್‌ಗಳ ಬಿಡಿಭಾಗಗಳನ್ನು ಪರೀಕ್ಷಿಸಿ, ರೀ ಕಂಡಿಷನ್ ಮಾಡುತ್ತೇವೆ. ಸಾರಿಗೆ ಸಂಸ್ಥೆಯಲ್ಲಿರುವ ಬಸ್‌ಗಳ ಇಂಜಿನ್ ಬಿಎಸ್–2, ಟಾಟಾ ಬಿಎಸ್–3, ಬಿಎಸ್–4, ಬಿಎಸ್–6 ಗಳಾಗಿದ್ದು, ಆಯಾ ಇಂಜಿನ್‌ಗೆ ಅನುಗುಣವಾಗಿ ಬಿಡಿಭಾಗಗಳು ಬದಲಾಗುತ್ತವೆ. ಅದಕ್ಕೆ ಹೊಂದಿಕೊಂಡು ಕೆಲಸ ಮಾಡುತ್ತಿದ್ದೇವೆ. ಮನೆಯ ಸದಸ್ಯರ ಪ್ರೋತ್ಸಾಹ ಬಹುಮುಖ್ಯವಾಗಿದೆ. ನನಗೆ ಪತಿ ಹಾಗೂ ಪದವಿ ಮತ್ತು ಪಿಯುಸಿ ಓದುವ ಇಬ್ಬರು ಹೆಣ್ಣು ಮಕ್ಕಳು ಪ್ರೋತ್ಸಾಹ ನೀಡುತ್ತಿದ್ದು, ಇದರಿಂದ 25 ವರ್ಷದ ಸೇವೆ ತೃಪ್ತಿ ತಂದಿದೆ ಎಂದು ಹರ್ಷ ವ್ಯಕ್ತಪಡಿಸಿದರು.

ಹೆಣ್ಣು ಮಕ್ಕಳು ಈಗ ಸಾಧಿಸುತ್ತಿದ್ದಾರೆ: ಸಾರಿಗೆ ಸಂಸ್ಥೆಯಲ್ಲಿ ಮೆಕ್ಯಾನಿಕ್ ಆಗಿ 17 ವರ್ಷದಿಂದ ಸೇವೆ ಸಲ್ಲಿಸುತ್ತಿರುವ ಹಾಸನ ಮೂಲದ, **ಹಾಲಿ ಮೇಟಗಳ್ಳಿ ನಿವಾಸಿ ರಮ್ಯಾ** ಮಾತನಾಡಿ, ಮೈಸೂರು ಗ್ರಾಮಾಂತರ ವಿಭಾಗದ ವರ್ಕ್‌ಶಾಪ್‌ನಲ್ಲಿ ಕಳೆದ 8 ವರ್ಷದಿಂದ ಸೇವೆ ಸಲ್ಲಿಸುತ್ತಿದ್ದು, ಈಗ ಬ್ರೇಕ್ ಸಿಸ್ಟಮ್ ವಿಭಾಗದಲ್ಲಿ ಕೆಲಸ ಮಾಡುತ್ತಿದ್ದೇನೆ. ಈ ವಿಭಾಗದಲ್ಲಿ ಬಸ್‌ಗಳ ಏರ್ ಬ್ರೇಕ್, ಎಪಿಡಿ, ಬ್ರೇಕ್ ಚೆಂಬರ್, ಆರ್‌ಜಿಟಿವಾಲ್, ಹ್ಯಾಂಡ್ ಬ್ರೇಕ್ ದುರಸ್ತಿ ಮತ್ತು ಪರಿಶೀಲನೆಗೆ ಬರಲಿದೆ. ಇಲ್ಲಿ ಪರಿಶೀಲಿಸಿ, ಏರ್ ಯಂತ್ರದ ಮೂಲಕ ಅದನ್ನು ಪರಿಶೀಲಿಸಲಾಗುತ್ತದೆ. ಆರ್‌ಸಿ ಮಾಡಬೇಕಾದರೆ ಸವಾಲು ಇರುತ್ತದೆ. ಆದರೆ ಇಷ್ಟಪಟ್ಟು ಕೆಲಸ ಮಾಡುತ್ತಿದ್ದು, ಇದುವರೆಗೆ ಯಾವುದೇ ಸಮಸ್ಯೆ ಎದುರಾಗಿಲ್ಲ. ಇತ್ತೀಚಿನ ದಿನಗಳಲ್ಲಿ ಮಹಿಳೆಯರು ಎಲ್ಲಾ ಕ್ಷೇತ್ರಗಳಲ್ಲೂ ಮುಂದುವರೆಯುತ್ತಿರುವುದು ಶ್ಲಾಘನೀಯ. ಮೆಕ್ಯಾನಿಕ್ ಆಗಿ ಸೇವೆ ಸಲ್ಲಿಸುತ್ತಿರುವುದು ತೃಪ್ತಿ ತಂದಿದೆ ಎಂದರು.

ಹಿರಿಯರ ಮಾರ್ಗ ದರ್ಶನ: ಬಳ್ಳಾರಿ ಮೂಲದ **ಪಾರ್ವತಿ**, ಕಳೆದ 13 ವರ್ಷದಿಂದ ಮೈಸೂರಿನ ಗ್ರಾಮಾಂತರ ವಿಭಾಗದ ಸಾರಿಗೆ ಸಂಸ್ಥೆಯ ವರ್ಕ್‌ಶಾಪ್‌ನಲ್ಲಿ ಸೇವೆ ಸಲ್ಲಿಸುತ್ತಿದ್ದು, ಇದೀಗ ಬ್ರೇಕ್ ಸಿಸ್ಟಮ್‌ನಲ್ಲಿ ಕೆಲಸ ಮಾಡುತ್ತಿದ್ದಾರೆ. ಹೂವಿನಹಡಗಲಿ ಡಿಪೋದಲ್ಲಿ ಮೆಕ್ಯಾನಿಕ್ ಆಗಿರುವ ಅಣ್ಣನ ಬೆಂಬಲ ದಿಂದ ಐಟಿಐ ಮಾಡಿ, ಸಾರಿಗೆ ಸಂಸ್ಥೆಗೆ ಮೆಕ್ಯಾನಿಕ್ ಆಗಿ ಕೆಲಸಕ್ಕೆ ಸೇರಿದ್ದೇನೆ. ಈ ಹಿಂದೆ ಬೇರೆ ಬೇರೆ ಸೆಕ್ಷನ್‌ನಲ್ಲಿ ಕೆಲಸ ಮಾಡಿದ್ದು, ಈಗ ಬ್ರೇಕ್ ಸೆಕ್ಷನ್‌ನಲ್ಲಿ ಕೆಲಸ ಮಾಡುತ್ತಿದ್ದೇವೆ. ಬಸ್‌ಗಳಲ್ಲಿ ಬ್ರೇಕ್ ಸೆಕ್ಷನ್ ಪ್ರಮುಖ ಪಾತ್ರ ವಹಿಸಲಿದ್ದು, ರಿಪೇರಿಗೆ ಬಂದ ಬಸ್‌ಗಳನ್ನು ಬ್ರೇಕ್ ಕಂಡೀಷನ್ ಪರಿಶೀಲಿಸಿ, ಅಗತ್ಯಬಿದ್ದರೆ ಅದನ್ನು ರಿಪೇರಿ ಮಾಡಲಾಗುತ್ತದೆ. ಕೆಲಸಕ್ಕೆ ಸೇರಿದ ಆರಂಭದಲ್ಲಿ ಕಷ್ಟ ಎನಿಸುತ್ತಿತ್ತು. ಆಗ ಸೀನಿಯರ್‌ಗಳು ಸಹಾಯ ಮಾಡುತ್ತಿದ್ದಾರೆ ಎಂದು ಸ್ಮರಿಸಿದರು.

ಹೊರಗೆ ನೋಡುವಾಗ ಕಷ್ಟ ಎನಿಸಬಹುದು, ಆದರೆ..: ಸೀಟ್ ಸೆಕ್ಷನ್‌ನಲ್ಲಿ ಕೆಲಸ ಮಾಡುತ್ತಿರುವ **ಮಲ್ಲಮ್ಮ ಸಿಂಗನಳ್ಳಿ** ಮಾತನಾಡಿ, ಬಿಜಾಪುರ ಮೂಲದ ನಾನು 2009ರಲ್ಲಿ ಸಾರಿಗೆ ಸಂಸ್ಥೆಗೆ ಸೇರಿದೆ. ಮೊದಲು ಪೇಯಿಂಟ್, ಎಫ್‌ಐಟಿ ಸೆಕ್ಷನ್‌ನಲ್ಲಿ ಕೆಲಸ ಮಾಡಿದ್ದೆ. ಈಗ ಸೀಟ್ ಸೆಕ್ಷನ್‌ನಲ್ಲಿ ಕೆಲಸ ಮಾಡುತ್ತಿದ್ದೇನೆ. ಸಾರಿಗೆ ಸಂಸ್ಥೆಯ ಬಸ್‌ಗಳ ಸೀಟ್(ಆಸನ) ಸುಸ್ಥಿತಿಯಲ್ಲಿಡುವುದು, ಸೀಟ್ ಹರಿದಿದ್ದರೆ ಅದನ್ನು ಹೊಲಿಯುವುದು ನಮ್ಮ ಕೆಲಸವಾಗಿದೆ. ಮೇಲ್ನೋಟಕ್ಕೆ ಕೆಲಸ ಕಷ್ಟ ಎನಿಸಿದರೂ, ಅನುಭವವಾಗುತ್ತಿದ್ದಂತೆ ಸುಗಮವಾಗಿ ನಡೆದುಕೊಂಡು ಹೋಗುತ್ತೆ ಎಂದರು.

ಕೆಲಸ ಮಾಡುತ್ತಲೇ ಸ್ನಾತಕೋತ್ತರ ಪದವಿ ಪಡೆದೆ



ಪಂಪ್ ಸೆಕ್ಷನ್‌ನಲ್ಲಿ ಕೆಲಸ ಮಾಡುತ್ತಿರುವ ವಾಣಿ ಮಾತನಾಡಿ, ಸಾರಿಗೆ ಸಂಸ್ಥೆಯ ವರ್ಕ್‌ಶಾಪ್‌ಗೆ ಸೇರಿ 16 ವರ್ಷವಾಗಿದ್ದು, ವಿವಿಧ ವಿಭಾಗದಲ್ಲಿ ಕೆಲಸ ಮಾಡಿದ್ದೇನೆ. ಪ್ರಸ್ತುತ ಪಂಪ್ ಸೆಕ್ಷನ್‌ನಲ್ಲಿ ಕೆಲಸ ಮಾಡುತ್ತಿದ್ದೇನೆ. ಸಾರಿಗೆ ಬಸ್‌ಗಳಿಗೆ ಪಂಪ್ ಸೆಕ್ಷನ್ ಪ್ರಮುಖವಾಗಿದ್ದು, ಹೃದಯದಂತೆ ಕೆಲಸ ಮಾಡುತ್ತದೆ. ಮೆಕ್ಯಾನಿಕ್ ಆಗಿ ಕೆಲಸ ಮಾಡುತ್ತಲೇ ಪದವಿ ಹಾಗೂ ಸ್ನಾತಕೋತ್ತರ ಪದವಿಯನ್ನು ಪಡೆದಿದ್ದೇನೆ ಎಂದರು.

25 ವರ್ಷ ಸೇವೆ ಪೂರೈಸಿದ ಪಿ.ಪ್ರೇಮಮ್ಮ



ಸಾರಿಗೆ ಬಸ್‌ಗಳ ದುರಸ್ತಿ ಕಾರ್ಯದಲ್ಲಿ ತೊಡಗಿಸಿಕೊಳ್ಳುವುದು ಸವಾಲಿನ ಕೆಲಸವಾಗಿದ್ದು, ಪುರುಷ ಸಿಬ್ಬಂದಿಗೆ ಸರಿಸಮವಾಗಿ ಮಹಿಳಾ ಸಿಬ್ಬಂದಿ ಶ್ರಮಿಸುತ್ತಿರುವುದು ಗಮನಾರ್ಹ. ಅದರಲ್ಲೂ ವರ್ಕ್‌ಶಾಪ್‌ನಲ್ಲಿ ವಿವಿಧ ವಿಭಾಗದಲ್ಲಿ ಸೇವೆ ಸಲ್ಲಿಸುತ್ತಿರುವ 22 ಮಹಿಳಾ ಸಿಬ್ಬಂದಿಗಳಲ್ಲಿ **ಪಿ.ಪ್ರೇಮಮ್ಮ** ಹಿರಿಯ ಮಹಿಳಾ ಸಿಬ್ಬಂದಿ. ಮೆಕ್ಯಾನಿಕ್ ಆಗಿ 25 ವರ್ಷ ಸುದೀರ್ಘ ಸೇವೆ ಸಲ್ಲಿಸಿ, ಇಂದಿಗೂ ಕ್ಲಚ್ ಸೆಕ್ಷನ್‌ನಲ್ಲಿ ಕೆಲಸ ಮುಂದುವರೆಸಿದ್ದಾರೆ. ಅಲ್ಲದೆ, ಇಂಟರ್ನ್‌ಶಿಪ್‌ಗಾಗಿ ಬರುವ ಐಟಿಐ ಕಾಲೇಜಿನ ವಿದ್ಯಾರ್ಥಿಗಳಿಗೆ ಮಾರ್ಗದರ್ಶನ ನೀಡುವ ಮೂಲಕ ತಾವು ಕಲಿತ ವಿದ್ಯೆಯನ್ನು ವಿದ್ಯಾರ್ಥಿಗಳಿಗೆ ಮಾರ್ಗದರ್ಶನ ನೀಡಲು ವಿನಿಯೋಗಿಸುತ್ತಿದ್ದಾರೆ.

ಮನೆಯವರ ಬೆಂಬಲ ಅಗತ್ಯ

ಸೀಟ್ ಸೆಕ್ಷನ್‌ನಲ್ಲಿ ಕೆಲಸ ಮಾಡುತ್ತಿರುವ **ಪ್ರೇಮವ್ವ ಪಾದನಕಟ್ಟಿ** ಮಾತನಾಡಿ, ವರ್ಕ್‌ಶಾಪ್‌ಗೆ ಕೆಲಸಕ್ಕೆ ಸೇರಿದ ನಂತರ ವಿವಿಧ ಸೆಕ್ಷನ್‌ಗಳಲ್ಲಿ ಕೆಲಸ ಮಾಡುವುದನ್ನು ಹಿರಿಯರು ಕಲಿಸಿ ಕೊಡುತ್ತಾರೆ. ಮನೆಯವರ ಬೆಂಬಲವೂ ಮುಖ್ಯ. ಸಾರಿಗೆ ಬಸ್‌ಗಳ ಸೀಟ್‌ಗಳು ಉತ್ತಮ ಕಂಡೀಷನ್‌ನಲ್ಲಿರುವಂತೆ ನೋಡಿಕೊಳ್ಳುವುದು ಸೀಟ್ ಸೆಕ್ಷನ್ ಕೆಲಸವಾಗಿದೆ. ದುರಸ್ತಿ, ಎಫ್‌ಸಿಗೆ ಬರುವ ಬಸ್‌ಗಳ ಸೀಟ್‌ನ್ನು ಪರಿಶೀಲಿಸಿ, ಹಾಳಾಗಿದ್ದರೆ ಅದನ್ನು ಸರಿಪಡಿಸಲಾಗುತ್ತದೆ ಎಂದರು.



ಬ್ರೇಕ್ ಸಿಸ್ಟಮ್ ವಿಭಾಗದಲ್ಲಿ ಕಾರ್ಯ ನಿರ್ವಹಿಸುತ್ತಿರುವ ರಮ್ಯಾ ಮತ್ತು ಪಾರ್ವತಿ.



ಮಲ್ಲಮ್ಮ ಸಿಂಗನಳ್ಳಿ, ಪ್ರೇಮವ್ವ ಪಾದನಕಟ್ಟಿ ಅವರು ಬಸ್ಸಿನ ಸೀಟುಗಳ ಪರಿಶೀಲಿಸುವ ಕಾರ್ಯದಲ್ಲಿ ನಿರತರಾಗಿರುವುದು. ಬಿ.ಎಂ. ಕಾರ್ಯಾಗಾರದ ಮೇಲ್ವಿಚಾರಕಿ ಶ್ರೀದೇವಿ ಅವರ ನೇತೃತ್ವದಲ್ಲಿ ರಾಧಮ್ಮ ಬಸ್‌ನ ಛಾವಣಿಗೆ ಬಣ್ಣ ಬಳಿಯುತ್ತಿದ್ದಾರೆ.

'ಭಾರತ ರತ್ನ ಡಾ.ಸಿ.ಎನ್.ಆರ್.ರಾವ್' ವಿಜ್ಞಾನ ಪುರಸ್ಕಾರ–2026' ಪ್ರಶಸ್ತಿ ಪ್ರದಾನ



ಮೈಸೂರಿನ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಆವರಣದಲ್ಲಿ ಬೆಂಗಳೂರಿನ ಸ್ವದೇಶಿ ವಿಜ್ಞಾನ ಆಂದೋಲನ–ಕರ್ನಾಟಕ ವತಿಯಿಂದ ಕುಲಪತಿ ಪ್ರೊ. ಶರಣಪ್ಪ ವಿ. ಹಲಸೆ ಅವರಿಗೆ 'ಭಾರತ ರತ್ನ ಡಾ.ಸಿ.ಎನ್.ಆರ್.ರಾವ್' ವಿಜ್ಞಾನ ಪುರಸ್ಕಾರ–2026' ವನ್ನು ಸ್ವದೇಶಿ ವಿಜ್ಞಾನ ಆಂದೋಲನದ ಅಧ್ಯಕ್ಷ ಡಾ.ಎಂ.ಎಸ್.ಜೋಗಾದ್ ಪ್ರದಾನ ಮಾಡಿದರು. ಈ ಸಂದರ್ಭದಲ್ಲಿ ಡಾ.ವೈ.ಎಸ್.ಗಾಯತ್ರಿ ಪ್ರಶಸ್ತಿ ಫಲಕ ವಾಚಿಸಿದರು. ಬಾಬುರಾವ್ ದನಿ ಸೆಕ್, ಕನ್ನಡ ವಿಜ್ಞಾನ ಸಭೆಯ ಆಯೋಜಕ ಸಂತೋಷ್, ಕರಾಮುವಿ ಕುಲಸಚಿವ ಪ್ರೊ.ನವೀನ್‌ಕುಮಾರ್, ಶೈಕ್ಷಣಿಕ ಡೀನ್ ಪ್ರೊ.ರಮಾನಾಥಂ ನಾಯ್ಡು, ಹಣಕಾಸು ಅಧಿಕಾರಿ ಡಾ.ನಿರಂಜನ್‌ರಾಜ್ ಹಾಗೂ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರದ ಸಂಯೋಜನಾಧಿಕಾರಿ ಜೈನಹಳ್ಳಿ ಸತ್ಯನಾರಾಯಣಗೌಡ ಉಪಸ್ಥಿತರಿದ್ದರು.

ಟೆರೇಷಿಯನ್ ಕಾಲೇಜಲ್ಲಿ ರಾಷ್ಟ್ರೀಯ ಕಾರ್ಯಾಗಾರ

ಮೈಸೂರು, ಮಾ.9(ಎಂಕೆ)– ಮೈಸೂರಿನ ಟೆರೇಷಿಯನ್ ಕಾಲೇಜು ಸಭಾಂಗಣದಲ್ಲಿ 'ರಚನಾತ್ಮಕ ಸಮೀಕರಣ ಮಾದರಿ' ಕುರಿತ ರಾಷ್ಟ್ರೀಯ ಕಾರ್ಯಾಗಾರ ಸೋಮವಾರ ನಡೆಯಿತು.



ಟೆರೇಷಿಯನ್ ಕಾಲೇಜಿನಲ್ಲಿ 'ರಚನಾತ್ಮಕ ಸಮೀಕರಣ ಮಾದರಿ' ಕುರಿತ ರಾಷ್ಟ್ರೀಯ ಕಾರ್ಯಾಗಾರ ಸೋಮವಾರ ನಡೆಯಿತು.

ಕಾರ್ಯಾಗಾರ ಉದ್ಘಾಟಿಸಿದ ಮೈಸೂರು ವಿಶ್ವವಿದ್ಯಾಲಯದ ವಾಣಿಜ್ಯ ಅಧ್ಯಯನ ವಿಭಾಗದ ಪ್ರಾಧ್ಯಾಪಕ ಡಾ.ಎಂ.ಎಲ್. ಅಶೋಕ ಮಾತನಾಡಿ, ವ್ಯವಹಾರದ ಬೆಳವಣಿಗೆಯು ಸಂಶೋಧನೆಯನ್ನು ಅವಲಂಬಿಸಿದ್ದು, ಪರಿಣಾಮಕಾರಿ ಸಂಶೋಧನೆಗೆ ರಚನಾತ್ಮಕ ಸಮೀಕರಣ ಮಾದರಿಯಂತಹ ಸುಧಾರಿತ ವಿಶ್ಲೇಷಣಾತ್ಮಕ ಸಾಧನಗಳ ಅನ್ವಯದ ಅಗತ್ಯವಿದೆ ಎಂದರು.

ಸಂಶೋಧನಾ ಸಂಸ್ಕೃತಿಯನ್ನು ಬಲಪಡಿಸುವುದು ಮತ್ತು ಜ್ಞಾನ ಸೃಷ್ಟಿಗೆ ಕೊಡುಗೆ ನೀಡುವಲ್ಲಿ ಪ್ರತಿಯೊಬ್ಬ ಶಿಕ್ಷಣ ತಜ್ಞರು ಮತ್ತು ಸಂಶೋಧಕರ ಸಕ್ರಿಯ ಒಳಗೊಳ್ಳುವಿಕೆ ಅಗತ್ಯವಾಗಿದ್ದು, ಇದೊಂದು ಸಾಮೂಹಿಕ ಜವಾಬ್ದಾರಿ ಕೂಡ ಆಗಿದೆ. ಈ ನಿಟ್ಟಿನಲ್ಲಿ ಉನ್ನತ ಮಟ್ಟದ ಸಂಶೋಧನೆಗಳ ಮೂಲಕ ವ್ಯವಹಾರವು ವೃದ್ಧಿಯಾಗುತ್ತದೆ ಎಂದು ತಿಳಿಸಿದರು.

ಪಾಂಡಿಚೇರಿ ವಿವಿ ಕಾನೂನು ವಿಭಾಗದ ಮುಖ್ಯಸ್ಥ ಡಾ.ಆರ್.ಕಾಸಿಲಿಂಗಂ ಮಾತನಾಡಿ, ಪ್ರಮುಖ ದೇಶಗಳಿಗೆ ಹೋಲಿಸಿದರೆ ಭಾರತದ ಸಂಶೋಧನಾ ಫಲಿತಾಂಶವು ಮತ್ತಷ್ಟು ಬೆಳೆಯಬೇಕಾಗಿದೆ. ಯುವ ಪೀಳಿಗೆಯಲ್ಲಿ ಹೊಸ ವಿಚಾರಗಳನ್ನು ಹುಟ್ಟುಹಾಕುವ ನಿಟ್ಟಿನಲ್ಲಿ ಹೆಚ್ಚಿನ ಪ್ರೋತ್ಸಾಹದ ಅಗತ್ಯವಿದೆ. ಸಂಶೋಧನಾ ಸಂಸ್ಕೃತಿಯನ್ನು ಬಲಪಡಿಸುವುದು ಮತ್ತು ವಿದ್ಯಾರ್ಥಿಗಳನ್ನು ವ್ಯವಸ್ಥಿತ ಸಂಶೋಧನಾ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳುವುದರಿಂದ ಯುವ ಮನಸ್ಸುಗಳಲ್ಲಿ ಸೃಜನಶೀಲತೆ, ವಿಮರ್ಶಾತ್ಮಕ ಚಿಂತನೆ ಮತ್ತು ನಾವೀನ್ಯತೆ ಬೆಳೆಸಬಹುದು ಎಂದರು. ಕಾಲೇಜು ಪ್ರಾಂಶುಪಾಲರಾದ ಡಾ.ಸಿಸ್ಟರ್ ರೋಹಿಣಿ ಅಧ್ಯಕ್ಷತೆ ವಹಿಸಿದ್ದರು. ಸಂಶೋಧನಾ ನಿರ್ದೇಶಕಿ ಡಾ.ವೀಣಾ ಅಲ್ಮೇಡಾ, ಸಹಾಯಕ ಪ್ರಾಧ್ಯಾಪಕ ಡಾ.ಪಿ.ಎಂ.ಶಿವಪ್ರಸಾದ್; ಐಕ್ಯೂಎಸಿ ಸಂಯೋಜಕ ವಿವೇಕ್ ಚಾರ್ಲ್ಸ್ ಮತ್ತಿತರರು ಉಪಸ್ಥಿತರಿದ್ದರು.

ನಕ್ಕರೆ ಅದೇ ಸ್ವರ್ಗ

ಜಪಾನ್, ಅಮೆರಿಕ ಮತ್ತು ಭಾರತ ದೇಶದ ಮೂವರು ವ್ಯಕ್ತಿಗಳು ಕುಳಿತು ಪ್ರಾರ್ಥಿಸುತ್ತಿದ್ದರು.

ಜಪಾನೀಯ : ಓ ದೇವರೇ, ನನಗೆ ಒಂದು ರೂಂ ತುಂಬ ಚಿನ್ನಕೊಡು.
ಅಮೆರಿಕನ್ : ದೇವರೇ ನನಗೆ-ಒಂದು ರೂಂ ತುಂಬ ವಜ್ರ ಕೊಡು.
ಭಾರತೀಯ : ದೇವರೇ, ನನಗೆ ಆ ಎರಡು ರೂಂಗಳ ಕೀ ಕೊಡು.

ಮೈಸೂರು ಮಿತ್ರ

ಮಂಗಳವಾರ, ಮಾರ್ಚ್ 10, 2026

ಸತ್ಯೇನೋತ್ತಭಿತಾ ಭೂಮಿಃ ನ ಹಿ ಸತ್ಯಾತ್ಪರೋ ಧರ್ಮಃ
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ M.A.

ಅಮೃತ ವಾಹಿನಿ..........

ಕರ್ನಾಟಕವು ನಮ್ಮ ಕನ್ನಡಿಗರ ಕುರುಕ್ಷೇತ್ರ,
ಭಾರತವು ನಮ್ಮ ಧರ್ಮಕ್ಷೇತ್ರ – ಆಲೂರು ವೆಂಕಟರಾಯರು

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಊಟ ಬಲ್ಲವನಿಗೆ ರೋಗವಿಲ್ಲ, ಮಾತು ಬಲ್ಲವನಿಗೆ ಜಗಳವಿಲ್ಲ

ನಿಮ್ಮ ಪತ್ರಗಳು

ದಾಖಲೆ ಬರೆದ ಟೀಮ್ ಇಂಡಿಯಾಗೆ ಅಭಿನಂದನೆಗಳು



ಮಾನ್ಯರೆ,

ಅಹಮದಾಬಾದ್‌ನ ನರೇಂದ್ರ ಮೋದಿ ಕ್ರೀಡಾಂಗಣದಲ್ಲಿ ಭಾನುವಾರ ನಡೆದ ಟಿ20 ವಿಶ್ವಕಪ್ ಫೈನಲ್ ಪಂದ್ಯವು ಭಾರತೀಯ ಕ್ರಿಕೆಟ್ ಇತಿಹಾಸದಲ್ಲಿ ಸುವರ್ಣ ಅಕ್ಷರಗಳಲ್ಲಿ ಬರೆದಿಡುವಂತಹದ್ದು. ನ್ಯೂಜಿಲೆಂಡ್ ತಂಡವನ್ನು 96 ರನ್‌ಗಳ ಬೃಹತ್ ಅಂತರದಿಂದ ಸೋಲಿಸಿ, ಸತತ ಎರಡನೇ ಬಾರಿಗೆ ಹಾಗೂ ಒಟ್ಟಾರೆಯಾಗಿ ಮೂರನೇ ಬಾರಿ ವಿಶ್ವಕಪ್ ಎತ್ತಿ ಹಿಡಿದ ಟೀಮ್ ಇಂಡಿಯಾದ ಸಾಧನೆ ಅಸಾಮಾನ್ಯವಾದುದು.

ಈ ಗೆಲುವು ಕೇವಲ ಒಬ್ಬಿಬ್ಬರ ಆಟವಲ್ಲ. ಇದು ಪಕ್ಕಾ 'ಸಾಂಘಿಕ ಪ್ರದರ್ಶನ'. ತಮಗೆ ಸಿಕ್ಕ ಅವಕಾಶವನ್ನು ಸರಿಯಾಗಿ ಬಳಸಿಕೊಂಡ ಸಂಜು ಸ್ಯಾಮ್ಸನ್ (89 ರನ್) ಸತತ ಮೂರು ಪಂದ್ಯಗಳಲ್ಲಿ ಅಬ್ಬರಿಸಿ ತನ್ನ ಸಾಮರ್ಥ್ಯ ಏನೆಂದು ಜಗತ್ತಿಗೆ ತೋರಿಸಿದ್ದಾರೆ. ಇವರಿಗೆ ಸಾಥ್ ನೀಡಿದ ಅಭಿಷೇಕ್ ಶರ್ಮಾ ಮತ್ತು ಇಶಾನ್ ಕಿಶನ್ ಅವರ ಅರ್ಧಶತಕಗಳು ಭಾರತದ ಬೃಹತ್ ಮೊತ್ತಕ್ಕೆ (255) ಭದ್ರ ಬುನಾದಿ ಹಾಕಿದವು. ಬೌಲಿಂಗ್‌ನಲ್ಲಿ ಜಸ್ಪ್ರೀತ್ ಬುಮ್ರಾ ಅವರದ್ದು ಎಂದಿನಂತೆ ಮ್ಯಾಜಿಕ್ ಸ್ಪೆಲ್! ಕೇವಲ 15 ರನ್ ನೀಡಿ 4 ವಿಕೆಟ್ ಕಬಳಿಸಿ ಎದುರಾಳಿಗಳ ಬೆನ್ನೆಲುಬು ಮುರಿದರು. ಅಕ್ಷರ್ ಪಟೇಲ್ ಅವರ ಚಾಣಾಕ್ಷ ಬೌಲಿಂಗ್ ತಂಡದ ಗೆಲುವನ್ನು ಸುಲಭ ಗೊಳಿಸಿತು. ಧೋನಿ ಮತ್ತು ರೋಹಿತ್ ಶರ್ಮಾ ಅವರಂತಹ ದಂತಕಥೆಗಳ ಸಾಲಿಗೆ ಈಗ ನಾಯಕ ಸೂರ್ಯಕುಮಾರ್ ಯಾದವ್ ಸೇರ್ಪಡೆಯಾಗಿರುವುದು ಅಭಿಮಾನಿಗಳಿಗೆ ಹೆಮ್ಮೆಯ ವಿಷಯ.

2023ರ ಏಕದಿನ ವಿಶ್ವಕಪ್ ಫೈನಲ್ ಸೋಲಿನ ಕಹಿ ನೆನಪಿದ್ದ ಇದೇ ಮೈದಾನದಲ್ಲಿ ಇಂದು ವಿಶ್ವಕಪ್ ಗೆಲ್ಲುವ ಮೂಲಕ ಭಾರತ ಹಳೆಯ ಬಾಕಿಯನ್ನು ತೀರಿಸಿದೆ. ಸತತ ಎರಡು ಬಾರಿ ವಿಶ್ವಕಪ್ ಗೆದ್ದ ಹಾಗೂ ಮೂರು ಬಾರಿ ಚಾಂಪಿಯನ್ ಆದ ಮೊದಲ ತಂಡ ಎಂಬ ದಾಖಲೆ ಬರೆದ ಟೀಮ್ ಇಂಡಿಯಾಗೆ ಕೋಟಿ ಕೋಟಿ ಭಾರತೀಯರ ಪರವಾಗಿ ಅಭಿನಂದನೆಗಳು.

– ಬಿ.ಗಣೇಶ, ಕೆ.ಜಿ.ಕೊಪ್ಪಲು, ಮೈಸೂರು.

ಸಿಲಿಂಡರ್ ಬೆಲೆ ಏರಿಕೆ ತರವಲ್ಲ

ಮಾನ್ಯರೆ,

ಇತ್ತೀಚೆಗೆ ಗೃಹಬಳಕೆಯ ಎಲ್‌ಪಿಜಿ ದರ 60 ಮತ್ತು ವಾಣಿಜ್ಯ ಸಿಲಿಂಡರ್ ಬೆಲೆ 115 ರಷ್ಟು ಏರಿಕೆಯಾಗಿರುವುದು ಕಳವಳಕಾರಿ. ಪಶ್ಚಿಮ ಏಷ್ಯಾದ ಯುದ್ಧದ ಭೀತಿಯಿಂದ ಅಂತರಾಷ್ಟ್ರೀಯ ಮಾರುಕಟ್ಟೆಯಲ್ಲಿ ಕಚ್ಚಾ ತೈಲದ ಬೆಲೆ ಶೇ.11 ಜಿಗಿತ ಕಂಡಿರುವುದು ಭಾರತದ ಅಡುಗೆ ಮನೆಯ ಮೇಲೆ ನೇರ ಪರಿಣಾಮ ಬೀರಿದೆ. ರಾಜ್ಯದಲ್ಲಿ ಸಿಲಿಂಡರ್ ಬೆಲೆ 916 ತಲುಪಿದ್ದು ಕಳೆದ 11 ತಿಂಗಳಲ್ಲಿ ಇದು ಎರಡನೇ ದೊಡ್ಡ ಏರಿಕೆಯಾಗಿದೆ.

ಅಗತ್ಯ ವಸ್ತುಗಳ ಬೆಲೆ ಏರಿಕೆಯಿಂದ ಈಗಾಗಲೇ ತತ್ತರಿಸಿರುವ ಮಧ್ಯಮ ವರ್ಗದ ಜನರಿಗೆ ಇದು ಗಾಯದ ಮೇಲೆ ಬರೆ ಎಳೆದಂತಾಗಿದೆ. ವಾಣಿಜ್ಯ ಸಿಲಿಂಡರ್ ಬೆಲೆ ಏರಿಕೆಯು ಹೋಟೆಲ್ ತಿಂಡಿಗಳ ಬೆಲೆ ಹೆಚ್ಚಳಕ್ಕೂ ದಾರಿಯಾಗಲಿದೆ. ಸರ್ಕಾರವು ಕೂಡಲೇ ಮಧ್ಯಪ್ರವೇಶಿಸಿ, ತೆರಿಗೆ ಕಡಿತ ಅಥವಾ ಸಬ್ಸಿಡಿ ಮೂಲಕ ಜನಸಾಮಾನ್ಯರ ಹೊರೆ ತಗ್ಗಿಸಬೇಕೆಂದು ಈ ಮೂಲಕ ಮನವಿ.

–ಡಾ.ಎಚ್.ಕೆ.ವಿಜಯಕುಮಾರ, ಮೈಸೂರು.

ವಿಶ್ವಮಾನವ ಜೋಡಿ ರಸ್ತೆಯಲ್ಲಿ ಅಕ್ರಮ ಪಾರ್ಕಿಂಗ್

ಮಾನ್ಯರೆ,

ಮೈಸೂರಿನ ರಾಮಕೃಷ್ಣನಗರ ವೃತ್ತದಿಂದ A to Z ಕಾಂಪ್ಲೆಕ್ಸ್‌ಗೆ ಸೇರುವ ವಿಶ್ವಮಾನವ ಜೋಡಿ ರಸ್ತೆಯಲ್ಲಿ ಸಂಜೆಯಾದಂತೆ ರಸ್ತೆ ಬದಿಗಿನ ಬೇರೆ-ಬೇರೆ ತಿಂಡಿ ತಿನಿಸುಗಳ ಪುಟ್ಟ ಅಂಗಡಿಗಳಲ್ಲಿ ಜನ ಸಂದಣಿ ಹೆಚ್ಚಾಗುತ್ತಿದ್ದು, ಅರ್ಧ ರಸ್ತೆ ಆವರಿಸುವಂತೆ ನಾಲ್ಕು ಚಕ್ರ ವಾಹನಗಳನ್ನು ಗ್ರಾಹಕರು ಪಾರ್ಕಿಂಗ್ ಮಾಡುತ್ತಿದ್ದು, ರಸ್ತೆಯಲ್ಲಿ ಸಂಚರಿಸುವ ಸಾರ್ವಜನಿಕರಿಗೆ ತುಂಬಾ ತೊಂದರೆಯಾಗುತ್ತಿದೆ. ಈಗಾಗಲೇ ಪ್ರತಿನಿತ್ಯ ಚಿಕ್ಕ ಪುಟ್ಟ ಅಪಘಾತಗಳು ನಡೆಯುವುದು ಕಂಡು ಬಂದಿದೆ. ಮುಂದೆ ದೊಡ್ಡ ಮಟ್ಟದ ಅವಘಡವಾಗದಂತೆ ಸಂಬಂಧಪಟ್ಟ ಅಧಿಕಾರಿಗಳು ಹಾಗೂ ಜನಪ್ರತಿನಿಧಿಗಳು ಬೀದಿಬದಿ ವ್ಯಾಪಾರಿಗಳ ಹೊಟ್ಟೆಪಾಡಿಗೆ ತೊಂದರೆಯಾಗದಂತೆ ತಕ್ಷಣ ಕ್ರಮ ಕೈಗೊಳ್ಳುವಂತೆ ಕಳಕಳಿಯ ವಿನಂತಿ.

–ವೈಭವ ವಿ ಬಾಡಕರ, ಮೈಸೂರು.

ಚಿನ್ನವನ್ನು ಕೊಂಡುಕೊಳ್ಳಲು ಸಾಧ್ಯವೇ?

ಮಾನ್ಯರೆ,

ಚಿನ್ನವನ್ನು ತೆಗೆದುಕೊಳ್ಳಬೇಕು ಎಂಬ ಆಕಾಂಕ್ಷೆ ಪ್ರತಿಯೊಬ್ಬರಲ್ಲೂ ಸಹ ಇದ್ದೇ ಇರುತ್ತದೆ. ಯಾರಲ್ಲಿಯೂ ಚಿನ್ನವನ್ನು ತೆಗೆದುಕೊಳ್ಳಲಾರೆ ಎಂಬ ಮನೋಭಾವ ಇರಲು ಸಾಧ್ಯವೇ ಇಲ್ಲ. ಮುಂದೊಂದಿನ ತೆಗೆದುಕೊಳ್ಳುವ ನಿಟ್ಟಿನಲ್ಲಿ ಇರುತ್ತಾರೆ. ಎಂತಹ ಬಡವನಾದರೂ ಸಹ ಒಂದು ಗ್ರಾಂ ಚಿನ್ನವಾದರೂ ಮಾಡಿಸಬೇಕು ಎಂಬ ಆಸೆಯನ್ನು ಹೊಂದಿರುತ್ತಾನೆ. ಕೆಲ ಮಧ್ಯಮ ವರ್ಗದವರು ಚಿನ್ನವನ್ನು ತೆಗೆದುಕೊಳ್ಳುವ ಮುಖಾಂತರ ಮುಂದೊಂದಿನ ಕಷ್ಟಕಾಲದಲ್ಲಿ ಉಪಯೋಗವಾಗುತ್ತದೆ. ಹೇಗೋ ಅದನ್ನು ಗಿರವಿ ಇಟ್ಟು ಮತ್ತೆ ಅದನ್ನು ಹಿಂಪಡೆಯುವ ನಿಟ್ಟಿನಲ್ಲಿ ಇರುತ್ತಾರೆ. ಹೀಗೆ ನಾನಾ ರೀತಿಯಲ್ಲಿ ಚಿನ್ನವನ್ನು ಗ್ರಾಹಕರು ಕೊಂಡುಕೊಳ್ಳುವ ಹಾದಿಯಲ್ಲಿ ಇರುವುದು ಸಹಜ.

ಆದರೆ ಇಂದು ಚಿನ್ನದ ಬೆಲೆ ಎಷ್ಟರಮಟ್ಟಿಗೆ ಏರಿಕೆಯಾಗಿದೆ ಎಂದರೆ ನಾವು ದೂರದಲ್ಲಿರುವ ಆಕಾಶವನ್ನು ಮುಟ್ಟಲು ಸಾಧ್ಯವೇ? ಕೇವಲ ಬರಿಗಣ್ಣಿನಲ್ಲಿ ಮಾತ್ರ ನೋಡಬಹುದು ಅಲ್ಲವೇ. ಅದೇ ರೀತಿ ಚಿನ್ನವನ್ನು ದೂರದಿಂದ ನೋಡಬಹುದು. ಮುಟ್ಟಲು ಸಾಧ್ಯವಾಗದ ಪರಿಸ್ಥಿತಿ ನಿರ್ಮಾಣವಾಗಿದೆ. ನಮ್ಮಂತಹ ಮಧ್ಯಮ ವರ್ಗದವರಂತೂ ಚಿನ್ನವನ್ನು ದೂರದಿಂದಲೇ ನೋಡಿ ಕಣ್ತುಂಬಿಕೊಳ್ಳಬೇಕಾದ ಪ್ರಸಂಗ ಎದುರಾಗಿದೆ. ಒಂದು ಗ್ರಾಂ ಚಿನ್ನ 16 ಸಾವಿರ ಆಗಿದೆ. ಈ ರೀತಿಯ ಬೆಲೆ ಇದ್ದರೆ ಹೇಗೆ ಕೊಂಡುಕೊಳ್ಳಲು ಸಾಧ್ಯ. ಆದ್ದರಿಂದ ಎಲ್ಲಾ ವರ್ಗದ ಜನರು ಚಿನ್ನವನ್ನು ಕೊಂಡುಕೊಳ್ಳುವ ಹಾಗೆ ದರವನ್ನು ನಿಗದಿ ಮಾಡಬೇಕಾಗಿದೆ.

– ಬಿ.ಎಸ್. ಸಾಯಿ ಸಂದೇಶ್, ಮೈಸೂರು.



ರಾಘವೇಂದ್ರ ಸಿ.ಎಸ್.
ಕನ್ನಡ ಉಪನ್ಯಾಸಕರು
ರಾಮಕೃಷ್ಣ ವಿದ್ಯಾಶಾಲಾ, ಮೈಸೂರು
ಮೊ: 9036389640

ಈ ಜೀವನ

ಸಮಯವನ್ನ ಸಾಧನವಾಗಿಸಿದರೆ ಸಾಧನೆ ಸಾಧ್ಯ!

ಕಾರಂತರು ಹೆಚ್ಚು ಕಡಿಮೆ 400 ಕ್ಕೂ ಹೆಚ್ಚು ಕೃತಿಗಳನ್ನು, ಕುವೆಂಪು ಸಾಹಿತ್ಯದ ಎಲ್ಲ ಪ್ರಕಾರಗಳಲ್ಲಿಯೂ ರಚನೆ ಮಾಡಿದ್ದಾರೆ. ಅ.ನ.ಕೃ ಅವರು 190 ಕೃತಿಗಳನ್ನು ಪ್ರಕಟಿಸಿದ್ದಾರೆ. ಗುರುಗಳೇ ಹಿಂದಿನ ಕಾಲದ ಸಾಹಿತಿಗಳೆಲ್ಲ ಅಷ್ಟೊಂದು ಕೃತಿ ರಚನೆಯನ್ನು ಹೇಗೆ ಮಾಡುತ್ತಿದ್ದರು? ಅವರಿಗೆಲ್ಲ ಅಷ್ಟೊಂದು ಸಮಯ ಎಲ್ಲಿ ಸಿಗುತ್ತಿತ್ತು ....? ಮಾತಿನ ನಡುವೆ ತೂರಿ ಬಂದ ಗೆಳೆಯನ ಈ ಮಾತು ಕ್ಷಣ ಕಾಲ ತರ್ಕಬದ್ಧವಾಗಿ ಆಲೋಚಿಸುವಂತೆ ಮಾಡಿತು.

ಆಧುನಿಕ ಜಗತ್ತಿನ ವೇಗದ ಬದುಕಿನಲ್ಲಿ ಮನುಷ್ಯನು ತನ್ನ ಪ್ರತಿಯೊಂದು ವಿಳಂಬಕ್ಕೂ, ನಿರ್ಲಕ್ಷ್ಯಕ್ಕೂ, ಜವಾಬ್ದಾರಿಯಿಂದ ತಪ್ಪಿಸಿಕೊಳ್ಳುವುದಕ್ಕೂ ಬಳಸುವ ಅತ್ಯಂತ ಸುಲಭವಾದ ನೆಪವೇ ಸಮಯವಿಲ್ಲ. ನಿಜಕ್ಕೂ ಸಮಯವಿಲ್ಲವೇ, ಅಥವಾ ಸಮಯವನ್ನು ಸರಿಯಾಗಿ ಬಳಸುವ ಮನಸ್ಸಿಲ್ಲವೇ ಎಂಬ ಪ್ರಶ್ನೆ ಇಲ್ಲಿ ಅನಿವಾರ್ಯವಾಗಿ ಎದುರಾಗುತ್ತದೆ

ಪ್ರತಿಯೊಬ್ಬರಿಗೂ ದಿನದ ಇಪ್ಪತ್ತನಾಲ್ಕು ಗಂಟೆಗಳೇ ಇದ್ದರೂ, ಕೆಲವರು ಅದರಲ್ಲಿ ಸಾಧನೆಯ ಶಿಖರ ತಲುಪುತ್ತಾರೆ; ಇನ್ನೂ ಕೆಲವರು ಅದೇ ಸಮಯದ ಕೊರತೆಯನ್ನು ನೆಪವನ್ನಾಗಿ ಮಾಡಿಕೊಂಡು ಬದುಕಿನ ಮೂಲಭೂತ ಕರ್ತವ್ಯಗಳಿಂದ ದೂರ ಸರಿಯುತ್ತಾರೆ. ಸಮಯವಿಲ್ಲವೆಂಬುದು ಬಹುಪಾಲು ಸಂದರ್ಭಗಳಲ್ಲಿ ವಾಸ್ತವವಲ್ಲ; ಅದು ನಮ್ಮ ಆದ್ಯತೆಗಳ ಅಸಮರ್ಪಕತೆಯ ಪ್ರತಿಬಿಂಬ ಮಾತ್ರ. ಹೀಗಾಗಿ ಸಮಯವಿಲ್ಲ ಎನ್ನುವ ನೆಪವನ್ನು ಬದಿಗೊತ್ತಿ, ಸಮಯವನ್ನು ರೂಪಿಸಿಕೊಳ್ಳುವ ಜಾಗೃತಿಯನ್ನು ಬೆಳೆಸಿದಾಗ ಮಾತ್ರ ಜೀವನಕ್ಕೆ ಅರ್ಥ, ಶಿಸ್ತು ಮತ್ತು ಸಾಧನೆಯ ದಿಕ್ಕು ಸಿಗುತ್ತದೆ.

ನಿಜ ಪ್ರಸ್ತುತ ಇರುವ ಕೆಲಸಕ್ಕಿಂತ ಒಂದು ಕೆಲಸ ಅಧಿಕವಾದರೂ ಸಮಯವಿಲ್ಲ, ಸಮಯವಿಲ್ಲ ಎಂದು ಬೊಬ್ಬೆ ಹಾಕುವ ನಮ್ಮೆಲ್ಲರಿಗೂ ಇದು ನಿಜವೇ ಎಂದು ಪ್ರಶ್ನಿಸಿಕೊಂಡರೆ ಉತ್ತರ ಸಮರ್ಪಕವಾಗಿಯೇ ಸಿಗುತ್ತದೆ. ಹಾಗೆಯೇ ಚಿಂತಿಸಿ ನೋಡಿದರೆ ಪ್ರತಿಯೊಬ್ಬರಿಗೂ ಇರುವ ಸಮಯ ಒಂದೇ, ಆ ಸಮಯವನ್ನು ಸರಿಯಾಗಿ ಸದುಪಯೋಗಪಡಿಸಿಕೊಂಡವರು ಮಾತ್ರ ಸಮರ್ಥವಾಗಿ ಬದುಕನ್ನು ನಡೆಸಬಲ್ಲರು. ಸಮಯಕ್ಕೆ ಪ್ರಾಧಾನ್ಯತೆ ಕೊಡದೆ ಬೇಕಾಬಿಟ್ಟಿಯಾಗಿ ಸಮಯವನ್ನು ವ್ಯರ್ಥ ಮಾಡುವವರು ಮುಂದೊಂದು ದಿನ ಅದಕ್ಕಾಗಿ ಪರಿತಪಿಸಲೇ ಬೇಕಾಗಿರುತ್ತದೆ.

ಈ ಕ್ಷಣ ಮತ್ತೆ ಬರಲಾರದು

ಮಹಾಭಾರತದಲ್ಲಿ ಕೃಷ್ಣ ಹೇಳಿದ ಎಂದು ನಂಬಲಾಗಿರುವ ಒಂದು ಮಾತು –ಈ ಸಮಯ ಕಳೆದು ಹೋಗುತ್ತದೆ. ಹೌದು ಸಮಯದ ಮಹತ್ವ ಅಂತದ್ದು. ಕಳೆದು ಹೋದ ಸಮಯ ಮತ್ತೆ ಎಷ್ಟೇ ಪ್ರಯತ್ನಿಸಿದರೂ ಮರಳಿ ಬರಲಾರದು.ಆದ್ದರಿಂದ ಸಮಯವನ್ನು ಸರಿಯಾಗಿ ಸದ್ಬಳಕೆ ಮಾಡಿಕೊಂಡು ಸಮಯದ ಸಾರ್ಥಕಪಡಿಸಿಕೊಳ್ಳಬೇಕು.

ಈ ಕ್ಷಣ ಯಾವುದೇ ಕಾರಣಕ್ಕೂ ಮರಳಿ ಬರುವುದಕ್ಕೆ ಸಾಧ್ಯವಿಲ್ಲ. ಆದ್ದರಿಂದ ಸಾಧ್ಯವಾದಷ್ಟು ಸಮಯವನ್ನು ಸದುಪಯೋಗಪಡಿಸಿಕೊಂಡು ಸಿಕ್ಕಿರುವ ಅವಕಾಶಗಳನ್ನು ಸದಾವಕಾಶಗಳನ್ನಾಗಿ ಪರಿವರ್ತಿಸಿಕೊಂಡಾಗ ಮಾತ್ರ ಸಮಯದ ಸದುಪಯೋಗವಾಗಲು ಸಾಧ್ಯವಾಗುತ್ತದೆ. ಹಿಂದೆ ಆಗಿ ಹೋದ, ಮುಂದೆ ಬರುವ ಕ್ಷಣಗಳ ಬಗ್ಗೆ ಚಿಂತಿಸಿ ಕಾಲ ಕಳೆಯುವ ಬದಲು ಈ ಕ್ಷಣದ ಮಹತ್ವಕ್ಕೆ ಬೆಲೆ ಕೊಟ್ಟು ಮುನ್ನಡೆದರೆ ಮಾತ್ರ ಸಮಯ ಹೆಚ್ಚು ನೆನಪಲ್ಲಿ ಉಳಿಯಬಲ್ಲದು. ಸಮಯ ಕಳೆದ ಹಾಗೆ ಎಲ್ಲವೂ ಬದಲಾಗುತ್ತದೆ. ಬದಲಾಗಬೇಕು ಕೂಡ. ಆದ್ದರಿಂದ ಇರುವ ಈ ಕ್ಷಣವನ್ನು ಆನಂದದಿಂದ ಕಳೆಯಬೇಕು.ಸುಂದರವಾದ ಈ ಬದುಕಿನಲ್ಲಿ ವರ್ತಮಾನದ ಸುಂದರ ಕ್ಷಣಗಳನ್ನು ಸವಿಯುತ್ತಾ ಮುಂದೆ ಸಾಗಬೇಕು.

ಕುಂಟು ನೆಪಗಳನ್ನು ಬಿಡೋಣ

ಅಯ್ಯೋ ನನಗೆ ಸಮಯನೇ ಇಲ್ಲ ಎಂದು ಹೇಳುವವರನ್ನು ನೋಡಿದಾಗ ನಿಜಕ್ಕೂ ತಮಾಷೆ ಎನಿಸುತ್ತದೆ. ಯಾರು ಈ ಮಾತನ್ನಾಡುತ್ತಾರೆಯೋ ಅವರೇ ಹೆಚ್ಚಾಗಿ ಸಮಯವನ್ನು ಇನ್ನಿಲ್ಲದಂತೆ ವ್ಯರ್ಥ ಮಾಡುತ್ತಾ ಕಾಲ ಕಳೆಯುತ್ತಾ ಇರುತ್ತಾರೆ. ಸಮಯದ ಮಹತ್ವ ಗಹನವಾದುದು. ಅದನ್ನು ಸರಿಯಾಗಿ ಅರ್ಥಮಾಡಿಕೊಳ್ಳದೇ ಇನ್ನಿಲ್ಲದಂತೆ ಕುಂಟು ನೆಪಗಳನ್ನು ಹೇಳುತ್ತಾ ಕಾಲ ಕಳೆಯುವ ಬದಲು ಸಮಯದೊಂದಿಗೆ ಹೊಂದಿಕೊಂಡು ಬದುಕುವುದನ್ನು ರೂಢಿಸಿಕೊಳ್ಳಬೇಕು.

ಸಿನಿಮಾ ನೋಡಬೇಕೆಂದು ನಿರ್ಧರಿಸಿ ಸರದಿ ಸಾಲಿನಲ್ಲಿ ನಿಂತು ಟಿಕೆಟ್ ಖರೀದಿಸಿ 3 ಗಂಟೆ ಸಿನಿಮಾ ನೋಡುವಾಗ, ಐದು ನಿಮಿಷ ಎಂದು ಸಾಮಾಜಿಕ ಜಾಲತಾಣವನ್ನು ನೋಡಲು ಆರಂಭಿಸಿ ಗಂಟೆಗಟ್ಟಲೆ ಸಮಯವನ್ನು ಕಳೆಯುವಾಗ, ನೆಚ್ಚಿನ ಕ್ರಿಕೆಟ್ ಆಟವನ್ನು ನೋಡುವಾಗ, ನಮಗಿಷ್ಟ ಬಂದ ಕ್ರೀಡೆಯನ್ನು ಆಡುವಾಗ ಸಿಗುವ ಸಮಯ ಉಳಿದ ಕಾಲಗಳಲ್ಲಿ ಎಲ್ಲಿ ಮರೆಯಾಗುತ್ತದೆ ಎಂಬುದೇ ಯಕ್ಷ ಪ್ರಶ್ನೆಯಾಗಿ ಉಳಿಯುತ್ತದೆ. ಇದೆಲ್ಲ ನಮ್ಮ ಮನಸ್ಸಿನ ಭಾವನೆಯೇ



ಹೊರತು ಬೇರೇನಿಲ್ಲ. ಕೆಲಸ ಮಾಡಲೇಬೇಕೆಂಬ ಒತ್ತಡ ಬಂದಾಗ, ಇಷ್ಟಪಟ್ಟು ಕೆಲಸ ಮಾಡುವಾಗ ಸಿಗುವ ಸಮಯ ಇದ್ದೇ ಇರುತ್ತದೆ. ಆದ್ದರಿಂದ ಕುಂಟು ನೆಪಗಳನ್ನು ಬಿಟ್ಟು ಸಮಯದೊಂದಿಗೆ ಹೆಜ್ಜೆ ಹಾಕಿದರೆ ಒಳಿತು.

ಸಮಯ ಕಾಣೆಯಾಗಿದೆ ಹುಡುಕಿ!

ಸಮಯವಿಲ್ಲ ಎಂಬಂತಹ ಅಪ್ಪಟ ಸುಳ್ಳನ್ನು ಹೇಳುವ ಮುಂಚೆ ಪರಿಸ್ಥಿತಿಯನ್ನು ಒಮ್ಮೆ ನೆನಪು ಮಾಡಿಕೊಂಡು ನೋಡಿ. ತುಂಬಾ ಹಿಂದಿನ ಕಾಲಕ್ಕೆ ಹೋಗಬೇಕಿಲ್ಲ ,ಕೇವಲ ಹತ್ತು ವರ್ಷದ ಹಿಂದಿನ ಕಾಲವನ್ನು ನೆನಪಿಸಿಕೊಂಡು ನೋಡಿ. ಹಣ ಬೇಕಾಗಿದ್ದಾಗ ಎ.ಟಿ.ಎಂ ನಲ್ಲಿ ಗಟ್ಟೆಗಟ್ಟಲೇ ನಿಂತು ಹಣವನ್ನು ಡ್ರಾ ಮಾಡಿಕೊಳ್ಳುತ್ತಿದ್ದ, ಹಣವನ್ನು ಖಾತೆಗೆ ಸಾಲಿನಲ್ಲಿ ನಿಂತು ಟೋಕನ್ ಪಡೆದು ನಮ್ಮ ಸರದಿ ಬಂದಾಗ ಹೋಗಿ ಹಣವನ್ನು ಹಾಕುತ್ತಿದ್ದ ಸಮಯ, ಸಾಲಿನಲ್ಲಿ ನಿಂತು ಟಿಕೆಟ್ ಖರೀದಿಸುವಾಗ ಇದ್ದ ಸಮಯಗಳೆಲ್ಲ ಮರೆಯಾಗಿ ಈಗ ಬೆರಳ ತುದಿಯಲ್ಲಿಯೇ ಜಂಗಮವಾಣಿಯಲ್ಲಿಯೇ ಎಲ್ಲ ಕೆಲಸಗಳು ಕ್ಷಣ ಮಾತ್ರದಲ್ಲಿಯೇ ಮುಗಿಯುತ್ತಿರುವಾಗ ಸಮಯ ಎಲ್ಲಿ ಕಣ್ಮರೆಯಾಗಿದೆ?

ಮನೆಮಂದಿಗೆಲ್ಲಾ ಮೂರು ಸಮಯದಲ್ಲಿಯೂ ರಾಗಿಯನ್ನು ಬೀಸಿ ರಾಗಿಮುದ್ದೆಯನ್ನು ಮಾಡುವಾಗ ಸಿಕ್ಕ ಸಮಯ ಈಗ ಎಲ್ಲಿ ಮರೆಯಾಗಿ ನಿಂತಿದೆ. ಮನುಷ್ಯರು ಮಾಡುತ್ತಿದ್ದ ಕೆಲಸವನ್ನೆಲ್ಲ ಯಂತ್ರಗಳೇ ನಿರ್ವಹಿಸುತ್ತಿರುವ ಈ ಸಂದರ್ಭದಲ್ಲಿ ಸಮಯ ಯಾಕೆ ಸಾಲುತ್ತಿಲ್ಲ. ಒಬ್ಬ ವ್ಯಕ್ತಿ ಇಷ್ಟೆಲ್ಲಾ ಸಾಧನೆ ಮಾಡಲು ಸಾಧ್ಯವೇ ಎಂದು ಪ್ರಶ್ನೆ ಮಾಡಿಕೊಂಡು ನೋಡುವಷ್ಟರ ಮಟ್ಟಿಗೆ ಬಾಳಿ ಬದುಕಿದ ಮಹನೀಯರಿಗಿದ್ದ ಸಮಯ, ಅತಿ ಕಡಿಮೆ ವಯಸ್ಸಿನಲ್ಲಿಯೇ ಇಹಲೋಕದ ಯಾತ್ರೆಯನ್ನು ಮುಗಿಸಿ ಹೊರಟರೂ ಮಾಡಿರುವ ಕೆಲಸಗಳು ಬೆರಗನ್ನುಂಟು ಮಾಡುವಂತೆ ಮಾಡಿದ ಸಾಧಕರಿಗಿದ್ದ ಸಮಯ ಎಲ್ಲಿ ಕಳೆದು ಹೋಗಿದೆ? ವಿಶ್ವದಾಖಲೆಗಳನ್ನೆಲ್ಲ ಮಾಡಿದ ಸಾಧಕರಿಗಿದ್ದ ಸಮಯ ಈಗ ಎಲ್ಲಿ ಮರೆಯಾಗಿ ಹೋಗಿದೆ? ಈ ಎಲ್ಲ ಪ್ರಶ್ನೆಗಳಿಗೆಲ್ಲ ಉತ್ತರವನ್ನು ಹುಡುಕ ಹೊರಟರೆ ಸಮಯ ಸಿಗುಬಹುದೇನೋ !!

ಸೋಮಾರಿತನದ ಭ್ರಮೆ ಕಳಚಿಟ್ಟರೆ ಸಮಯ ಸಿಗಬಹುದು

ಹೌದು ಸಮಯವಿಲ್ಲ ಎಂಬಂತಹ ಸೋಮಾರಿತನದ ಉತ್ತರವನ್ನು ನೀಡುವ ಬದಲು ಇರುವ ಸಮಯವನ್ನು ಹೇಗೆ ಅರ್ಥಪೂರ್ಣವಾಗಿ ಬಳಸಿಕೊಂಡು ಬಾಳಬೇಕು ಎಂಬುದನ್ನು ಕಲಿಯಬೇಕು. ಮನುಷ್ಯನ ಅತಿ ದೊಡ್ಡ ದೌರ್ಬಲ್ಯವೇ ಸೋಮಾರಿತನ.

ಪ್ರತ್ಯಕ್ಷವಾಗಿ ಹಾಗೂ ಪರೋಕ್ಷವಾಗಿ ಸೋಮಾರಿತನ ಎಂಬುದು ಮನುಷ್ಯರನ್ನು ತನ್ನ ಬಂಧನದಲ್ಲಿ ಬಂಧಿಯಾಗಿರಿಸಿಕೊಂಡಿರುತ್ತದೆ. ಅಂತಹ ಸೋಮಾರಿತನದ ಸೋಗಲಾಡಿತನವನ್ನು ಕಳಚಿಟ್ಟರೆ ಖಂಡಿತವಾಗಿಯೂ ಸಮಯ ಸಿಗುತ್ತದೆ. ಸಮಯವಿಲ್ಲ ಎಂಬ ಕುಂಟು ನೆಪ ಮರೆಯಾಗುತ್ತದೆ. ಮಾಡುವ ಕೆಲಸದಲ್ಲಿ ಶ್ರದ್ಧೆ, ನಂಬಿಕೆ, ನಿಷ್ಠೆಯಿಲ್ಲದಿದ್ದರೆ ಸೋಮಾರಿತನ ಮನೆ ಮಾಡಿರುತ್ತದೆ. ಆಗ ಸಿದ್ಧ ಅಡುಗೆಯಂತೆಯೇ ನನಗೆ ಸಮಯವಿಲ್ಲವೆಂಬ ಸಿದ್ಧ ಉತ್ತರ ತಯಾರಾಗಿ ನಿಂತಿರುತ್ತದೆ. ಸೋಮಾರಿತನ ಮನುಷ್ಯರಲ್ಲಿ ಹೇಗಿರುತ್ತದೆ ಎಂಬುದಕ್ಕೆ ಹಿಂದೊಮ್ಮೆ ಕೇಳಿದ್ದ ಹಾಸ್ಯ ಪ್ರಸಂಗ ನೆನಪಾಗುತ್ತದೆ.

ಹಾಸ್ಯ ಪ್ರಸಂಗ

ಅತಿ ಸೋಮಾರಿಗಳಿರುವ ತರಗತಿಗೆ ಬಂದು ಉತ್ಸಾಹಿ ಶಿಕ್ಷಕರು ಈ ತರಗತಿಯಲ್ಲಿ ಯಾರಾದರೂ ಸೋಮಾರಿಗಳಿದ್ದರೆ ಕೈ ಎತ್ತಿ ಎನ್ನುವರು, ಅವರ ಉದ್ದೇಶ ಈ ರೀತಿ ಹೇಳಿದರೆ ವಿದ್ಯಾರ್ಥಿಗಳು ಸಂಕೋಚದಿಂದಲೋ, ಬೇಸರದಿಂದಲೋ ಕೈ ಎತ್ತಲಾರರು ಆ ಮೂಲಕ ಅವರಿಗೆ ಸೋಮಾರಿತನದ ಬಗ್ಗೆ ಅರಿವನ್ನು ಮೂಡಿಸುವ ಉದ್ದೇಶ ಅವರಿಗಿತ್ತು. ಆದರೆ ಅಲ್ಲಿ ನಡೆದದ್ದೇ ಬೇರೆ. ಒಬ್ಬ ವಿದ್ಯಾರ್ಥಿಯನ್ನು ಹೊರತುಪಡಿಸಿ ಉಳಿದವರೆಲ್ಲ ಕೈ ಎತ್ತಿದರು, ಶಿಕ್ಷಕರ ಉತ್ಸಾಹ ಭಂಗವಾಯಿತು. ಆದರೂ ಸುಧಾರಿಸಿಕೊಂಡ ಶಿಕ್ಷಕರು ಸದ್ಯ ಒಬ್ಬ ವಿದ್ಯಾರ್ಥಿಯಾದರೂ ಸೋಮಾರಿಯಾಗದೆ ಕುಳಿತಿದ್ದಾನೆ ಎಂದು ಸಂತೋಷಪಡುತ್ತಾರೆ. ವಿದ್ಯಾರ್ಥಿಯನ್ನು ನೀನೊಬ್ಬನಾದರೂ ಚಟುವಟಿಕೆಯಿಂದ ಇರುವೆಯಲ್ಲ ಸಾಕು ಎಂದಾಗ ಆ ವಿದ್ಯಾರ್ಥಿ ಅಯ್ಯೋ ಹೋಗಿ ಸರ್ ಕೈಯನ್ನೆಲ್ಲ ಯಾರು ಎತ್ತುತ್ತಾರೆ ಎಂದನಂತೆ.... ! ಅಂದರೆ ಆತ ಕೈ ಎತ್ತುವುದಕ್ಕೂ ಆಗದ ಸೋಮಾರಿ. ಈ ತರಹದ ಸೋಮಾರಿತನದ ಭ್ರಮೆ ಕಳಚಿಟ್ಟಾಗ ಸಮಯ ಖಂಡಿತವಾಗಿಯೂ ಸಿಗಬಲ್ಲದು.

> ನೆಪವು ನಮ್ಮ ಅಲಸ್ಯ, ಅಸಕ್ತತೆ ಮತ್ತು ಆದ್ಯತೆಯ ಕೊರತೆಯನ್ನು ಮುಚ್ಚಿಡುವ ಸುಲಭವಾದ ಮುಖವಾಡ ಮಾತ್ರ, ಸಮಯ ಯಾರಿಗೂ ಹೆಚ್ಚಾಗಿಯೂ ಕಡಿಮೆಯಾಗಿಯೂ ದೊರಕುವುದಿಲ್ಲ; ಅದನ್ನು ಹೇಗೆ ಬಳಸುತ್ತೇವೆ ಎಂಬುದೇ ಜೀವನದ ಮೌಲ್ಯವನ್ನು ನಿರ್ಧರಿಸುತ್ತದೆ. ಬೇಕೆನ್ನುವ ಕಾರ್ಯಗಳಿಗೆ ನಾವು ಯಾವಾಗಲೂ ಕ್ಷಣಗಳನ್ನು ಕಂಡುಕೊಳ್ಳುತ್ತೇವೆ. ಆದರೆ ತಪ್ಪಿಸಿಕೊಳ್ಳಲು ಸಮಯವಿಲ್ಲ ಎನ್ನುವ ಪದವನ್ನು ಮುಂದಿಟ್ಟು ಹೊಣೆಗಾರಿಕೆಯಿಂದ ದೂರ ಸರಿಯುತ್ತೇವೆ. ಆದ್ದರಿಂದ ಇಂದು ನೆಪಗಳನ್ನು ಬಿಟ್ಟು, ಸಮಯವನ್ನು ನಮ್ಮ ಕೈಯಲ್ಲಿರುವ ಶಕ್ತಿಯಾಗಿ ಬಳಸಬೇಕು. ಸಮಯವನ್ನು ಗೌರವಿಸಿದವನು ಬದುಕನ್ನೇ ಗೌರವಿಸಿದವನಾಗುತ್ತಾನೆ; ಸಮಯವನ್ನು ಸದುಪಯೋಗಪಡಿಸಿಕೊಂಡಾಗಲೇ ವ್ಯಕ್ತಿತ್ವ ವಿಕಸನವಾಗುತ್ತದೆ ಮತ್ತು ಜೀವನ ಸಾರ್ಥಕವಾಗುತ್ತದೆ.

ಶ್ರದ್ಧೆ ಇದ್ದಾಗ ಸಮಯ ಗೋಚರ

ಎಂ ಗೋವಿಂದ ಪೈ ಅವರು 18 ಭಾಷೆಗಳನ್ನು ಓದಲು, ಬರೆಯಲು, ಮಾತನಾಡಲು ತಿಳಿದಿದ್ದರಂತೆ. ಇದು ಹೇಗೆ ಸಾಧ್ಯ ಎಂದು ಅವಲೋಕಿಸಿದಾಗ ಕಂಡು ಬಂದ ಉತ್ತರ ಶ್ರದ್ಧೆ. ಹೊಸತನ್ನು ಕಲಿಯಬೇಕೆಂಬ ಶ್ರದ್ಧೆ, ಏನಾದರೂ ಸಾಧಿಸಬೇಕೆಂಬ ಉತ್ಸಾಹ, ಸದಾ ಚಟುವಟಿಕೆಯಿಂದ ಒಂದಲ್ಲ ಒಂದು ಕಾರ್ಯದಲ್ಲಿ ತೊಡಗಿಕೊಂಡು ಇರಬೇಕೆಂಬ ಭರವಸೆ ಇದ್ದಾಗ ಮಾತ್ರ ನನಗೆ ಸಮಯವಿಲ್ಲ ಎಂಬಂತಹ ತೇಲಿಕೆಯ ಉತ್ತರಗಳು ಕಣ್ಮರೆಯಾಗಿ ಸಮಯವಿದೆ ಎಂಬ ಪ್ರಾಮಾಣಿಕತೆ ರೂಪುಗೊಂಡು ಸಮಯವನ್ನು ಸಮರ್ಪಕವಾಗಿ ಸದುಪಯೋಗಪಡಿಸಿಕೊಂಡು ಕಾರ್ಯೋನ್ಮುಖ ವ್ಯಕ್ತಿಯಾಗಿ ರೂಪುಗೊಳ್ಳಬಹುದು. ಪ್ರತಿಯೊಬ್ಬರಿಗೂ ಸಮಯವಿದೆ. ಸಾಧನೆ ಮಾಡಿದವರಿಗೂ ಮಾಡದಿದ್ದವರಿಗೂ ಇದ್ದ ಸಮಯ ಕೇವಲ 24 ಗಂಟೆಗಳು ಮಾತ್ರವೇ. ಬಡವ, ಶ್ರೀಮಂತ ಎಂಬ ತಾರತಮ್ಯವಿಲ್ಲದೇ, ಮೇಲು-ಕೀಳೆಂಬ ಭೇದವಿಲ್ಲದೇ ಎಲ್ಲರಿಗೂ ಸಮಾನವಾಗಿ ಗೋಚರಿಸುವ ಈ ಸಮಯವೆಂಬ ಸಂಪತ್ತನ್ನು ಸರಿಯಾಗಿ ಬಳಸಿಕೊಂಡಲ್ಲಿ ಮಾತ್ರ ಪ್ರತಿಯೊಬ್ಬರು ಸಮಯದೊಂದಿಗೆ ಸಾಗಬಹುದು,ಇಲ್ಲದಿದ್ದರೆ ಮತ್ತದೇ ನೆಪದ ಹಿಂದೆ ಬಿದ್ದು ನಿಂತಲ್ಲಿಯೇ ಇರಬೇಕಾಗುತ್ತದೆ.

ಒಟ್ಟಾರೆಯಾಗಿ ಹೇಳುವುದಾದರೆ ಸಮಯವಿಲ್ಲ? ಎನ್ನುವ ನೆಪವು ನಮ್ಮ ಅಲಸ್ಯ, ಅಸಕ್ತತೆ ಮತ್ತು ಆದ್ಯತೆ ಕೊರತೆಯನ್ನು ಮುಚ್ಚಿಡುವ ಸುಲಭವಾದ ಮುಖವಾಡ ಮಾತ್ರ ಸಮಯ ಯಾರಿಗೂ ಹೆಚ್ಚಾಗಿಯೂ ಕಡಿಮೆಯಾಗಿಯೂ ದೊರಕುವುದಿಲ್ಲ; ಅದನ್ನು ಹೇಗೆ ಬಳಸುತ್ತೇವೆ ಎಂಬುದೇ ಜೀವನದ ಮೌಲ್ಯವನ್ನು ನಿರ್ಧರಿಸುತ್ತದೆ. ಬೇಕೆನ್ನುವ ಕಾರ್ಯಗಳಿಗೆ ನಾವು ಯಾವಾಗಲೂ ಕ್ಷಣಗಳನ್ನು ಕಂಡುಕೊಳ್ಳುತ್ತೇವೆ. ಆದರೆ ತಪ್ಪಿಸಿಕೊಳ್ಳಲು ಸಮಯವಿಲ್ಲ ಎನ್ನುವ ಪದವನ್ನು ಮುಂದಿಟ್ಟು ಹೊಣೆಗಾರಿಕೆಯಿಂದ ದೂರ ಸರಿಯುತ್ತೇವೆ. ಆದ್ದರಿಂದ ಇಂದು ನೆಪಗಳನ್ನು ಬಿಟ್ಟು, ಸಮಯವನ್ನು ನಮ್ಮ ಕೈಯಲ್ಲಿರುವ ಶಕ್ತಿಯಾಗಿ ಬಳಸಬೇಕು. ಸಮಯವನ್ನು ಗೌರವಿಸಿದವನು ಬದುಕನ್ನೇ ಗೌರವಿಸಿದವನಾಗುತ್ತಾನೆ; ಸಮಯವನ್ನು ಸದುಪಯೋಗಪಡಿಸಿಕೊಂಡಾಗಲೇ ವ್ಯಕ್ತಿತ್ವ ವಿಕಸನವಾಗುತ್ತದೆ ಮತ್ತು ಜೀವನ ಸಾರ್ಥಕವಾಗುತ್ತದೆ.



ಮಾಜಿ ಶಾಸಕ ವಾಸು ಪುಣ್ಯಸ್ಮರಣೆ...

ಚಾಮರಾಜ ಕ್ಷೇತ್ರದ ಮಾಜಿ ಶಾಸಕ ದಿವಂಗತ ವಾಸು ಅವರ 2ನೇ ವರ್ಷದ ಪುಣ್ಯಸ್ಮರಣೆ ಅಂಗವಾಗಿ ನೂತನ ಮಹಾರಾಣಿ ಕಾಲೇಜಿನ ಬಳಿ ವಾಸು ಅವರ ಭಾವಚಿತ್ರಕ್ಕೆ ಪುಷ್ಪನಮನ ಸಲ್ಲಿಸಿ, ಗೌರವ ಸಲ್ಲಿಸಲಾಯಿತು. ಈ ವೇಳೆ ದಿ ಮೈಸೂರು ಕೋ-ಆಪರೇಟಿವ್ ಬ್ಯಾಂಕ್ ನಿರ್ದೇಶಕರಾದ ಪಡುವಾರಹಳ್ಳಿ ಎಂ.ರಾಮಕೃಷ್ಣ, ಎನ್.ಯೋಗಾನಂದ್, ಆರ್.ಸೋಮಣ್ಣ, ವಿ.ಮಧು, ಕೆ.ಗಿರೀಶ್, ಪಾಲಿಕೆ ಮಾಜಿ ಸದಸ್ಯ ಚಿಕ್ಕವೆಂಕಟು, ನಗರ ಕಾಂಗ್ರೆಸ್ ಉಪಾಧ್ಯಕ್ಷ ಸುಂದರ್ ಕುಮಾರ್, ಜಿಲ್ಲಾ ಒಕ್ಕಲಿಗರ ಸಂಘದ ಪ್ರಧಾನ ಕಾರ್ಯದರ್ಶಿ ಚೇತನ್, ಜನಹಿತ ವಿವಿಧೋದ್ದೇಶ ಸಹಕಾರ ಸಂಘದ ನಿರ್ದೇಶಕ ಕೃಷ್ಣಕುಮಾರ್, ಕಿಟ್ಟಿ, ವೇಣು, ಮೋಹಿತ್‌ಗೌಡ, ನಾಗ ಮತ್ತಿತರರಿದ್ದರು.

ಪಿಯುಸಿ ದಾಖಲಾತಿ ಬಳಿಕ ಹೆಚ್ಚುವರಿ ಉಪನ್ಯಾಸಕರ ವರ್ಗಾವಣೆಗೆ ಆಗ್ರಹ

ವಿದ್ಯಾರ್ಥಿಗಳು, ಶಿಕ್ಷಕರ ಅನುಪಾತ ಪರಿಷ್ಕರಣೆಗೂ ಎಂಎಲ್‌ಸಿ ವಿವೇಕಾನಂದ ಮನವಿ

ಮೈಸೂರು, ಮಾ.9– ಪದವಿ ಪೂರ್ವ ಶಿಕ್ಷಣ ಇಲಾಖೆಯು, ಹೆಚ್ಚುವರಿ ಉಪನ್ಯಾಸಕರ ವರ್ಗಾವಣೆ ಪ್ರಕ್ರಿಯೆಯನ್ನು 2026–27ನೇ ಸಾಲಿನ ದಾಖಲಾತಿ ಬಳಿಕ ಮುಂದುವರೆಸುವಂತೆ ವಿಧಾನಪರಿಷತ್ ಸದಸ್ಯ ಕೆ.ವಿವೇಕಾನಂದ ಅವರು ಸದನದಲ್ಲಿ ಸೋಮವಾರ ಆಗ್ರಹಿಸಿದರು.

ಶಿಕ್ಷಣ ಇಲಾಖೆ ಹಾಗೂ ಶಿಕ್ಷಕರ ಪರಿಶ್ರಮದಿಂದ ಈ ಬಾರಿ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಉತ್ತಮ ಫಲಿತಾಂಶದ ನಿರೀಕ್ಷೆ ಇದೆ. ಇದರಿಂದ ಪದವಿಪೂರ್ವ ಕಾಲೇಜುಗಳಲ್ಲಿ ವಿದ್ಯಾರ್ಥಿಗಳ ದಾಖಲಾತಿ ಪ್ರಮಾಣವೂ ಹೆಚ್ಚಾಗುತ್ತದೆ. ಆದ್ದರಿಂದ ಮುಂಬರುವ ಸಾಲಿನ ದಾಖಲಾತಿ ಮುಗಿದ ನಂತರ ಸಿಬಿಎಸ್‌ಇ ಮಾದರಿಯಲ್ಲಿ ವಿದ್ಯಾರ್ಥಿಗಳು ಹಾಗೂ ಉಪನ್ಯಾಸಕರ ಅನುಪಾತ ಅನುಸರಿಸಿ, ಹೆಚ್ಚುವರಿ ಉಪನ್ಯಾಸಕರ ವರ್ಗಾವಣೆ ಪ್ರಕ್ರಿಯೆ ನಡೆಸುವುದೇ ಸೂಕ್ತ ಎಂದರು.

ಇದಕ್ಕೆ ಶಿಕ್ಷಣ ಮತ್ತು ಸಾಕ್ಷರತಾ ಸಚಿವ ಮಧು ಬಂಗಾರಪ್ಪ ಪ್ರತಿಕ್ರಿಯಿಸಿ, ಸದ್ಯಕ್ಕೆ ಮಕ್ಕಳು ಹಾಗೂ ಶಿಕ್ಷಕರ ಅನುಪಾತದಲ್ಲಿ ಪರಿಷ್ಕರಣೆ ಮಾಡಲಾಗದು. ಸಿಬಿಎಸ್‌ಇ ಮಾದರಿಯಲ್ಲಿ ಪ್ರತಿ ಎರಡು ವರ್ಷಕ್ಕೊಮ್ಮೆ ಹೆಚ್ಚುವರಿ ಉಪನ್ಯಾಸಕರ ವರ್ಗಾವಣೆ ಮಾಡಬೇಕೆಂಬುದು ನಿಯಮದಲ್ಲಿರುವುದರಿಂದ ಈ ನಿಟ್ಟಿನಲ್ಲಿ ಕ್ರಮ ವಹಿಸಲಾಗಿದೆ. ಕಳೆದ ಬಾರಿ 40


ವಿವೇಕಾನಂದ


ಮಧು ಬಂಗಾರಪ್ಪ

ಶಿಕ್ಷಕರನ್ನು ವರ್ಗಾಯಿಸಲಾಗಿತ್ತು. ಈ ಬಾರಿ ನೂರು ದಾಟಬಹುದು. ಆದರೆ ಮಕ್ಕಳ ಕಲಿಕೆಗೆ ಯಾವುದೇ ರೀತಿಯಲ್ಲೂ ತೊಂದರೆಯಾಗದಂತೆ ಶೂನ್ಯ ಕಾರ್ಯದೊತ್ತಡ ಇರುವ ಕಡೆ ಮಾತ್ರ ವರ್ಗಾವಣೆ ಮಾಡಲಾಗುತ್ತದೆ. ಉಪನ್ಯಾಸಕರ ನೇಮಕಾತಿ ಬಳಿಕ ಬದಲಾವಣೆಗೆ ಕ್ರಮ ವಹಿಸಲಾಗುವುದು ಎಂದು ಸ್ಪಷ್ಟಪಡಿಸಿದರು.

ಈ ವೇಳೆ ಕೆ.ವಿವೇಕಾನಂದ ಅವರು, ರಾಜ್ಯದಲ್ಲಿ 1317 ಪದವಿಪೂರ್ವ ಕಾಲೇಜುಗಳಿದ್ದು, ಒಟ್ಟು 12,918 ಉಪನ್ಯಾಸಕ ಹುದ್ದೆಗಳಲ್ಲಿ ಸದ್ಯ 7,711 ಮಂದಿ ಮಾತ್ರ ಕಾರ್ಯನಿರ್ವಹಿಸುತ್ತಿದ್ದಾರೆ. ಇನ್ನೂ 5207 ಹುದ್ದೆಗಳು ಖಾಲಿ ಇವೆ. ಸಿಬಿಎಸ್‌ಇ ಹಾಗೂ ಐಸಿಎಸ್‌ಇ ಶಿಕ್ಷಣ ವ್ಯವಸ್ಥೆಯಲ್ಲಿ 45 ವಿದ್ಯಾರ್ಥಿಗಳಿಗೆ ಓರ್ವ ಶಿಕ್ಷಕರೆಂಬ ಅನುಪಾತದಲ್ಲಿ ನೇಮಕಾತಿ ಮಾಡಿಕೊಳ್ಳಲಾಗುತ್ತದೆ. ಆದರೆ ರಾಜ್ಯದಲ್ಲಿ 321 ಮಕ್ಕಳಿಗೆ ಓರ್ವ ಶಿಕ್ಷಕರಂತೆ ನಿಯೋಜಿಸಲಾಗುತ್ತಿದೆ. ಹೀಗಾದರೆ ಗುಣಮಟ್ಟದ ಶಿಕ್ಷಣ ನಿರೀಕ್ಷಿಸಲು ಸಾಧ್ಯವಿಲ್ಲ. ಶಿಕ್ಷಕರ ಕಾರ್ಯದೊತ್ತಡ ಕಡಿಮೆ ಮಾಡುವ ನಿಟ್ಟಿನಲ್ಲಿ ವಿದ್ಯಾರ್ಥಿಗಳ ಅನುಪಾತವನ್ನು ಕಡಿಮೆ ಮಾಡಬೇಕೆಂದು ಒತ್ತಾಯಿಸಿದರು.

ಇದಕ್ಕೆ ಪ್ರತಿಕ್ರಿಯಿಸಿದ ಸಚಿವರು, ಸದ್ಯಕ್ಕೆ ವಿದ್ಯಾರ್ಥಿಗಳ ಅನುಪಾತ ಕಡಿಮೆ ಮಾಡುವ ಪ್ರಸ್ತಾವನೆ ಸರ್ಕಾರದ ಮುಂದಿಲ್ಲ. ಆದರೆ ವಿದ್ಯಾರ್ಥಿಗಳ ಕಲಿಕೆಗೆ ಯಾವುದೇ ಸಮಸ್ಯೆ ಆಗದಂತೆ ನಿರ್ವಹಣೆ ಮಾಡಲಾಗುತ್ತಿದೆ. ನಿಮ್ಮ ಮನವಿಯನ್ನು ಪರಿಶೀಲಿಸಿ, ಇದರ ಸಾಧಕ-ಬಾಧಕಗಳ ಬಗ್ಗೆ ನಿಮ್ಮೊಂದಿಗೂ ಚರ್ಚೆ ಮಾಡಿ ಮುಂದಿನ ಕ್ರಮ ವಹಿಸಲಾಗುವುದು ಎಂದು ಭರವಸೆ ನೀಡಿದರು.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com

ವಿಜೃಂಭಣೆಯಿಂದ ನಡೆದ ಮಂಚೇಗೌಡನಕೊಪ್ಪಲು ಗ್ರಾಮ ದೇವತೆ ಮಾರಮ್ಮನ ಹಬ್ಬ


ಶ್ರೀ ಅರಿಲಮ್ಮ ದೇವತೆಯ ಉತ್ಸವದಲ್ಲಿ ಕಳಸ ಹೊತ್ತು ಸಾಗುತ್ತಿರುವುದು.


ಶ್ರೀ ಅರಿಲಮ್ಮ ದೇವತೆಯ ದರ್ಶನಕ್ಕಾಗಿ ಭಕ್ತರು ಸರತಿ ಸಾಲಿನಲ್ಲಿ ನಿಂತಿರುವುದು.

ಮೈಸೂರು,ಮಾ.9(ಪಿಎಂ)– ಭಕ್ತಿ ಭಾವೈಕ್ಯತೆಯ ಪ್ರತೀಕವಾದ ಮೈಸೂರಿನ ಮಂಚೇಗೌಡನಕೊಪ್ಪಲು ಗ್ರಾಮದ ಗ್ರಾಮದೇವತೆ ಮಾರಮ್ಮನ ಹಬ್ಬ ಮೂರು ದಿನಗಳ ಕಾಲ ವಿಜೃಂಭಣೆಯಿಂದ ನಡೆಯಿತು.

ಶುಕ್ರವಾರ ಹಬ್ಬಕ್ಕೆ ವಿವಿಧ ಧಾರ್ಮಿಕ ವಿಧಿವಿಧಾನ ಹಾಗೂ ನಾನಾ ಆಚರಣೆಯೊಂದಿಗೆ ಅದ್ಧೂರಿ ಚಾಲನೆ ದೊರೆಯಿತು. ಶುಕ್ರವಾರ ರಾತ್ರಿ 10 ಗಂಟೆಯಿಂದ ತಡ ರಾತ್ರಿ 2 ಗಂಟೆವರೆಗೆ ಶಿಶು ಮಾರಮ್ಮನ ಉತ್ಸವ ವಿಜೃಂಭಣೆಯಿಂದ ಜರುಗಿತು.

12 ವರ್ಷದ ಬಾಲಕಿ ಹೊಂಬಾಳೆ ಹೊತ್ತು ಸಾಗುವುದರೊಂದಿಗೆ ಶಿಶು ಮಾರಮ್ಮ ಉತ್ಸವ ಕೂಡ ಭಾರೀ ಸಡಗರದಿಂದ ನಡೆಯಿತು. ಹೆಬ್ಬಾಳು ಸಿಐಟಿಬಿ ಛತ್ರದ ಆವರಣದಲ್ಲಿ ಪುರಾತನ ಕಲ್ಯಾಣಿಯಿಂದ ಗ್ರಾಮದಲ್ಲಿರುವ ಮಾರಮ್ಮನ ದೇವಸ್ಥಾನವರೆಗೆ ಶಿಶು ಮಾರಮ್ಮನ ಉತ್ಸವ ನಡೆಯಿತು.

ಭಾನುವಾರ ರಾತ್ರಿ 10ರಿಂದ ಮುಂಜಾನೆ 3ರವರೆಗೆ ಭಾವೈಕ್ಯತೆಯ ಸಂಕೇತವಾದ ಅರಿಲಮ್ಮನ ಉತ್ಸವ ನಡೆಯಿತು. ದಲಿತ ಸಮುದಾಯ ವ್ಯಕ್ತಿ ನೇತೃತ್ವದಲ್ಲಿ ಈ ಉತ್ಸವ ನಡೆಯುವುದು ಸಮಾನತೆಯ ಸಂಕೇತವಾಗಿ ಹಿಂದಿನಿಂದಲೂ ನಡೆದು ಬಂದಿದೆ ಇದೇ ವೇಳೆ ಬಾಯಿ ಬೀಗ, ತಂಬಿಟ್ಟು ಆರತಿ ಮೆರವಣಿಗೆ ಸಹ ನಡೆಯಿತು.

ಹೂಟಗಳ್ಳಿ ಗವಿಸಿದ್ದಣ್ಣ ತಮಟೆ ತಂಡ ವಿಶೇಷವಾಗಿ ತಮಟೆ ಬಾರಿಸುವ ಮೂಲಕ ಮೆರವಣಿಗೆಗೆ ಮೆರಗು ನೀಡಿತು. ಪ್ರತಿ ವರ್ಷ ಇದೇ ತಂಡ ತಮಟೆ ವಾದ್ಯ ಸಾದರಪಡಿಸುವುದು ವಿಶೇಷವಾಗಿದೆ. ತಮಟೆ ವಾದ್ಯದ ಸದ್ದಿಗೆ ಗ್ರಾಮದ ಯುವಕರು ಕುಣಿದು ಕುಪ್ಪಳಿಸಿ ಮತ್ತಷ್ಟು ಮೆರಗು ನೀಡಿದರು.

ಅಲ್ಲದೆ, ಸೋಮವಾರ ಗ್ರಾಮದ ಸುತ್ತಮುತ್ತಲ ಇರುವ ಹೆಬ್ಬಾಳು ಬಡಾವಣೆ, ವಿಜಯನಗರ 2ನೇ ಹಂತದಿಂದ ಅತೀ ಹೆಚ್ಚು ಭಕ್ತರು ಆಗಮಿಸಿ ಬಾಯಿ ಬೀಗ, ತಂಬಿಟ್ಟಿನ ಆರತಿ ತಂದು ಜೋಡಿ ಮಾರಮ್ಮನಿಗೆ ಅರ್ಪಿಸುವ ಮೂಲಕ ಭಕ್ತಿಯ ಪರಾಕಾಷ್ಠೆ ಮೆರೆದರು.

ಗ್ರಾಮದ ಮಾರಮ್ಮನ ದೇವಸ್ಥಾನ ಹಾಗೂ ಅರಿಲಮ್ಮ ದೇವಸ್ಥಾನ ಸೇರಿದಂತೆ ಗ್ರಾಮದ ಪ್ರಮುಖ ಸ್ಥಳಗಳಲ್ಲಿ ವಿಶೇಷ ದೀಪಾಲಂಕಾರ ಮಾಡಲಾಗಿತ್ತು. ಅಲ್ಲದೆ ಗ್ರಾಮದ ಹಸಿರು ಚಪ್ಪರಕ್ಕೆ ಹೂವಿನ ಅಲಂಕಾರ ಮಾಡಿದರಲ್ಲದೆ, ಹರಕೆ ಹೊತ್ತವರು ಬಾಳೆಹಣ್ಣು ಗೊನೆಯನ್ನು ಕಟ್ಟುವ ಮೂಲಕ ಭಕ್ತಿ ಸಮರ್ಪಿಸಿದರು.

ಪ್ರೊ ಕಬಡ್ಡಿ ಪಂದ್ಯಾವಳಿ: ಭಾನುವಾರ ಚಾಮರಾಜ ಕ್ಷೇತ್ರದ ಶಾಸಕ ಕೆ.ಹರೀಶ್ ಗೌಡ ಗ್ರಾಮಕ್ಕೆ ಭೇಟಿ ನೀಡಿ ಅರಿಲಮ್ಮ ತಾಯಿ ಹಾಗೂ ಜೋಡಿ ಮಾರಮ್ಮ ತಾಯಿಗೆ ದೇಗುಲದಲ್ಲಿ ವಿಶೇಷ ಪೂಜೆ ಸಲ್ಲಿಸಿದರು. ಅಲ್ಲದೆ, ಶ್ರೀ ಏಕದಂತ ಯುವಕರ ಸಂಘದ ವತಿಯಿಂದ ಆಯೋಜಿಸಲಾಗಿದ್ದ ರಾಜ್ಯಮಟ್ಟದ ಪ್ರೊ ಕಬಡ್ಡಿ ಪಂದ್ಯಾವಳಿ ವೀಕ್ಷಿಸಿ ಕ್ರೀಡಾಪಟುಗಳಿಗೆ ಶುಭ ಹಾರೈಸಿದರು.

ಈ ಸಂದರ್ಭದಲ್ಲಿ ಹುಣಸೂರು ಕ್ಷೇತ್ರದ ಶಾಸಕ ಜಿ.ಡಿ.ಹರೀಶ್‌ಗೌಡ, ಮಾಜಿ ಶಾಸಕ ಎಲ್.ನಾಗೇಂದ್ರ, ನಗರ ಪಾಲಿಕೆ ಮಾಜಿ ಸದಸ್ಯರಾದ ಪ್ರೇಮ ಶಂಕರೇಗೌಡ, ಕೆ.ವಿ.ಶ್ರೀಧರ್, ಗ್ರಾಮ ಹಾಗೂ ಕಾಂಗ್ರೆಸ್ ಮುಖಂಡ ರವಿ ಮಂಚೇಗೌಡನಕೊಪ್ಪಲು ಹಲವು ಪ್ರಮುಖರು, ಸ್ಥಳೀಯರು ಉಪಸ್ಥಿತರಿದ್ದರು. ಗ್ರಾಮದ ಯುವಕರು ಮತ್ತು ಮಂಚೇಗೌಡನಕೊಪ್ಪಲು ಕ್ಷೇಮಾಭಿವೃದ್ಧಿ ಸಂಘದ ಪದಾಧಿಕಾರಿಗಳು ಹಬ್ಬಕ್ಕೆ ಎಲ್ಲಾ ವ್ಯವಸ್ಥೆ ಕೈಗೊಂಡಿದ್ದರು.

ಒಂಟಿಕೊಪ್ಪಲು ಗ್ರಾಮದೇವತೆ ಜಾತ್ರಾ ಮಹೋತ್ಸವ; 'ಬಾಯಿಬೀಗ' ಸೇವೆ ನೆರವೇರಿಸಿದ ನೂರಾರು ಭಕ್ತರು



'ಬಾಯಿಬೀಗ' ಧಾರ್ಮಿಕ ಮೆರವಣಿಗೆಯಲ್ಲಿ ವ್ರತಾಚರಣೆಯಲ್ಲಿರುವ ನೂರಾರು ಭಕ್ತರನ್ನು ಕಾಣಬಹುದು.

ಮೈಸೂರು, ಮಾ.9(ಎಸ್‌ಪಿಎನ್)– ಮೈಸೂರು ಒಂಟಿಕೊಪ್ಪಲು ಗ್ರಾಮದೇವತೆ ಜಾತ್ರಾ ಮಹೋತ್ಸವದ ಎರಡನೇ ದಿನವಾದ ಇಂದು ಭಕ್ತಾದಿಗಳು 'ಬಾಯಿ ಬೀಗ' ಹರಕೆ ತೀರಿಸುವ ಧಾರ್ಮಿಕ ಸೇವೆಯನ್ನು ಭಕ್ತಿ–ಭಾವದಿಂದ ನೆರವೇರಿತು.

ದೇವಸ್ಥಾನದ ಅರ್ಚಕ ಪಿ.ವಿಜಯಶಂಕರ್ ನೇತೃತ್ವದಲ್ಲಿ ನಡೆದ ಈ 'ಬಾಯಿಬೀಗ' ಧಾರ್ಮಿಕ ಮೆರವಣಿಗೆಯಲ್ಲಿ ವ್ರತಾಚರಣೆಯಲ್ಲಿರುವ ನೂರಾರು ಭಕ್ತರು ಗ್ರಾಮದೇವತೆಗೆ ಹರಕೆ ತೀರಿಸಿದರು.

ಸಂಜೆ 5 ಗಂಟೆಗೆ ದೇವಸ್ಥಾನದ ಮುಂಭಾಗದಿಂದ ಆರಂಭವಾದ ಬಾಯಿಬೀಗ ಧಾರ್ಮಿಕ ಮೆರವಣಿಗೆ ಒಂಟಿಕೊಪ್ಪಲಿನ ಪ್ರಮುಖ ಬೀದಿಗಳಲ್ಲಿ ಸಾಗಿ, ಟೆಂಪಲ್ ರಸ್ತೆ ಮೂಲಕ ಕಾಳಿದಾಸ ರಸ್ತೆ ತಲುಪಿ, ಗ್ರಾಮದೇವತೆ ದೇವಸ್ಥಾನದ ಆವರಣದಲ್ಲಿ ಮೆರವಣಿಗೆ ಮುಕ್ತಾಯಗೊಂಡಿತು.

ಈ ವೇಳೆ ಒಂಟಿಕೊಪ್ಪಲು ಗ್ರಾಮ ದೇವತೆ ದೇವಸ್ಥಾನದ ಧರ್ಮದರ್ಶಿಗಳಾದ ಎಸ್‌ಬಿಎಂ ಮಂಜು, ಸಿ.ನಾಗರಾಜು, ರವಿಕುಮಾರ್, ಜಗದೀಶ್, ಸೋಮಶೇಖರ್, ಬಸವರಾಜು, ನಟರಾಜು ಸೇರಿದಂತೆ ನೂರಾರು ಭಕ್ತರು ಮೆರವಣಿಗೆಯಲ್ಲಿ ಸಾಗಿದರು. ರಾತ್ರಿ ಪ್ರಸಿದ್ಧ ಗಾಯಕರಿಂದ ಸಂಗೀತ ರಸಮಂಜರಿ ಕಾರ್ಯಕ್ರಮ ನೆರವೇರಿತು.

ಶುಭ ಹಾರೈಕೆ


ಮಂಚೇಗೌಡನಕೊಪ್ಪಲು ಅರಿಲಮ್ಮ ತಾಯಿ ಹಾಗೂ ಜೋಡಿ ಮಾರಮ್ಮನ ಹಬ್ಬದ ಪ್ರಯುಕ್ತ ಆಯೋಜಿಸಲಾಗಿದ್ದ ಕಬಡ್ಡಿ ಪಂದ್ಯಾವಳಿ ವೇಳೆ ಶಾಸಕರಾದ ಕೆ.ಹರೀಶ್‌ಗೌಡ, ಜಿ.ಡಿ.ಹರೀಶ್‌ಗೌಡ, ಮಾಜಿ ಶಾಸಕ ಎಲ್.ನಾಗೇಂದ್ರ ಇತರರು ಭೇಟಿ ನೀಡಿ, ಶುಭ ಕೋರಿದರು.

ಕಾಡಾನೆ ದಾಳಿಗೆ ಗ್ರಾಪಂ ಮಾಜಿ ಸದಸ್ಯೆ ಬಲಿ



ಸಿದ್ದಾಪುರ, ಮಾ.9–ಜಿಲ್ಲೆಯಲ್ಲಿ ಕಾಡಾನೆಗಳ ಹಾವಳಿ ಮುಂದುವರೆದಿದ್ದು, ಪಿಯು ವಿದ್ಯಾರ್ಥಿನಿಯೊಬ್ಬಳು ಬಲಿಯಾದ ಘಟನೆ ಮಾಸುವ ಮುನ್ನವೇ ಇಂದು ಗ್ರಾಮ ಪಂಚಾಯ್ತಿ ಮಾಜಿ ಸದಸ್ಯೆಯೊಬ್ಬರು ಕಾಡಾನೆ ದಾಳಿಗೆ ಬಲಿಯಾಗಿದ್ದಾರೆ

ಇಂದಿನ ಘಟನೆ ವಾಲ್ನೂರು ತ್ಯಾಗತ್ತೂರು ಪಂಚಾಯ್ತಿ ವ್ಯಾಪ್ತಿಯ ಮೀನುಕೊಲ್ಲಿ ಅರಣ್ಯದಂಚಿನಲ್ಲಿ ಸೋಮವಾರ ನಡೆದಿದ್ದು, ನಂಜರಾಯಪಟ್ಟಣ ಗ್ರಾ. ಪಂ. ಮಾಜಿ ಸದಸ್ಯೆ ಬಾಳೆಗುಂಡಿ ಹಾಡಿ ನಿವಾಸಿ ಸ್ವಾಮಿ ಅವರ ಪತ್ನಿ ಜಲಜಾಕ್ಷಿ (53) ಆನೆಯ ದಾಂಧಲೆಗೆ ಬಲಿಯಾದವರು.

ಜಲಜಾಕ್ಷಿ ಸೇರಿದಂತೆ ಹಾಡಿಯ 6 ಮಂದಿ ಮಹಿಳೆಯರು ಇಂದು ಬೆಳಗ್ಗೆ ಹಾಡಿ ಮುಂಭಾಗ ಅರಣ್ಯದತ್ತ ತಮ್ಮ ದೈನಂದಿನ ಕಾರ್ಯ ಚಟುವಟಿಕೆಗೆ ತೆರಳುತ್ತಿದ್ದರು. ಈ ವೇಳೆ ಕಾಡಾನೆ ಇವರ ಮೇಲೆ ದಾಳಿ ಮಾಡಿದೆ. ಗಂಭೀರವಾಗಿ ಗಾಯಗೊಂಡಿದ್ದ ಜಲಜಾಕ್ಷಿ ಸ್ಥಳದಲ್ಲೇ ಕೊನೆಯುಸಿರೆಳೆದಿದ್ದಾರೆ. ಇವರೊಂದಿಗಿದ್ದ ಉಳಿದ ಮಹಿಳೆಯರು ಓಡಿ ಹೋಗಿ ಪ್ರಾಣಾಪಾಯದಿಂದ ಪಾರಾಗಿದ್ದಾರೆ.

ಪ್ರತಿಭಟನೆ: ದೈನಂದಿನ ಕೆಲಸ ಕಾರ್ಯಕ್ಕಾಗಿ ಹೋಗುವವರಿಗೆ ಕಾಡಾನೆ ಹಾವಳಿಯಿಂದ ತೀವ್ರ ತೊಂದರೆಯಾಗಿದೆ. ಈ ಹಾವಳಿ ತಡೆಗಟ್ಟಬೇಕು, ಮೃತರ ಕುಟುಂಬಕ್ಕೆ ಸ್ಥಳದಲ್ಲೇ ಪರಿಹಾರ ಘೋಷಿಸಬೇಕು ಎಂದು ಒತ್ತಾಯಿಸಿ ಹಾಡಿಯ ನಿವಾಸಿಗಳು ಪ್ರತಿಭಟನೆ ನಡೆಸಿದರು. ಸ್ಥಳಕ್ಕೆ ಎಸಿಎಫ್ ಗೋಪಾಲ್, ವಲಯ ಅರಣ್ಯಾಧಿಕಾರಿ ರಕ್ಷಿತ್ ಮತ್ತಿತರ ಅಧಿಕಾರಿಗಳು ಭೇಟಿ ನೀಡಿ ಪರಿಶೀಲಿಸಿದರು.

ಕುಶಾಲನಗರ ತಹಸೀಲ್ದಾರ್ ಕಿರಣ್ ಜಿ. ಗೌರಯ್ಯ ಸಹ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲಿಸಿದರು. ಈ ಸಂದರ್ಭ ವಾಲ್ನೂರು –ತ್ಯಾಗತ್ತೂರು ಗ್ರಾಪಂ ಮಾಜಿ ಅಧ್ಯಕ್ಷೆ ಮಂಜುಳಾ, ಉಪಾಧ್ಯಕ್ಷ ಮನುಮಹೇಶ್ ಸೇರಿದಂತೆ ಮಾಜಿ ಸದಸ್ಯರು, ಜಿಪಂ ಮಾಜಿ ಸದಸ್ಯೆ ಸುನಿತಾ ಮಂಜುನಾಥ್ ಮತ್ತಿತರರು ಉಪಸ್ಥಿತರಿದ್ದರು.

ಪರಿಹಾರ ವಿತರಣೆ: ಮೃತ ಜಲಜಾಕ್ಷಿ ಕುಟುಂಬಕ್ಕೆ ಅರಣ್ಯ ಇಲಾಖೆಯಿಂದ ನೀಡಲಾಗುವ 15 ಲಕ್ಷದಲ್ಲಿ ಮೊದಲ ಹಂತದ 5 ಲಕ್ಷ ರೂ.ಗಳ ಚೆಕ್‌ನ್ನು ಶಾಸಕ ಡಾ.ಮಂತರ್ ಗೌಡ ವಿತರಿಸಿ, ಕುಟುಂಬಸ್ಥರಿಗೆ ಸಾಂತ್ವನ ಹೇಳಿ, ಘಟನೆ ಸಂಬಂಧ ಮಾಹಿತಿ ಪಡೆದರು. ಆನೆಗಳನ್ನು ಕಾಡಿಗಟ್ಟಲು ಕೂಡಲೇ ಕ್ರಮ ಕೈಗೊಳ್ಳುವಂತೆ ಅರಣ್ಯಾಧಿಕಾರಿಗಳಿಗೆ ಸೂಚನೆ ನೀಡಿದರು.

ದೆಹಲಿಯಲ್ಲಿ ಯಾರನ್ನೆಲ್ಲ ಭೇಟಿ ಮಾಡುತ್ತೇನೆ ಎಂದು ಹೇಳಲಾಗದು



ನವದೆಹಲಿ: ದೆಹಲಿಯಲ್ಲಿ ನಾನು ಯಾರನ್ನು ಭೇಟಿ ಮಾಡುತ್ತೇನೆ ಎಂದು ಬಹಿರಂಗವಾಗಿ ಹೇಳಲು ಆಗುವುದಿಲ್ಲ ಎಂದು ಡಿಸಿಎಂ ಡಿ.ಕೆ. ಶಿವಕುಮಾರ್ ಹೇಳಿದ್ದಾರೆ.

ದೆಹಲಿಯ ಕರ್ನಾಟಕ ಭವನದಲ್ಲಿ ಮಾಧ್ಯಮಗಳು ಹೈಕಮಾಂಡ್ ನಾಯಕರ ಭೇಟಿ ಬಗ್ಗೆ ಕೇಳಿದ ಪ್ರಶ್ನೆಗೆ, ದೆಹಲಿಗೆ ಬಂದ ಮೇಲೆ ನಾನು ಎಲ್ಲರನ್ನು ಭೇಟಿ ಮಾಡುತ್ತೇನೆ. ನೀವುಗಳು ಡಿ.ಕೆ ದೆಹಲಿಗೆ ಹೋದರೂ ನಾಯಕರು ಸಮಯ ನೀಡಿಲ್ಲ, ಕಾಯುತ್ತಾ ಕೂತಿದ್ದಾರೆ ಎಂದು ವರದಿ ಮಾಡುತ್ತೀರಲ್ಲಾ, ಹಾಗೇ ಕಾಯುತ್ತಾ ಕೂತಿರುವೆ ಎಂದರು.

ಪುಣೆಯಲ್ಲಿರುವ ನನ್ನ ಸ್ನೇಹಿತರ ಮನೆ ಮದುವೆ ಕಾರ್ಯಕ್ರಮವಿತ್ತು. ಹೀಗಾಗಿ ನಿನ್ನೆ ದೆಹಲಿಗೆ ಬಂದಿದ್ದೆ. ಇಂದು ಅಸ್ಸಾಂ ಪ್ರದೇಶ ಕಾಂಗ್ರೆಸ್ ಅಧ್ಯಕ್ಷರನ್ನು ಭೇಟಿ ಮಾಡಿದ್ದೆ. ಇಂದು ಅನೇಕ ಸಭೆಗಳಿವೆ. ಕಾಂಗ್ರೆಸ್ ಕಚೇರಿಯಲ್ಲಿ ಪಕ್ಷ ಸೇರ್ಪಡೆ ಕಾರ್ಯಕ್ರಮವಿದೆ ಎಂದು ಹೇಳಿದರು.

ನಾಳೆಗೆ ಕೆಪಿಸಿಸಿ ಅಧ್ಯಕ್ಷರಾಗಿ 6 ವರ್ಷ ಪೂರ್ಣಗೊಳ್ಳುತ್ತಿರುವ ಬಗ್ಗೆ ಕೇಳಿದಾಗ, ಹೌದು, ನಾಳೆಗೆ ನಾನು ಕೆಪಿಸಿಸಿ ಅಧ್ಯಕ್ಷನಾಗಿ 6 ವರ್ಷ ಪೂರ್ಣಗೊಳ್ಳುತ್ತಿದ್ದು, ಈ ಹಿನ್ನೆಲೆಯಲ್ಲಿ ಎಲ್ಲಾ ಶಾಸಕರು, ವಿಧಾನ ಪರಿಷತ್ ಸದಸ್ಯರಿಗೆ ಭೋಜನಕೂಟ ಹಮ್ಮಿಕೊಂಡಿದ್ದೇನೆ. ಮತ್ತೊಂದು ದಿನ ನಮ್ಮ ಪರಾಜಿತ ಅಭ್ಯರ್ಥಿಗಳು ಮತ್ತು ಜಿಲ್ಲಾ ಹಾಗೂ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷರಿಗೆ ಭೋಜನಕೂಟ ಹಮ್ಮಿಕೊಳ್ಳಲಾಗುವುದು. ಈಗ ಅಧಿವೇಶನ ನಡೆಯುತ್ತಿರುವ ಹಿನ್ನೆಲೆಯಲ್ಲಿ ಶಾಸಕರಿಗೆ ಮಾತ್ರ ಭೋಜನಕೂಟ ಇಟ್ಟುಕೊಂಡಿದ್ದೇನೆ ಎಂದು ತಿಳಿಸಿದರು.

ಖಾಸಗಿ ಕಾರ್ಯಕ್ರಮ ಎಂದರೂ ಡಿ.ಕೆ. ಶಿವಕುಮಾರ್ ದೆಹಲಿ ಭೇಟಿ ಎಂದರೆ ವಿಭಿನ್ನ ಚರ್ಚೆಗಳೇ ಸಾಗುತ್ತವೆ ಎಂದು ಕೇಳಿದಾಗ, ಯಾವ ವಿಭಿನ್ನ ಚರ್ಚೆನೂ ಬೇಡ. ನಾಳೆ ಭೋಜನಕೂಟ ವಿದೆ, ನಾಡಿದ್ದು ಕಾಂಗ್ರೆಸ್ ಶಾಸಕಾಂಗ ಪಕ್ಷದ ಸಭೆ ಇದೆ ಎಂದು ಹೇಳಿದರು.

ಅಸ್ಸಾಂ ಚುನಾವಣೆಗೆ 43 ಕಾಂಗ್ರೆಸ್ ಅಭ್ಯರ್ಥಿ ಪಟ್ಟಿ ಬಿಡುಗಡೆ ಬಗ್ಗೆ ಕೇಳಿದಾಗ, 43 ಅಭ್ಯರ್ಥಿಗಳ ಪಟ್ಟಿ ಈಗಾಗಲೇ ಬಿಡುಗಡೆಯಾಗಿದ್ದು, ಇಂದು ಮತ್ತೊಂದು ಸ್ಕ್ರೀನಿಂಗ್ ಸಮಿತಿ ಸಭೆ ಇದೆ. ಈ ಸಮಿತಿಯಲ್ಲಿ ನಾನು ಇಲ್ಲ ಎಂದು ತಿಳಿಸಿದರು.

ಮುಡಾ ಪ್ರಕರಣ: ದಿನೇಶ್ ವಿರುದ್ಧದ ವಿಚಾರಣೆಗೆ ಹೈಕೋರ್ಟ್ ತಡೆ


ದಿನೇಶ್

ಬೆಂಗಳೂರು: ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದ (ಮುಡಾ) ನಿವೇಶನಗಳ ಹಂಚಿಕೆಯಲ್ಲಿ ಅಕ್ರಮ ಎಸಗಿದ ಆರೋಪಕ್ಕೆ ಸಂಬಂಧಿಸಿದಂತೆ ಹಿಂದಿನ ಆಯುಕ್ತ ಜಿ.ಟಿ. ದಿನೇಶ್ ಕುಮಾರ್ ವಿರುದ್ಧದ ಹಣ ಅಕ್ರಮ ವರ್ಗಾವಣೆ ಕಾಯ್ದೆ (ಪಿಎಂಎಲ್‌ಎ) ಅಡಿ ದಾಖಲಿಸಿರುವ ಪ್ರಕರಣದ ವಿಚಾರಣೆ ನಡೆಸದಂತೆ ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯಕ್ಕೆ ಹೈಕೋರ್ಟ್ ನಿರ್ಬಂಧಿಸಿದೆ.

ಈ ಕುರಿತಂತೆ ದಿನೇಶ್ ಕುಮಾರ್ ಸಲ್ಲಿಸಿದ್ದ ಕ್ರಿಮಿನಲ್ ಅರ್ಜಿಯನ್ನು ನ್ಯಾಯಮೂರ್ತಿ ಎಸ್.ಸುನಿಲ್ ದತ್ ಯಾದವ್ ಅವರಿದ್ದ ಏಕಸದಸ್ಯ ನ್ಯಾಯಪೀಠ ಸೋಮವಾರ ವಿಚಾರಣೆ ನಡೆಸಿತು.

ಅರ್ಜಿದಾರ ದಿನೇಶ್ ಕುಮಾರ್ ಪರ ಪದಾಂಕಿತ ಹಿರಿಯ ವಕೀಲ ಸಂದೇಶ್ ಜೆ. ಚೌಟ ಹಾಗೂ ಜಾರಿ ನಿರ್ದೇಶನಾಲಯ (ಇ.ಡಿ) ಪರ ಹೆಚ್ಚುವರಿ ಸಾಲಿಸಿಟರ್ ಜನರಲ್ ಕೆ.ಅರವಿಂದ ಕಾಮತ್ ಅವರ ವಾದ–ಪ್ರತಿವಾದವನ್ನು ಆಲಿಸಿದ ನ್ಯಾಯಪೀಠ, ವಿಚಾರಣೆಯನ್ನು ಇದೇ 26ಕ್ಕೆ ಮುಂದೂಡಿತು.

ಈ ಪ್ರಕರಣದ ವಿಚಾರಣೆಯನ್ನು ಪಿಎಂಎಲ್‌ಎ ಅಡಿ ಸ್ಥಾಪಿತವಾಗಿರುವ ವಿಶೇಷ ನ್ಯಾಯಾಲಯ ನಡೆಸಬೇಕೇ ವಿನಾ ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯ ಅಲ್ಲ ಎಂದು ಆಕ್ಷೇಪಿಸಿ, ದಿನೇಶ್ ಕುಮಾರ್ ಹೈಕೋರ್ಟ್ ಮೆಟ್ಟಿಲೇರಿದ್ದಾರೆ.

ಪ್ರಕರಣ: ದಿನೇಶ್ ಕುಮಾರ್ ಮುಡಾ ಆಯುಕ್ತರಾಗಿದ್ದ ಅವಧಿಯಲ್ಲಿ ತಮ್ಮ ಅಧಿಕಾರ ದುರ್ಬಳಕೆ ಮಾಡಿಕೊಂಡು ಅನರ್ಹರಿಗೆ ಅಕ್ರಮವಾಗಿ ನಿವೇಶನ ಹಂಚಿಕೆ ಮಾಡಿದ್ದಾರೆ ಎಂಬ ಆರೋಪ ಎದುರಿಸುತ್ತಿದ್ದಾರೆ.

ಈ ಸಂಬಂಧ ಪಿಎಂಎಲ್‌ಎ ಅಡಿ ಪ್ರಕರಣ ದಾಖಲಿಸಿಕೊಂಡಿದ್ದ ಇ.ಡಿ, ದಿನೇಶ್ ಅವರನ್ನು 2025ರ ಸೆಪ್ಟೆಂಬರ್ 17ರಂದು ಬಂಧಿಸಿತ್ತು. ಅಕ್ಟೋಬರ್ 5ರಂದು ಅವರಿಗೆ ಸೇರಿದ 40 ಕೋಟಿ ಮೌಲ್ಯದ ಆಸ್ತಿಯನ್ನು ಮುಟ್ಟುಗೋಲು ಹಾಕಿಕೊಂಡಿತು. 2025ರ ನವೆಂಬರ್ 19ರಂದು ವಿಚಾರಣಾ ನ್ಯಾಯಾಲಯಕ್ಕೆ ದೋಷಾರೋಪ ಪಟ್ಟಿ ಸಲ್ಲಿಸಿತು.

ಅನರ್ಹರಿಗೆ ಒಟ್ಟು 450 ಕೋಟಿಗೂ ಅಧಿಕ ಬೆಲೆ ಬಾಳುವ 283 ನಿವೇಶನಗಳನ್ನು ಅಕ್ರಮವಾಗಿ ಹಂಚಿಕೆ ಮಾಡಿದ್ದಾರೆ ಎಂದು ದೋಷಾರೋಪ ಪಟ್ಟಿಯಲ್ಲಿ ಉಲ್ಲೇಖಿಸಲಾಗಿದೆ.

ಮಧ್ಯಪ್ರಾಚ್ಯ ಯುದ್ಧ ಪರಿಣಾಮ ವಾಣಿಜ್ಯ ಸಿಲಿಂಡರ್ ಪೂರೈಕೆ ಭಾರೀ ವ್ಯತ್ಯಯ

ಹೋಟೆಲ್ ಉದ್ಯಮ ಮುಚ್ಚುವ ಭೀತಿ




ನಾರಾಯಣಗೌಡ

ಮೈಸೂರು, ಮಾ.9– ಇರಾನ್ ಮತ್ತು ಅಮೆರಿಕ–ಇಸ್ರೇಲ್ ನಡುವಿನ ಯುದ್ಧ ತಾರಕ್ಕೇರಿರುವುದರಿಂದ ವಾಣಿಜ್ಯ ಬಳಕೆ ಸಿಲಿಂಡರ್ ಪೂರೈಕೆಯಲ್ಲಿ ವ್ಯತ್ಯಯವಾಗಿರುವ ಪರಿಣಾಮ ಹೋಟೆಲ್ ಉದ್ಯಮಕ್ಕೆ ಭಾರೀ ಹೊಡೆತ ಬಿದ್ದಿದೆ

ಈ ಬಗ್ಗೆ ಮೈಸೂರು ಹೋಟೆಲ್ ಮಾಲೀಕರ ಸಂಘದ ಅಧ್ಯಕ್ಷ ಸಿ.ನಾರಾಯಣಗೌಡ ಪ್ರತಿಕ್ರಿಯಿಸಿ, ಪರಿಸ್ಥಿತಿ ಹೀಗೆಯೇ ಮುಂದುವರೆದರೆ ಇನ್ನೆರಡು ದಿನಗಳಲ್ಲಿ ಹೋಟೆಲ್ ಉದ್ಯಮ ಮುಚ್ಚುವ ದುಃಸ್ಥಿತಿ ನಿರ್ಮಾಣವಾಗಬಹುದು ಎಂದು ತೀವ್ರ ಕಳವಳ ವ್ಯಕ್ತಪಡಿಸಿದ್ದಾರೆ.

ವಾಣಿಜ್ಯ ಬಳಕೆ ಸಿಲಿಂಡರ್ ಸರಬರಾಜು ಮಾಡುವ ಬಿಪಿಸಿಎಲ್, ಐಓಸಿ, ಹೆಚ್‌ಪಿಸಿಎಲ್ ಕಂಪನಿಗಳು, ಯುದ್ಧದ ಪರಿಣಾಮ ಅಗತ್ಯ ಕಚ್ಚಾ ಸಾಮಗ್ರಿಗಳ ಪೂರೈಕೆಯಾಗುತ್ತಿಲ್ಲ ಸಮರ್ಪಕವಾಗಿ ಸಿಲಿಂಡರ್ ಸರಬರಾಜು ಮಾಡುತ್ತಿಲ್ಲ. ಮಂಗಳವಾರದಿಂದ ಶೇ.50ರಷ್ಟು ಸರಬರಾಜು ಕಡಿತವಾಗುವ ಸಂಭವವಿದೆ ಎನ್ನಲಾಗಿದೆ. ಪರಿಣಾಮ ಹೋಟೆಲ್ ಉದ್ಯಮ ಮುಚ್ಚುವ ಸ್ಥಿತಿ ತಲುಪಬಹುದು ಎಂದಿದ್ದಾರೆ.

ಮೈಸೂರು–ನಂಜನಗೂಡು ರಸ್ತೆಯಲ್ಲಿರುವ ಐಓಸಿಎಲ್ ಉತ್ಪಾದನಾ ಘಟಕವನ್ನು ಇಂದಿನಿಂದ ಮುಚ್ಚಿದ್ದು, ಇಂಡಿಯನ್ ಸಿಲಿಂಡರ್ ಸರಬರಾಜು ಇರುವುದಿಲ್ಲ ಎಂದು ತಿಳಿದು ಬಂದಿದೆ ಲೋಡ್ ಬರುತ್ತಿಲ್ಲ ಎಂದು ಈಗಾಗಲೇ ಕೆಲ ವಿತರಕರು ಅನಿವಾರ್ಯವಾಗಿ ಸಿಲಿಂಡರ್ ವಿತರಣೆಯಲ್ಲಿ ಕಣ್ಣಾಮುಚ್ಚಾಲೆ ಆಟವಾಡುತ್ತಿದ್ದಾರೆ ಎಂದು ತಿಳಿಸಿದ್ದಾರೆ.

ಈಗಾಗಲೇ ವಾಣಿಜ್ಯ ಸಿಲಿಂಡರ್ ಬೆಲೆ 300 ರೂ. ಜಾಸ್ತಿಯಾಗಿದೆ. ಮಾ.1ರಂದು 30 ರೂ. ಹೆಚ್ಚಳವಾಯಿತು. ಮಾ.5ರಂದು 150 ರೂ. ರಿಯಾಯ್ತಿಯನ್ನು ರದ್ದು ಮಾಡಿದರು. ಮಾ.7ರಂದು 114 ರೂ. ಹೆಚ್ಚಾಗಿದೆ. ಇದೀಗ ಮತ್ತೆ 150–200 ರೂ. ಹೆಚ್ಚಿಸುವ ಸಾಧ್ಯತೆ ಇದೆ. ಒಂದೆಡೆ ಬೆಲೆ ಏರಿಕೆ ಬಿಸಿಯಾದರೆ ಮತ್ತೊಂದೆಡೆ ಸಿಲಿಂಡರ್‌ಗಳು ಸರಿಯಾಗಿ ಪೂರೈಕೆಯಾಗುತ್ತಿಲ್ಲ. ಈಗಿನ ಪೀಳಿಗೆಯವರು ನಾಲ್ಕೈದು ದಶಕದ ಹಿಂದೆ ಇದ್ದಂತೆ ಸೌದೆ, ಹೊಟ್ಟು, ಇದ್ದಿಲು ಒಲೆ ಬಳಸಿ ಹೋಟೆಲ್ ನಡೆಸಲು ಸಾಧ್ಯವಿಲ್ಲ. ಆದ್ದರಿಂದ ಶೇ.50 ರಷ್ಟು ಹೋಟೆಲ್ ಉದ್ಯಮ ಬಂದ್ ಆಗುವ ಆತಂಕ ನಿರ್ಮಾಣವಾಗಿದೆ ಎಂದು ತಿಳಿಸಿದ್ದಾರೆ.

ಬೆಂಗಳೂರಿನಲ್ಲಿ ಮಂಗಳವಾರದಿಂದ ಕೆಲ ಡೀಲರ್‌ಗಳು ಸಿಲಿಂಡರ್ ಸರಬರಾಜು ನಿಲ್ಲಿಸುವುದರಿಂದ ಹೋಟೆಲ್‌ಗಳನ್ನು ಮುಚ್ಚುವುದು ಅನಿವಾರ್ಯವಾಗಿದೆ. ಈಗಾಗಲೇ ಕೇರಳ ಮತ್ತು ಮಹಾರಾಷ್ಟ್ರದಲ್ಲಿ ಶೇ.50ರಷ್ಟು ವಾಣಿಜ್ಯ ಸಿಲಿಂಡರ್ ಸರಬರಾಜು ಕಡಿಮೆಯಾಗಿದೆ. ರಾಷ್ಟ್ರಾದ್ಯಂತ ಹೋಟೆಲ್ ಉದ್ಯಮಕ್ಕೆ ಭಾರೀ ಹೊಡೆತ ಬೀಳುವ ಸಾಧ್ಯತೆ ಇದೆ. ಇನ್ನೆರಡು ಮೂರು ದಿನಗಳಲ್ಲಿ ಈ ಉದ್ಯಮ ಎತ್ತ ಸಾಗುವುದೋ ತಿಳಿಯದಾಗಿದೆ ಎಂದು ವಿಷಾದ ವ್ಯಕ್ತಪಡಿಸಿದ್ದಾರೆ.

ಕೂಲಿ ಕಾರ್ಮಿಕರು, ಕಾರ್ಖಾನೆ ನೌಕರರು ಸೇರಿದಂತೆ ಶೇ.50ರಷ್ಟು ಜನ ಆಹಾರಕ್ಕೆ ಹೋಟೆಲ್ ಅವಲಂಬಿಸಿದ್ದಾರೆ. ಮೈಸೂರು ನಗರ ಸೇರಿದಂತೆ ಜಿಲ್ಲೆಯಲ್ಲಿ ಒಂದೂವರೆ ಸಾವಿರಕ್ಕಿಂತ ಹೆಚ್ಚು ಮಂದಿ ಹೋಟೆಲ್ ಉದ್ಯಮ ನಡೆಸುತ್ತಿದ್ದಾರೆ. ಈ ಉದ್ಯಮ 25 ಸಾವಿರ ಜನರಿಗೆ ಉದ್ಯೋಗ ನೀಡಿದೆ. ರಾಜ್ಯಾದ್ಯಂತ ಸುಮಾರು 2.5 ಲಕ್ಷ ಹೋಟೆಲ್, ಬೇಕರಿ, ಸ್ವೀಟ್ಸ್, ರೆಸ್ಟೋರೆಂಟ್, ಫಾಸ್ಟ್‌ಫುಡ್, ಕಾಫಿ–ಟೀ ಸ್ಟಾಲ್‌ಗಳಿದ್ದು, ಸುಮಾರು 13 ಲಕ್ಷ ಮಂದಿ ಉದ್ಯೋಗ ಮಾಡುತ್ತಿದ್ದಾರೆ. ಇವರೆಲ್ಲರ ಜೀವನೋಪಾಯಕ್ಕೆ ತೀವ್ರ ತೊಂದರೆಯಾಗಲಿದೆ ಎಂದು ಆತಂಕ ವ್ಯಕ್ತಪಡಿಸಿದ್ದಾರೆ.

ರೆಸ್ಟೋರೆಂಟ್‌ಗಳು ಮತ್ತು ಹೋಟೆಲ್‌ಗಳಿಗೆ ವಾಣಿಜ್ಯ ಎಲ್‌ಪಿಜಿ ಪೂರೈಕೆಯ ನಿರಂತರತೆಯನ್ನು ಖಚಿತಪಡಿಸುವಂತೆ ಕೋರಿ ಮೈಸೂರು ಹೋಟೆಲ್ ಮಾಲೀಕರ ಸಂಘದಿಂದ ನೈಸರ್ಗಿಕ ಅನಿಲ ಸಚಿವ ಹರ್ದೀಪ್ ಸಿಂಗ್ ಪುರಿ ಅವರಿಗೆ ಪತ್ರ ಬರೆಯಲಾಗಿದೆ. ಈಗಾಗಲೇ ಸಚಿವರಿಗೆ ರಾಜ್ಯ ಹೋಟೆಲ್ ಮಾಲೀಕರ ಸಂಘ ಹಾಗೂ ಫೆಡರೇಷನ್ ಆಫ್ ಆಲ್ ಇಂಡಿಯಾ ಹೋಟೆಲ್ ಅಂಡ್ ರೆಸ್ಟೋರೆಂಟ್ಸ್ ಅಸೋಸಿಯೇಷನ್ ವತಿಯಿಂದಲೂ ಪತ್ರ ಬರೆದು, ಹೋಟೆಲ್ ಉದ್ಯಮಕ್ಕೆ ವಾಣಿಜ್ಯ ಸಿಲಿಂಡರ್ ಪೂರೈಕೆಯಲ್ಲಿ ವ್ಯತ್ಯವಾಗದಂತೆ ಮಹತ್ವದ ಕ್ರಮ ಕೈಗೊಳ್ಳುವಂತೆ ಮನವಿ ಮಾಡಲಾಗಿದೆ ಎಂದು ತಿಳಿಸಿದ್ದಾರೆ.

ಮಹಿಳೆಯರು-ಮಕ್ಕಳ ಸುರಕ್ಷತೆಗಾಗಿ

'ಅಕ್ಕಪಡೆ' ಮೈಸೂರು ನಗರ ವ್ಯಾಪ್ತಿಯಲ್ಲಿ ಕಾರ್ಯಾರಂಭ

ವಾಹನಕ್ಕೆ ಹಸಿರು ನಿಶಾನೆ ತೋರುವ ಮೂಲಕ ಪೊಲೀಸ್ ಆಯುಕ್ತೆ ಸೀಮಾ ಲಾಟ್ಕರ್ ಚಾಲನೆ



ಮೈಸೂರು ಪೊಲೀಸ್ ಆಯುಕ್ತರಾದ ಸೀಮಾ ಲಾಟ್ಕರ್, ಮೈಸೂರಿನ ತಮ್ಮ ಕಚೇರಿ ಆವರಣದಲ್ಲಿ ಸೋಮವಾರ ಅಕ್ಕಪಡೆ ವಾಹನಕ್ಕೆ ಹಸಿರು ನಿಶಾನೆ ತೋರುವ ಮೂಲಕ ಪಡೆಯ ಕಾರ್ಯಾರಂಭಕ್ಕೆ ಚಾಲನೆ ನೀಡಿದರು.

ಮೈಸೂರು,ಮಾ.9(ಪಿಎಂ)– ರಾಜ್ಯ ಸರ್ಕಾರ ಮಹಿಳೆಯರು ಮತ್ತು ಮಕ್ಕಳ ಸುರಕ್ಷತೆಗಾಗಿ ಜಾರಿಗೆ ತಂದಿರುವ 'ಅಕ್ಕ ಪಡೆ' ಮೈಸೂರು ನಗರ ವ್ಯಾಪ್ತಿಯ ಕಾರ್ಯಾರಂಭಕ್ಕೆ ಸೋಮವಾರ ಚಾಲನೆ ನೀಡಲಾಯಿತು.

ಮೈಸೂರು ನಗರ ಪೊಲೀಸ್ ಆಯುಕ್ತರ ಕಚೇರಿ ಆವರಣದಲ್ಲಿ ಅಕ್ಕಪಡೆ ವಾಹನಕ್ಕೆ ಹಸಿರು ನಿಶಾನೆ ತೋರುವ ಮೂಲಕ ನಗರ ಪೊಲೀಸ್ ಆಯುಕ್ತರಾದ ಸೀಮಾ ಲಾಟ್ಕರ್ ಚಾಲನೆ ನೀಡಿದರು. ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಹಾಗೂ ಪೊಲೀಸ್ ಇಲಾಖೆ ಸಹಯೋಗದಲ್ಲಿ ಈ ಪಡೆ ಕಾರ್ಯನಿರ್ವಹಿಸಲಿದೆ. ಶಾಲಾ ಕಾಲೇಜು, ಬಸ್ ನಿಲ್ದಾಣ ಸೇರಿದಂತೆ ಸಾರ್ವಜನಿಕ ಸ್ಥಳಗಳಲ್ಲಿ ಗಸ್ತು ತಿರುಗಿ ಕಿಡಿಗೇಡಿಗಳ ಮೇಲೆ ಈ ಪಡೆ ನಿಗಾ ವಹಿಸಲಿದೆ.

ಒಬ್ಬರು ಮಹಿಳಾ ಹೆಚ್‌ಸಿ (ಮುಖ್ಯ ಪೊಲೀಸ್ ಪೇದೆ) ಅಥವಾ ಪಿಸಿ (ಪೊಲೀಸ್ ಪೇದೆ) ಹಾಗೂ ಇಬ್ಬರು ಮಹಿಳಾ ಹೋಂಗಾರ್ಡ್‌ಗಳು ಅಕ್ಕಪಡೆಯಲ್ಲಿ ಗಸ್ತು ತಿರುಗಲಿದ್ದಾರೆ. ಅಕ್ಕಪಡೆ ಎರಡು ಪಾಳಿಯಲ್ಲಿ ಕೆಲಸ ಮಾಡಲಿದ್ದು, ಬೆಳಗ್ಗೆ 6ರಿಂದ ಮಧ್ಯಾಹ್ನ 2ರವರೆಗೆ ಒಂದು ತಂಡ ಹಾಗೂ ಮಧ್ಯಾಹ್ನ 2ರಿಂದ ರಾತ್ರಿ 8ರವರೆಗೆ ಮತ್ತೊಂದು ತಂಡ ಕಾರ್ಯ ನಿರ್ವಹಿಸಲಿದೆ. ವಾಹನದಲ್ಲಿರುವ ಅಕ್ಕಪಡೆ ಲಾಂಛನದಲ್ಲಿ ಮಾಜಿ ಪ್ರಧಾನಿ ಇಂದಿರಾ ಗಾಂಧಿಯವರ ಭಾವಚಿತ್ರ ಇರುವುದು ವಿಶೇಷ. ಜೊತೆಗೆ ವಾಹದಲ್ಲಿ 181 ಮಹಿಳಾ ಸಹಾಯವಾಣಿ, 112 ತುರ್ತು ಸಹಾಯವಾಣಿ ಹಾಗೂ 1098 ಮಕ್ಕಳ ಸಹಾಯವಾಣಿ ನಮೂದಿಸಲಾಗಿದೆ.

ಇದೇ ವೇಳೆ ಮಾಧ್ಯಮದವರೊಂದಿಗೆ ಮಾತನಾಡಿದ ಪೊಲೀಸ್ ಆಯುಕ್ತರಾದ ಸೀಮಾ ಲಾಟ್ಕರ್, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ವತಿಯಿಂದ ನಗರ ಪೊಲೀಸ್‌ಗೆ ಅಕ್ಕಪಡೆಗಾಗಿ ವಾಹನ ನೀಡಲಾಗಿದೆ. ಮಹಿಳಾ ಮತ್ತು ಮಕ್ಕಳ ಮೇಲಿನ ದೌರ್ಜನ್ಯ ತಡೆಗಟ್ಟುವ ನಿಟ್ಟಿನಲ್ಲಿ ಅಕ್ಕಪಡೆ ಕಾರ್ಯನಿರ್ವಹಿಸಲಿದೆ. ಜೊತೆಗೆ ಜಾಗೃತಿ ಮೂಡಿಸುವ ಕೆಲಸ ಸಹ ಮಾಡಲಿದೆ. ಒಬ್ಬರು ಮಹಿಳಾ ಪೊಲೀಸ್ ಪೇದೆ ನೇತೃತ್ವದಲ್ಲಿ ಈ ಪಡೆ ಗಸ್ತು ತಿರುಗಲಿದೆ. ವಾಹನ ಚಾಲಕರು, ಸಿಬ್ಬಂದಿಯನ್ನು ನಮ್ಮ ಕಡೆಯಿಂದ ನಿಯೋಜಿಸಲಾಗುತ್ತದೆ. ಚಾಮುಂಡಿ ಪಡೆ ಸಹ ಮುಂದುವರೆಯಲಿದೆ ಎಂದು ತಿಳಿಸಿದರು.

ಬಳಿಕ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಉಪನಿರ್ದೇಶಕ ಬಸವರಾಜು ಮಾತನಾಡಿ, ನಮ್ಮ ಇಲಾಖೆ ವತಿಯಿಂದ ವಾಹನ ನೀಡಿದ್ದು, ಜೊತೆಗೆ ನಾಲ್ಕು ಹೋಂಗಾರ್ಡ್‌ಗಳಿಗೆ ವೇತನ ಕೊಡುವುದು ನಮ್ಮ ಇಲಾಖೆ ವ್ಯಾಪ್ತಿಗೆ ಬರಲಿದೆ. ವಾಹನ ನಿರ್ವಹಣೆಯನ್ನು ಪೊಲೀಸ್ ಇಲಾಖೆ ಮಾಡಲಿದೆ. ಈಗಾಗಲೇ ಜಿಲ್ಲಾ ಪೊಲೀಸ್‌ಗೂ ಒಂದು ವಾಹನವನ್ನು ಅಕ್ಕಪಡೆಗಾಗಿ ನೀಡಲಾಗಿದೆ. ಹಂತ ಹಂತವಾಗಿ ತಾಲೂಕು ಕೇಂದ್ರಗಳ ವ್ಯಾಪ್ತಿಗೂ ಅಕ್ಕಪಡೆಗೆ ವಾಹನ ನೀಡಲಾಗುವುದು. ಮಹಿಳಾ ಸಹಾಯವಾಣಿ ಸಂಖ್ಯೆ 181ಕ್ಕೆ ಕರೆ ಮಾಡಿ ಸಹಾಯ ಪಡೆಯಬಹುದು ಎಂದು ಹೇಳಿದರು.

ಡಿಸಿಪಿ ಸುಂದರ್‌ರಾಜ್, ಸಿಎಆರ್ ಡಿಸಿಪಿ ಸಿದ್ದನಗೌಡ ಪಾಟೀಲ, ಕೆಎಆರ್ ಮೌಂಟೆಡ್ ಕಮಾಂಡೆಂಟ್ ಎ.ಮಾರುತಿ, ದೇವರಾಜ ಎಸಿಪಿ ಕೆ.ರಾಜೇಂದ್ರ, ಲಷ್ಕರ್ ಪೊಲೀಸ್ ಠಾಣೆ ಇನ್‌ಸ್ಪೆಕ್ಟರ್ ಟಿ.ಎಸ್. ಲೋಲಾಕ್ಷಿ, ಆಲನಹಳ್ಳಿ ಇನ್‌ಸ್ಪೆಕ್ಟರ್ ಜಿ.ಎಸ್.ಸ್ವರ್ಣ, ಮಹಿಳಾ ಪೊಲೀಸ್ ಠಾಣೆ ಇನ್‌ಸ್ಪೆಕ್ಟರ್ ಅಶೋಕ್‌ಕುಮಾರ್ ಸೇರಿದಂತೆ ಇನ್ನಿತರ ಪೊಲೀಸ್ ಸಿಬ್ಬಂದಿ ಹಾಗೂ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಸಿಬ್ಬಂದಿ ಹಾಜರಿದ್ದರು.



ಆದಿಚುಂಚನಗಿರಿ ಪೀಠಾಧ್ಯಕ್ಷ ಶ್ರೀ ನಿರ್ಮಲಾನಂದನಾಥ ಸ್ವಾಮೀಜಿ ಭೂಮಿಪೂಜೆ ಮತ್ತು ರಾಶಿ ಪೂಜೆ ನೆರವೇರಿಸಿದರು.

ಕೃಷಿ ಕ್ಷೇತ್ರದಲ್ಲಿ ಆದಾಯವಿಲ್ಲವೆಂದು ನಿರುತ್ಸಾಹ ತೋರಿ ಭೂಮಿ ಮಾರಬೇಡಿ

ರೈತರಿಗೆ ನಿರ್ಮಲಾನಂದನಾಥ ಶ್ರೀ ಕರೆ

ಮಂಡ್ಯ,ಮಾ.9–ಕೃಷಿ ಕ್ಷೇತ್ರದಲ್ಲಿ ದೊಡ್ಡ ಮಟ್ಟದ ಆದಾಯವಿಲ್ಲ ಎಂಬ ಕಾರಣಕ್ಕೆ ನಿರುತ್ಸಾಹ ಹೊಂದುವ ಅಥವಾ ಭೂಮಿಯನ್ನು ಮಾರಿಕೊಳ್ಳಲು ರೈತರು ಮುಂದಾಗಬಾರದು. ಇನ್ನು 10 ವರ್ಷಗಳಲ್ಲಿ ವ್ಯವಸಾಯಕ್ಕೆ ಎಲ್ಲಿಲ್ಲದ ಬೇಡಿಕೆ ಬರಲಿದೆ ಎಂಬ ಆಶಾ ಭಾವವನ್ನು ಆದಿಚುಂಚನಗಿರಿ ಪೀಠಾಧ್ಯಕ್ಷ ಶ್ರೀ ನಿರ್ಮಲಾನಂದನಾಥ ಸ್ವಾಮೀಜಿ ವ್ಯಕ್ತಪಡಿಸಿದರು.

ಬೇವಿನಹಳ್ಳಿ ಹಾಗೂ ಕೊತ್ತತ್ತಿ ಗ್ರಾಮಸ್ಥರು ತಾಲೂಕಿನ ಕೊತ್ತತ್ತಿ ಗ್ರಾಮದಲ್ಲಿ ಬಿಜೆಪಿ ಮುಖಂಡ ಇಂಡುವಾಳು ಎಸ್.ಸಚ್ಚಿದಾನಂದ ನೇತೃತ್ವದಲ್ಲಿ ನಡೆದ ರಾಶಿಪೂಜೆ, ಭೂಮಿ ಪೂಜೆ, ಗೋಪೂಜೆ ಹಾಗೂ ಸತ್ಸಂಗ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಮಾತನಾಡಿದರು.

ಕೃಷಿ ಉದ್ಯಮ ಲಾಭದಾಯಕ ಎನ್ನುವ ಅಭಿಪ್ರಾಯವನ್ನು ದಟ್ಟವಾಗಿ ಸೃಷ್ಟಿಸಲಾಗುತ್ತಿದೆ. ಇದರಿಂದ ಕಂಗಾಲಾಗುತ್ತಿರುವ ರೈತರು ಕೃಷಿಯಿಂದ ವಿಮುಖರಾಗುತ್ತಿದ್ದಾರೆ. ಯುವ ಜನರಲ್ಲೂ ಕೃಷಿಯ ಆಸಕ್ತಿ ಕಳೆದುಹೋಗುತ್ತಿದೆ. ಈ ಕಾರಣದಿಂದಲೇ ಕೃಷಿ ಭೂಮಿಯನ್ನು ಮಾರುವ ನಿರ್ಧಾರಕ್ಕೆ ರೈತರು ಬರುತ್ತಿದ್ದಾರೆ ಎಂದು ಆತಂಕ ವ್ಯಕ್ತಪಡಿಸಿದರು.

ಇಂದಿನ ಎಐ ಯುಗದಲ್ಲಿ ಎಲ್ಲ ಬಗೆಯ ತಾಂತ್ರಿಕ ಉದ್ಯೋಗವನ್ನು ಕೃತಕ ಬುದ್ಧಿಮತ್ತೆ ಕಸಿದುಕೊಳ್ಳುತ್ತಿದೆ ಇದರಿಂದಾಗಿ ಸಾಫ್ಟ್‌ವೇರ್ ಕ್ಷೇತ್ರದಲ್ಲೂ ನಿರುದ್ಯೋಗ ಸೃಷ್ಟಿಯಾಗುವ ಸಾಧ್ಯತೆ ಇದೆ. ಭವಿಷ್ಯದ 10 ವರ್ಷದ ವೇಳೆಗೆ ಭೂಮಿ ಉಳ್ಳವರಿಗೆ ಹೆಚ್ಚಿನ ಬೇಡಿಕೆ ಬರಲಿದ್ದು, ಅಲ್ಲಿಯವರೆಗೆ ರೈತರು ತಮಗಾಗುವ ನಷ್ಟ ಮತ್ತು ಕಷ್ಟಗಳನ್ನು ಸಹಿಸಿಕೊಂಡು ಕೃಷಿಯನ್ನು ಮುಂದುವರಿಸಬೇಕು ಎಂದು ಸಲಹೆ ನೀಡಿದರು.

ರೈತರು ಹಲವು ಏರು–ಪೇರುಗಳ ನಡುವೆ ಎಲ್ಲವನ್ನೂ ಸಹಿಸಿಕೊಂಡು ಯಶಸ್ಸಿನ ಹಾದಿಯಲ್ಲಿ ನಡೆಯುತ್ತಿದ್ದಾರೆ. ಒಂದೊಮ್ಮೆ ಕಷ್ಟಗಳು ಬರುತ್ತವೆ. ಆದರೆ ಅದನ್ನು ಸವಾಲಾಗಿ ಸ್ವೀಕರಿಸಿ ಮನಸ್ಸಿನಲ್ಲಿ ಕಟು ನಿರ್ಧಾರದಿಂದ ಹಿಮ್ಮೆಟ್ಟಿಸುವ ಪ್ರಯತ್ನ ಮಾಡಿದಲ್ಲಿ ಸಾಫಲ್ಯವನ್ನು ಪಡೆಯಲು ಸಾಧ್ಯ ಎಂದರು.

ಬಿಜೆಪಿ ಮುಖಂಡ ಇಂಡುವಾಳು ಎಸ್.ಸಚ್ಚಿದಾನಂದ ಮಾತನಾಡಿ, ಆದಿಚುಂಚನಗಿರಿ ಕ್ಷೇತ್ರ ದೇಶ ವಿದೇಶಗಳಲ್ಲೂ ತನ್ನ ಶಾಖೆಗಳನ್ನು ಹೊಂದಿದೆ. ಸುಮಾರು 650 ವಿದ್ಯಾಸಂಸ್ಥೆಗಳನ್ನು ನಡೆಸುತ್ತಿದೆ. ಲಕ್ಷಾಂತರ ಮಂದಿ ವಿದ್ಯಾರ್ಥಿಗಳಿಗೆ ಅಕ್ಷರ, ಅನ್ನದಾಸೋಹ ನೀಡುತ್ತಿದೆ ಎಂದು ಹೇಳಿದರು.

ಶ್ರೀಗಳಿಗೆ ರೈತರ ಬಗ್ಗೆ ಅಪಾರವಾದ ಪ್ರೀತಿ, ಕಾಳಜಿ ಇದೆ. ಶ್ರೀಗಳು ಸ್ವತಃ ವಿಜ್ಞಾನಿಗಳೂ ಆಗಿರುವುದರಿಂದ ತಾಂತ್ರಿಕವಾಗಿಯೂ ಹೆಚ್ಚಿನ ಮಟ್ಟದ ಸಾಧನೆ ತೊಡಗಿಸಿಕೊಂಡಿದ್ದಾರೆ. ರೈತರಿಗೂ ಹಲವಾರು ಆಧುನಿಕ ಕೃಷಿ ಪದ್ಧತಿಯನ್ನೂ ಪರಿಚಯಿಸುತ್ತಿದ್ದಾರೆ. ರೈತರ ವಾಣಿಜ್ಯ ಬೆಳೆಗಳನ್ನು ಬೆಳೆಯುವ ನಿಟ್ಟಿನಲ್ಲಿ ಪ್ರೋತ್ಸಾಹಿಸುತ್ತಿದ್ದಾರೆ ಎಂದರು.

ಮೈಸೂರು ಶಾಖಾ ಮಠದ ಶ್ರೀ ಸೋಮೇಶ್ವರನಾಥಸ್ವಾಮೀಜಿ, ಮಂಡ್ಯದ ಕೊಮ್ಮೇರಹಳ್ಳಿ ವಿಶ್ವಮಾನವ ಕ್ಷೇತ್ರದ ಶ್ರೀ ಪುರುಷೋತ್ತಮಾನಂದನಾಥ ಸ್ವಾಮೀಜಿ, ಶ್ರೀ ಶೈಲನಾಥ ಸ್ವಾಮೀಜಿ, ಹಾಸನ ಶಾಖಾ ಮಠದ ಶ್ರೀ ಶಂಭೂನಾಥ ಸ್ವಾಮೀಜಿ, ಶ್ರೀ ಸತ್ಕೀರ್ತಿನಾಥ ಸ್ವಾಮೀಜಿ, ಶ್ರೀ ಶೈಲನಾಥ ಸ್ವಾಮೀಜಿ, ಬಿಜೆಪಿ ಜಿಲ್ಲಾಧ್ಯಕ್ಷ ಡಾ.ಇಂದ್ರೇಶ್, ಮುಖಂಡರಾದ ಡಾ.ಸಿದ್ದರಾಮಯ್ಯ, ಅಶೋಕ್ ಜಯರಾಂ ಸೇರಿದಂತೆ ಹಲವರು ಸಮಾರಂಭದಲ್ಲಿ ಭಾಗವಹಿಸಿದ್ದರು.

ಗಮನ ಸೆಳೆದ ಕಾರ್ಯಕ್ರಮ: ವೇದಿಕೆಯ ಪಕ್ಕದಲ್ಲಿ ಶ್ರೀಮಠಕ್ಕೆ ಅರ್ಪಿಸುವ ಧವಸ–ಧಾನ್ಯ, ಬೆಲ್ಲ, ತೆಂಗಿನ ಕಾಯಿ ಸೇರಿದಂತೆ ವಿವಿಧ ಧಾನ್ಯಗಳನ್ನು ರಾಶಿಯಲ್ಲಿಟ್ಟು ಅಲಂಕರಿಸಲಾಗಿತ್ತು. ಸುತ್ತಲೂ ಕೃಷಿ ಪರಿಕರಗಳು, ರೈತರು ಉಪಯೋಗಿಸುವ ಟಿಲ್ಲರ್, ಟ್ರಾಕ್ಟರ್‌ಗಳು ಒಂದು ಬದಿಯಲ್ಲಿದ್ದರೆ, ಮತ್ತೊಂದು ಬದಿಯಲ್ಲಿ ಶೃಂಗರಿಸಿದ ಎತ್ತಿನ ಗಾಡಿಗಳನ್ನು ಸಾಲಾಗಿ ಜೋಡಿಸಿ ನಿಲ್ಲಿಸಲಾಗಿತ್ತು. ಮತ್ತೊಂದು ಬದಿಯಲ್ಲಿ ಕಟ್ಟುಮಸ್ತಾದ ರಾಸುಗಳನ್ನು ಕಟ್ಟಿಹಾಕಲಾಗಿತ್ತು. ಶ್ರೀಗಳು ಇದನ್ನು ಕುಡು ಮೆಚ್ಚಿಗೆ ವ್ಯಕ್ತಪಡಿಸಿದರು.

ಮೊದಲು ಗೋಪೂಜೆ ನೆರವೇರಿಸಿದ ಶ್ರೀಗಳು, ನಂತರ ಭೂಮಿಪೂಜೆ, ಮತ್ತು ರಾಶಿಪೂಜೆ ನಡೆಸಿ ವಿಶೇಷ ಪೂಜೆ ಸಲ್ಲಿಸಿ ಸ್ವೀಕಾರ ಮಾಡಿದರು. ವೇದಿಕೆಗೆ ಆಗಮಿಸಿದ ಶ್ರೀಗಳಿಗೆ ಶ್ರೀಮಠದ ವಿದ್ಯಾರ್ಥಿಗಳ ಭಕ್ತಿ ಗೀತೆಗಳ ಸಿಂಚನ, ವೇದಘೋಷಗಳನ್ನು ಮೊಳಗಿಸಿದರು.

ಮಂಡ್ಯ ನಗರಸಭೆಯಲ್ಲಿ ಉಳಿತಾಯ ಬಜೆಟ್ ಮಂಡನೆ

● ರಸ್ತೆ, ಚರಂಡಿ, ಸ್ವಚ್ಛತೆ, ಕುಡಿಯುವ ನೀರು ಸೇರಿದಂತೆ ಮೂಲಸೌಕರ್ಯಕ್ಕೆ ಆದ್ಯತೆ ● ಬೀದಿ ಬದಿ ವ್ಯಾಪಾರಿಗಳಿಗೆ ಮಳಿಗೆಗಳ ನಿರ್ಮಾಣ

ಮಂಡ್ಯ, ಮಾ.9– ನಗರಸಭೆಯ 2025–26ನೇ ಸಾಲಿನ ಪರಿಷ್ಕೃತ ಹಾಗೂ 2026–27ನೇ ಸಾಲಿನ ಅಂದಾಜು 123.62 ಕೋಟಿ ರೂ. ವೆಚ್ಚದ ಆಯ–ವ್ಯಯವನ್ನು ಆಡಳಿತಾಧಿಕಾರಿಯೂ ಆದ ಜಿಲ್ಲಾಧಿಕಾರಿ ಡಾ.ಕುಮಾರ ಸೋಮವಾರ ಮಂಡಿಸಿದರು.

ನಗರಸಭೆಯ ಧರಣಪ್ಪ ಸಭಾಂಗಣದಲ್ಲಿ ಸೋಮವಾರ ನಡೆದ ಆಯವ್ಯಯ ಮಂಡನೆ ಸಭೆಯಲ್ಲಿ 2026–27ನೇ ಸಾಲಿಗೆ ತಮ್ಮ ಚೊಚ್ಚಲ ಬಜೆಟ್ ಮಂಡಿಸಿದ ಆಡಳಿತಾಧಿಕಾರಿ ಡಾ. ಕುಮಾರ ಅವರು, ಒಟ್ಟು 123,62,52,848 ಕೋಟಿ ರೂ.ಗಳ ಬಜೆಟ್ ಮಂಡಿಸಿ, 2,51,87,848 ರೂ. ಉಳಿತಾಯ ಬಜೆಟ್ ಮಂಡಿಸಿದಾಗ ಶಾಸಕ ಪಿ.ರವಿಕುಮಾರ್‌ಗೌಡ ಸೇರಿದಂತೆ ಎಲ್ಲಾ ಅಧಿಕಾರಿಗಳು ಮೇಜು ಕುಟ್ಟಿ ಅಭಿನಂದಿಸಿದರು.

ಆಯವ್ಯಯದ ಸಾರಾಂಶ: ಮಂಡ್ಯ ನಗರಸಭೆಯ 2025–26ನೇ ಸಾಲಿನ ಆರಂಭಿಕ ಶುಲ್ಕ 22,83,29,425 ರೂ. ಹಾಗೂ 2026–27ನೇ ಸಾಲಿಗೆ ನಗರಸಭೆಯ ಸ್ವಂತ ಸಂಪನ್ಮೂಲಗಳಿಂದ ನಿರೀಕ್ಷಿತ ಆದಾಯ 29.32,07,000 ರೂ., ಸರ್ಕಾರಕ್ಕೆ ಪಾವತಿಸಬೇಕಾದ ತೆರಿಗೆಗಳು ಮತ್ತು ಕರಗಳ ಬಾಬ್ತು 10,56,60,000 ರೂ. ಹಾಗೂ ಕೇಂದ್ರ ಮತ್ತು ರಾಜ್ಯ ಸರ್ಕಾರಗಳಿಂದ ನಿರೀಕ್ಷಿತ ಅನುದಾನಗಳು 68,10,23,000 ರೂ. ಸೇರಿ ಒಟ್ಟು 123,62,52,848 ರೂ.ಗಳ ಬಜೆಟ್‌ನಲ್ಲಿ 2026–27ನೇ ಸಾಲಿಗೆ ನೌಕರರ ವೇತನ, ನಿರ್ವಹಣಾ ವೆಚ್ಚಗಳು, ಬಂಡವಾಳ ಕಾಮಗಾರಿಗಳು, ಕಲ್ಯಾಣ ಕಾರ್ಯಕ್ರಮಗಳು ಮತ್ತು ಸರ್ಕಾರಕ್ಕೆ ಪಾವತಿಸಬೇಕಾದ ಕರಗಳು ಹಾಗೂ ಶಾಸನಬದ್ಧ ತೆರಿಗೆಗಳು ಸೇರಿದಂತೆ ಒಟ್ಟಾರೆ ಖರ್ಚು ಕಳೆದು 2,51,87,848 ರೂ.ಗಳ ಉಳಿತಾಯ ಬಜೆಟ್ ಮಂಡಿಸಿದರು.



ಜಿಲ್ಲಾಧಿಕಾರಿ ಡಾ.ಕುಮಾರ ಸೋಮವಾರ ಮಂಡ್ಯ ಬಜೆಟ್ ಮಂಡಿಸಿದರು.

ಪ್ರಮುಖ ಆದಾಯ ನಿರೀಕ್ಷೆಗಳು: ತೆರಿಗೆ ಆದಾಯಗಳು; ಆಸ್ತಿ ತೆರಿಗೆ, ದಂಡ, ಕರಗಳ ಸಂಗ್ರಹಣ ಶುಲ್ಕದಿಂದ 2090 ಲಕ್ಷ. ತೆರಿಗೆಯೇತರ ಆದಾಯಗಳು: ಅಭಿವೃದ್ಧಿ ಮತ್ತು ಬೆಟರ್‌ಮೆಂಟ್ ಶುಲ್ಕಗಳ ಸಂಗ್ರಹಣೆಯಿಂದ 155 ಲಕ್ಷ, ಘನ ತ್ಯಾಜ್ಯ ವಸ್ತು ನಿರ್ವಹಣೆ ಶುಲ್ಕ ಸಂಗ್ರಹಣೆಯಿಂದ 200 ಲಕ್ಷ, ಮಳಿಗೆಗಳ ಠೇವಣಿ, ಬಾಡಿಗೆ ಮತ್ತು ದಂಡ ವಸೂಲಿ ಸಂಗ್ರಹಣೆಯಿಂದ 129 ಲಕ್ಷ, ಒಳಚರಂಡಿ ಸಂಪರ್ಕ ಮತ್ತು ಬಳಕೆದಾರರ ಶುಲ್ಕ ಸಂಗ್ರಹಣೆಯಿಂದ 46.50 ಲಕ್ಷ, ಉದ್ದಿಮೆ ಪರವಾನಗಿ ಶುಲ್ಕ ಮತ್ತು ಉದ್ದಿಮೆ ಪರವಾನಗಿ ಮೇಲಿನ ದಂಡ ಸಂಗ್ರಹಣೆಯಿಂದ 52 ಲಕ್ಷ, ಅನುಪಯುಕ್ತ ವಸ್ತುಗಳ ಮಾರಾಟದಿಂದ 26 ಲಕ್ಷ, ರಸ್ತೆ ಅಗೆತ ಮತ್ತು ಪುನಃಸ್ಥಾಪನೆ ಶುಲ್ಕ ಸಂಗ್ರಹಣೆಯಿಂದ 52 ಲಕ್ಷ, ಖಾತಾ ಬದಲಾವಣೆ ಶುಲ್ಕಗಳ ಸಂಗ್ರಹಣೆಯಿಂದ 32 ಲಕ್ಷ, ನಗರಸಭೆ ವಸತಿ ಗೃಹಗಳು ಹಾಗೂ ನಗರಸಭೆ ಹಳೇ ಕಚೇರಿ ಕಟ್ಟಡ ಬಾಡಿಗೆಯಿಂದ 25 ಲಕ್ಷ, ಕಟ್ಟಡ ಪರವಾನಗಿ ಶುಲ್ಕ ಸಂಗ್ರಹಣೆಯಿಂದ 34.15 ಲಕ್ಷ, ಇತರೆ ಪ್ರಮಾಣ ಪತ್ರಗಳು, ದಂಡ ಹಾಗೂ ಶುಲ್ಕಗಳಿಂದ 27.20 ಲಕ್ಷ, ರಾಜ್ಯ ಸರ್ಕಾರದಿಂದ ಸಂಗ್ರಹಿಸಲ್ಪಟ್ಟ ಸ್ಟ್ಯಾಂಪ್ ಶುಲ್ಕದ ಸರ್ ಚಾರ್ಜ್‌ನಿಂದ 15 ಲಕ್ಷ, ಬ್ಯಾಂಕ್ ಖಾತೆಗಳ ಮೇಲಿನ ಬಡ್ಡಿ ಸಂಗ್ರಹಣೆಯಿಂದ 35 ಲಕ್ಷ, ಜಾಹಿರಾತು ಶುಲ್ಕದಿಂದ 5 ಲಕ್ಷ ಟ್ಯಾಕ್ಸಿ ನಿಲ್ದಾಣ, ಖಾಸಗಿ ಬಸ್ ನಿಲ್ದಾಣ, ನೆಲ ಬಾಡಿಗೆ, ಕಸಾಯಿಖಾನೆ ಶುಲ್ಕ ಸಂಗ್ರಹಣೆಯಿಂದ 5.75 ಲಕ್ಷ, ಸಾರ್ವಜನಿಕ ಶೌಚಾಲಯಗಳ ನಿರ್ವಹಣೆ ಶುಲ್ಕದಿಂದ 2.47 ಲಕ್ಷ. ಇದಲ್ಲದೆ, ರಾಜ್ಯ ಸರ್ಕಾರದಿಂದ 49,19,68,000 ಹಾಗೂ ಕೇಂದ್ರ ಸರ್ಕಾರದಿಂದ 18,90,54,000 ರೂ. ನಿರೀಕ್ಷಿತ ಅನುದಾನ ಸೇರಿದೆ ಎಂದರು.

ಪ್ರಮುಖ ವೆಚ್ಚಗಳು: ನಗರಸಭೆ ವ್ಯಾಪ್ತಿಯಲ್ಲಿ ಇತರೆ ಇಲಾಖೆಗಳ ವತಿಯಿಂದ ಕಾಮಗಾರಿಗಳನ್ನು ಕೈಗೊಳ್ಳಲು ಉದ್ದೇಶಿಸಲಾಗಿದ್ದು, ಮುಖ್ಯಮಂತ್ರಿಗಳ ಮೂಲ ಸೌಕರ್ಯಗಳ ಅಭಿವೃದ್ಧಿ ಅನುದಾನದಲ್ಲಿ 50 ಕೋಟಿ ರೂ. ಮಂಡ್ಯ ವಿಧಾನಸಭಾ ಕ್ಷೇತ್ರಕ್ಕೆ ಮಂಜೂರಾಗಿದ್ದು, ಈ ಹಣದಲ್ಲಿ ನಗರಸಭೆಗೆ 10 ಕೋಟಿ ರೂ.ಗಳನ್ನು ಮಂಡ್ಯ ನಗರದ ಪ್ರಮುಖ ವೃತ್ತಗಳನ್ನು ಆಧುನಿಕ ಮಾದರಿಯಲ್ಲಿ ಅಭಿವೃದ್ಧಿಪಡಿಸಲು, ಮಂಡ್ಯ ನಗರದ ಬೀದಿ ಬದಿ ವ್ಯಾಪಾರಿಗಳಿಗೆ ಮಳಿಗೆಗಳನ್ನು ನಿರ್ಮಾಣ, ರಸ್ತೆಗಳ ಅಭಿವೃದ್ಧಿ ಹಾಗೂ ಕನ್ನಡ ಭವನ ನಿರ್ಮಾಣ ಮಾಡಲು ಉದ್ದೇಶಿಸಲಾಗಿದೆ ಎಂದು ವಿವರಿಸಿದರು.

ಸಭೆಯಲ್ಲಿ ಶಾಸಕ ಪಿ.ರವಿಕುಮಾರ್‌ಗೌಡ ಗಣಿಗ, ಪೌರಾಯುಕ್ತೆ ಯು.ಪಿ.ಪಂಪಾಶ್ರೀ, ಟಿ.ಎನ್.ನರಸಿಂಹಮೂರ್ತಿ ಭಾಗವಹಿಸಿದ್ದರು.

ಮಾ.14, ವಿಸಿ ಫಾರಂ ಕ್ರೀಡಾಂಗಣ ಅಭಿವೃದ್ಧಿಗೆ ಚಾಲನೆ

500ಕ್ಕೂ ಹೆಚ್ಚು ವಿಕಲಚೇತನರಿಗೆ ಎಲೆಕ್ಟ್ರಿಕ್ ಸ್ಕೂಟರ್ ವಿತರಣೆ

ಕೇಂದ್ರ ಕ್ರೀಡಾ ಸಚಿವರು, ಕೈಗಾರಿಕಾ ಸಚಿವರು ಭಾಗಿ

ಪಾಂಡವಪುರ: ಮೇಲುಕೋಟೆ ವಿಧಾನ ಸಭಾ ಕ್ಷೇತ್ರದ ವಿಸಿ ಫಾರಂನಲ್ಲಿ ಮಾ.14 ರಂದು ಕ್ರೀಡಾಂಗಣ ಮೇಲ್ದರ್ಜೆಗೇರಿಸುವ ಕಾಮಗಾರಿಗೆ ಹಾಗೂ 500ಕ್ಕೂ ಅಧಿಕ ವಿಕಲಚೇತನರಿಗೆ ಎಲೆಕ್ಟ್ರಿಕ್ ಸ್ಕೂಟರ್ ವಿತರಿಸುವ ಕಾರ್ಯಕ್ರಮಕ್ಕೆ ಕ್ಷೇತ್ರದಿಂದ ಎನ್‌ಡಿಎ ಮೈತ್ರಿಕೂಟದ ಮುಖಂಡರು, ಕಾರ್ಯಕರ್ತರು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಿ ಕಾರ್ಯಕ್ರಮ ಯಶಸ್ವಿಗೊಳಿಸಬೇಕೆಂದು ಮಾಜಿ ಸಚಿವ ಸಿ.ಎಸ್. ಪುಟ್ಟರಾಜು ಕರೆ ನೀಡಿದರು.

ಪಟ್ಟಣದ ಟಿಎಪಿಸಿಎಂಎಸ್ ರೈತಸಭಾಂಗಣದಲ್ಲಿ ನಡೆದ ಜೆಡಿಎಸ್ ಪಕ್ಷದ ಕಾರ್ಯಕರ್ತರ ಪೂರ್ವಭಾವಿ ಸಭೆಯನ್ನು ಉದ್ಘಾಟಿಸಿ ಮಾತನಾಡಿ, ಹೆಚ್.ಡಿ.ಕುಮಾರ ಸ್ವಾಮಿ ಅವರು ಕೇಂದ್ರ ಸಚಿವರಾದ ಬಳಿಕ ಜಿಲ್ಲೆಗೆ ಸಾಕಷ್ಟು ಅಭಿವೃದ್ಧಿ ಕಾರ್ಯಕ್ರಮಗಳನ್ನು ನೀಡಿದ್ದಾರೆ. ನನ್ನ ಕ್ಷೇತ್ರ ವ್ಯಾಪ್ತಿಯ ವಿಸಿ ಫಾರಂನಲ್ಲಿರುವ ಕ್ರೀಡಾಂಗಣವನ್ನು ಮೇಲ್ದರ್ಜೆಗೇರಿಸಿ ಒಳ ಕ್ರೀಡಾಂಗಣ ಸೇರಿದಂತೆ ಉತ್ತಮ ಮಟ್ಟದಲ್ಲಿ ಅಭಿವೃದ್ಧಿಪಡಿಸುತ್ತಿದ್ದಾರೆ. ಜತೆಗೆ 500ಕ್ಕೂ ಹೆಚ್ಚು ಮಂದಿ ವಿಕಲಚೇತನರಿಗೆ ದ್ವಿಚಕ್ರ ವಾಹನವನ್ನು ನೀಡಲಾಗುತ್ತಿದ್ದು, ಕಾರ್ಯಕ್ರಮಕ್ಕೆ ಕೇಂದ್ರದ ಕ್ರೀಡಾ ಸಚಿವರು ಆಗಮಿಸುತ್ತಿದ್ದಾರೆ ಎಂದರು.



ಸಭೆಯಲ್ಲಿ ಮಾಜಿ ಸಚಿವ ಸಿ.ಎಸ್.ಪುಟ್ಟರಾಜು ಮಾತನಾಡಿದರು.

ಕಾರ್ಯಕ್ರಮಕ್ಕೆ ಮಂಡ್ಯ ಲೋಕಸಭಾ ಕ್ಷೇತ್ರದ ಎಂಟು ತಾಲೂಕುಗಳಿಂದಲೂ 30 ಸಾವಿರಕ್ಕೂ ಅಧಿಕ ಕಾರ್ಯಕರ್ತರು ಭಾಗವಹಿಸುವ ನಿರೀಕ್ಷೆ ಹೊಂದಲಾಗಿದೆ. ಹಾಗಾಗಿ ನಮ್ಮ ಕ್ಷೇತ್ರದಿಂದ ಹೆಚ್ಚಿನ ಸಂಖ್ಯೆಯಲ್ಲಿ ಕಾರ್ಯಕರ್ತರು ಆಗಮಿಸಬೇಕು, ಕಾರ್ಯಕ್ರಮಕ್ಕೆ ಆಗಮಿಸಲು ಸಾರಿಗೆ ವ್ಯವಸ್ಥೆಯನ್ನು ಸಹ ಕಲ್ಪಿಸಲಾಗಿದೆ. ಗ್ರಾಪಂ ಮಟ್ಟ, ಟೌನ್ ಪ್ರತಿ ವಾರ್ಡ್‌ಗಳಿಂದಲೂ ಪಕ್ಷದ ಕಾರ್ಯಕರ್ತರು ಆಗಮಿಸಬೇಕು, ಆಗಮಿಸುವ ಎಲ್ಲರಿಗೂ ಊಟದ ವ್ಯವಸ್ಥೆಯನ್ನು ಕಲ್ಪಿಸಲಾಗಿದೆ ಎಂದು ತಿಳಿಸಿದರು.

ಪಿಎಲ್‌ಡಿ ಬ್ಯಾಂಕ್ ಮಾಜಿ ಅಧ್ಯಕ್ಷ ಎಂ.ಸಿ. ಯಶವಂತ್‌ಕುಮಾರ್ ಮಾತನಾಡಿ, ಮಾಜಿ ಸಚಿವ ಪುಟ್ಟರಾಜು ತಮ್ಮ ಅಧಿಕಾರವಧಿಯಲ್ಲಿ ಸಾಕಷ್ಟು ಅಭಿವೃದ್ಧಿ ಕೆಲಸ ಮಾಡಿದ್ದಾರೆ. ಇದೀಗ ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ ಅವರಿಂದ ತಮ್ಮ ಕ್ಷೇತ್ರದ ವಿಸಿ ಫಾರಂನಲ್ಲಿ ಕ್ರೀಡಾಂಗಣವನ್ನು ಅಂತರಾಷ್ಟ್ರ ಮಟ್ಟದಲ್ಲಿ ಅಭಿವೃದ್ಧಿಪಡಿಸಿಕೊಳ್ಳಲಾಗುತ್ತಿದೆ. ಸಿ.ಎಸ್.ಪುಟ್ಟರಾಜು ಅವರಿಗೆ ಅಧಿಕಾರ ಇರಲಿ ಇಲ್ಲದಿರಲಿ ಸದಾ ಜನರ ಕಷ್ಟಕಾರ್ಪಣ್ಯಗಳಿಗೆ ಮಿಡಿಯುವ ಹೃದಯ ಹೊಂದಿದ್ದಾರೆ ಎಂದರು.

ಜಿಪಂ ಮಾಜಿ ಸದಸ್ಯ ಎಚ್.ಮಂಜುನಾಥ್, ಗ್ರಾಪಂ ಮಾಜಿ ಅಧ್ಯಕ್ಷ ಅರಳಕುಪ್ಪೆ ಮಹದೇವು, ಜೆಡಿಎಸ್ ಅಧ್ಯಕ್ಷ ಎಸ್.ಎ. ಮಲ್ಲೇಶ್ ಮಾತನಾಡಿದರು.

ಸಭೆಯಲ್ಲಿ ಮನ್‌ಮುಲ್ ನಿರ್ದೇಶಕ ಸಿ.ಶಿವಕುಮಾರ್, ಜಿಪಂ ಮಾಜಿ ಸದಸ್ಯ ಸಿ.ಅಶೋಕ್, ಡಿಸಿಸಿ ಬ್ಯಾಂಕ್ ನಿರ್ದೇಶಕ ಹೊಸಕೋಟೆ ಪುಟ್ಟಸ್ವಾಮಿಗೌಡ, ಟಿಎಪಿಸಿಎಂಎಸ್ ಅಧ್ಯಕ್ಷ ಚಿಕ್ಕಾಡೆ ಗಿರೀಶ್, ಮಾಜಿ ಅಧ್ಯಕ್ಷ ನಂಜೇಗೌಡ, ಪಿಎಲ್‌ಡಿ ಬ್ಯಾಂಕ್ ಅಧ್ಯಕ್ಷ ಚಲುವೇಗೌಡ ಹಾಜರಿದ್ದರು.

ಒಂದನೇ ಪುಟದಿಂದ

ಕೆಎಸ್‌ಐಸಿ ಆವರಣದಲ್ಲಿ ಕ್ರೀಡಾಂಗಣ ಯೋಜನೆ ಕೈಬಿಟ್ಟ ಸರ್ಕಾರ

ಅದೇ ದಿನ ಮಾರಾಟವಾಗುತ್ತಿವೆ ಕೆಎಸ್‌ಐಸಿ ಸೀರೆಯ ಗುಣ ಮಟ್ಟ ಅತ್ಯುತ್ತಮವಾಗಿದೆ. ಹೆಣ್ಣು ಮಕ್ಕಳು ಎಲ್ಲವನ್ನೂ ಪರಿಶೀಲಿಸಿ ಸೀರೆ ಖರೀದಿಸುತ್ತಾರೆ. ಸಣ್ಣ ಲೋಪ ಇದ್ದರೂ ತಿರಸ್ಕರಿಸುತ್ತಾರೆ ಎಂದರು. ಆದ್ದರಿಂದ ಸೂಕ್ಷ್ಮ ಮತ್ತು ಎಚ್ಚರಿಕೆಯಿಂದ ಉತ್ಪಾದನೆ ಮಾಡಬೇಕಿದೆ. ಉತ್ತಮ ಗುಣಮಟ್ಟದ ರೇಷ್ಮೆಗೂಡುಗಳನ್ನೇ ಖರೀದಿಸಿ ತರಬೇಕು. ರೇಷ್ಮೆಗೂಡುಗಳಿಗಾಗಿ ಭಾರೀ ಬೇಡಿಕೆ ಇದೆ. ತಮಿಳುನಾಡು, ಆಂಧ್ರಪ್ರದೇಶಗಳಿಂದಲೂ ರೇಷ್ಮೆಗೂಡು ಮತ್ತು ನೂಲು ಖರೀದಿಗೆ ಉದ್ಯಮಿಗಳು ಆಗಮಿಸುತ್ತಿದ್ದಾರೆ. ಪೈಪೋಟಿ ನಡುವೆ ನಾವು ಉದ್ಯಮ ನಡೆಸುತ್ತಿದ್ದೇವೆ ಎಂದರು.

ಸಿಬ್ಬಂದಿ ವೇತನ ಹೆಚ್ಚಳಕ್ಕೆ ಆಗ್ರಹ: ವಿರೋಧ ಪಕ್ಷದ ನಾಯಕ ಆರ್. ಅಶೋಕ್ ಮಧ್ಯ ಪ್ರವೇಶಿಸಿ ಮಾತನಾಡಿ, ರೇಷ್ಮೆ ಸೀರೆಗೆ ಬೇಡಿಕೆ ಇರುವುದು ನಿಜ. ಅಗತ್ಯದಷ್ಟು ಪೂರೈಕೆಗೆ ಉತ್ಪಾದನೆ ಹೆಚ್ಚಿಸಬೇಕು. ಕೆಲಸ ಮಾಡುತ್ತಿರುವವರಿಗೆ 3 ಸಾವಿರ ಮತ್ತು 12 ಸಾವಿರದಷ್ಟು ಕಡಿಮೆ ವೇತನ ನೀಡಲಾಗುತ್ತಿದೆ. ವೇತನ ಹೆಚ್ಚಳ ಮಾಡಬೇಕು ಎಂದರು.

ರೇಷ್ಮೆ ನಿಗಮ ಈ ವರ್ಷ 96 ಕೋಟಿ ರೂ. ಲಾಭ ಮಾಡಿದೆ. ಅದರಲ್ಲಿ 1 ಕೋಟಿ ರೂ. ಕಾರ್ಮಿಕರ ವೇತನಕ್ಕೆ ಖರ್ಚು ಮಾಡಿ ಎಂದು ಒತ್ತಾಯಿಸಿದರು. ಸರ್ಕಾರ ಮೈಸೂರಿನ ರೇಷ್ಮೆ ಉತ್ಪಾದನಾ ಘಟಕ ಮುಚ್ಚುವ ಹುನ್ನಾರ ನಡೆಸಿದೆ ಎಂಬ ಆರೋಪಕ್ಕೆ ಸ್ಪಷ್ಟನೆ ನೀಡಿದ ಸಚಿವರು, ಕರ್ನಾಟಕ ರೇಷ್ಮೆ ಉದ್ಯಮಗಳ ನಿಯಮಿತದಲ್ಲಿ 2022 ರಿಂದ 3 ವರ್ಷಗಳ ಅವಧಿಯಲ್ಲಿ 3,10,666 ಸೀರೆಗಳು ತಯಾರಾಗಿವೆ. ಈ ಪೈಕಿ 309659 ಸೀರೆಗಳು ಮಾರಾಟವಾಗಿವೆ. 2022–23ರಲ್ಲಿ ನಿಗಮ 46.75 ಕೋಟಿ, 2023–24ನೇ ಸಾಲಿನಲ್ಲಿ 73.40 ಕೋಟಿ, 2024–25ರಲ್ಲಿ 101.15 ಕೋಟಿ ಲಾಭ ಗಳಿಸಿದೆ ಎಂದರು.

ಆನ್‌ಲೈನ್‌ನಲ್ಲಿ ಸೀರೆಗಳ ಖರೀದಿ ಪ್ರಕ್ರಿಯೆ ಸ್ಥಗಿತಗೊಳಿಸಿ ಮೊದಲು ಸ್ಥಳೀಯ ಗ್ರಾಹಕರಿಗೆ ಪೂರೈಕೆ ಮಾಡುವ ಚಿಂತನೆ ನಡೆಸಿದ್ದೇವೆ ಸಿಬ್ಬಂದಿಗೆ 15 ಸಾವಿರ ರೂ ಸಂಬಳ ನೀಡಲಾಗುತ್ತಿದೆ. ತರಬೇತಿ ಅವಧಿಯಲ್ಲಿ 3 ಸಾವಿರ ನೀಡಲಾಗುತ್ತಿದೆ. ಉತ್ಪಾದನೆ ಹೆಚ್ಚಿಸಲು ಸಂಯೋಜಿತ ರೇಷ್ಮೆ ನೇಯ್ಗೆ ಘಟಕ ಚನ್ನಪಟ್ಟಣದಲ್ಲಿ 20 ಇ–ಜಾಕಾರ್ಡ್ ಯಂತ್ರಗಳನ್ನು ಮತ್ತು ಸಂಯೋಜಿತ ನೇಯ್ಗೆ ಘಟಕದಲ್ಲಿಯೂ 10 ಇ–ಜಾಕಾರ್ಡ್ ಯಂತ್ರಗಳನ್ನು ಅಳವಡಿಸಲಾಗಿದೆ. ಇವುಗಳಿಂದ ಹೆಚ್ಚುವರಿಯಾಗಿ 75 ಸಾವಿರ ಮೀಟರ್ ಸೀರೆ ಉತ್ಪಾದಿಸಲು ಅವಕಾಶವಾಗುತ್ತಿದೆ.

> **ಕೆಎಸ್‌ಐಸಿ ಆವರಣದಲ್ಲಿ ಕ್ರೀಡಾಂಗಣ ನಿರ್ಮಾಣ ಉದ್ದೇಶವನ್ನು ಸರ್ಕಾರ ಕೈಬಿಟ್ಟಿದೆ. ಮುಂಚೂಣಿ ಯಲ್ಲಿ ನಿಂತು ಹೋರಾಟಕ್ಕೆ ಜಯ ತಂದುಕೊಟ್ಟ ಹಾಗೂ ಭರವಸೆ ಯಂತೆ ನಡೆದುಕೊಂಡ ಪ್ರತಿಪಕ್ಷ ನಾಯಕ ಆರ್.ಅಶೋಕ್ ಅವರಿಗೆ ಧನ್ಯವಾದಗಳು. ಸದನದಲ್ಲಿ ವಿಷಯ ಪ್ರಸ್ತಾಪಿಸಿದ ಶಾಸಕ ಶ್ರೀವತ್ಸರವರಿಗೂ ಮತ್ತು ಹೋರಾಟಕ್ಕೆ ಬಲತಂದು ಕೊಟ್ಟ ಸಂಸದ ಯದುವೀರ್ ಮಹಾರಾಜರಿಗೂ ಅನಂತ ಧನ್ಯವಾದಗಳು. ಕೆಎಸ್‌ಐಸಿ ಉಳಿಸಿ ಹೋರಾಟ ರೂಪಿಸಿದ ಯುವನಾಯಕ ಅರ್ಜುನ್ ರಮೇಶ್, ದೀಪು, ತೋಟದ ಬಸವರಾಜಪ್ಪ, ಎಲ್ಲ ಕಾರ್ಮಿಕರು ಮತ್ತು ರಾಜಕೀಯ ನಾಯಕರಿಗೂ, ಜತೆ ನಿಂತ ಮಾಧ್ಯಮಗಳು ಮತ್ತು ಮೈಸೂರಿನ ಕಥೆ ಹೇಳುವ ಧರ್ಮೇಂದ್ರ ಅವರಿಗೂ ಕೋಟಿ ಕೋಟಿ ನಮನಗಳು.**
> –ಪ್ರತಾಪ್ ಸಿಂಹ, ಮಾಜಿ ಸಂಸದರು



> **ತಿ.ನರಸೀಪುರದ ಕೆಎಸ್‌ಐಸಿ ಫಿಲೇಚರ್ ಕಾರ್ಖಾನೆಯ ಆವರಣದಲ್ಲಿ ಕ್ರೀಡಾಂಗಣ ನಿರ್ಮಾಣ ಬೇಡ ಎಂದು ಕಳೆದ ಮೂರು ವಾರಗಳಿಂದ 'ಪರಿಸರಕ್ಕಾಗಿ ನಾವು' ಸಂಘಟನೆಯು ಕಾರ್ಖಾನೆ ಕಾರ್ಮಿಕರು ಹಾಗೂ ಇತರ ಸಂಘ ಸಂಸ್ಥೆಗಳ ಜೊತೆಗೂಡಿ ಮಾಡುತ್ತಿದ್ದ ಹೋರಾಟಕ್ಕೆ ಜಯ ದೊರಕಿದೆ. ಕ್ರೀಡಾಂಗಣ ನಿರ್ಮಾಣ ಯೋಜನೆ ಕೈಬಿಡುವ ರೇಷ್ಮೆ ಸಚಿವ ಕೆ.ವೆಂಕಟೇಶ್ ಅವರ ಹೇಳಿಕೆಯನ್ನು ಸಂಘಟನೆ ಸ್ವಾಗತಿಸುತ್ತದೆ. ಆಧುನಿಕ ಯಂತ್ರೋಪಕರಣಗಳನ್ನು ಅಳವಡಿಸುವ ಮೂಲಕ ಕಾರ್ಖಾನೆಯನ್ನು ಉನ್ನತೀಕರಿಸಲು ಸರ್ಕಾರ ಮುಂದಾಗಲಿ.**
> –ಪರಶುರಾಮೇಗೌಡ, ಪ್ರಧಾನ ಕಾರ್ಯದರ್ಶಿ, 'ಪರಿಸರಕ್ಕಾಗಿ ನಾವು' ಸಂಘಟನೆ

ಮೇಕೆದಾಟು ವಿಳಂಬಕ್ಕೆ ರಾಜ್ಯ ಕಾಂಗ್ರೆಸ್ ಸರಕಾರವೇ ಕಾರಣ

ಮಾಡುವಲ್ಲಿ ರಾಜ್ಯ ಕಾಂಗ್ರೆಸ್ ಸರ್ಕಾರ ಅನೇಕ ತಪ್ಪುಗಳನ್ನು ಮಾಡಿದೆ. ಪರಿಸರಕ್ಕೆ ಧಕ್ಕೆ ತಂದಿದೆ ಹಾಗೂ ಅನೇಕ ಕಾನೂನು, ನಿಯಮಗಳನ್ನು ಉಲ್ಲಂಘನೆ ಮಾಡಿದೆ ಎಂದು ಆರೋಪಿಸಿದರು. ಬಿಜೆಪಿ ಸರ್ಕಾರದ ಅವಧಿಯಲ್ಲಿ ಈ ಯೋಜನೆಗೆ ಶಂಕುಸ್ಥಾಪನೆ ಮಾಡಲಾಗಿತ್ತು. ಆಗ ಜಗದೀಶ್ ಶೆಟ್ಟರ್ ರಾಜ್ಯದ ಮುಖ್ಯಮಂತ್ರಿ ಆಗಿದ್ದರು. ಆಗ ಯೋಜನೆಯ ಅಂದಾಜು ವೆಚ್ಚ 8,000 ಕೋಟಿ ರೂಪಾಯಿ. ಈಗ ಅದು 33,000 ಕೋಟಿ ಮೀರಿದೆ. ಈವರೆಗೂ ಒಂದು ಹನಿ ನೀರು ಕೂಡ ಹರಿದಿಲ್ಲ. ಚಿಕ್ಕಬಳ್ಳಾಪುರ, ಕೋಲಾರ, ತುಮಕೂರು ಜಿಲ್ಲೆಗಳಿಗೆ ಒಂದು ತೊಟ್ಟು ನೀರು ಹೋಗಿಲ್ಲ. ಅಷ್ಟೇ ಅಲ್ಲದೆ, ಆ ಯೋಜನೆ ಕಾರ್ಯಕಗತ ಆಗುತ್ತಿರುವ ಹಾಸನ ಜಿಲ್ಲೆಯ ಸಕಲೇಶಪುರಕ್ಕೆ ಹತ್ತಿರದಲ್ಲಿರುವ ಅರಸೀಕರೆಗೇ ನೀರು ಬಂದಿಲ್ಲ. ಈ ಬಗ್ಗೆ ನಾನು ಸಂಪುಟಗಟ್ಟಲೆ ಮಾಹಿತಿ ಇಟ್ಟುಕೊಂಡು ಮಾತನಾಡಬಲ್ಲೆ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ನಾನು ನೀರಾವರಿ ಸಚಿವನಾಗಿ, ಮುಖ್ಯಮಂತ್ರಿಯಾಗಿ, ಪ್ರಧಾನಿಯಾಗಿ ಕೆಲಸ ಮಾಡಿದ್ದೇನೆ. ನನಗೆ ಈ ಬಗ್ಗೆ ಪೂರ್ಣ ಮಾಹಿತಿ, ಅನುಭವ ಇದೆ. ಮೇಕೆದಾಟು ಯೋಜನೆಗೂ ರಾಜ್ಯ ಸರ್ಕಾರವೇ ಅಡ್ಡಿಯಾಗಿದೆ. ಈ ಯೋಜನೆ ಕಾರ್ಯಗತವಾಗುವ ಪ್ರಸ್ತಾವಿತ ಜಾಗ ನನಗೆ ಗೊತ್ತು. ಒಂದು ಕಡೆ ಆನೆ ಕಾರಿಡಾರ್, ಮತ್ತೊಂದೆಡೆ ಅರಣ್ಯ ಮತ್ತು ವನ್ಯಜೀವಿ ಸಂಪತ್ತು ಇದೆ. ಪ್ರತಿದಿನವೂ ನಡೆಯುತ್ತಿರುವ ಮಾನವ–ವನ್ಯಜೀವಿ ಸಂಘರ್ಷದಿಂದ ಅಮಾಯಕರು ಬಲಿ ಆಗುತ್ತಿದ್ದಾರೆ. ಹಾಸನ, ಶಿವಮೊಗ್ಗ, ಚಿಕ್ಕಮಗಳೂರು, ತರೀಕೆರೆ ಸೇರಿದಂತೆ ಅನೇಕ ಸ್ಥಳಗಳಲ್ಲಿ ಜನರು ಸಂಕಷ್ಟಕ್ಕೆ ಸಿಲುಕಿದ್ದಾರೆ. ಆನೆಗಳು ಬೆಳೆಗಳನ್ನು ನಾಶ ಮಾಡುತ್ತಿವೆ ಹಾಗೂ ತೋಟಗಳಲ್ಲಿ ದುಡಿಮೆ ಮಾಡುವ ರೈತರನ್ನು ಕೊಲ್ಲುತ್ತಿವೆ. ಇದನ್ನು ತಪ್ಪಿಸುವ ಕೆಲಸವನ್ನು ರಾಜ್ಯ ಸರ್ಕಾರ ಮಾಡುತ್ತಿಲ್ಲ ಎಂದು ದೂರಿದರು. ಕೋಲಾರ, ಚಿಕ್ಕಬಳ್ಳಾಪುರ ಜಿಲ್ಲೆಗಳಿಗೆ ನೀರು ಕೊಡಬೇಕು ಎಂದು ರಾಜ್ಯ ಸರ್ಕಾರ ಎತ್ತಿಹೊಳೆ ಯೋಜನೆ ರೂಪಿಸಿತು. ಆದರೆ ಈಗ ಯೋಜನೆ ಕಾರ್ಯಗತವಾಗದೇ ಆ ಜಿಲ್ಲೆಗಳಿಗೆ ಬೆಂಗಳೂರಿನ ಕೊಳಚೆ ನೀರನ್ನು ಮೂರು ಹಂತಗಳಲ್ಲಿ ಶುದ್ಧೀಕರಿಸದೆ ಹಾಗೆಯೇ ಪೂರೈಸಲಾಗುತ್ತಿದೆ. ಆ ನೀರು ಮಾನವ ಬಳಕೆಗೆ ಯೋಗ್ಯವಲ್ಲದ್ದು. ಪರಿಣಾಮವಾಗಿ ಆ ಭಾಗದಲ್ಲಿ ಬೆಳೆಯುತ್ತಿರುವ ತರಕಾರಿ ಇನ್ನಿತರ ಬೆಳೆಗಳು ವಿಷಯುಕ್ತಯಾಗುತ್ತಿವೆ. ಜನರ ಜೀವದ ಜೊತೆ ರಾಜ್ಯ ಸರ್ಕಾರ ಚೆಲ್ಲಾಟವಾಡುತ್ತಿದೆ ಎಂದು ಬೇಸರ ವ್ಯಕ್ತಪಡಿಸಿದರು. ಈ ಎರಡೂ ಜಿಲ್ಲೆಗಳು ಎದುರಿಸುತ್ತಿರುವ ಸಮಸ್ಯೆ ದಿನದಿಂದ ದಿನಕ್ಕೆ ಬಿಗಡಾಯಿಸುತ್ತಿದೆ. ಪ್ರಧಾನಿ ನರೇಂದ್ರ ಮೋದಿ ಹಾಗೂ ಕೇಂದ್ರದ ಅರಣ್ಯ, ಪರಿಸರ ಜೀವಿಶಾಸ್ತ್ರ ಖಾತೆ ಸಚಿವ ಭೂಪೇಂದ್ರ ಯಾದವ್ ಅವರು ಕೂಡಲೇ ಮಧ್ಯಪ್ರವೇಶಿಸಿ ಸಮಸ್ಯೆ ಸರಿಪಡಿಸಬೇಕು. ಇಲ್ಲವಾದರೆ ಈ ಜಿಲ್ಲೆಗಳ ಜನರು ಬಲಿಯಾಗುತ್ತಾರೆ ಎಂದು ಇದೇ ವೇಳೆ ಎಚ್ಚರಿಸಿದರು.

ನಿರಂತರ ವಿದ್ಯುತ್

ನಾವು ವಿದ್ಯುತ್ ಉತ್ಪಾದನೆಗೆ ಒತ್ತು ನೀಡುತ್ತಿರುವುದರಿಂದಲೇ ಬೇಸಿಗೆಯಲ್ಲಿ ನಮಗೆ ಸಮಸ್ಯೆ ಎದುರಾಗುತ್ತಿಲ್ಲ. ಉತ್ಪಾದನೆ ಜೊತೆಗೆ 3172 ಕಿ.ಮೀ. ಎಚ್.ಡಿ. ಮಾರ್ಗ, 3237 ಕಿಲೋ ಮೀಟಾರ್ ಎಲ್‌ಟಿ ಮಾರ್ಗದ ವಾಹಕ ಬದಲಾವಣೆ ಮಾಡಲಾಗಿದೆ ಎಂದರು. ರಾಜ್ಯದ ವಿದ್ಯುತ್ ಕಂಪನಿಗಳಿಗೆ 50,000 ವಿದ್ಯುತ್ ಪರಿವರ್ತಕಗಳ ಬೇಡಿಕೆ ಇದೆ. ಅವುಗಳಲ್ಲಿ 30,000 ಕವಿಕಾದಿಂದಲೂ ಉಳಿದ 20,000 ಟಿಸಿಗಳನ್ನು ಬೇರೆ ಸಂಸ್ಥೆಗಳಿಂದ ಖರೀದಿ ಮಾಡಲಾಗುವುದು. ರಾಜ್ಯದಲ್ಲಿ 4.50 ಲಕ್ಷ ಅಕ್ರಮ ಪಂಪ್‌ಸೆಟ್‌ಗಳಿದ್ದು, ಅದರಲ್ಲಿ 2.75 ಲಕ್ಷ ಪಂಪ್‌ಸೆಟ್‌ಗಳನ್ನು ಸಕ್ರಮ ಮಾಡಲಾಗಿದೆ. ಮುಂದಿನ ಮೂರು ತಿಂಗಳಲ್ಲಿ ಬಾಕಿ ಇರುವ ಪಂಪ್‌ಸೆಟ್‌ಗಳನ್ನು ಸಕ್ರಮಗೊಳಿಸಿ ಕೊಳ್ಳದಿದ್ದರೆ ಅಂತಹ ಸಂಪರ್ಕಗಳನ್ನು ಕಡಿತಗೊಳಿಸುವುದಾಗಿ ಎಚ್ಚರಿಸಿದರು.

ಮೈಸೂರು ಅಭಿವೃದ್ಧಿ ಪ್ರಾಧಿಕಾರದಲ್ಲಿ 220 ಕೋಟಿ ಉಳಿತಾಯ ಬಜೆಟ್

ನಿಶ್ಚಿತ ಠೇವಣಿ ರೂಪದಲ್ಲಿರುವ ಇಡಿಗಂಟು, ವಾರ್ಷಿಕ ಬಡ್ಡಿ ಸೇರಿ ಒಟ್ಟು 215 ಕೋಟಿ ನಿರೀಕ್ಷಿಸಲಾಗಿದೆ. ಪ್ರಾಧಿಕಾರದ ಬಡಾವಣೆಗಳಲ್ಲಿ ಅಭಿವೃದ್ಧಿ ಕಾರ್ಯ ಕೈಗೊಳ್ಳಲು 579.18 ಕೋಟಿ ವೆಚ್ಚ ಮಾಡಲಾಗುವುದು ಎಂದು ತಿಳಿಸಿದರು.

ಎಂಡಿಎ ಕಟ್ಟಡ ನವೀಕರಣ: ಪ್ರಾಧಿಕಾರದ ಕಚೇರಿಯು ಬಹಳ ವರ್ಷಗಳ ಕಟ್ಟಡವಾಗಿದೆ. ಈ ಹಿನ್ನೆಲೆಯಲ್ಲಿ ಇದನ್ನು 15 ಕೋಟಿ ವೆಚ್ಚದಲ್ಲಿ ನವೀಕರಣ ಮಾಡಲಾಗುವುದು.

ರಸ್ತೆ ಅಭಿವೃದ್ಧಿಗೆ ಭೂಸ್ವಾಧೀನ: ಸಾರ್ವಜನಿಕರಿಗೆ ಅನುಕೂಲವಾಗಲು ರಸ್ತೆ ಅಭಿವೃದ್ಧಿಪಡಿಸಲು ಭೂಸ್ವಾಧೀನಕ್ಕಾಗಿ 10.50 ಕೋಟಿ ಕಾಯ್ದಿರಿಸಲಾಗಿದೆ.

ಜಂಕ್ಷನ್ ಅಭಿವೃದ್ಧಿ: ಕುಡಿಯುವ ನೀರು, ಮಲಿನ ನೀರು ಮಾರ್ಗ, ಜಂಕ್ಷನ್ ಅಭಿವೃದ್ಧಿ, ಬೀದಿ ದೀಪ, ರಸ್ತೆ ಹಾಗೂ ಇತರೆ ಕಾಮಗಾರಿ ಕೈಗೊಳ್ಳಲು 71.23 ಕೋಟಿ ಕಾಯ್ದಿರಿಸಲಾಗಿದೆ.

ಕೆರೆ ಪುನರುಜ್ಜೀವನ: ಮೈಸೂರು ನಗರದ ಇಲವಾಲದ ಕೆರೆ, ಸಾಹುಕಾರ ಹುಂಡಿ ಕೆರೆ, ಬೊಮ್ಮೇನಹಳ್ಳಿ ಕೆರೆ, ಕೂರ್ಗಳ್ಳಿ ಕಲ್ಯಾಣಿ, ಭುಗತಗಳ್ಳಿ, ನಾಡನಹಳ್ಳಿ, ಚಿಕ್ಕಹಳ್ಳಿ ವ್ಯಾಪ್ತಿಯ ಕೆರೆ ಅಭಿವೃದ್ಧಿಗೆ 64.21 ಕೋಟಿ ಕಾಯ್ದಿರಿಸಲಾಗಿದೆ.

ಪೆರಿಫೆರಲ್ ರಿಂಗ್ ರಸ್ತೆಗೆ ಡಿಪಿಆರ್: ಮೈಸೂರು ನಗರದ ಹೊರ ಪರಿಧಿ ರಸ್ತೆ (ಪೆರಿಫೆರಲ್ ರಿಂಗ್ ರೋಡ್) ಯ ಡಿಪಿಆರ್ ಗೆ 7.43 ಕೋಟಿ ಕಾಯ್ದಿರಿಸಲಾಗಿದೆ

ಕಬಿನಿ ಯೋಜನೆ ಉನ್ನತೀಕರಣ: ಮೈಸೂರು ನಗರಕ್ಕೆ ಕುಡಿಯುವ ನೀರು ಸರಬರಾಜು ಮಾಡಲು ಕಬಿನಿ ನೀರು ಸರಬರಾಜು ಯೋಜನೆಯ 2 ನೇ ಹಂತದ ಉನ್ನತೀಕರಣ ಕಾಮಗಾರಿ ಕೈಗೊಳ್ಳಲು ಉದ್ದೇಶಿಸಿದ್ದು, ಇದಕ್ಕಾಗಿ 3.50 ಕೋಟಿ ಮೀಸಲಿಡಲಾಗಿದೆ ಎಂದು ರಕ್ಷಿತ್ ಮಾಹಿತಿ ನೀಡಿದರು.

ಪ್ರಾಧಿಕಾರದ ಕಾರ್ಯದರ್ಶಿ ಜಾನ್ಸನ್, ಟೌನ್ ಪ್ಲಾನಿಂಗ್ ಸದಸ್ಯ ಶಿವರಾಮಯ್ಯ, ಅಧೀಕ್ಷಕ ಅಭಿಯಂತರರಾದ ಮಂಜು, ಚೆಸ್ಕಾಂ ಚೀಫ್ ಇಂಜಿನಿಯರ್ ಸುನೀಲ್ ಕುಮಾರ್, ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ ಚೀಫ್ ಇಂಜಿನಿಯರ್ ಸುಭಾಷ್ ನಾಯಕವಾಡ, ನಗರಾಭಿವೃದ್ಧಿ ಇಲಾಖೆಯ ಜಂಟಿ ಕಾರ್ಯದರ್ಶಿ ಕೃಷ್ಣಮೂರ್ತಿ ಅವರು ಸಭೆಯಲ್ಲಿ ಉಪಸ್ಥಿತರಿದ್ದರು.

ಮುಡಾ ಹಗರಣದ ನಂತರ ಎಂಡಿಎನಲ್ಲಿ ಜನಪ್ರತಿನಿಧಿಗಳ ಸದಸ್ಯತ್ವನ್ನು ರದ್ದು ಮಾಡಲಾಗಿದೆ. ಇದರಿಂದ ಜನಪ್ರತಿನಿಧಿಗಳ ಗೈರು ಹಾಜರಿಯಲ್ಲಿ ಎರಡನೇ ಬಾರಿಗೆ ಬಜೆಟ್ ಮಂಡನೆಯಾಯಿತು.

90 ಎಕರೆಯಲ್ಲಿ ಹೊಸ ಬಡಾವಣೆ ನಿರ್ಮಾಣಕ್ಕೆ 20 ಕೋಟಿ

ಮೈಸೂರಿನ ವಿಜಯಶ್ರೀಪುರ ಹಾಗೂ ಇತರೆ ಗ್ರಾಮಗಳಲ್ಲಿ ಸುಮಾರು 90 ಎಕರೆ ಪ್ರದೇಶದಲ್ಲಿ ಹೊಸದಾಗಿ ಬಡಾವಣೆ ನಿರ್ಮಿಸಲು 20 ಕೋಟಿ ಕಾಯ್ದಿರಿಸಲಾಗಿದೆ ಎಂದು ರಕ್ಷಿತ್ ತಿಳಿಸಿದರು. ಪ್ರಾಧಿಕಾರದಿಂದ ಬಡಾವಣೆ ರಚನೆ ಮಾಡಲು ಭೂಸ್ವಾಧೀನ ಪಡಿಸಿಕೊಂಡು ಅಭಿವೃದ್ಧಿಪಡಿಸದೆ ಇರುವ ವಿಜಯಶ್ರೀಪುರ ಹಾಗೂ ಇತರೆ ಗ್ರಾಮಗಳ 90 ಎಕರೆಯಲ್ಲಿ ಹೊಸ ಬಡಾವಣೆ ನಿರ್ಮಾಣ ಮಾಡಲು ಉದ್ದೇಶಿಸಲಾಗಿದೆ ಎಂದು ಮಾಹಿತಿ ನೀಡಿದರು. ಪ್ರಾಧಿಕಾರದ ವ್ಯಾಪ್ತಿಯಲ್ಲಿ ವಾಣಿಜ್ಯ ಸಂಕೀರ್ಣ, ಕ್ರೀಡಾ ಸಂಕೀರ್ಣ ಹಾಗೂ ಇತರೆ ಅಭಿವೃದ್ಧಿ ಕಾಮಗಾರಿ ಕೈಗೊಳ್ಳಲು 31.90 ಕೋಟಿ ಮೀಸಲಿಡ ಲಾಗಿದೆ ಎಂದು ಹೇಳಿದರು. ಮೈಸೂರು ನಗರದ ಪ್ರಮುಖ ರಸ್ತೆಗಳ ವೈಟ್ ಟ್ಯಾಪಿಂಗ್‌ಗಾಗಿ ಲೋಕೋಪಯೋಗಿ ಇಲಾಖೆಗೆ ಪ್ರಾಧಿಕಾರದ ವಂತಿಕೆಯಾಗಿ 50 ಕೋಟಿ ನೀಡಲಾಗಿದೆ. ಮುಂದಿನ ದಿನಗಳಲ್ಲಿ ಹೆಚ್ಚುವರಿ 150 ಕೋಟಿ ಬಿಡುಗಡೆ ಮಾಡಲಾಗುವುದು ಎಂದು ರಕ್ಷಿತ್ ತಿಳಿಸಿದರು.

ಅಭಿವೃದ್ಧಿಗೆ 460 ಕೋಟಿ

ಸಹಭಾಗಿತ್ವದಲ್ಲಿ ಬಡಾವಣೆ ನಿರ್ಮಾಣ ಯೋಜನೆ ಕೈಗೊಳ್ಳಲು ಉದ್ದೇಶಿಸಿದ್ದು, ಸದರಿ ಯೋಜನೆಗೆ ಪ್ರಸಕ್ತ ಆರ್ಥಿಕ ವರ್ಷದಲ್ಲಿ 460 ಕೋಟಿ ರೂ. ಕಾಯ್ದಿರಿಸಲಾಗಿದೆ ಎಂದು ತಿಳಿಸಿದರು.

ಈ ವೇಳೆ ಇದೇ ವಿಚಾರವಾಗಿ ಮತ್ತಷ್ಟು ಮಾಹಿತಿ ನೀಡಿದ ಪ್ರಾಧಿಕಾರದ ಅಧ್ಯಕ್ಷ ಲಕ್ಷ್ಮಿಕಾಂತರೆಡ್ಡಿ, ಬೊಮ್ಮೇನಹಳ್ಳಿ, ಕುಮರ ಹಳ್ಳಿ ಹಾಗೂ ಇತರೆ ಗ್ರಾಮಗಳಲ್ಲಿ ರೈತರ ಭೂಮಿ ಸ್ವಾಧೀನಪಡಿಸಿ ಕೊಂಡು ಬಡಾವಣೆ ನಿರ್ಮಾಣ ಮಾಡುತ್ತಿಲ್ಲ. ನಾವು ನೀಡುವ ಪರಿಹಾರ ಕಡಿಮೆ ಎಂಬ ರೈತರ ಅಭಿಪ್ರಾಯದ ಹಿನ್ನೆಲೆಯಲ್ಲಿ ಭೂಸ್ವಾಧೀನ ಕೈಬಿಡಲಾಗಿದೆ ಎಂದರು. ಆದರೆ ಇದರ ಬದಲಾಗಿ ರೈತರ ಭೂಮಿಯನ್ನು ಪಡೆದು ಶೇಕಡ 50: 50 ಅನುಪಾತದಲ್ಲಿ ಅಭಿವೃದ್ಧಿ ಹೊಂದಿದ ನಿವೇಶನ ಗಳನ್ನು ಹಂಚಿಕೆ ಮಾಡಿಕೊಳ್ಳಲು ನಿರ್ಧರಿಸಲಾಗಿದೆ. ಉದಾಹರಣೆಗೆ ಒಂದು ಎಕರೆಯಲ್ಲಿ 30 ನಿವೇಶನಗಳಾದರೆ ಇದರಲ್ಲಿ 15 ನಿವೇಶನ ರೈತರಿಗೆ ಹಾಗೂ 15 ನಿವೇಶನ ಪ್ರಾಧಿಕಾರಕ್ಕೆ ಸಮಾನವಾಗಿ ಹಂಚಿಕೆ ಮಾಡಿಕೊಳ್ಳಲು ನಿರ್ಧರಿಸಲಾಗಿದೆ ಎಂದರು. ಭೂಸ್ವಾಧೀನಕ್ಕೆ ಪ್ರಾಧಿಕಾರ ನಯಾ ಪೈಸೆ ಖರ್ಚು ಮಾಡುವುದಿಲ್ಲ. ಆದರೆ ರೈತರಿಂದ ಪಡೆಯುವ ಭೂಮಿಯನ್ನು ನಿವೇಶನ ಗಳಾಗಿ ಪರಿವರ್ತಿಸಿ ಬಡಾವಣೆ ಅಭಿವೃದ್ಧಿ ಮಾಡಲು ಒಟ್ಟಾರೆ 470 ಕೋಟಿ ವೆಚ್ಚ ಮಾಡಲಾಗುತ್ತಿದೆ ಎಂದು ತಿಳಿಸಿದರು.

ಈ ವಿಚಾರವಾಗಿ ಈಗಾಗಲೇ ಬೊಮ್ಮೇನಹಳ್ಳಿ, ಕಮರಹಳ್ಳಿ ಹಾಗೂ ಇತರೆ ಗ್ರಾಮಗಳ ರೈತರೊಡನೆ ನಡೆಸಿರುವ ಮಾತುಕತೆ ಯಶಸ್ವಿಯಾಗಿದೆ. ಶೇಕಡ 50: 50 ಅನುಪಾತದಲ್ಲಿ ನಿವೇಶನ ಹಂಚಿಕೆ ಮಾಡಿಕೊಳ್ಳಲು ಬಹುತೇಕ ರೈತರು ಒಪ್ಪಿದ್ದಾರೆ. ಸುಮಾರು 500 ಎಕರೆ ಭೂಮಿ ಕೊಡಲು ರೈತರು ಸಮ್ಮತಿ ವ್ಯಕ್ತಪಡಿಸಿದ್ದಾರೆ ಎಂದು ಲಕ್ಷ್ಮಿಕಾಂತ ರೆಡ್ಡಿ ಮಾಹಿತಿ ನೀಡಿದರು.

ಆದರೆ ಬಡಾವಣೆ ನಿರ್ಮಾಣ ಮಾಡಲು ಕನಿಷ್ಠ ಒಂದು ಸಾವಿರ ಎಕರೆ ಅವಶ್ಯವಿದೆ. 500 ಎಕರೆ ಭೂಮಿ ನೀಡಲು ರೈತರು ಸಮ್ಮತಿಸಿದ್ದು, ಇನ್ನು ಹಲವು ರೈತರು ಬಡಾವಣೆ ನಿರ್ಮಾಣಕ್ಕೆ ಭೂಮಿ ನೀಡಲು ಮುಂದೆ ಬರುತ್ತಿದ್ದಾರೆ. ಒಟ್ಟಾರೆ ಒಂದು ಸಾವಿರ ಎಕರೆ ಭೂಮಿ ಲಭ್ಯವಾದ ನಂತರ ಬಡಾವಣೆ ನಿರ್ಮಾಣ ಕಾರ್ಯವನ್ನು ಕೈಗೆತ್ತಿಕೊಳ್ಳಲಾಗುವುದು ಎಂದು ಹೇಳಿದರು. ಪೆರಿಫೆರಲ್ ರಿಂಗ್ ರಸ್ತೆ ಡಿಪಿಆರ್ ಮಾಡಲು ಪ್ರಕ್ರಿಯೆ ಆರಂಭಿಸಲಾಗಿತ್ತು. ಡಿಪಿಆರ್‌ಗಾಗಿ 7.43 ಕೋಟಿ ಹಣ ಮೀಸಲಿಟ್ಟಿದ್ದು, ಟೆಂಡರ್ ಕರೆಯಲು ರಾಜ್ಯ ಸರ್ಕಾರದ ಅಂತಿಮ ಅನುಮೋದನೆಗೆ ಕಳುಹಿಸಲಾಗಿದೆ ಎಂದರು. ಮುಡಾ ಅವಧಿಯಲ್ಲಿ ನಡೆದಿರುವ ಹಗರಣ ಸಂಬಂಧ ಈಗಾಗಲೇ ನ್ಯಾಯಾಂಗ ತನಿಖೆಯ ವರದಿಯನ್ನು ಸರ್ಕಾರಕ್ಕೆ ಸಲ್ಲಿಸಲಾಗಿದೆ. ಈ ಸಂಬಂಧ ಸರ್ಕಾರದ ನಿರ್ದೇಶನದಂತೆ ಕ್ರಮ ಕೈಗೊಳ್ಳಲಾಗುವುದು ಎಂದು ಲಕ್ಷ್ಮಿಕಾಂತರೆಡ್ಡಿ ಅವರು ಸ್ಪಷ್ಟಪಡಿಸಿದರು.

ನೇಣು ಬಿಗಿದುಕೊಂಡು ದಂಪತಿ ಆತ್ಮಹತ್ಯೆ

ಇದರಿಂದ ಮನನೊಂದ ದಿವ್ಯ ಗಂಡ ಹೊರಗೆ ಹೋಗುತ್ತಿದ್ದಂತೆ ನೇಣಿಗೆ ಶರಣಾಗಿದ್ದಾಳೆ. ಮಧ್ಯಾಹ್ನ ಮನೆಗೆ ಬಂದ ದರ್ಶನ್ ಪತ್ನಿ ಆತ್ಮಹತ್ಯೆ ಮಾಡಿಕೊಂಡಿರುವುದನ್ನು ಕಂಡು ಆಘಾತನಾಗಿ ತನ್ನ ಎರಡು ವರ್ಷದ ಮಗುವನ್ನು ದಿಂಬಿನಿಂದ ಉಸಿರುಗಟ್ಟಿಸಿ ಸಾಯಿಸಲೆತ್ನಿಸಿದ್ದಾನೆ. ಮಗು ಅಸ್ವಸ್ಥಗೊಳ್ಳುತ್ತಿದ್ದಂತೆ ಮಗು ಸಾವನ್ನಪ್ಪಿದೆ ಎಂದು ತಿಳಿದು ಪತ್ನಿಯನ್ನು ನೇಣಿನ ಕುಣಿಕೆಯಿಂದ ಇಳಿಸಿ ತಾನು ಅದೇ ಕುಣಿಕೆಗೆ ನೇಣು ಬಿಗಿದುಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾನೆ. ಆದರೆ ಅದೃಷ್ಟವಶಾತ್ ಮಗು ಪಾರಾಗಿದೆ.

ಆತ್ಮಹತ್ಯೆಗೂ ಮುನ್ನ ದರ್ಶನ್ ತನ್ನ ಅಣ್ಣನ ಮೊಬೈಲ್ ಮೂಲಕ ಸಂಪರ್ಕಿಸಿ ನಡೆದ ವಿಷಯವನ್ನು ತಿಳಿಸಿ ನಾನು ಸಹ ಸಾಯುತ್ತಿರುವುದಾಗಿ ಹೇಳಿ ಫೋನ್ ಸಂಪರ್ಕ ಕಡಿತಗೊಳಿಸಿ ಆತ್ಮಹತ್ಯೆ ಮಾಡಿಕೊಂಡಿದ್ದಾನೆ. ಘಟನಾ ಸ್ಥಳಕ್ಕೆ ಮಂಡ್ಯ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಶೋಭಾರಾಣಿ, ಕೆ.ಆರ್.ಪೇಟೆ ಟೌನ್ ಇನ್‌ಸ್ಪೆಕ್ಟರ್ ಸುನಿಲ್‌ಕುಮಾರ್ ಭೇಟಿ ನೀಡಿ ಪರಿಶೀಲನೆ ನಡೆಸಿದರಲ್ಲದೆ ಶವವನ್ನು ಮಂಡ್ಯದ ಮಿಮ್ಸ್ ಆಸ್ಪತ್ರೆಯಲ್ಲಿ ಮರಣೋತ್ತರ ಪರೀಕ್ಷೆ ನಡೆಸಿ ವಾರಸುದಾರರಿಗೆ ಹಸ್ತಾಂತರ ಮಾಡಿದ್ದಾರೆ. ಹೊಸಹೊಟೆ ಗ್ರಾಮದಲ್ಲಿ ಈ ದಂಪತಿಯನ್ನು ಒಂದೇ ಚಿತೆಯಲ್ಲಿಟ್ಟು ಬದುಕುಳಿದಿರುವ ಅವರ ಎರಡು ವರ್ಷದ ಹೆಣ್ಣು ಮಗುವಿನ ಕೈಯಿಂದಲೇ ಅಗ್ನಿಸ್ಪರ್ಶ ಮಾಡಿಸಲಾಯಿತು. ಇವರ ಕುಟುಂಬಸ್ಥರ ಆಕ್ರಂದನ ಮುಗಿಲು ಮುಟ್ಟಿತ್ತು.

ಮುಗಿಬಿದ್ದ ಇಸ್ರೇಲ್–ಅಮೆರಿಕಾ

ಇಸ್ರೇಲ್‌ನ ಭೀಕರ ದಾಳಿ ನಡುವೆಯೇ ನಿಮ್ಮ ತಂದೆಯ ಆಶಯಗಳನ್ನು ನೀವು ಪೂರೈಸಲಿದ್ದೀರಿ. ಇರಾನ್ ಎದುರಿಸುತ್ತಿರುವ ಈ ಕಠಿಣ ಸಮಯದಲ್ಲಿ ರಷ್ಯಾ ನಿಮ್ಮೊಂದಿಗೆ ದೃಢವಾಗಿ ನಿಲ್ಲಲಿದೆ ಎಂದು ಸಂದೇಶ ರವಾನಿಸಿದ್ದಾರೆ.

ಆದರೆ ಅಮೆರಿಕ ಅಧ್ಯಕ್ಷ ಟ್ರಂಪ್, ಮೊಜ್ತಾಬಾ ಖಮೇನಿಯವರ ನೇಮಕದ ಬಗ್ಗೆ ನೇರವಾಗಿಯೇ ಅಸಮಾಧಾನ ಹೊರಹಾಕಿದ್ದಾರೆ. ನಾನು ಈ ನಿರ್ಧಾರದಿಂದ ಸಂತೋಷವಾಗಿಲ್ಲ ಎಂದು ಹೇಳುವ ಮೂಲಕ, ಇರಾನ್‌ನ ಆಂತರಿಕ ನಿರ್ಧಾರಗಳ ಮೇಲೆ ಅಮೆರಿಕದ ಪ್ರಭಾವ ಇರಲಿದೆ ಎಂಬ ಸೂಚನೆ ನೀಡಿದ್ದಾರೆ. ಅಷ್ಟೇ ಅಲ್ಲದೆ, ಎಬಿಸಿ ನ್ಯೂಸ್‌ಗೆ ನೀಡಿದ ಸಂದರ್ಶನದಲ್ಲಿ ಮತ್ತೊಂದು ಬಾಂಬ್ ಸಿಡಿಸಿರುವ ಟ್ರಂಪ್, ಇರಾನ್‌ನ ನೂತನ ನಾಯಕನಿಗೆ ನಮ್ಮ ಅನುಮೋದನೆ ಬೇಕೇ ಬೇಕು ಎಂದು ಎಚ್ಚರಿಸುವ ಪ್ರಯತ್ನ ಮಾಡಿದ್ದಾರೆ.

ಇಸ್ರೇಲ್ ದಾಳಿ: ಈ ನಡುವೆ ಇಸ್ರೇಲ್, ಇರಾನ್ ಮೇಲಿನ ದಾಳಿಯನ್ನು ಮುಂದುವರೆಸಿದೆ. ಸೋಮವಾರ ಮಧ್ಯಾಹ್ನ ಇರಾನ್ ರಾಜಧಾನಿ ಟೆಹ್ರಾನ್ ಸೇರಿದಂತೆ ಪ್ರಮುಖ ನಗರಗಳಲ್ಲಿ ಭಾರಿ ಸ್ಫೋಟದ ಸದ್ದು ಕೇಳಿಬಂದಿದೆ. ಮೊಜ್ತಾಬಾ ಖಮೇನಿ ಅಧಿಕಾರ ವಹಿಸಿಕೊಂಡ ಕೆಲವೇ ಗಂಟೆಗಳಲ್ಲಿ ಇರಾನ್ ಮೊದಲ ಹಂತದ ಕ್ಷಿಪಣಿಗಳನ್ನು ಇಸ್ರೇಲ್‌ನತ್ತ ಉಡಾಯಿಸುವ ಮೂಲಕ ಎಚ್ಚರಿಕೆ ನೀಡಿತ್ತು. ಆದರೆ ಇದಕ್ಕೆ ಪ್ರತಿಯಾಗಿ ಇಸ್ರೇಲ್ ವಾಯುಪಡೆಯು ಇರಾನ್‌ನ ಆಡಳಿತದ ಮೂಲಸೌಕರ್ಯ, ಕ್ಷಿಪಣಿ ಉಡಾವಣಾ ಕೇಂದ್ರಗಳು ಮತ್ತು ಆಂತರಿಕ ಭದ್ರತಾ ಕಮಾಂಡ್ ಸೆಂಟರ್‌ಗಳನ್ನು ಗುರಿಯಾಗಿಸಿಕೊಂಡು ಭೀಕರ ದಾಳಿ ನಡೆಸಿದೆ. ಇಸ್ಫಹಾನ್ ಮತ್ತು ಕರಾಜ್ ನಗರಗಳಲ್ಲಿನ ಸೇನಾ ನೆಲೆಗಳು ಇಸ್ರೇಲ್‌ನ ಕ್ಷಿಪಣಿಗಳಿಗೆ ತುತ್ತಾಗಿವೆ ಎಂದು ವರದಿಯಾಗಿದೆ.

ಗಲ್ಫ್ ರಾಷ್ಟ್ರಗಳಲ್ಲೂ ಭೀತಿ: ಯುದ್ಧದ ತೀವ್ರತೆ ಈಗ ಗಲ್ಫ್ ರಾಷ್ಟ್ರಗಳಿಗೂ ವ್ಯಾಪಿಸಿದ್ದು, ಖತಾರ್ ರಾಜಧಾನಿ ದೋಹಾದಲ್ಲಿ ಸ್ಫೋಟದ ಸದ್ದು ಕೇಳಿಬಂದಿದೆ ಈ ಬಗ್ಗೆ ಸಾರ್ವಜನಿಕರಲ್ಲಿ ಆತಂಕ ಹುಟ್ಟಿಸುವ ವೀಡಿಯೋ ಮತ್ತು ಫೋಟೋ ಹಂಚಿಕೊಂಡ ಆರೋಪದಡಿ 313 ಜನರನ್ನು ಬಂಧಿಸಲಾಗಿದೆ. ಯುದ್ಧ ತಾರಕ್ಕೇರುತ್ತಿರುವ ಪರಿಣಾಮ ಜಾಗತಿಕ ಆರ್ಥಿಕತೆ ಬುಡಮೇಲಾಗುವ ಆತಂಕ ಎದುರಾಗಿದೆ. ಕಚ್ಚಾ ತೈಲದ ಬೆಲೆ ಪ್ರತಿ ಬ್ಯಾರೆಲ್‌ಗೆ $100 ಗಡಿ ದಾಟಿರುವುದರಿಂದ ಪೆಟ್ರೋಲಿಂ ಉತ್ಪನ್ನಗಳ ಬೆಲೆ ಗಗನಕ್ಕೇರುವ ಆತಂಕ ಶುರುವಾಗಿದೆ.

ಮಹಿಳಾ ದಿನಾಚರಣೆ: ರಾಜಮಾತೆ ಕೆಂಪನಂಜಮ್ಮಣ್ಣಿ ಸ್ಮರಣೆ



ವೀರ ಸಾವರ್ಕರ್ ಯುವ ಬಳಗದ ವತಿಯಿಂದ ಸೋಮವಾರ ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆ ಆಚರಿಸಲಾಯಿತು.

ಮೈಸೂರು,ಮಾ.9–ವೀರ ಸಾವರ್ಕರ್ ಯುವ ಬಳಗದ ವತಿಯಿಂದ ನಗರದ ಖಾಸಗಿ ಹೋಟೆಲ್‌ನಲ್ಲಿ ಸೋಮವಾರ ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆ ಹಿನ್ನೆಲೆಯಲ್ಲಿ ಮೈಸೂರಿನ ರಾಜಮಾತೆ ಕೆಂಪನಂಜಮ್ಮಣ್ಣಿ ಅವರನ್ನು ಸ್ಮರಿಸಲಾಯಿತು.

ಭಾರತ ಮಾತೆ ಹಾಗೂ ಕೆಂಪನಂಜಮ್ಮಣ್ಣಿ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸಿ ಮಾತನಾಡಿದ ಬಿಜೆಪಿ ಸಹ ಪ್ರಭಾರಿ ಇ.ಸಿ.ನಿಂಗರಾಜೇಗೌಡ, ಮೈಸೂರು ನಗರಕ್ಕೆ ರಾಜಮಾತೆ ಕೊಡುಗೆ ಅಪಾರ. ಕೆಆರ್‌ಎಸ್ ಅಣೆಕಟ್ಟು ಕಟ್ಟುವಾಗ ಹಣಕಾಸಿನ ಕೊರತೆಯಾದಾಗ ತಮ್ಮ ಮೈ ಮೇಲಿದ್ದ ಒಡವೆ ಮಾರಿ ಅಣೆಕಟ್ಟು ಪೂರ್ಣಗೊಳ್ಳಲು ಸಹಾಯ ಮಾಡಿದ ನಮ್ಮ ಹೆಮ್ಮೆಯ ಮಹಾರಾಣಿ ಕೆಂಪ ನಂಜಮ್ಮಣ್ಣಿಯವರ ಸ್ಮರಣೆ ಮಾಡುವುದು ನಮ್ಮೆಲ್ಲರ ಆದ್ಯ ಕರ್ತವ್ಯ ಎಂದು ತಿಳಿಸಿದರು.

ಮೈಸೂರು ನಗರದ ವಿಸ್ತರಣೆ ಹಾಗೂ ಪೈಪ್‌ಗಳ ಮೂಲಕ ನೀರು ಸರಬರಾಜು ಮತ್ತು ಬೆಂಗಳೂರಿನ ವಿಕ್ಟೋರಿಯಾ ಆಸ್ಪತ್ರೆಗೆ ಶಂಕುಸ್ಥಾಪನೆ ಇವರ ಕೊಡುಗೆಗೆ ಸಾಕ್ಷಿಯಾಗಿವೆ. ಅವರು ಕಟ್ಟಾ ಹಿಂದೂ ಧರ್ಮದ ಅನುಯಾಯಿಯಾಗಿದ್ದರು, ಇಂತಹ ಮಹಾನ್ ಸಾಧಕಿಯರು ಇಂದಿನ ಮಹಿಳೆಯರಿಗೆ ಸ್ಫೂರ್ತಿದಾಯಕರು ಎಂದು ಹೇಳಿದರು.

ಈ ಸಂದರ್ಭದಲ್ಲಿ ಬಿಜೆಪಿ ಮುಖಂಡರಾದ ಪರಮೇಶ್‌ಗೌಡ, ಮುಖಂಡರಾದ ಬಾಲಣ್ಣ, ಸಂದೇಶ್, ಉಮೇಶ್, ಪ್ರಮೋದ್‌ಗೌಡ, ಭೈರಪ್ಪ, ಗಂಗಣ್ಣ, ಗೋಪಾಲ್, ಅಶ್ವಥ್, ಜಯಪ್ಪ, ಕೋ–ಆಪರೇಟಿವ್ ಬ್ಯಾಂಕ್ ನಿರ್ದೇಶಕರಾದ ವಸಂತ ಮನೀಶ್, ಚಂದ್ರಕಲಾ, ರಶ್ಮಿ, ಮಧು, ಗೀತಾ, ಒಕ್ಕಲಿಗರ ಸಂಘದ ನಿರ್ದೇಶಕರಾದ ಚೇತನ್‌ಗೌಡ, ಪ್ರವೀಣ್, ರಾಜಣ್ಣ, ವಿಜಯ್, ಅಭಿ, ವಿನೋದ, ವಿ.ಎಸ್.ಕಿರಣ್, ಬ್ರಹ್ಮಚಾರ್, ಯೋಗೇಶ್, ನಾಗೇಶ್, ಅನೋಜ್, ರಾಜೇಶ್, ಮೋಹಿತ್‌ಗೌಡ, ಚೇತನ್ ಗೌಡ ಟಿ.ಎಸ್.ಅರುಣ್, ವಿನೋದ್ ಅರಸ್ ಹಾಗೂ ಇನ್ನಿತರರು ಹಾಜರಿದ್ದರು.

ಅಗಸ್ತ್ಯ ಕ್ರೆಡಿಟ್ ಕೋ–ಆಪರೇಟಿವ್ ಸೊಸೈಟಿಯಲ್ಲಿ ಮಹಿಳಾ ದಿನಾಚರಣೆ



ಮೈಸೂರಿನ ಅಗಸ್ತ್ಯ ಕ್ರೆಡಿಟ್ ಕೋ–ಆಪರೇಟಿವ್ ಸೊಸೈಟಿಯಲ್ಲಿ ಅಂತಾರಾಷ್ಟ್ರೀಯ ಮಹಿಳಾ ದಿನ ಆಚರಿಸಲಾಯಿತು. ಸೊಸೈಟಿ ಉಪಾಧ್ಯಕ್ಷೆ ಸೌಮ್ಯ, ನಿರ್ದೇಶಕ ಮಂಡಲಿ ಸದಸ್ಯರಾದ ಪ್ರಶಾಂತ್ ತಾತಾಚಾರ್, ಬಾಲಕೃಷ್ಣ, ಪಣಿರಾಜ್, ವಿಕ್ರಂ ಅಯ್ಯಂಗಾರ್, ಮಹಿಮ, ನಾಗಶ್ರೀ, ರಾಜಮ್ಮ, ಶಾಶ್ವತಿ ನಾಯಕ ಹಾಗೂ ಪ್ರಭಾರ ಕಾರ್ಯದರ್ಶಿ ವೀಣಾ ಹಾಗೂ ಸಿಬ್ಬಂದಿ ಇನ್ನಿತರರಿದ್ದರು.

ಮಹಿಳಾ ದಿನಾಚರಣೆ; ಆತ್ಮರಕ್ಷಣಾ ತರಬೇತಿ ಕಾರ್ಯಾಗಾರ



ಮೈಸೂರಿನ ಎಸ್‌ಬಿಆರ್‌ಆರ್ ಮಹಾಜನ ಪ್ರಥಮ ದರ್ಜೆ ಕಾಲೇಜಿನಲ್ಲಿ ಅಂತಾರಾಷ್ಟ್ರೀಯ ಮಹಿಳಾ ದಿನ ಆಚರಿಸಲಾಯಿತು.

ಮೈಸೂರು,ಮಾ.9–ನಗರದ ಎಸ್‌ಬಿಆರ್‌ಆರ್ ಮಹಾಜನ ಪ್ರಥಮ ದರ್ಜೆ ಕಾಲೇಜಿನ ಸ್ಪರ್ಶ್ ಮತ್ತು ಮಹಿಳಾ ಸಬಲೀಕರಣ ಸಮಿತಿ ಹಾಗೂ ಐಕ್ಯೂಎಸಿ ವತಿಯಿಂದ ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ ಅಂಗವಾಗಿ 'ಸ್ವತಂತ್ರದೊಂದಿಗೆ ಆಧುನಿಕ ಜಗತ್ತನ್ನು ಮುನ್ನಡೆಸುವುದು ವಿಷಯ ಕುರಿತು ವಿಶೇಷ ಉಪನ್ಯಾಸ ಮತ್ತು ಆತ್ಮರಕ್ಷಣಾ ತರಬೇತಿ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು.

ಮುಖ್ಯ ಸಂಪನ್ಮೂಲ ವ್ಯಕ್ತಿಯಾಗಿ ಆಗಮಿಸಿದ್ದ ಸೇಂಟ್ ಫಿಲೋಮಿನಾ ಕಾಲೇಜಿನ ಸಮಾಜ ಕಾರ್ಯ ವಿಭಾಗದ ಮುಖ್ಯಸ್ಥರಾದ ಡಾ.ನೂರ್ ಮುಬಾಶೀರ್ ಮಾತನಾಡಿ, ಆಧುನಿಕ ಜಗತ್ತಿನಲ್ಲಿ ಮಹಿಳೆಯರ ಸ್ವಾತಂತ್ರ್ಯವು ಕೇವಲ ಹಕ್ಕಲ್ಲ, ಅದು ಸಮಾಜದ ಪ್ರಗತಿಯ ಅಡಿಪಾಯ. ಮಹಿಳೆಯರು ದಯೆ ಮತ್ತು ಮಾನವೀಯತೆಯೊಂದಿಗೆ ತಮ್ಮ ಸ್ವಾತಂತ್ರ್ಯವನ್ನು ಚಲಾಯಿಸಿದಾಗ ಸಮಾಜದಲ್ಲಿ ಸಕಾರಾತ್ಮಕ ಬದಲಾವಣೆ ಸಾಧ್ಯ ಎಂದರು. ಮಹಿಳೆಯರಿಗೆ ಆತ್ಮರಕ್ಷಣಾ ಕಲಿಕೆ ಮಹತ್ವದ ಬಗ್ಗೆ ಒತ್ತಿ ಹೇಳಿದ ಅವರು, ಇದು ಕೇವಲ ದೈಹಿಕ ಕಸರತ್ತಲ್ಲ, ಬದಲಾಗಿ ಆತ್ಮರಕ್ಷಣೆ ಮತ್ತು ಆತ್ಮವಿಶ್ವಾಸದ ಸಂಕೇತವಾಗಿದೆ ಎಂದರು. ನಂತರ ವಿದ್ಯಾರ್ಥಿನಿಯರಿಗಾಗಿ ಕರಾಟೆ ಪ್ರಾತ್ಯಕ್ಷಿಕೆ ಹಮ್ಮಿಕೊಳ್ಳಲಾಗಿತ್ತು.

ಶ್ರೀಗಳಿಂದ ಆಶೀರ್ವಾದ...



ಜೆಡಿಎಸ್‌ನ ಮೈಸೂರು ನೂತನ ಜಿಲ್ಲಾಧ್ಯಕ್ಷರಾಗಿ ನೇಮಕಗೊಂಡ ಮಾಜಿ ಶಾಸಕ ಅಶ್ವಿನ್‌ಕುಮಾರ್, ನಗರ ಅಧ್ಯಕ್ಷರಾಗಿ ನೇಮಕಗೊಂಡ ಪಾಲಿಕೆ ಮಾಜಿ ಸದಸ್ಯ ಎಸ್‌ಬಿಎಂ ಮಂಜು ಅವರನ್ನು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಆಶೀರ್ವದಿಸಿದರು. ಈ ಸಂದರ್ಭದಲ್ಲಿ ನರಸೀಪುರ ಕ್ಷೇತ್ರದ ತಾಲೂಕು ಅಧ್ಯಕ್ಷ ಚಿನ್ನಸ್ವಾಮಿ, ಮುಖಂಡರಾದ ಮಾದೇವಸ್ವಾಮಿ, ಸಿದ್ದಪ್ಪ, ರಮೇಶ್ ಇತರರಿದ್ದರು.

ಇಂದು ವಿವಿಧೆಡೆ ವಿದ್ಯುತ್ ವ್ಯತ್ಯಯ

ಮೈಸೂರು,ಮಾ.9–ವಿ.ವಿ.ಮೊಹಲ್ಲಾ ಉಪ ವಿಭಾಗ ವ್ಯಾಪ್ತಿಯಲ್ಲಿ ಭೂಗತ ಕೇಬಲ್ ಕೆಲಸದ ನಿಮಿತ್ತ ಮಾ.10ರಂದು ಬೆಳಗ್ಗೆ 10ರಿಂದ ಸಂಜೆ 5ರವರೆಗೆ ಹೆಬ್ಬಾಳ್ 2ನೇ ಹಂತ, 25/1 ಯಿಂದ 25/10 ಕ್ರಾಸ್ ಕೆ.ಐ.ಎ.ಡಿ.ಬಿ ಲೇಔಟ್ ಏರಿಯಾ, ಲಕ್ಷ್ಮಿಕಾಂತ ನಗರ, ನಿಸರ್ಗ ಲೇಔಟ್ ಹಾಗೂ ಸುತ್ತಮುತ್ತಲಿನ ಪ್ರದೇಶಗಳಲ್ಲಿ ವಿದ್ಯುತ್ ಸರಬರಾಜುವಿನಲ್ಲಿ ವ್ಯತ್ಯಯವಾಗಲಿದೆ ಎಂದು ಸೆಸ್ಕ್ ಪ್ರಕಟಣೆ ತಿಳಿಸಿದೆ.

ಬಾಲಕಿಯ ಗೂಡು ಸೇರಿಸಿದ ಮೈಸೂರು ಮಕ್ಕಳ ರಕ್ಷಣಾ ಘಟಕ

ಮೈಸೂರು,ಮಾ.9(ಎಂಕೆ)–ತನ್ನ ನೆಲೆಯ ಅರಿವಿಲ್ಲದೆ ಕಳೆದ 7 ವರ್ಷಗಳಿಂದ ಬಾಲಮಂದಿರದಲ್ಲಿದ್ದ 14 ವರ್ಷದ ಬಾಲಕಿಯನ್ನು ಪೋಷಕರ ಮಡಿಲಿಗೆ ಸೇರಿಸುವಲ್ಲಿ ಮೈಸೂರು ಜಿಲ್ಲಾ ಮಕ್ಕಳ ರಕ್ಷಣಾ ಘಟಕ ಯಶಸ್ವಿಯಾಗಿದೆ. ಪೋಷಕರಿಂದ ಬೇರ್ಪಟ್ಟು ಮೈಸೂರಿಗೆ ಬಂದಿದ್ದ ಬಾಲಕಿ, ಗ್ರಾಮಾಂತರ ಬಸ್ ನಿಲ್ದಾಣ ವ್ಯಾಪ್ತಿಯ ಪ್ರದೇಶದಲ್ಲಿ ಭಿಕ್ಷಾಟನೆ ಮಾಡುತ್ತಿದ್ದನ್ನು ಗಮನಿಸಿದ್ದ ಮೈಸೂರಿನ ಲಷ್ಕರ್ ಠಾಣೆ ಪೊಲೀಸರು ಬಾಲಕಿಯನ್ನು ರಕ್ಷಿಸಿ ಬಾಲಕಿಯರ ಬಾಲ ಮಂದಿರದ ವಶಕ್ಕೆ ನೀಡಿದ್ದರು.

ಸಂತ್ರಸ್ತ ಬಾಲಕಿಯ ಪೋಷಕರ ಪತ್ತೆ ಹಚ್ಚುವ ಕಾರ್ಯ ನಡೆಸಿದ ಪೊಲೀಸರಿಗೆ ಯಾವುದೇ ಸುಳಿವು ಸಿಗದ ಕಾರಣ ಬಾಲಕಿಯನ್ನು ಬಾಲಕಿಯರ ಬಾಲ ಮಂದಿರದಲ್ಲಿಯೇ ಇರಿಸಿ, ಶಿಕ್ಷಣ ವ್ಯವಸ್ಥೆ ಕಲ್ಪಿಸಲಾಗಿತ್ತು. ಸರಕಾರಿ ಶಾಲೆಯಲ್ಲಿ 9ನೇ ತರಗತಿಯನ್ನು ಬಾಲಕಿ ಓದುತ್ತಿದ್ದಳು. ಮತ್ತೊಂದೆಡೆ ಸತತ 7 ವರ್ಷ ತನ್ನ ಮನೆ ಎಲ್ಲಿದೆ ಎಂಬುದನ್ನು ಜ್ಞಾಪಿಸಿಕೊಳ್ಳಲು ಸಾಧ್ಯವಾಗದೇ ಪರಿತಪಿಸುತ್ತಿದ್ದ ಬಾಲಕಿಯ ಸ್ಥಳ ಮತ್ತು ಆಕೆಯ ಪೋಷಕರ ಪತ್ತೆಗೆ ಪ್ರಯತ್ನ ಮಾಡುತ್ತಿದ್ದ ಜಿಲ್ಲಾ ಮಕ್ಕಳ ರಕ್ಷಣಾ ಘಟಕದ ಅಧಿಕಾರಿಗಳು, ಬಾಲಕಿ ನೀಡಿದ ಸಣ್ಣ ಸುಳಿವಿನ ಮೇರೆಗೆ ಬಾಲಕಿಯ ವಿಳಾಸವನ್ನು ಪತ್ತೆ ಹಚ್ಚಿ ಪೋಷಕರ ಮಡಿಲಿಗೆ ಆಕೆಯನ್ನು ಸೇರಿಸಿದ್ದಾರೆ.



ಸಹಜವಾಗಿಯೇ ಎಲ್ಲಾ ಮಕ್ಕಳಂತಿದ್ದ ಬಾಲಕಿಗೆ ತಾನಿದ್ದ ಊರು ಮತ್ತು ಮನೆ ವಿಳಾಸ ಹೇಳುವುದೇ ಸವಾಲಾಗಿತ್ತು. ಈ ಬಗ್ಗೆ ಹಲವು ಬಾರಿ ಮಕ್ಕಳ ಕಲ್ಯಾಣ ಸಮಿತಿಯವರು ಕೌನ್ಸೆಲಿಂಗ್ ನಡೆಸಿದರೂ ಯಾವುದೇ ಪ್ರಯೋಜನವಾಗಿರಲಿಲ್ಲ. ತನ್ನ ಮತ್ತು ಅಪ್ಪ–ಅಮ್ಮನ ಹೆಸರು ಬಿಟ್ಟರೆ ಮನೆ ಎಲ್ಲಿದೆ ಎಂಬುದೇ ಬಾಲಕಿಯ ಸ್ಮರಣೆಯಲ್ಲಿ ಇರಲಿಲ್ಲ. ಆದರೆ, ವಾರದ ಹಿಂದೆ ನಡೆದ ಆಪ್ತ ಸಮಾಲೋಚನೆಯಲ್ಲಿ ಬಾಲಕಿ ಕೆಂಗೇರಿಯಲ್ಲಿ ಮನೆಯಿದ್ದು, ಮನೆ ಬಳಿ ಮಸೀದಿ ಇತ್ತು ಎಂಬ ಅಂಶವನ್ನು ಹೇಳಿದ್ದಾಳೆ.

ತಕ್ಷಣವೇ ಕಾರ್ಯ ಪ್ರವೃತ್ತರಾದ ಜಿಲ್ಲಾ ಮಕ್ಕಳ ರಕ್ಷಣಾ ಘಟಕದ ಅಧಿಕಾರಿಗಳು, ಅಂಗನವಾಡಿ ಕಾರ್ಯಕರ್ತರು ಮತ್ತು ಸಿಬ್ಬಂದಿ ಮೂಲಕ ಕೆಂಗೇರಿಯಲ್ಲಿರುವ ಮಸೀದಿ ಆಸುಪಾಸಿ ನಲ್ಲಿರುವ ಮನೆಗಳಿಗೆ ಭೇಟಿ ಮಾಡಿ ಬಾಲಕಿ ಮತ್ತು ಆಕೆಯ ಪೋಷಕರ ಬಗ್ಗೆ ವಿಚಾರಿಸಿದಾಗ ಬಾಲಕಿಯ ಪೋಷಕರು ಪತ್ತೆಯಾದರು ಎಂದು ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿ ಎನ್.ಟಿ.ಯೋಗೇಶ 'ಮೈಸೂರು ಮಿತ್ರ'ನಿಗೆ ತಿಳಿಸಿದರು.

ಎಲ್‌ಪಿಜಿ ಸಿಲಿಂಡರ್ ದರ ಏರಿಕೆಗೆ ಸಿಪಿಐ(ಎಂ) ಖಂಡನೆ

ಮೈಸೂರು,ಮಾ.9(ಎಂಕೆ)–ಗೃಹ ಬಳಕೆ ಎಲ್‌ಪಿಜಿ ಸಿಲಿಂಡರ್‌ಗಳ ಬೆಲೆ ಏರಿಕೆಯನ್ನು ಭಾರತ ಕಮ್ಯೂನಿಸ್ಟ್ ಪಕ್ಷ–ಸಿಪಿಐ (ಮಾರ್ಕ್ಸ್‌ವಾದ) ತೀವ್ರವಾಗಿ ಖಂಡಿಸಿದೆ.



ಗೃಹ ಬಳಕೆ ಗ್ಯಾಸ್ ಸಿಲಿಂಡರ್‌ಗಳಿಗೆ 60 ರೂ. ಹೆಚ್ಚಿಸಿರುವುದು ಉಜ್ವಲ ಯೋಜನೆಯ ಬಡ ಫಲಾನುಭವಿಗಳಿಗೆ ಹೊರೆಯಾಗಿದೆ. ಅಲ್ಲದೆ ವಾಣಿಜ್ಯ ಸಿಲಿಂಡರ್‌ಗಳಿಗೆ 114.50 ರೂ. ಏರಿಕೆಯಿಂದ ಗ್ರಾಹಕರು ಮತ್ತು ಉದ್ಯಮಿಗಳಿಗೆ ಆರ್ಥಿಕವಾಗಿ ಹೊಡೆತ ಬೀಳಲಿದೆ. ಈಗಾಗಲೇ ನಿರಂತರ ಬೆಲೆ ಏರಿಕೆಯಿಂದ ತತ್ತರಿಸಿವ ಮಧ್ಯಮ ವರ್ಗದ ಮೇಲೆ ಇನ್ನಷ್ಟು ಹೊರೆ ಬೀಳಲಿದೆ ಎಂದು ಕಳವಳ ವ್ಯಕ್ತಪಡಿಸಿದೆ.

ಪಶ್ಚಿಮ ಏಷ್ಯಾದಲ್ಲಿನ ಯುದ್ಧ ಸಂಘರ್ಷವನ್ನು ಉಲ್ಲೇಖಿಸುವ ಮೂಲಕ ಗ್ಯಾಸ್ ಸಿಲಿಂಡರ್ ಬೆಲೆ ಏರಿಕೆಯನ್ನು ಸಮರ್ಥಿಸಿಕೊಂಡಿರುವ ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಕೇಂದ್ರ ಸರ್ಕಾರ, ತನ್ನ ವಿಫಲತೆಗಳನ್ನು ಮುಚ್ಚಿಕೊಳ್ಳಲು ಮಾಡಿರುವ ಕಸರತ್ತೆ ಹೊರತು ಬೇರೇನೂ ಅಲ್ಲ.

ಅಮೆರಿಕಾ ಅಧ್ಯಕ್ಷ ಟ್ರಂಪ್ ಆಡಳಿತ ಮತ್ತು ಯುದ್ಧ ನೀತಿಗಳ ಮುಂದೆ, ಕೇಂದ್ರ ಸರ್ಕಾರ ದೇಶದ ಜನರ ಹಿತಾಸಕ್ತಿಗಳನ್ನು ನಿರ್ಲಕ್ಷಿಸಿ ಜಾಗತಿಕ ಯಜಮಾನಿಕೆಯನ್ನು ಪೂರೈಸಲು ಶರಣಾಗಿದೆ. ದೇಶದ ಜನರ ಹಿತಕಾಯುವ ಬದ್ಧತೆ ಇದ್ದರೆ ಕೇಂದ್ರ ಸರ್ಕಾರ, ಏರಿಕೆ ಮಾಡಿರುವ ಎಲ್‌ಪಿಜಿ ಸಿಲಿಂಡರ್ ಬೆಲೆ ಕಡಿಮೆ ಮಾಡಬೇಕು. ಇಲ್ಲವೇ ಹೋರಾಟ ನಡೆಸಲಾಗುವುದು ಎಂದು ಸಿಪಿಐ(ಎಂ) ಮೈಸೂರು ಜಿಲ್ಲಾ ಸಮಿತಿ ಪತ್ರಿಕಾ ಪ್ರಕಟಣೆ ಮೂಲಕ ಆಗ್ರಹಿಸಿದೆ.

ಕಲ್ಪನೆಗಳು ಸಾಯಲಿ, ಕನಸುಗಳು ಸಾಯಬಾರದು

ಸ್ಪರ್ಧಾತ್ಮಕ ಪರೀಕ್ಷೆ ಸಂವಾದದಲ್ಲಿ ಸೊಸ್ಲೆ ಅಭಿಪ್ರಾಯ



ಮೈಸೂರು ವಿವಿಯ ಮಾನಸಗಂಗೋತ್ರಿಯ ಇಎಂಎಂಆರ್‌ಸಿ ಸಭಾಂಗಣದಲ್ಲಿ ಸ್ಪರ್ಧಾತ್ಮಕ ಪರೀಕ್ಷೆ ಕುರಿತು ವಿದ್ಯಾರ್ಥಿಗಳೊಂದಿಗೆ ಸಂವಾದ ನಡೆಸಲಾಯಿತು.

ಮೈಸೂರು, ಮಾ.9(ಜಿಎ)–ಬಡತನದ ಹಿನ್ನೆಲೆಯಿಂದ ಬಂದವರಿಗೆ ಶಿಕ್ಷಣವೇ ಪೂರಕ. ಶಿಕ್ಷಣವಿದ್ದರೆ ಬಡತನದಿಂದ ಹೊರಬರಲು ಸಾಧ್ಯ ಎಂದ ಜಿಎಸ್‌ಟಿ ಉಪ ಆಯುಕ್ತ ಮಂಜುನಾಥ್ ಸೊಸ್ಲೆ ಅವರು ಕಲ್ಪನೆಗಳು ಸಾಯಬೇಕು. ಕನಸುಗಳ ಸಾಯಬಾರದು ಎಂದರು.

ಮೈಸೂರಿನ ಮಾನಸಗಂಗೋತ್ರಿಯ ಇಎಂಎಂಆರ್‌ಸಿ ಸಭಾಂಗಣದಲ್ಲಿ ಅರಿವಿನ ಚಾವಡಿ, ಸಂಶೋಧಕರ ಸಂಘ, ದಲಿತ ವಿದ್ಯಾರ್ಥಿ ಒಕ್ಕೂಟ ಹಾಗೂ ಉಳುಮೆ ಪ್ರತಿಷ್ಠಾನದ ಸಹಯೋಗದಲ್ಲಿ ಸೋಮವಾರ ನಡೆದ ಸ್ಪರ್ಧಾತ್ಮಕ ಪರೀಕ್ಷೆ ಕುರಿತು ವಿದ್ಯಾರ್ಥಿಗಳೊಡನೆ ಸಂವಾದ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ನಮ್ಮ ಆತ್ಮಸಾಕ್ಷಿ ಅನುಗುಣವಾಗಿ ಪ್ರಯತ್ನಗಳನ್ನು ಮಾಡಬೇಕು. ಅದೇ ಯಶಸ್ಸಿನ ಗುಟ್ಟು, ವಿದ್ಯಾರ್ಥಿಗಳು ಉತ್ತಮ ಅಧಿಕಾರಿಯಾಗಬೇಕು ಎಂದು ಕನಸು ಕಾಣುತ್ತಿದ್ದರೆ, ಸಮಾಜದಲ್ಲಿ ಗಣ್ಯವ್ಯಕ್ತಿಯಾಗಿ ನಿಲ್ಲಬೇಕು ಎಂದುಕೊಂಡರೆ ನಮಗೆ ನಾವೇ ಸುಳ್ಳು ಹೇಳಿಕೊಳ್ಳುವುದನ್ನು ಬಿಡಬೇಕು. ಇದು ನನ್ನ ಕೈಯಿಂದ ಆಗದು ಎಂಬ ಮನಸ್ಥಿತಿಯಿಂದ ಹೊರಬರಬೇಕು ಎಂದರು.

ನಮ್ಮ ಕಲ್ಪನೆಗಳಲ್ಲಿ ಸಾಯಬೇಕೆ ಹೊರತು ಕನಸುಗಳನ್ನು ಹೊತ್ತುಕೊಂಡು ಸಾಯಬಾರದು. ನಿರಂತರ ಅಭ್ಯಾಸ, ಶ್ರಮ, ಸಮರ್ಪಣಾ ಮನೋಭಾವದಿಂದ ಸ್ಪರ್ಧಾತ್ಮಕ ಪರೀಕ್ಷೆಗಳಲ್ಲಿ ಯಶಸ್ಸನ್ನು ಕಾಣಬಹುದು ಎಂದು ತಿಳಿಸಿದರು.

ಅರಿವಿನ ಚಾವಡಿ ಟ್ರಸ್ಟ್‌ನ ಟಿ.ಜೆ. ಅವಿನಾಶ್ ಮಾತನಾಡಿ,ಸಮಾಜದ ಹಿತ ದೃಷ್ಟಿಯಿಂದ ಪ್ರಶ್ನೆ ಕೇಳುವ ಮನೋಭಾವನೆ ರೂಢಿಸಿಕೊಳ್ಳಬೇಕು. ಸಾಮೂಹಿಕವಾಗಿ ಕೆಲಸ ಮಾಡಬೇಕು ಎಂದು ಡಾ.ಅಂಬೇಡ್ಕರ್ ಹೇಳುತ್ತಿರುವುದು ಮತ್ತೆ ಮತ್ತೆ ನೆನಪಾಗುತ್ತಿದೆ. ಜ್ಞಾನ ಸಂಪಾದಿಸಿಕೊಂಡು ಬದಲಾವಣೆಯಾದ ನಂತರ ಸವಾಲುಗಳನ್ನು ಎದುರಿಸುವ ಧೈರ್ಯ ಬೆಳೆಸಿಕೊಳ್ಳಬೇಕು. ಇತ್ತೀಚಿನ ದಿನಗಳಲ್ಲಿ ಪ್ರಶ್ನೆಗಳನ್ನು ಮಾಡುವುದನ್ನೇ ಮರೆಯುತ್ತಿದ್ದೇವೆ ಎಂದರು. ಕಾರ್ಯಕ್ರಮದಲ್ಲಿ ಸಾಮಾಜಿಕ ಕಾರ್ಯಕರ್ತರಾದ ಅಹಿಂದ ಜವರಪ್ಪ, ಸಂಶೋಧಕರ ಸಂಘದ ಅಧ್ಯಕ್ಷ ವರಹಳ್ಳಿ ಆನಂದ್, ದಲಿತ ವಿದ್ಯಾರ್ಥಿ ಒಕ್ಕೂಟದ ಅಧ್ಯಕ್ಷ ಗಜೇಂದ್ರ, ಸಂಶೋಧನ ಸಂಘದ ಗೌರವಾಧ್ಯಕ್ಷ ಕಲ್ಲಹಳ್ಳಿ ಕುಮಾರ್ ಇದ್ದರು.

ಕೆ.ಆರ್.ಆಸ್ಪತ್ರೆಯಲ್ಲಿ 100 ಹಾಸಿಗೆವುಳ್ಳ ಐಸಿಯು ಘಟಕ ಸ್ಥಾಪಿಸಿ

ವಿಧಾನಪರಿಷತ್‌ನಲ್ಲಿ ಡಾ.ಶಿವಕುಮಾರ್ ಆಗ್ರಹ

ಬೆಂಗಳೂರು,ಮಾ.9(ಬಿಎಲ್‌ಯು)–ಮೈಸೂರಿನ ಕೆ.ಆರ್.ಆಸ್ಪತ್ರೆಯಲ್ಲಿ 100 ಹಾಸಿಗೆವುಳ್ಳ ಐಸಿಯು ಘಟಕ ಸ್ಥಾಪಿಸುವಂತೆ ವಿಧಾನಪರಿಷತ್ ಸದಸ್ಯ ಡಾ.ಕೆ.ಶಿವಕುಮಾರ್, ರಾಜ್ಯ ಸರ್ಕಾರವನ್ನು ಆಗ್ರಹಿಸಿದ್ದಾರೆ.

ವಿಧಾನ ಪರಿಷತ್‌ನಲ್ಲಿ ಮಾತನಾಡಿದ ಅವರು, ಮೈಸೂರು, ಮಂಡ್ಯ, ಚಾಮರಾಜನಗರ, ಹಾಸನ ಸೇರಿದಂತೆ ಸುತ್ತಮುತ್ತಲಿನ ರೋಗಿಗಳು ಕೆ.ಆರ್.ಆಸ್ಪತ್ರೆಗೆ ಹೆಚ್ಚಾಗಿ ಬರುತ್ತಾರೆ. ಈಗ 50 ಹಾಸಿಗೆಯ ಐಸಿಯು ಮಾತ್ರ ಇದ್ದು, ತುರ್ತು ಚಿಕಿತ್ಸೆಗಾಗಿ ರೋಗಿಗಳು ಪರದಾಡುವಂತಾಗಿದೆ ಎಂದು ಸರ್ಕಾರಕ್ಕೆ ಮನವರಿಕೆ ಮಾಡಿಕೊಟ್ಟರು.

ಚೆಲುವಾಂಬ ತಾಯಿ ಮತ್ತು ಮಕ್ಕಳ ಆಸ್ಪತ್ರೆಯಲ್ಲಿ ಕೂಡ ಹಾಸಿಗೆಗಳ ಕೊರತೆ ಇದ್ದು, ಒಂದು ಹಾಸಿಗೆಯಲ್ಲಿ ಎರಡು ಮಕ್ಕಳನ್ನು ಮಲಗಿಸುತ್ತಿದ್ದಾರೆ. ಈ ಹಿನ್ನೆಲೆಯಲ್ಲಿ ಈ ಎರಡೂ ಆಸ್ಪತ್ರೆಯಲ್ಲೂ 100 ಹಾಸಿಗೆವುಳ್ಳ ಐಸಿಯು ಘಟಕ ಅತ್ಯವಶ್ಯವಾಗಿದೆ ಎಂದು ಅಭಿಪ್ರಾಯಪಟ್ಟರು. ಕೆ.ಆರ್.ಆಸ್ಪತ್ರೆಯಲ್ಲಿ 37 ವಿಭಾಗಗಳಿದ್ದು, ಡಯಾಲಿಸಿಸ್ ಸೇವೆಗೆ ತಂತ್ರಜ್ಞರ ಕೊರತೆ ಇದೆ. ಈ ಹಿನ್ನೆಲೆಯಲ್ಲಿ ಖಾಲಿ ಇರುವ 117 ಹುದ್ದೆಗಳನ್ನು ಭರ್ತಿ ಮಾಡಿ ರೋಗಿಗಳಿಗೆ ಅನುಕೂಲ ಮಾಡಿಕೊಡುವಂತೆ ಸರ್ಕಾರಕ್ಕೆ ಮನವಿ ಮಾಡಿದರು.



ಡಾ.ಶಿವಕುಮಾರ್

ಈ ಕುರಿತು ಪ್ರತಿಕ್ರಿಯೆ ನೀಡಿದ ವೈದ್ಯಕೀಯ ಶಿಕ್ಷಣ ಸಚಿವ ಡಾ.ಶರಣ ಪ್ರಕಾಶ್ ಆರ್.ಪಾಟೀಲ್, 100 ಹಾಸಿಗೆವುಳ್ಳ ಐಸಿಯು ಘಟಕ ಸ್ಥಾಪನೆಗೆ ಕ್ರಮ ಕೈಗೊಳ್ಳಲಾಗುವುದು ಎಂದು ಭರವಸೆ ನೀಡಿದರು.

ಶೀಘ್ರದಲ್ಲೇ ಇನ್ಸ್ಟಿಟ್ಯೂಟ್ ಆಫ್ ನೆಫ್ರಾಲಜಿಯ 100 ಹಾಸಿಗೆವುಳ್ಳ ಶಾಖೆ ನಿರ್ಮಿಸಲಾಗುತ್ತಿದೆ ಎಂದು ಮಾಹಿತಿ ನೀಡಿದರು. ಒಳ ಮೀಸಲಾತಿ ಸಮಸ್ಯೆ ನಿವಾರಣೆ ಕುರಿತು ಸಚಿವ ಸಂಪುಟದಲ್ಲಿ ಚರ್ಚಿಸಿ ತೀರ್ಮಾನ ಕೈಗೊಳ್ಳಲಾಗಿದೆ. ಈ ಹಿನ್ನೆಲೆಯಲ್ಲಿ ಖಾಲಿ ಇರುವ ಹುದ್ದೆಗಳನ್ನು ಶೀಘ್ರದಲ್ಲೆ ಭರ್ತಿ ಮಾಡಲಾಗುವುದು ಎಂದು ಶರಣ ಪ್ರಕಾಶ್ ಪಾಟೀಲ್ ಭರವಸೆ ನೀಡಿದರು.

ನಾಳೆ ಲೋಕಾಯುಕ್ತ ದೂರು ಸ್ವೀಕಾರ

ಮೈಸೂರು: ಕರ್ನಾಟಕ ಲೋಕಾಯುಕ್ತ ಮೈಸೂರು ವಿಭಾಗ ಅಧಿಕಾರಿಗಳಿಂದ ಮಾ.11ರಂದು ಬೆಳಗ್ಗೆ 11ರಿಂದ ಮಧ್ಯಾಹ್ನ 1ರವರೆಗೆ ಮೈಸೂರು ಜಿಲ್ಲೆ, ಟಿ.ನರಸೀಪುರ ತಾಪಂ ಕಚೇರಿ ಸಭಾಂಗಣದಲ್ಲಿ ದೂರು ಸ್ವೀಕರಿಸುವ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ. ಸರ್ಕಾರಿ ಕಚೇರಿಗಳಲ್ಲಿ ಸಾರ್ವಜನಿಕರ ಅಧಿಕೃತ ಕೆಲಸಗಳ ಅನಗತ್ಯ ವಿಳಂಬ, ಲಂಚದ ಹಣದ ಬೇಡಿಕೆ ಇತ್ಯಾದಿ ತೊಂದರೆಗಳನ್ನು ನೀಡುತ್ತಿರುವ ಸಾರ್ವಜನಿಕ, ಸರ್ಕಾರಿ ಅಧಿಕಾರಿ, ನೌಕರರ ವಿರುದ್ಧ ಅಗತ್ಯ ದಾಖಲಾತಿಗಳೊಡನೆ ಸಾರ್ವಜನಿಕರು ದೂರು ನೀಡಬಹುದು ಎಂದು ಲೋಕಾಯುಕ್ತ ಪೊಲೀಸ್ ಅಧೀಕ್ಷಕ ಉದೇಶ ತಿಳಿಸಿದ್ದಾರೆ.



ಶಾಲೆಗೆ ಬೀರು ಕೊಡುಗೆ...

ಮೈಸೂರು ತಾಲೂಕು ಜಯಪುರ ಹೋಬಳಿಯ ಚುಂಚರಾಯನಹುಂಡಿ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಗೆ ಸಮಾಜ ಸೇವಕ ಎಸ್.ಶ್ರೀಕಾಂತ್ 20 ಸಾವಿರ ರೂ. ಮೌಲ್ಯದ ಬೀರುವನ್ನು ಶಾಲೆಗೆ ಕೊಡುಗೆ ನೀಡಿದರು. ಈ ವೇಳೆ ಮುಖ್ಯಶಿಕ್ಷಕಿ ಉಮಾದೇವಿ, ಸಹಶಿಕ್ಷಕರಾದ ಆಲಿಷಾ, ರೇಣುಕಾ, ಅಡುಗೆ ಸಿಬ್ಬಂದಿ ಹಾಗೂ ವಿದ್ಯಾರ್ಥಿಗಳು ಇದ್ದರು.

ಬೀಳ್ಕೊಡುಗೆ...



ಮೈಸೂರಿನ ಭಾರತೀಯ ವಿದ್ಯಾಭವನದಲ್ಲಿ ಸರಸ್ವತಿ ಪೂಜೆ ನೆರವೇರಿಸುವುದರ ಮೂಲಕ ಎಸ್‌ಎಸ್‌ಎಲ್‌ಸಿ ಪರೀಕ್ಷೆಗೆ ಹಾಜರಾಗುತ್ತಿರುವ ವಿದ್ಯಾರ್ಥಿಗಳಿಗೆ ಬೀಳ್ಕೊಡುಗೆ ನೀಡಲಾಯಿತು. ವಿದ್ಯಾರ್ಥಿಗಳೊಂದಿಗೆ ಭಾರತೀಯ ವಿದ್ಯಾಭವನ ಮೈಸೂರು ಕೇಂದ್ರದ ಅಧ್ಯಕ್ಷ ಪ್ರೊ.ಸಿ.ನಾಗಣ್ಣ, ಗೌರವ ಕಾರ್ಯದರ್ಶಿ ಪಿ.ಎಸ್.ಗಣಪತಿ, ಖಜಾಂಚಿ ಭಾಷ್ಯಂ, ಪ್ರಿನ್ಸಿಪಾಲ್ ಲೇಖಾ ನಾಯರ್ ಮತ್ತಿತರರು ಉಪಸ್ಥಿತರಿದ್ದರು.

ದೇಶ – ವಿದೇಶ

ಟ್ಯಾಂಕರ್ ಪಲ್ಟಿ; ತುಪ್ಪಕ್ಕಾಗಿ ಮುಗಿಬಿದ್ದ ಜನ

ಆಂಧ್ರಪ್ರದೇಶ: ಪವಿತ್ರ ತಿರುಮಲ ದೇಗುಲಕ್ಕೆ ತುಪ್ಪ ಸಾಗಿಸುತ್ತಿದ್ದ ಟ್ಯಾಂಕರ್ ಚಾಲಕನ ನಿಯಂತ್ರಣ ತಪ್ಪಿ ಪಲ್ಟಿಯಾಗಿದ್ದು, ಈ ವೇಳೆ ಸ್ಥಳೀಯರು ಮುಗಿಬಿದ್ದು ತುಪ್ಪ ಸಂಗ್ರಹಿಸಿ ಪರಾರಿಯಾದ ಘಟನೆ ಆಂಧ್ರಪ್ರದೇಶದಲ್ಲಿ ನಡೆದಿದೆ.



ಇಲ್ಲಿನ ಕಡಪ ಜಿಲ್ಲೆ, ಕೊಂಡಾಪುರಂ ಮಂಡಲ, ಅನಂತಪುರಂ ಗ್ರಾಮದ ರಾಷ್ಟ್ರೀಯ ಹೆದ್ದಾರಿ 67ರಲ್ಲಿ ಈ ಘಟನೆ ನಡೆದಿದ್ದು, ದುರ್ಘಟನೆಯಲ್ಲಿ ಚಾಲಕ ಹಾಗೂ ಕ್ಲೀನರ್‌ಗೆ ಗಾಯಗಳಾಗಿವೆ. ಈ ನಡುವೆ ಪಲ್ಟಿಯಾದ ಟ್ಯಾಂಕರ್‌ನಿಂದ ತುಪ್ಪ ಸೋರಿಕೆಯಾಗುತ್ತಿರುವುದನ್ನು ಗಮನಿಸಿದ ಸ್ಥಳೀಯ ಗ್ರಾಮಸ್ಥರು ಬಕೆಟ್, ಬಿಂದಿಗೆ, ಕ್ಯಾನ್‌ಗಳನ್ನು ಹಿಡಿದು ತುಪ್ಪ ಸಂಗ್ರಹಿಸಿಕೊಳ್ಳಲು ಮುಗಿಬಿದ್ದಿದ್ದಾರೆ. ಈ ವಿಚಾರ ನೆರೆಹೊರೆಯ ಗ್ರಾಮಗಳಿಗೂ ಹಬ್ಬಿ, ಅಪಾರ ಸಂಖ್ಯೆಯ ಜನ ತುಪ್ಪ ಸಂಗ್ರಹಕ್ಕೆ ಧಾವಿಸಿದ್ದಾರೆ. ಪೊಲೀಸರು ಹರಸಾಹಸಪಟ್ಟು ತುಪ್ಪ ಸಂಗ್ರಹಕ್ಕೆ ಬ್ರೇಕ್ ಹಾಕಿದ್ದಾರೆ. ಈ ವಿಡಿಯೋ ಸಾಮಾಜಿಕ ಜಾಲತಾಣದಲ್ಲಿ ವೈರಲ್ ಆಗಿದೆ. ಈ ಟ್ಯಾಂಕರ್ ಪುಣೆಯಿಂದ 21 ಸಾವಿರ ಲೀಟರ್ ತುಪ್ಪದೊಂದಿಗೆ ತಿರುಮಲಕ್ಕೆ ಬರುತ್ತಿತ್ತು. ಆದರೆ ಕಡಪ ಜಿಲ್ಲೆಯ ಕೊಂಡಾಪುರಂ ಬಳಿಯ ರಾಷ್ಟ್ರೀಯ ಹೆದ್ದಾರಿಯಲ್ಲಿ ಟ್ಯಾಂಕರ್ ಚಾಲಕನ ನಿಯಂತ್ರಣ ತಪ್ಪಿ ಪಲ್ಟಿಯಾಗಿದೆ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಚಾಟ್ ಜಿಪಿಟಿಯಲ್ಲಿ ಸರ್ಚ್ ಮಾಡಿ ಯುವತಿಯರಿಬ್ಬರು ಆತ್ಮಹತ್ಯೆ

ವಾಷಿಂಗ್ಟನ್: ಭಾರತದ ಸೂರತ್‌ನಲ್ಲಿ ಇಬ್ಬರು ಯುವತಿಯರು ಚಾಟ್‌ಜಿಪಿಟಿ ಮೂಲಕ ಸರ್ಚ್ ಮಾಡಿ ಬಳಿಕ ಆತ್ಮಹತ್ಯೆ ಮಾಡಿಕೊಂಡ ಬಗ್ಗೆ ಟೆಸ್ಲಾ ಸಿಇಒ ಎಲಾನ್ ಮಸ್ಕ್ ತಮ್ಮ ಎಕ್ಸ್ ಖಾತೆಯಲ್ಲಿ 'ಅಯ್ಯೋ' ಎಂದು ಪ್ರತಿಕ್ರಿಯಿಸಿದ್ದಾರೆ. ಕೇಟೀ ಮಿಲ್ಲರ್ ಎಂಬವರು ಯುವತಿಯರ ಆತ್ಮಹತ್ಯೆ ಬಗ್ಗೆ ಎಕ್ಸ್‌ನಲ್ಲಿ ಮಾಹಿತಿ ಹಂಚಿಕೊಂಡಿದ್ದರು. ಅದರಲ್ಲಿ ಚಾಟ್‌ಜಿಪಿಟಿ ಜೊತೆಗಿನ ಸಂವಹನದ ನಂತರ ಭಾರತದಲ್ಲಿ ಇಬ್ಬರು ಮಹಿಳೆಯರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಅವರು ಆತ್ಮಹತ್ಯೆ ಮಾಡಿಕೊಳ್ಳುವುದು ಹೇಗೆ? ಆತ್ಮಹತ್ಯೆ ಹೇಗೆ ಮಾಡಬಹುದು? ಯಾವ ಔಷಧಿಗಳನ್ನು ಬಳಸಲಾಗುತ್ತದೆ ಎಂದು ಸರ್ಚ್ ಮಾಡಿದ್ದರು. ದಯವಿಟ್ಟು ನಿಮ್ಮ ಪ್ರೀತಿಪಾತ್ರರಿಗೆ ಚಾಟ್‌ಜಿಪಿಟಿ ಬಳಸಲು ಬಿಡಬೇಡಿ ಎಂದು ಮನವಿ ಮಾಡಿದ್ದಾರೆ. ಈ ಪೋಸ್ಟ್‌ನ್ನು ಹಂಚಿಕೊಂಡಿರುವ ಮಸ್ಕ್ 'ಅಯ್ಯೋ' ಎಂದು ಬರೆದುಕೊಂಡಿದ್ದಾರೆ.



ಸೂರತ್‌ನ ಸ್ವಾಮಿನಾರಾಯಣ ದೇವಾಲಯದ ಸ್ನಾನಗೃಹದೊಳಗೆ ಇಬ್ಬರು ಕಾಲೇಜು ವಿದ್ಯಾರ್ಥಿಗಳ ಶವಗಳು ಪತ್ತೆಯಾಗಿದ್ದವು. ವಿಷಕಾರಿ ಔಷಧಗಳ ಚುಚ್ಚುಮದ್ದು ತೆಗೆದುಕೊಂಡು ಆತ್ಮಹತ್ಯೆ ಮಾಡಿಕೊಂಡಿರುವ ಸಾಧ್ಯತೆ ಇದೆ ಎಂದು ಶಂಕಿಸಲಾಗಿತ್ತು. ಅವರ ದೇಹದ ಬಳಿ ಬಿದ್ದಿದ್ದ ಒಂದು ಸಿರಿಂಜ್ ಮತ್ತು ಮೂರು ಬಾಟಲಿ ವಿಷಕಾರಿ ಔಷಧಗಳನ್ನು ವಶಪಡಿಸಿಕೊಳ್ಳಲಾಗಿದೆ. ಇಬ್ಬರ ಮೊಬೈಲ್‌ನ್ನು ಪರಿಶೀಲನೆಗೆ ವಿಧಿವಿಜ್ಞಾನ ಕೇಂದ್ರಕ್ಕೆ ಕಳುಹಿಸಲಾಗಿದೆ.

ವಿಮಾನದಲ್ಲಿ ಬೀಡಿ ಸೇದಿದವನ ಬಂಧನ

ಪಣಜಿ: ದೆಹಲಿ ಮೂಲಕ ಗೋವಾಗೆ ಹೊರಟಿದ್ದ ಆಕಾಶಾ ಏರ್ ವಿಮಾನದ ಶೌಚಗೃಹದಲ್ಲಿ ಪ್ರಯಾಣಿಕನೊಬ್ಬ ಬೀಡಿ ಸೇದಿದ ಹಿನ್ನಲೆಯಲ್ಲಿ ಆತನನ್ನು ಪೊಲೀಸರು ಬಂಧಿಸಿರುವುದಾಗಿ ವರದಿಯಾಗಿದೆ. ಈ ಘಟನೆಯು ಶನಿವಾರ ನಡೆದಿದ್ದು, ಬಂಧಿತನನ್ನು ದೆಹಲಿ ನಿವಾಸಿ ಆಶಿಶ್ ಎಂದು ಗುರುತಿಸಲಾಗಿದೆ. ಈತ ವಿಮಾನ ಸಂಖ್ಯೆ ಕ್ಯೂಪಿ 1625ರಲ್ಲಿ ದೆಹಲಿ ಮೂಲಕ ಗೋವಾಗೆ ತೆರಳುತ್ತಿದ್ದಾಗ ಈ ಕೆಲಸ ಮಾಡಿದ್ದಾಗಿ ತಿಳಿದು ಬಂದಿದೆ. ವಿಮಾನ ಆಕಾಶದಲ್ಲಿದ್ದಾಗ ಈ ವ್ಯಕ್ತಿಯು ಶೌಚಗೃಹಕ್ಕೆ ತೆರಳಿ ಬೀಡಿ ಸೇದಿದ್ದು, ಇದು ಅತ್ಯಂತ ಅಪಾಯಕಾರಿ ಕೆಲಸ. ಇದರಿಂದ ಇತರೆ ಪ್ರಯಾಣಿಕರ ಪ್ರಾಣಕ್ಕೆ ಅಪಾಯವಾಗುವ ಸಾಧ್ಯತೆ ಇತ್ತು ಎಂದು ವಿಮಾನಯಾನ ಸಿಬ್ಬಂದಿ ತಿಳಿಸಿದ್ದು, ಈ ಸಂಬಂಧ ಪೊಲೀಸರಿಗೆ ದೂರು ನೀಡಲಾಗಿದೆ.



ವಿಮಾನ ಗೋವಾದಲ್ಲಿ ಲ್ಯಾಂಡ್ ಆಗುತ್ತಿದ್ದಂತೆ ಆಶಿಶ್‌ನನ್ನು ಬಂಧಿಸಲಾಗಿದ್ದು, ತಮ್ಮ ವಿಮಾನದಲ್ಲಿ ಪ್ರಯಾಣಿಸಿದ್ದ ಈ ಪ್ರಯಾಣಿಕ, ಶೌಚಗೃಹದಲ್ಲಿ ಬೀಡಿ ಸೇದುವಾಗ ನಮ್ಮ ಸಿಬ್ಬಂದಿ ಕೈಗೆ ಸಿಕ್ಕಿ ಬಿದ್ದಿರುವುದಾಗಿ ಆಕಾಶಾ ಏರ್ ತಿಳಿಸಿದೆ. ಪ್ರಯಾಣಿಕನ ವಿರುದ್ಧ ಗೋವಾದ ಮೋಪಾ ವಿಮಾನ ನಿಲ್ದಾಣ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಿಸಲಾಗಿದ್ದು, ಹೆಚ್ಚಿನ ತನಿಖೆ ನಡೆಸಲಾಗುತ್ತಿದೆ ಎಂದು ಪೊಲೀಸ್ ಅಧಿಕಾರಿಗಳು ತಿಳಿಸಿದ್ದಾರೆ.

ಚೀನಾ ನೈರುತ್ಯದಲ್ಲಿ ಜಪಾನ್ ಕ್ಷಿಪಣಿ ನಿಯೋಜನೆ

ಟೋಕಿಯೊ: ಮಧ್ಯಪ್ರಾಚ್ಯ ಯುದ್ಧದ ನಡುವೆ ಚೀನಾ ನೈರುತ್ಯ ಪ್ರದೇಶದಲ್ಲಿ ಜಪಾನ್ ಕ್ಷಿಪಣಿಗಳನ್ನು ನಿಯೋಜಿಸುತ್ತಿರುವುದು ಸ್ಥಳೀಯರಲ್ಲಿ ಆತಂಕ ಹುಟ್ಟಿಸಿದೆ. ಪೂರ್ವ ಚೀನಾ ಸಮುದ್ರದಲ್ಲಿ ನೌಕಾ ಚಟುವಟಿಕೆ ಹೆಚ್ಚಾಗಿರುವ ಹಿನ್ನೆಲೆಯಲ್ಲಿ ತನ್ನ ರಕ್ಷಣೆಗಾಗಿ ಚೀನಾದ ನೈರುತ್ಯ ಪ್ರದೇಶದಲ್ಲಿ ದೂರಗಾಮಿ ಹಾಗೂ ಪ್ರತಿದಾಳಿ ಮಾಡುವ ಕ್ಷಿಪಣಿಗಳನ್ನು ನಿಯೋಜಿಸಲಾಗುತ್ತದೆ ಎಂದು ಜಪಾನ್ ಅಧಿಕಾರಿಗಳು ತಿಳಿಸಿದ್ದಾರೆ. ನೆಲದಿಂದ ಹಡಗಿಗೆ ಚಿಮ್ಮುವ ಟೈಪ್ 12 ಮಾದರಿ ಕ್ಷಿಪಣಿಗಳನ್ನು ಚೀನಾ ಗಡಿಗೆ ಹೊಂದಿಕೊಂಡಿರುವ ಕ್ಯುಶು ಪ್ರದೇಶದ ಕುಮಾಮೊಟೊ ಅಲ್ಲಿ ನಿಯೋಜಿಸಲು ಜಪಾನ್ ಸಿದ್ಧವಾಗಿದೆ. ಈ ಕ್ಷಿಪಣಿಗಳು 1000 ಕಿ.ಮೀ ದೂರದವರೆಗೆ ನಿಖರ ದಾಳಿಯನ್ನು ಮಾಡಬಲ್ಲವು ಎಂದು ಸಂಪುಟ ಕಾರ್ಯದರ್ಶಿ ಮಿನೋರು ಕಿಹರಾ ಹೇಳಿದ್ದಾರೆ. ಚೀನಾದ ನೌಕಾ ಚುಟುವಟಿಕೆಯ ಮೇಲೆ ನಿಗಾವಹಿಸಲು ನಾವು ಮುಂದಾಗಿದ್ದೇವೆ. ಜಪಾನ್ ಮೇಲೆ ನೇರ ದಾಳಿಗೆ ಮುಂದಾದರೆ ನಾವು ಅವರ ಮೇಲೆ ತಕ್ಷಣ ಕ್ಷಿಪಣಿ ದಾಳಿ ನಡೆಸುತ್ತೇವೆ. ಕ್ಷಿಪಣಿ ನಿಯೋಜನೆಯ ಕುರಿತು ರಕ್ಷಣಾ ಸಚಿವರು ಸ್ಥಳೀಯರಿಗೆ ಹೆಚ್ಚಿನ ಮಾಹಿತಿ ನೀಡಲಿದ್ದಾರೆ ಎಂದು ಹೇಳಿದ್ದಾರೆ.



ಸನೇ ತಕೈಚಿ ಅವರು ಜಪಾನ್ ಪ್ರಧಾನಿಯಾದ ನಂತರ ತೈವಾನ್ ವಿಷಯದಿಂದಾಗಿ ಉಭಯ ದೇಶಗಳ ನಡುವಿನ ದ್ವಿಪಕ್ಷೀಯ ಸಂಬಂಧವು ಮತ್ತಷ್ಟು ಹಳಸಿದೆ.

ಸಿಬಿಐ ಅಧಿಕಾರಿಗಳ ವಿರುದ್ಧ ಪೂರ್ವಾಗ್ರಹ ಹೇಳಿಕೆಗಳಿಗೆ 'ಹೈ' ತಡೆ

ನವದೆಹಲಿ: ಅಬಕಾರಿ ನೀತಿ ಹಗರಣ ಆರೋಪ ಪ್ರಕರಣದಲ್ಲಿ ದೆಹಲಿಯ ಮಾಜಿ ಸಿಎಂ ಅರವಿಂದ್ ಕೇಜ್ರಿವಾಲ್ ಮತ್ತು ಮಾಜಿ ಡಿಸಿಎಂ ಮನೀಷ್ ಸಿಸೋಡಿಯಾ ಸೇರಿ 21 ಜನರನ್ನು ಖುಲಾಸೆಗೊಳಿಸಿದ ವಿಚಾರಣಾ ನ್ಯಾಯಾಲಯದ ಆದೇಶದ ಹಿನ್ನೆಲೆಯಲ್ಲಿ ಸಿಬಿಐ ಅಧಿಕಾರಿಗಳ ವಿರುದ್ಧದ ಟೀಕೆಗೆ ದೆಹಲಿಯ ಹೈಕೋರ್ಟ್ ತಡೆ ನೀಡಿದೆ. ಪ್ರಕರಣದ 21 ಜನರನ್ನು ಖುಲಾಸೆಗೊಳಿಸುವುದರ ವಿರುದ್ಧ ಕೇಂದ್ರೀಯ ತನಿಖಾ ದಳ(ಸಿಬಿಐ) ಸಲ್ಲಿಸಿದ್ದ ಮೇಲ್ಮನವಿ ಅರ್ಜಿ ವಿಚಾರಣೆ ನಡೆಸಿದ ಹೈಕೋರ್ಟ್, ಸಿಬಿಐ ಅಧಿಕಾರಿಗಳ ಮೇಲೆ ವಿಚಾರಣಾ ನ್ಯಾಯಾಲಯದ ಪೂರ್ವಾಗ್ರಹಪೀಡಿತ ಹೇಳಿಕೆಗಳಿಗೆ ತಡೆ ನೀಡುವುದಾಗಿ ತಿಳಿಸಿದೆ. ಇನ್ನೂ ಖುಲಾಸೆಗೊಂಡಿರುವ ಅರವಿಂದ್ ಕೇಜ್ರಿವಾಲ್, ಸಿಸೋಡಿಯಾ ಮತ್ತು ಇತರರನ್ನು ಬಿಡುಗಡೆ ಮಾಡುವುದರ ವಿರುದ್ಧ ಸಿಬಿಐ ಸಲ್ಲಿಸಿದ ಅರ್ಜಿ ಕುರಿತು ತಮ್ಮ ನಿಲುವನ್ನು ತಿಳಿಸುವಂತೆ ಕೋರ್ಟ್ ನೋಟಿಸ್ ನೀಡಿದ್ದು, ಮಾ.16ಕ್ಕೆ ವಿಚಾರಣೆ ಮುಂದೂಡಿದೆ. ಸಿಬಿಐ ಪರವಾಗಿ ವಾದ ಮಂಡಿಸಿ ಸಾಲಿಸಿಟರ್ ಜನರಲ್ ತುಷಾರ್ ಮೆಹ್ತಾ, ಆರೋಪ ಹೊರಿಸಿದ್ದಕ್ಕಾಗಿ ಸಾಕಷ್ಟು ಪುರಾವೆಗಳಿವೆ ಎಂದಿದ್ದಾರೆ. ಫೆ.27ರಂದು ವಿಚಾರಣಾ ನ್ಯಾಯಾಲಯವು ಕೇಜ್ರಿವಾಲ್, ಸಿಸೋಡಿಯಾ ಸೇರಿ ಇತರೆ 21 ಜನರನ್ನು ದೋಷಮುಕ್ತಗೊಳಿಸಿ, ಪ್ರಕರಣವು ಸುಳ್ಳಿನಿಂದ ಕೂಡಿದ್ದು, ಉದ್ದೇಶಪೂರ್ವಕವಾಗಿ ಪ್ರಕರಣವನ್ನು ಸೃಷ್ಟಿ ಮಾಡಲಾಗಿದೆ ಎಂದು ಸಿಬಿಐ ವಿರುದ್ಧ ಟೀಕೆ ಮಾಡಿತ್ತು.

ಮೈಸೂರು ಮಿತ್ರ ಮಂಗಳವಾರ 10 ಮಾರ್ಚ್ 2026

ಕೂರುಳಿ ಸುಭಾಷ್‌ನಗರದಲ್ಲಿ ನಾಗ ಪ್ರತಿಷ್ಠಾಪನೆ



ನಾಪೋಕ್ಲು, ಮಾ.9(ದುಗ್ಗಳ)–ಇಲ್ಲಿಗೆ ಸಮೀಪದ ಕೂರುಳಿ ಸುಭಾಷ್ ನಗರದಲ್ಲಿ ನಾಗಸನ್ನಿಧಾನದ ಪ್ರಾಣ ಪ್ರತಿ ಷ್ಠಾಪನೆಯು ಶ್ರದ್ಧಾಭಕ್ತಿಯಿಂದ ನೆರವೇರಿತು.

13ವರ್ಷಗಳಿಂದ ಆರಾಧಿಸುತ್ತಾ ಬಂದಿರುವ ನಾಗ ಸನ್ನಿಧಾನದ ಪ್ರಾಣ ಪ್ರತಿಷ್ಠಾಪನೆಯ ಪ್ರಯುಕ್ತ ಪೂಜಾ ಕಾರ್ಯಗಳನ್ನು ಸಾಂಪ್ರದಾಯಿಕವಾಗಿ ನಡೆಸಲಾಯಿತು. ಇದರಲ್ಲಿ ಪಂಚಗವ್ಯ ಪುಣ್ಯಾಹ, ಸಪ್ತಶುದ್ಧಿ ವಾಸ್ತು ಬಲಿ, ಬಿಂಬ ಶುದ್ಧಿ ಪೂಜೆಗಳು ಹಾಗೂ ಗಣಹೋಮ ಪ್ರತಿಷ್ಠಾಪನಾ ಹೋಮಗಳು ಆಶ್ಲೇಷಬಲಿ ಹಾಗೂ ಮಹಾಪೂಜೆ ತೀರ್ಥಪ್ರಸಾದ ವಿತರಣೆ ಬಳಿಕ ಅನ್ನ ಸಂತರ್ಪಣೆ ನೆರವೇರಿತು. ಪೂಜಾ ವಿಧಿ ವಿಧಾನವನ್ನು ನಾಪೋಕ್ಲು ಶ್ರೀ ಭಗವತಿ ದೇವಾಲಯದ ಮುಖ್ಯ ಅರ್ಚಕ ಹರೀಶ್ ನೆರವೇರಿಸಿದರು. ದೇವಸ್ಥಾನದ ಆಡಳಿತ ಮಂಡಳಿ ಪದಾಧಿಕಾರಿಗಳು, ಸದಸ್ಯರು ಹಾಗೂ ಭಕ್ತಾದಿಗಳು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿದ್ದರು.

ಮಹಿಳೆಯರು ದೇಶದ ಪ್ರಗತಿಯಲ್ಲಿ ತೊಡಗಿಸಿಕೊಳ್ಳಿ

ಕುಶಾಲನಗರ, ಮಾ.9–ಎಲ್ಲಾ ಕ್ಷೇತ್ರಗಳಲ್ಲೂ ಉತ್ತಮ ಸಾಧನೆ ಮಾಡಿರುವ ಮಹಿಳೆಯರು ದೇಶದ ಪ್ರಗತಿಯಲ್ಲಿ ತಮ್ಮನ್ನು ತೊಡಗಿಸಿಕೊಳ್ಳಬೇಕು ಎಂದು ಇಲ್ಲಿನ ಕೃಷಿ ಪತ್ತಿನ ಸಹಕಾರ ಸಂಘದ ಅಧ್ಯಕ್ಷ ಟಿ.ಆರ್. ಶರವಣ ಕುಮಾರ್ ಹೇಳಿದರು.

ಪಟ್ಟಣದ ವಿವಿಧೋದ್ದೇಶ ಮಹಿಳಾ ಸಹಕಾರ ಸಂಘ ವತಿಯಿಂದ ಭಾನುವಾರ ಏರ್ಪಡಿಸಿದ್ದ ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆ ಮತ್ತು ಶಾಲಾ ವಾರ್ಷಿಕೋತ್ಸವ ಕಾರ್ಯಕ್ರಮದಲ್ಲಿ ಪಾಲ್ಗೊಂಡು, ಸಾಮಾಜಿಕ, ಆರ್ಥಿಕ, ಸಾಂಸ್ಕೃತಿಕ ಮತ್ತು ರಾಜಕೀಯ ಸಾಧನೆಗಳನ್ನು ಆಚರಿಸುವ ಜಾಗತಿಕ ದಿನವಾಗಿದೆ ಎಂದರು.

ಸಮಾಜ ಸೇವಕಿ ಕೆ.ಪಿ.ಚಂದ್ರಕಲಾ ಮಾತನಾಡಿ, ಸ್ತ್ರೀಯರು ನಾಲ್ಕು ಗೋಡೆಗಳ ನಡುವೆ ಕಾಲ ಕಳೆಯುತ್ತಿದ್ದ ಕಾಲ ಈಗ ಕಣ್ಮರೆಯಾಗಿ ಪುರುಷ ಪ್ರಧಾನ ಸಮಾಜದಲ್ಲಿ ಪುರುಷನಿಗೆ ಸರಿಸಮನಾಗಿ ಧೀಮಂತಿಕೆಯಿಂದ ಬದುಕಲು ಸಾಧ್ಯವಿದೆ ಎಂಬುದನ್ನು ಮಹಿಳೆಯರು ಎಲ್ಲಾ ಕ್ಷೇತ್ರಗಳಲ್ಲೂ ತೋರಿಸಿಕೊಟ್ಟಿದ್ದಾರೆ ಎಂದು ಹೇಳಿದರು.

ಸಮಾಜದ ಅಧ್ಯಕ್ಷೆ ಸೆಲಿನಾ ಡಿ.ಕುನ್ಹಾ ಕಾರ್ಯಕ್ರಮ ಉದ್ಘಾಟಿಸಿ ಪ್ರತಿಯೊಂದು ಕ್ಷೇತ್ರದಲ್ಲೂ ಹೆಣ್ಣು ತನ್ನ ಛಾಪನ್ನು ಮೂಡಿಸುತ್ತಿದ್ದಾಳೆ. ಕೇವಲ ಅಡುಗೆ ಕೋಣೆಗೆ ಮಾತ್ರ ಸೀಮಿತವಾಗಿದ್ದ ಮಹಿಳೆ ಪ್ರಸ್ತುತ ಸಮಾಜದ ಎಲ್ಲಾ ರಂಗಗಳಲ್ಲಿ ಪುರುಷನ ಸಮಾನಾಗಿ ಮಹಿಳೆಯರು ಅಭಿವೃದ್ಧಿ ಹೊಂದಿದ್ದಾರೆ ಎಂದರು.

ಮಹಿಳಾ ಸಮಾಜದ ಉಪಾಧ್ಯಕ್ಷೆ ಸುಶೀಲಾ, ನಿರ್ದೇಶಕರಾದ ನಳಿನಿ ನಂಜಪ್ಪ, ಕಾವೇರಿ ಕಾಳಪ್ಪ, ಸಂಘದ ಕಾರ್ಯದರ್ಶಿ ಬಿ.ಆರ್. ಶೈಲಾ, ಶಿಕ್ಷಕರಾದ ಉತ್ತಪ್ಪ, ಜಾನ್ಸನ್, ಶಿಕ್ಷಕಿ ಮೀರಾ ಸೇರಿದಂತೆ ಸಂಘದ ನಿರ್ದೇಶಕರು ಪಾಲ್ಗೊಂಡಿದ್ದರು.

ಮಹಿಳೆಯರ ಸಬಲೀಕರಣಕ್ಕಾಗಿ ಸಿಎನ್‌ಸಿ ಪ್ರತಿಭಟನೆ

ಮಡಿಕೇರಿ, ಮಾ.9–ಅಂತರಾಷ್ಟ್ರೀಯ ಮಹಿಳಾ ದಿನಾಚರಣೆಯ ಪ್ರಯುಕ್ತ ಕೊಡವ ಮಹಿಳೆಯರ ಸಬಲೀಕರಣಕ್ಕಾಗಿ ಒತ್ತಾಯಿಸಿ ನ್ಯಾಷನಲ್ ಕೌನ್ಸಿಲ್ ಸಂಘಟನೆ ಜಿಲ್ಲಾಧಿಕಾರಿಗಳ ಕಚೇರಿ ಎದುರು ವಿವಿಧ ಹಕ್ಕೊತ್ತಾಯಗಳನ್ನು ಮಂಡಿಸಿ ಪ್ರತಿಭಟನೆ ನಡೆಸಿತು.

ಬೇಡಿಕೆಗಳು: ಕೊಡವ ಬುಡಕಟ್ಟು ಜನಾಂಗದ ಮಹಿಳೆಯರಿಗೆ ಸಂವಿಧಾನ ದತ್ತವಾದ ಹಕ್ಕುಗಳನ್ನು ನೀಡಬೇಕು. ದೇಶಾದ್ಯಂತ ಕೊಡವ ಮಹಿಳೆಯರಿಗೆ ಶೇ.33 ಮೀಸಲಾತಿ ಅಂತರಿಕ ಕೋಟಾದಡಿ ನೀಡಬೇಕು. 2027ರ ರಾಷ್ಟ್ರೀಯ ಜನಗಣತಿಯಲ್ಲಿ ಕೊಡವರಿಗಾಗಿ ಪ್ರತ್ಯೇಕ ಕೋಡ್ ಮತ್ತು ಕಾಲಂ ಅಳವಡಿಸಬೇಕು ಮೊದಲಾದ ವಿವಿಧ ಬೇಡಿಕೆಗಳನ್ನು ಮಂಡಿಸಿದ ಸಿಎನ್‌ಸಿ ಅಧ್ಯಕ್ಷ ಎನ್.ಯು. ನಾಚಪ್ಪ ಜಿಲ್ಲಾಡಳಿತದ ಮೂಲಕ ರಾಷ್ಟ್ರ ಪತಿ ಹಾಗೂ ಸರಕಾರಕ್ಕೆ ಮನವಿ ಪತ್ರ ಸಲ್ಲಿಸಿದರು.



ಸಿಎನ್‌ಸಿ ಅಧ್ಯಕ್ಷ ಎನ್.ಯು.ನಾಚಪ್ಪ ಸರಕಾರಕ್ಕೆ ಮನವಿ ಪತ್ರ ಸಲ್ಲಿಸಿದರು.

ಕಲಿಯಂಡ ಮೀನಾ ಪ್ರಕಾಶ್, ಬೊಟ್ಟಂಗಡ ಸವಿತಾ ಗಿರೀಶ್, ಬೊಪ್ಪಂಡ ಬೊಳ್ಳಮ್ಮ ನಾಣಯ್ಯ, ಪಟ್ಟಮಾಡ ಲಲಿತಾ ಗಣಪತಿ, ರೇಖಾ ನಾಚಪ್ಪ, ಅರೆಯಡ ಸವಿತಾ ಗಿರೀಶ್, ಮುದ್ದಿಯಡ ಲೀಲಾವತಿ, ಪಚ್ಚಾರಂಡ ಶಾಂತಿ ಪೊನ್ನಪ್ಪ, ಹೊಟ್ಟೆಯಂಡ ಫ್ಯಾನ್ಸಿ ಬೆಳ್ಯಪ್ಪ, ಕಲಿಯಂಡ ಪ್ರಕಾಶ್, ಅಳ್ಮಂಡ ಜೈ ಗಣಪತಿ, ಬಾಚರಣಿಯಂಡ ಚಿಪ್ಪಣ್ಣ, ಕಿರಿಯಮಾಡ ಶೆರಿನ್, ಬೇಪಡಿಯಂಡ ಬಿದ್ದಪ್ಪ, ಮಣವಟ್ಟಿರ ಚಿಣ್ಣಪ್ಪ, ಚೋಳಪಂಡ ನಾಣಯ್ಯ, ಪಾಲೆಕಂಡ ಪ್ರಧಾನ್ ಪೂಣಚ್ಚ, ಮಂದಪಂಡ ಮನೋಜ್ ಮಂದಣ್ಣ, ಮಣವಟ್ಟಿರ ಜಗದೀಶ್, ಪುದಿಯೊಕ್ಕಡ ಪೃಥ್ವಿ, ಮೇದುರ ಕಂಠಿ ನಾಣಿಯಪ್ಪ, ಮಣವಟ್ಟಿರ ನಂದ, ಮಂದಪಂಡ ವಿಹಾನ್ ದೇವಯ್ಯ, ಪೊರಿಮಂಡ ಧ್ಯಾನ್ ಪೊನ್ನಣ್ಣ ಪಾಲ್ಗೊಂಡಿದ್ದರು.

ದೇವರಕೊಲ್ಲಿಯಲ್ಲಿ ಲಾರಿ ಕಾರು ಅಪಘಾತ: ಪ್ರಯಾಣಿಕರಿಗೆ ಗಾಯ



ನಾಪೋಕ್ಲು, ಮಾ.9–ಕಂಟೈನರ್ ಲಾರಿ ಮತ್ತು ಸ್ವಿಫ್ಟ್ ಕಾರಿನ ನಡುವೆ ಅಪಘಾತ ಸಂಭವಿಸಿದ್ದು ಕಾರಿನಲ್ಲಿದ್ದವರಿಗೆ ಗಾಯವಾದ ಘಟನೆ ಸೋಮವಾರ ದೇವರಕೊಲ್ಲಿಯಲ್ಲಿ ಜರುಗಿದೆ.

ಮೈಸೂರು–ಮಂಗಳೂರು ರಾಷ್ಟ್ರೀಯ ಹೆದ್ದಾರಿಯಲ್ಲಿರುವ ದೇವರಕೊಲ್ಲಿ ಶ್ರೀ ಚಾಮುಂಡೇಶ್ವರಿ ದೇವಸ್ಥಾನದ ಸಮೀಪದ ತಿರುವಿನಲ್ಲಿ ಸೋಮವಾರ ಬೆಳಗ್ಗೆ ಕಂಟೈನರ್ ಲಾರಿ(ಕೆಎ19, ಬಿ–1488) ಮತ್ತು ಸ್ವಿಫ್ಟ್ ಕಾರಿನ(ಕೆಎ01, ಎಂಜಿ–8050) ನಡುವೆ ಅಪಘಾತ ಸಂಭವಿಸಿದ್ದು, ಕಾರಿನಲ್ಲಿ ಪ್ರಯಾಣಿಸುತ್ತಿದ್ದ ಪ್ರವೀಣ್ ಮತ್ತು ದಿವ್ಯರಿಗೆ ಅಲ್ಪಸ್ವಲ್ಪ ಗಾಯಗಳಾಗಿದ್ದು, ಚಿಕಿತ್ಸೆಗಾಗಿ ಸುಳ್ಯ ಆಸ್ಪತ್ರೆಗೆ ಕರೆದೊಯ್ಯಲಾಯಿತು.

ಮಂಗಳೂರಿನಿಂದ ಮಡಿಕೇರಿ ಕಡೆಗೆ ಕಾಫಿ ತೆಗೆದುಕೊಂಡು ಹೋಗಲು ಬರುತ್ತಿದ್ದ ಕಂಟೈನರ್ ಲಾರಿ ಬರುತ್ತಿರುವಾಗ ಮಡಿಕೇರಿಯಿಂದ ಸುಳ್ಯದ ಕಡೆ ಹೋಗುತ್ತಿದ್ದ ಸ್ವಿಫ್ಟ್ ಕಾರು ತಿರುವಿನಲ್ಲಿ ಚಾಲಕನ ನಿಯಂತ್ರಣ ತಪ್ಪಿ, ನೇರವಾಗಿ ಲಾರಿ ಹಿಂಬದಿಯ ಚಕ್ರಕ್ಕೆ ಅಪ್ಪಳಿಸಿದೆ. ಡಿಕ್ಕಿಯ ರಭಸಕ್ಕೆ ಕಾರು ರಸ್ತೆ ಬದಿಯ ಬರೆಗೆ ಡಿಕ್ಕಿಯಾಗಿ ಕಾರಿನ ಮುಂಭಾಗ ಸಂಪೂರ್ಣವಾಗಿ ಜಖಂಗೊಂಡಿದೆ. ಲಾರಿ ಚಾಲಕ ಗಣೇಶ್ ನೀಡಿದ ದೂರಿನ ಮೇರೆಗೆ ಪೊಲೀಸರು ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸುತ್ತಿದ್ದಾರೆ.

ಕಾಡಾನೆ ಹಾವಳಿ ನಿಯಂತ್ರಿಸುವಲ್ಲಿ ಸರ್ಕಾರ ವಿಫಲ

ನಾಪೋಕ್ಲು, ಮಾ.9(ದುಗ್ಗಳ)–ಕಾಡಾನೆ ದಾಳಿಯಿಂದಾಗಿ ಎರಡು ತಿಂಗಳಲ್ಲಿ ನಾಲ್ಕು ಮಂದಿ ಸಾವನ್ನಪ್ಪಿದ್ದು, ಕಾಡಾನೆ ಹಾವಳಿ ನಿಯಂತ್ರಿಸುವಲ್ಲಿ ಸರ್ಕಾರ ಸಂಪೂರ್ಣ ವಿಫಲವಾಗಿದೆ ಎಂದು ಸಮಾಜ ಸೇವಕ ಎಡಿಕೇರಿ ಪ್ರಸನ್ನ ತೀವ್ರ ಅಸಮಾಧಾನ ವ್ಯಕ್ತಪಡಿಸಿದ್ದಾರೆ.

ಕುಶಾಲನಗರ ತಾಲೂಕಿನ ನಂಜರಾಯಪಟ್ಟಣ ಗ್ರಾಪಂ ಮಾಜಿ ಸದಸ್ಯೆ ಜಲಜಾಕ್ಷಿ (53) ಕಾಡಾನೆ ದಾಳಿಗೆ ಮೃತಪಟ್ಟಿದ್ದಾರೆ. ಹಾಗೆಯೇ ಜಿಲ್ಲೆಯಲ್ಲಿ ಜ.1ರಂದು ಶನಿವಾರ ಸಂತೆ ಸಮೀಪದ ಗಣಗೂರಿನಲ್ಲಿ ಪೊನ್ನಪ್ಪ(61), ಜ.29ರಂದು ವಿರಾಜಪೇಟೆ ತಾಲೂಕಿನ ಸಿದ್ದಾಪುರ ಕಾಫಿ ತೋಟದಲ್ಲಿ ಲತೀಫ್(72), ಫೆ.28ರಂದು ಮಡಿಕೇರಿ ತಾಲೂಕಿನ ಮದೆ ನಾಡುವಿನಲ್ಲಿ ಪಿಯುಸಿ ವಿದ್ಯಾರ್ಥಿನಿ ಪೂಜಾ(17) ಮೃತಪಟ್ಟಿದ್ದಾರೆ. ಹೀಗೆ ಎರಡು ತಿಂಗಳಲ್ಲಿ ನಾಲ್ಕು ಮಂದಿ ಮೃತಪಟ್ಟಿದ್ದರೂ ಕೂಡ ಸರ್ಕಾರ ಇದನ್ನು ಗಂಭೀರವಾಗಿ ಪರಿ ಗಣಿಸಿಲ್ಲ ಎಂದು ಅವರು ಪತ್ರಿಕಾ ಹೇಳಿಕೆಯಲ್ಲಿ ಆರೋಪಿಸಿದ್ದಾರೆ. ಮುಂದೆ ಇಂತಹ ಘಟನೆಗಳು ಮರುಕಳಿಸಿದರೆ ಸಾರ್ವಜನಿಕರ ನೇತೃತ್ವದಲ್ಲಿ ಬೃಹತ್ ಪ್ರತಿಭಟನೆ ನಡೆಸುವುದಾಗಿ ಪ್ರಸನ್ನ ಎಚ್ಚರಿಕೆ ನೀಡಿದ್ದಾರೆ.

ಸೆಸ್ಕಾಂ ನೂತನ ಕಟ್ಟಡಕ್ಕೆ ಶಾಸಕ ಪೊನ್ನಣ್ಣ ಭೂಮಿಪೂಜೆ

ವಿರಾಜಪೇಟೆ, ಮಾ.9–ವಿದ್ಯುತ್ ಗುಣಮಟ್ಟವನ್ನು ಉತ್ತಮ ಪಡಿಸಲು ಹಾಗೂ ಗ್ರಾಹಕರು ಮತ್ತು ರೈತರಿಗೆ ನಿರಂತರ ವಿದ್ಯುತ್ ಸರಬರಾಜು ಒದಗಿಸುವ ನಿಟ್ಟಿನಲ್ಲಿ ಉಪ ವಿಭಾಗದ ಕಛೇರಿಗೆ ನೂತನ ಕಟ್ಟಡದ ಅವಶ್ಯಕವಿದೆ ಎಂದು ಶಾಸಕ ಎ.ಎಸ್.ಪೊನ್ನಣ್ಣ ಹೇಳಿದರು.

ಪಟ್ಟಣದ ಸೆಸ್ಕ್ ಕಚೇರಿಯ ಆವರಣದಲ್ಲಿ ನೂತನ ಕಟ್ಟಡ ನಿರ್ಮಾಣಕ್ಕೆ 2.5 ಕೋಟಿ ಅನುದಾನದ ಕಾಮಗಾರಿಗೆ ಭೂಮಿ ಪೂಜೆ ನೆರವೇರಿಸಿ, ನೂತನ ಕಟ್ಟಡ ನಿರ್ಮಾಣದ ಬಳಿಕ ರೂ 1.39 ಅನುದಾನದಲ್ಲಿ ತಡೆಗೋಡೆ ನಿರ್ಮಿಸುವಂತೆ ಸೂಚಿಸಿದ ಶಾಸಕ ಪೊನ್ನಣ್ಣ ಕಟ್ಟಡವು ಶೀಘ್ರವಾಗಿ ಪೂರ್ಣಗೊಂಡು ಸಾರ್ವಜನಿಕರ ಬಳಕೆಗೆ ಲಭ್ಯವಾಗುವಂತಾಗಲಿ ಎಂದು ಆಶಯ ವ್ಯಕ್ತಪಡಿಸಿದರು. ಗುಣ ಮಟ್ಟದ ಉತ್ತಮ ವಿದ್ಯುತ್ ಸರಬರಾಜಿಗೆ ಹಗಲಿರುಳು ಶ್ರಮಿಸುತ್ತಿರುವ ಪವರ್‌ಮ್ಯಾನ್‌ಗಳಿಗೂ ಹಾಗೂ ಉತ್ತಮ ರೀತಿಯಲ್ಲಿ ಸೇವೆ ಸಲ್ಲಿಸುತ್ತಿರುವ ಲೈನ್‌ಮ್ಯಾನ್‌ಗಳಿಗೆ ನೆನಪಿನ ಕಾಣಿಕೆ ನೀಡಿ ಶುಭ ಹಾರೈಸಿದರು



ಸೆಸ್ಕಾಂ ನೂತನ ಕಟ್ಟಡಕ್ಕೆ ಶಾಸಕ ಪೊನ್ನಣ್ಣ ಭೂಮಿಪೂಜೆ ನೆರವೇರಿಸಿದರು.

ಜಿಲ್ಲಾ ಗ್ಯಾರಂಟಿ ಅನುಷ್ಠಾನ ಸಮಿತಿ ಅಧ್ಯಕ್ಷ ಟಿ.ಧರ್ಮಜ ಉತ್ತಪ್ಪ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಪಿ.ರಂಜಿ ಪೂಣಚ್ಚ, ಮುಖಂಡರಾದ ಕೆ.ಸಂಪತ್ ಅಯ್ಯಪ್ಪ, ಕೆ.ಮಂಜು ದೇವಯ್ಯ, ಮಹದೇವ, ಚೆಕು, ನರೇಂದ್ರ ಕಾಮತ್, ಸಿ.ಎ.ನಸೀರ್, ಎ.ವಿ. ಮಂಜುನಾಥ್ ಹಾಗೂ ಸೆಸ್ಕ್ ಅಚೇರಿ ಅಧಿಕಾರಿಗಳಾದ ಸುರೇಶ್, ರವಿಶಂಕರ್, ರಾಮಚಂದ್ರ, ಕೆ. ಸೋಮೇಶ್, ಪಾಪಣ್ಣಚಾರಿ, ಯೋಗರಾಜ್ ಮತ್ತು ಸಿಬ್ಬಂದಿಗಳು ಉಪಸ್ಥಿತರಿದ್ದರು.

ನಾಳೆ ಲೋಕಾಯುಕ್ತದಿಂದ ದೂರು ಅರ್ಜಿ ಸ್ವೀಕಾರ

ಮಡಿಕೇರಿ: ಲೋಕಾಯುಕ್ತ ಅಧಿಕಾರಿಗಳು ಮಾ.11ರ ಬೆಳಗ್ಗೆ 11ರಿಂದ ಮಧ್ಯಾಹ್ನ 1 ಗಂಟೆಯವರೆಗೆ ವಿರಾಜಪೇಟೆ ತಾಲೂಕು ಕಚೇರಿ ಸಭಾಂಗಣದಲ್ಲಿ ರಾಜ್ಯ ಲೋಕಾಯುಕ್ತ ಕಾಯಿದೆಯಡಿ ದೂರು ಅರ್ಜಿ ವಿತರಿಸಲಿದ್ದಾರೆ. ಭರ್ತಿ ಮಾಡಿದ ಮತ್ತು ನೋಟರಿಯಿಂದ ಅಫಿಡವಿಟ್ ಮಾಡಿಸಿದ ಅರ್ಜಿಗಳನ್ನು ಮಾತ್ರ ಸ್ವೀಕರಿಸಲಾಗುವುದು.

ಭೌತಿಸ್ ಡಿಸೋಜಾ ನಿಧನ



ಮಡಿಕೇರಿ, ಮಾ.9–ನಗರದ ಕಾವೇರಿ ಲೇಔಟ್ ನಿವಾಸಿ ಭೌತಿಸ್ ಡಿಸೋಜಾ ಅಲಿಯಾಸ್ (ಅನಿ–38) ಸೋಮವಾರ ಮುಂಜಾನೆ ನಿಧನರಾದರು. ಮೃತರು ಪತ್ನಿ ಪುತ್ರ ಸಹಿತ ಅಪಾರ ಬಂಧು ಬಳಗವನ್ನು ಅಗಲಿರುತ್ತಾರೆ. ಅಂತ್ಯಸಂಸ್ಕಾರದ ದಿವ್ಯ ಬಲಿಪೂಜೆ ಬಳಿಕ ಮಡಿಕೇರಿಯ ಸಂತ ಮೈಕಲರ ದೇವಾಲಯದ ರುದ್ರಭೂಮಿಯಲ್ಲಿ ಅಂತ್ಯಕ್ರಿಯೆ ನಡೆಸಲಾಯಿತು.

ನೀಮಾ



ನಾಪೋಕ್ಲು, ಮಾ.9–ವಿರಾಜಪೇಟೆ ಸಮೀಪದ ರುದ್ರಗೊಪ್ಪೆ ನಿವಾಸಿ ಅಪ್ಪಾಡೇರಂಡ ದಿವ್ಯ ಗಣಪತಿ ಅವರ ಪತ್ನಿ ನೀಮಾ (ಮೊನಿಷ–33) ಅನಾರೋಗ್ಯದಿಂದ ಭಾನುವಾರ ನಿಧನರಾದರು. ಮೃತರು ತಾಯಿ, ಪತಿ ಹಾಗೂ ಇಬ್ಬರು ಪುತ್ರಿಯರನ್ನು ಅಗಲಿದ್ದಾರೆ. ಮೃತರ ಅಂತ್ಯಕ್ರಿಯೆಯು ಸೋಮವಾರ ರುದ್ರಗೊಪ್ಪೆ ಗ್ರಾಮದಲ್ಲಿ ನೆರವೇರಿತು.

ಲಕ್ಷ ರೂ. ದೇಣಿಗೆ ನೀಡಿ ವಾಗ್ದಾನ ಈಡೇರಿಸಿದ ಶಾಸಕ ಪೊನ್ನಣ್ಣ

ವಿರಾಜಪೇಟೆ, ಮಾ.9: ತಾಲೂಕಿನ ಕೆದಮುಳ್ಳೂರಿನ ಗ್ರಾಮಕ್ಕೆ ಶಾಸಕ ಅಜ್ಜಿಕುಟ್ಟಿರ ಎಸ್. ಪೊನ್ನಣ್ಣ ಭೇಟಿ ನೀಡಿ ಲಕ್ಷ ರೂ ದೇಣಿಗೆ ನೀಡಿದರು

ತಾವು ಹಿಂದೆ ಸಮಿತಿಯವರಿಗೆ ವಾಗ್ದಾನ ನೀಡಿದಂತೆ ಇಂದು ರಸ್ತೆ ಉದ್ಘಾಟನೆಗೆ ಆಗಮಿಸಿದ್ದ ಸಂದರ್ಭದಲ್ಲೇ, ಶಾಸಕರು ದೇವಸ್ಥಾನದ ಅಭಿವೃದ್ಧಿಗಾಗಿ ವೈಯಕ್ತಿಕ ರೂ ಲಕ್ಷಗಳ ದೇಣಿಗೆಯನ್ನು ನೀಡಿದರು.

ಕೆದಮುಳ್ಳೂರಿನಲ್ಲಿ ಶಾಸಕರು ನೀಡಿದ ವಿಶೇಷ ಅನುದಾನ 1ಕೋಟಿ 30ಲಕ್ಷ ಅನುದಾನದಲ್ಲಿ ಪುನರ್ ನಿರ್ಮಾಣಗೊಂಡ ಲೋಕೋಪಯೋಗಿ ರಸ್ತೆಯನ್ನು ಉದ್ಘಾಟಿಸಿ, ರಸ್ತೆ ಅಭಿವೃದ್ಧಿಗೆ ರೂ. 150 ಕೋಟಿಗೂ ಹೆಚ್ಚು ಅನುದಾನವನ್ನು ಸರಕಾರ ಒದಗಿಸಿದೆ ಎಂದರು. ರಸ್ತೆ ಉದ್ಘಾಟನೆಗೂ ಮೊದಲು ಕ್ಷೇತ್ರದ ಶ್ರೀ ಧಾರಾಮಹೇಶ್ವರ ದೇವಾಲಯಕ್ಕೆ ಭೇಟಿ ನೀಡಿ ವಿಶೇಷ ಪೂಜೆ ಸಲ್ಲಿಸಿ ಆಶೀರ್ವಾದ ಪಡೆದರು.



ಕೆದಮುಳ್ಳೂರಿನಲ್ಲಿ ನೂತನ ರಸ್ತೆಯನ್ನು ಶಾಸಕರು ಉದ್ಘಾಟಿಸಿದರು.

ಪ್ರಮುಖರಾದ ನಡಿಕೇರಿಯಂಡ ಮಹೇಶ್, ಕೆಡಿಪಿ ಸದಸ್ಯ ಪ್ರಶಾಂತ್ ಉತ್ತಪ್ಪ, ಜಪ್ರಿ ಉತ್ತಪ್ಪ, ಟಾಟು ಮೊಣ್ಣಪ್ಪ, ಪೆಮ್ಮಂಡ ಮಂಜು ಬೋಪಣ್ಣ, ಮತೀನ್, ಇಸ್ಮಾಯಿಲ್, ಪವಿತ್ರ, ವನಿತಾ ತಾಯಮ್ಮ, ಮಾಳೇಟಿರಾ ಸುಬ್ಬಯ್ಯ, ಜಾಲು ಚಂಗಪ್ಪ. ಬಿ.ಜೆ. ವಿಜಯ್ ಕುಮಾರ್. ವಿನು. ಕರಿನೆರವಂಡ ಜಿತನ್, ಮಿಟ್ಟು ಅಯ್ಯಪ್ಪ ಪಾಲೆಯಂಡ ಮದು ಅರುಣಾ ಕೆ.ಎಸ್ ಚಂಗಪ್ಪ ಮಾಳೇಟಿರ ವಿಜಯ್, ಕಲಿಯಂಡ ಸಂಪನ್ ಅಯ್ಯಪ್ಪ, ಸೂರಜ್ ಹೊಸೂರು, ಕುಂಡಚ್ಚಿರ ಮಂಜು ದೇವಯ್ಯ, ಪಟ್ಟಡ ರಕ್ಷಿತ್, ಪ್ರಮುಖರು ಉಪಸ್ಥಿತರಿದ್ದರು.

ಚಾಮರಾಜನಗರದಲ್ಲಿ ಮುದುಕು ಮಾರಮ್ಮ ಹಬ್ಬದ ಸಂಭ್ರಮ

ವಿಜೃಂಭಣೆಯ ತಂಪು, ಮಡೆ ಉತ್ಸವ; ಎಲ್ಲೆಡೆ ಸಂಭ್ರಮ ಬಣ್ಣ–ಬಣ್ಣದ ವಿದ್ಯುತ್ ದೀಪಗಳಿಂದ ಕಂಗೊಳಿಸಿದ ದೇವಸ್ಥಾನ



ಚಾಮರಾಜನಗರ: ನಗರದ ಮುದುಕು ಮಾರಮ್ಮ ಹಬ್ಬದ ಅಂಗವಾಗಿ ತಂಪು, ಮಡೆ ಉತ್ಸವ ವಿಜೃಂಭಣೆಯಿಂದ ನೆರವೇರಿತು.

ಸೋಮವಾರ ರಾತ್ರಿಯಿಂದ ಮಂಗಳವಾರ ಬೆಳಗ್ಗೆಯವರೆಗೆ ಮಾರಮ್ಮನ ದೇವಸ್ಥಾನದ ಮುಂಭಾಗ ಹಬ್ಬದ ಸಂಭ್ರಮ ಕಳೆಗಟ್ಟಿತ್ತು. ಜಿಲ್ಲೆಯ ಸ್ಥಳೀಯ ಕಲಾವಿದರಿಂದ ಆಯೋಜಿಸಿದ್ದ ಸಂಗೀತ ರಸ ಸಂಜೆ ಕಾರ್ಯಕ್ರಮ ನೆರೆದಿದ್ದ ಭಕ್ತರನ್ನು ರಂಜಿಸಿತು.

ಹಬ್ಬದ ಅಂಗವಾಗಿ ಸಂತೇಮರಹಳ್ಳಿ ವೃತ್ತ, ನಾಯಕರ ಬೀದಿ ಹಾಗೂ ಉಪ್ಪಾರ ಬೀದಿಗಳಲ್ಲಿ ದೀಪಾಲಂಕಾರ ಹಾಗೂ ಧ್ವನಿ ವರ್ಧಕ ಅಳವಡಿಸಲಾಗಿತ್ತು. ಹಳೆಯ ಬಸ್ ನಿಲ್ದಾಣದ ಬಳಿ ಇರುವ ಮಾರಿ ಗುಡಿ ದೇವಸ್ಥಾನದ ಮುಂಭಾಗವನ್ನು ವಿಶೇಷವಾಗಿ ಅಲಂಕರಿಸಲಾಗಿತ್ತು. ಹಬ್ಬದ ಅಂಗವಾಗಿ ದೇವಸ್ಥಾನದ ಸುತ್ತ ಬಿಗಿ ಪೊಲೀಸ್ ಬಂದೋಬಸ್ತ್ ವ್ಯವಸ್ಥೆ ಮಾಡಲಾಗಿತ್ತು.



ಮುದುಕು ಮಾರಮ್ಮ ಹಬ್ಬ ವೈಭವದಿಂದ ನೆರವೇರಿತು.

ತಲೆಮಾರುಗಳಿಂದ ಆಚರಣೆ: ನಗರದಲ್ಲಿ ಹಲವು ತಲೆಮಾರುಗಳಿಂದ ನಾಯಕ ಹಾಗೂ ಉಪ್ಪಾರ ಸಮುದಾಯದವರು ಸೇರಿ ಈ ಹಬ್ಬವನ್ನು ಆಚರಿಸುತ್ತಿದ್ದು, ವರ್ಷದಿಂದ ವರ್ಷಕ್ಕೆ ಉತ್ಸವ ಜೋರಾಗುತ್ತಿದೆ.

ಮಾರಮ್ಮನಿಗೆ ಹರಕೆ ಹೊತ್ತ ಮಂದಿ ರಾತ್ರಿ ಸಾವಿರಾರು ಸಂಖ್ಯೆಯಲ್ಲಿ ಸಾಮೂಹಿಕವಾಗಿ ಮೆರವಣಿಗೆಯಲ್ಲಿ ಬಂದು ತಂಪು ಸೇವೆ ಮಾಡುವುದು ಇಲ್ಲಿನ ವಿಶೇಷ. ಅದರಂತೆ ಈ ಬಾರಿಯೂ ಮಾರಮ್ಮನಿಗೆ ಸಾವಿರಾರು ಮಹಿಳೆಯರು ತಂಪು ಮತ್ತು ಮಡೆ ಸೇವೆ ಸಲ್ಲಿಸಿದರು.

ಮಾರನೆ ದಿನವಾದ ಮಂಗಳವಾರ ಸೂರ್ಯೋದಯಕ್ಕೂ ಮೊದಲು ದೇವಸ್ಥಾನದ ಆವರಣದಲ್ಲಿ ಮಡೆ ಸೇವೆಯನ್ನು ನೂರಾರು ಮಹಿಳೆಯರು ಸಲ್ಲಿಸಲಿದ್ದಾರೆ. ಬಳಿಕ, ನಗರದ ಸುತ್ತಲಿನ ಗ್ರಾಮಗಳಿಂದ ಆಗಮಿಸಿರುವ ಸತ್ತಿಗೆ, ಸೂರಾಪಾನಿಗಳ ವಿಜೃಂಭಣೆಯ ಮೆರವಣಿಗೆ ನಡೆಸಲಾಗುವುದು.

ಶ್ರೀ ಪಟ್ಟಲದಮ್ಮ ಜಾತ್ರೆ



ಬೇಗೂರು(ಗುಂಡ್ಲುಪೇಟೆ): ಸಮೀಪದ ರಾಘವಾಪುರ ಗ್ರಾಮದಲ್ಲಿ ಶ್ರೀ ಪಟ್ಟಲದಮ್ಮ ಜಾತ್ರಾ ಮಹೋತ್ಸವ ಭಕ್ತರ ಸಮ್ಮುಖದಲ್ಲಿ ವಿಜೃಂಭಣೆಯಿಂದ ನಡೆಯಿತು

ಶನಿವಾರ ಬೆಳಗ್ಗೆ ಗ್ರಾಮದಲ್ಲಿ ಪಟ್ಟಲದಮ್ಮ ದೇವಿಯ ಉತ್ಸವ ಮೂರ್ತಿಯನ್ನು ಗ್ರಾಮದ ಪ್ರಮುಖ ಬೀದಿಗಳಲ್ಲಿ ತಮಟೆ, ವಾದ್ಯ ಮೇಳ, ಛತ್ರಿ ಚಾಮರ, ಸತ್ತಿಗೆ, ಸುರಪಾನಿ ಸಮೇತ ಉತ್ಸವ ನಡೆಸಿ ದೇವಾಲಯದ ಆವರಣಕ್ಕೆ ತೆರಳಿ ನಂತರ ರಥದ ಚಕ್ರಕ್ಕೆ ತೆಂಗಿನ ಕಾಯಿಗಳನ್ನು ಹೊಡೆದು ತೇರನ್ನು ಎಳೆದು ಭಕ್ತರು ಹರಕೆ ತೀರಿಸಿದರು.

ನಂತರ ಪುರುಷ ಭಕ್ತರು ತೇರನ್ನು ಪಟ್ಟಲದಮ್ಮ ದೇವಿ ದೇವಾಲಯದ ಆವರಣಕ್ಕೆ ಎಳೆದು ತಂದು ನಿಲ್ಲಿಸಿದರು. ಭಾನುವಾರ ಸಂಜೆ ಪುರುಷರು ತೇರನ್ನು ಮಹದೇಶ್ವರ ಸ್ವಾಮಿ ದೇವಾಲಯದ ಬಳಿ ಇರುವ ಬೇವಿನ ಮರದವರೆಗೆ ಎಳೆದು ತಂದರು. ನಂತರ ಮಹಿಳೆಯರು ಸಂಭ್ರಮದಿಂದ ತೇರನ್ನು ಎಳೆದು ಸ್ವಸ್ಥಾನಕ್ಕೆ ನಿಲ್ಲಿಸಿದರು.

ಇರಸವಾಡಿಯಲ್ಲಿ ಶ್ರೀ ಮಂಟೇಸ್ವಾಮಿ, ಶ್ರೀ ದೊಡ್ಡಮ್ಮತಾಯಿ ಕೊಂಡೋತ್ಸವ

ಯಳಂದೂರು, ಮಾ.9– ತಾಲೂಕಿನ ಸಮೀಪದ ಇರಸವಾಡಿ ಉಪ್ಪಾರ ಗ್ರಾಮದಲ್ಲಿ ಶ್ರೀ ಮಂಟೇಸ್ವಾಮಿ ಮತ್ತು ಶ್ರೀದೊಡ್ಡಮ್ಮತಾಯಿ ಅಮ್ಮನವರ ಕೊಂಡೋತ್ಸವ ವಿಜೃಂಭಣೆಯಿಂದ ನಡೆಯಿತು

ಭಾನುವಾರ ಮಧ್ಯರಾತ್ರಿಂಯಲ್ಲೆ ಕೊಂಡೋತ್ಸವಕ್ಕೆ ವಿವಿಧ ಪೂಜೆ ಹೋಮ ಹವನಗಳನ್ನು ನಡೆಸಿದ ಅರ್ಚಕರು ಮಧ್ಯರಾತ್ರಿ ಹೊತ್ತಿಗೆ ಕೊಂಡೋತ್ಸವಕ್ಕೆ ಅಗ್ನಿ ಸ್ಪರ್ಶ ಮಾಡಲಾಗಿತ್ತು.

ಸೋಮವಾರ ಬೆಳಗ್ಗೆಯಿಂದಲೇ ದೇವಾಲಯಲ್ಲಿರುವ ಮಂಟೇಸ್ವಾಮಿ ಮತ್ತು ದೊಡ್ಡಮ್ಮ ತಾಯಿ ಅಮ್ಮನವರಿಗೆ ಪುಷ್ಪಾಲಂಕಾರ ಮಾಡಿದ ಬಳಿಕ ದೇವಾಲಯಕ್ಕೆ ಹಸಿರು ತೋರಣಗಳಿಂದ ಶೃಂಗರಿಸಲಾಯಿತು. ನಂತರ ಮಹಾ ಮಂಗಳಾರತಿ ಮಾಡಿದ ಬಳಿಕ ಭಕ್ತರಿಗೆ ದರುಶನಕ್ಕೆ ಅವಕಾಶ ಮಾಡಲಾಗಿತ್ತು. ಸಂಜೆ ಹೊತ್ತಿಗೆ ಸತ್ತಿಗೆ, ಸೂರಿಪಾನಿ, ಕೊಂಬು ಕಹಳೆ ನಾದಸ್ವರಗಳೊಂದಿಗೆ ದೀನ ಕಟ್ಟೆಯಲ್ಲಿ ಪೂಜೆ ಪುರಸ್ಕಾರ ನಡೆಸಿದ ಬಳಿಕ ಊರಿನ ಪ್ರಮುಖ ಬೀದಿಗಳಲ್ಲಿ ಮೆರವಣಿಗೆ ಬಂದ ಬಳಿಕ ದೇವಾಲಯದ ಅವರಣದಲ್ಲಿ ಹಾಕಲಾಗಿದ್ದ ಕೊಂಡೋತ್ಸವನ್ನು ಸೂರ್ಯಾಸ್ತ ಮುಂಚಿತವಾಗಿ ಅರ್ಚಕರು ಜೋಡಿಯಾಗಿ ಕೊಂಡೋತ್ಸವ ಹಾಯುವ ಮೂಲಕ ಹರಕೆ ತೀರಿಸಿದರು. ಸುತ್ತಮುತ್ತಲಿನ ಗ್ರಾಮದ ಯಜಮಾನರು ಮತ್ತು ಭಕ್ತಾದಿಗಳಿಗೆ ಮಾರಿ ಗುಡಿ ಮೈದಾನದಲ್ಲಿ ಭೋಜನ ವ್ಯವಸ್ಥೆ ಮಾಡಲಾಗಿತ್ತು ಅಹಿತಕರ ಘಟನೆ ನಡೆಯಬಾರದೆಂದು ಸಿಪಿಐ ಸುಬ್ರಮಣ್ಯ ಅವರು ಪೋಲಿಸ್ ಬಂದೋಬಸ್ತ್ ಮಾಡಿದ್ದರು.



ಇರಸವಾಡಿ ಉಪ್ಪಾರ ಗ್ರಾಮದಲ್ಲಿ ಕೋಂಡೋತ್ಸವ ವಿಭೃಂಜಣೆಯಿಂದ ಜರುಗಿತು

ಹಿಮವದ್ ಗೋಪಾಲಸ್ವಾಮಿ ಬೆಟ್ಟದಲ್ಲಿ ಬ್ರಹ್ಮರಥೋತ್ಸವ

ಕೆಎಸ್‌ಆರ್‌ಟಿಸಿ ವಾಹನಗಳಲ್ಲಿ ತೆರಳಲು ವ್ಯವಸ್ಥೆ

ಚಾಮರಾಜನಗರ, ಮಾ.9– ಗುಂಡ್ಲುಪೇಟೆ ತಾಲೂಕಿನ ಹಿಮವದ್ ಗೋಪಾಲ ಸ್ವಾಮಿ ಬೆಟ್ಟದಲ್ಲಿ ಮಾ.15ರಂದು ದಿವ್ಯ ಬ್ರಹ್ಮ ರಥೋತ್ಸವ ಹಾಗೂ ಜಾತ್ರೆ ನಡೆಯಲಿದ್ದು, ರಸ್ತೆ ಸಾರಿಗೆ ಸಂಸ್ಥೆಯ ಬಸ್‌ಗಳನ್ನು ಹೊರತುಪಡಿಸಿ ಉಳಿದ ದ್ವಿಚಕ್ರ, ನಾಲ್ಕು ಚಕ್ರ, ಮಿನಿ ವಾಹನ ಮತ್ತು ಇತರೆ ವಾಹನಗಳಲ್ಲಿ ಬರುವ ಭಕ್ತಾಧಿಗಳು ಅರಣ್ಯ ಇಲಾಖೆಯ ಚೆಕ್‌ಪೋಸ್ಟ್ ಮೈದಾನದಲ್ಲಿ ವಾಹನಗಳನ್ನು ನಿಲುಗಡೆ ಮಾಡಿ, ಕೆಎಸ್‌ಆರ್‌ಟಿಸಿ ವಾಹನಗಳಲ್ಲಿ ನಿಗದಿಪಡಿಸಿರುವ ದರ ಪಾವತಿಸಿ ದೇವರ ದರ್ಶನಕ್ಕೆ ಹೋಗಿ ಬರುವ ವ್ಯವಸ್ಥೆ ಮಾಡಲಾಗಿದೆ. ಭಕ್ತಾಧಿಗಳು ಮತ್ತು ಸಾರ್ವಜನಿಕರು ಸಹಕರಿಸಬೇಕೆಂದು ತಹಶೀಲ್ದಾರ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಕಾಗಲವಾಡಿಯಲ್ಲಿ ವ್ಯಕ್ತಿ ನಾಪತ್ತೆ



ಚಾಮರಾಜನಗರ: ಚಾಮರಾಜನಗರ ತಾಲೂಕಿನ ಕಾಗಲವಾಡಿ ಗ್ರಾಮದ ರವಿಕುಮಾರ ಎಂಬುವವರು ಕಾಣೆಯಾಗಿದ್ದು, ಇವರ ಸುಳಿವಿಗೆ ಸಹಕರಿಸುವಂತೆ ಕೋರಲಾಗಿದೆ.

52 ವರ್ಷದ ರವಿಕುಮಾರ 5.2 ಅಡಿ ಎತ್ತರ, ಕೋಲು ಮುಖ, ಗೋಧಿ ಮೈಬಣ್ಣ, ಸಾಧಾರಣ ಮೈಕಟ್ಟು ಹೊಂದಿದ್ದು, ಎಡ ಕೆನ್ನೆಯ ಮೇಲೆ ಹಳೆ ಗಾಯದ ಗುರುತು ಇರುತ್ತದೆ. ಕಾಣೆಯಾದಾಗ ಬಿಳಿ ಬಣ್ಣದ ತುಂಬು ತೋಳಿನ ಶರ್ಟ್, ಕಪ್ಪು ಬಣ್ಣದ ಪ್ಯಾಂಟ್ ಧರಿಸಿದ್ದರು.

ಇವರ ಸುಳಿವು ದೊರೆತಲ್ಲಿ ಜಿಲ್ಲಾ ಪೊಲೀಸ್ ಅಧೀಕ್ಷಕರು ದೂ.ಸಂ 08226–222243, ಚಾಮರಾಜನಗರ ಪೂರ್ವ ಪೊಲೀಸ್ ಠಾಣೆ ದೂ.ಸಂ 08226–222058, ಪೊಲೀಸ್ ಇನ್ಸ್‌ಪೆಕ್ಟರ್ ಮೊ.ಸಂ 9480804648, ಸಂಪರ್ಕಿಸುವಂತೆ ಪ್ರಕಟಣೆ ತಿಳಿಸಿದೆ.

ಅಂಬೇಡ್ಕರ್ ಭವನಗಳು ಅಧ್ಯಯನ ಕೇಂದ್ರಗಳಾಗಲಿ: ಜ್ಞಾನಪ್ರಕಾಶ್ ಸ್ವಾಮೀಜಿ

ಭೋಗಾಪುರದಲ್ಲಿ ನೂತನ ಅಂಬೇಡ್ಕರ್ ಸಮುದಾಯ ಭವನ ಉದ್ಘಾಟನೆ

ಚಾಮರಾಜನಗರ: ಬಾಬಾ ಸಾಹೇಬ್ ಡಾ.ಬಿ.ಆರ್. ಅಂಬೇಡ್ಕರ್ ಸಮುದಾಯ ಭವನಗಳನ್ನು ಅಧ್ಯಯನ ಕೇಂದ್ರಗಳಾಗಿ ಮಾಡಲೇಬೇಕು ಎಂದು ಮೈಸೂರಿನ ಉರಿಲಿಂಗಿಪೆದ್ದಿ ಮಠದ ಜ್ಞಾನಪ್ರಕಾಶ್ ಸ್ವಾಮೀಜಿ ಹೇಳಿದರು.

ತಾಲೂಕಿನ ಭೋಗಾಪುರ ಗ್ರಾಮದಲ್ಲಿ ನಡೆದ ವಿಶ್ವಜ್ಞಾನಿ ಸಂವಿಧಾನ ಶಿಲ್ಪಿ ಡಾ. ಬಿ.ಆರ್.ಅಂಬೇಡ್ಕರ್ ಸಮುದಾಯ ಭವನ ಉದ್ಘಾಟನಾ ಕಾರ್ಯಕ್ರಮದಲ್ಲಿ ವಿಶೇಷ ಆಹ್ವಾನಿತರಾಗಿ ಭಾಗವಹಿಸಿ ಮಾತನಾಡಿದರು. ಸೌಲಭ್ಯ ವಂಚಿತ ಬಡಾವಣೆಯ ಪೌರ ಕಾರ್ಮಿಕ ಮಗನೂ ಆರ್‌ಬಿಐ ಬ್ಯಾಂಕ್ ಮುಖ್ಯ ಅಧಿಕಾರಿಯಾಗಿದ್ದಾರೆ. ಯಕೆಗೆ ಹೋಗುತ್ತಾರೆ ಅಂದ ಮೇಲೆ ಭೋಗಾಪುರ ಗ್ರಾಮದಲ್ಲಿ ಎಲ್ಲ ಸೌಲಭ್ಯಗಳಿರುವ ಮಕ್ಕಳು ಎಷ್ಟರ ಮಟ್ಟಿಗೆ ಓದಬೇಕು. ಅದ ಕ್ಕಾಗಿ ದಯಮಾಡಿ ಅಂಬೇಡ್ಕರ್ ಸಮು ದಾಯ ಭವನವನ್ನು ಅಧ್ಯಯನ ಕೇಂದ್ರ ವನ್ನಾಗಿ ಮಾಡಲೇಬೇಕು. ಇಲ್ಲದಿದ್ದರೆ ನಿಮ್ಮ ಗ್ರಾಮಕ್ಕೆ ಯಾವುದೇ ಕಾರಣಕ್ಕೂ ಬರಲ್ಲ ಎಂದರು.



ಡಾ.ಬಿ.ಆರ್.ಅಂಬೇಡ್ಕರ್ ಸಮುದಾಯ ಭವನ ಉದ್ಘಾಟನಾ ಕಾರ್ಯಕ್ರಮದಲ್ಲಿ ಮೈಸೂರಿನ ಉರಿಲಿಂಗಿಪೆದ್ದಿ ಮಠದ ಜ್ಞಾನ ಪ್ರಕಾಶ್ ಸ್ವಾಮೀಜಿ ಮಾತನಾಡಿದರು.

ಅಂಬೇಡ್ಕರ್ ಸಮುದಾಯ ಭವನಗಳನ್ನೂ ತಾಲೂಕು, ಹೋಬಳಿ, ಗ್ರಾಮಗಳಲ್ಲಿ ಕಟ್ಟಿಕಟ್ಟಿ ನಿಲ್ಲಿಸಿ ಅವುಗಳಿಗೆ ಧೂಳು ಹಿಡಿದುಕೊಂಡು ಫ್ಯಾನುಗಳು ಮುರಿದು ಬಿದ್ದು ಹೋಗಿದ್ದು, ಕಿಟಕಿ ಬಾಗಿಲು ಹಾಳಾ ಗಿವೆ. ಆಗಾಗಿ ಭೋಗಾಪುರ ಗ್ರಾಮದ ಚರಿತ್ರೆ ಬದಲಾಗುವುದು ಈಟಿ, ಭರ್ಜಿ, ಕತ್ತಿಗಳಿಂದ ಅಲ್ಲ ಪೆನ್ನಿನ ಮುಖಾಂತರ ವಾಗಿ. ನಿಮ್ಮ ಮಕ್ಕಳಿಗೆ ಪೆನ್ನು ಕೊಟ್ಟರೆ ಅವರು ಗ್ರಾಮದ ಚರಿತ್ರೆ ಬದಲು ಮಾಡಿ ಬಿಡುತ್ತಾರೆ ಎಂದರು.

ದೇಶದ 7029 ಹಳ್ಳಿಗಳಲ್ಲಿ ದಲಿತರಲ್ಲಿ ಸತ್ತರೆ ಅಂತ್ಯಸಂಸ್ಕಾರಕ್ಕೆ ಸ್ಮಶಾನಗಳಿಲ್ಲ. ಎಸ್‌ಎಸ್‌ಎಲ್‌ಸಿ, ಪಿಯುಸಿ ಹಂತದಲ್ಲಿ ಶಾಲೆಬಿಟ್ಟು ಕಲ್ಯಾಣ ಮಂಟಪಗಳಲ್ಲಿ ಅಡುಗೆ, ಎಲೆ ಹಾಕಲು ಹೋಗುತ್ತಿದ್ದಾರೆ. ಇದನ್ನು ನಾವು ಅರ್ಥಮಾಡಿಕೊಳ್ಳಬೇಕು. ರಾಜಕಾರಣಿಗಳಿಗೆ ತಾಯಿತನದ ಹೃದಯ ಇರಬೇಕು. ಬಿ.ರಾಚಯ್ಯನವರು ರಾಗಿಹೊಲದಿಂದ ರಾಜಭವನಕ್ಕೆ ಹೋದ ಪುಣ್ಯಪುರುಷರು ಅವರ ಫೋಟೋಗಳು ಸಿದ್ದಯ್ಯನಪುರ ಹಿಡಿದು ಚಂದಕವಾಡಿ ಬಿಸಲವಾಡಿ, ಅಮಚವಾಡಿ ಇತರೆ ಗ್ರಾಮಗಳಲ್ಲಿ ಅವರ ಫೋಟೋ ಇದೆ ಎಂದರು.

ಅಂಬೇಡ್ಕರ್ ಎಂದರೆ ಭಾಷಣವಲ್ಲ ತ್ಯಾಗ. ನಿಮ್ಮ ಮಕ್ಕಳು ಐಎಎಸ್, ಐಪಿಎಸ್, ಕೆಎಎಸ್ ಮಾಡಿದಾಗ ಮಾತ್ರ ಅಂಬೇಡ್ಕರ್ ಜೀವಂತವಾಗಿರುತ್ತಾರೆ. ಅವರು ಭಾಷಣ, ಪ್ರತಿಮೆಯಲ್ಲಿ ಇಲ್ಲ ಅವರು ಬರವಣಿಗೆ, ಪುಸ್ತಕದಲ್ಲಿ ಇದ್ದಾರೆ. ಹಾಗಾಗಿ ಮಕ್ಕಳ ಕೈಯಲ್ಲಿ ಅಂಬೇಡ್ಕರ್ ಪುಸ್ತಕ ಕೊಟ್ಟು ಅಂಬೇಡ್ಕರ್ ಸಮುದಾಯ ಭವನದಲ್ಲಿ ಓದಿಸಿದರೆ ಮುಂದಿನ ದಿನಗಳಲ್ಲಿ ಅದ್ಭುತವಾದ ಕ್ರಾಂತಿ ಮಾಡುತ್ತಾರೆ. ಈ ಕೆಲಸವನ್ನು ನೀವು ಮಾಡುವ ಮೂಲಕ ಅಂಬೇಡ್ಕರ್ ಕನಸು ನನಸು ಮಾಡಬೇಕು ಎಂದರು.

ಅಧ್ಯಕ್ಷತೆ ವಹಿಸಿದ್ದ ಸಿ.ಪುಟ್ಟರಂಗಶೆಟ್ಟಿ ಮಾತನಾಡಿ, ಬಾಬಾ ಸಾಹೇಬ್ ಡಾ.ಬಿ. ಆರ್.ಅಂಬೇಡ್ಕರ್ ಅವರು ಸರ್ವರಿಗೂ ಮೀಸಲಾತಿ ಕೊಟ್ಟಿದ್ದಾರೆ. ಅವರ ಮೀಸಲಾತಿ ಋಣದಿಂದ ನಾನು ನಾಲ್ಕು ಬಾರಿ ಶಾಸಕರಾಗಲು ಸಾಧ್ಯವಾಯಿತು. ಅವರ ತತ್ತ್ವ, ಆದರ್ಶಗಳನ್ನು ನಾವೆಲ್ಲರೂ ಮೈಗೂಡಿಸಿಕೊಂಡು ಹೋಗೋಣ ಎಂದರು.

ಮುಖ್ಯ ಅತಿಥಿಯಾಗಿ ಭಾಗವಹಿಸಿದ್ದ ಕೊಳ್ಳೇಗಾಲ ವಿಧಾನಸಭಾ ಕ್ಷೇತ್ರದ ಶಾಸಕ ಎ.ಆರ್.ಕೃಷ್ಣಮೂರ್ತಿ ಮಾತನಾಡಿ, ಅಂಬೇಡ್ಕರ್ ಸಮುದಾಯ ಭವನಗಳು ಜೂಜುಕೇಂದ್ರಗಳಾಗುತ್ತಿದೆ. ಅದರ ಬಗ್ಗೆ ಗ್ರಾಮದ ಯಜಮಾನರುಗಳು ಗಮನಹರಿಸಬೇಕು ಸಮುದಾಯದ ಒಳ್ಳೆಯ ಉದ್ದೇಶಗಳಿಗೆ ಬಳಕೆ ಮಾಡಿಕೊಳ್ಳಬೇಕು ಎಂದು ಸಲಹೆ ನೀಡಿದರು.

ಭೋಗಾಪುರ ವಸತಿಯುಕ್ತ ಪ್ರಥಮ ದರ್ಜೆ ಕಾಲೇಜು ಪ್ರಾಂಶುಪಾಲ ಪಿ. ದೇವರಾಜು ಮಾತನಾಡಿದರು. ಕಾರ್ಯಕ್ರಮದಲ್ಲಿ ಜಿಲ್ಲಾ ಗ್ಯಾರಂಟಿ ಯೋಜನೆಗಳ ಸಮಿತಿ ಅಧ್ಯಕ್ಷ ಹೆಚ್.ವಿ.ಚಂದ್ರು, ತಾ.ಪಂ.ಮಾಜಿ ಸದಸ್ಯ ಆರ್.ಮಹದೇವು, ಶಾಂತಕುಮಾರಿ, ದೀಪಾ ಅಕಾಡೆಮಿ ರವಿ, ಎಪಿಎಂಸಿ ಮಾಜಿ ಅಧ್ಯಕ್ಷ ನಾಗೇಂದ್ರ, ಪಿಡಿಓ ಮಾನಸ, ಕುದೇರು ಪೊಲೀಸ್ ಠಾಣೆಯ ಸಬ್‌ಇನ್ಸ್‌ಪೆಕ್ಟರ್ ಈಶ್ವರ, ಮುಖಂಡ ಮಹೇಶ್ ಕುದರ್, ಯಜಮಾನರಾದ ಮಹಾಲಿಂಗು, ಶ್ರೀಧರ್, ಮಲ್ಲಿಕಾರ್ಜುನ, ಮುಖಂಡರಾದ ಗುರುಲಿಂಗಯ್ಯ, ಶಿವಮಲ್ಲಯ್ಯ, ರವಿ, ಚನ್ನಕೇಶವ, ಪ್ರಕಾಶ್, ಕೆಂಪರಾಜು, ದರ್ಶನ್, ಸಚಿನ್ ಜಯರಾಂ, ರಾಜೇಶ್, ಮೋಹನ್ ಹಾಗೂ ಗ್ರಾಮದ ಎಲ್ಲಾ ಕೋಮಿನ ಯಜಮಾನರು, ಗ್ರಾಮಸ್ಥರು ಹಾಜರಿದ್ದರು.

ಅಚ್ಚುತ ನಿಧನ



ಬೇಗೂರು: ಗುಂಡ್ಲುಪೇಟೆ ತಾಲೂಕಿನ ಪಂಜನಹಳ್ಳಿ ಗ್ರಾಮದ ನಿವಾಸಿ ಅಚ್ಚುತ(65) ಅನಾರೋಗ್ಯದಿಂದ ನಿಧನರಾದರು

ದಿವಂಗತರು ಪತ್ನಿ, ಪುತ್ರ, ಪುತ್ರಿ ಸೇರಿದಂತೆ ಅಪಾರ ಬಂಧು–ಬಳಗ ಅಗಲಿದ್ದಾರೆ. ಇವರ ಅಂತ್ಯಕ್ರಿಯೆ ಪಂಜನಹಳ್ಳಿ ಗ್ರಾಮದ ತೋಟದಲ್ಲಿ ಭಾನುವಾರ ಮಧ್ಯಾಹ್ನ ನಡೆಯಿತು

ಮತ್ತಿಗೋಡು ಶಿಬಿರದಲ್ಲಿ ಅನಾರೋಗ್ಯದಿಂದ ಸಾಕಾನೆ ಜೂ: ಅಭಿ ಸಾವು



ಮೈಸೂರು, ಮಾ.9(ಎಂಟಿವೈ)– ಮೈಸೂರು ಮೃಗಾಲಯದಲ್ಲಿ ನಡೆದ ಆಕಸ್ಮಿಕ ಘಟನೆಯಲ್ಲಿ ಮಾವುತರೊಬ್ಬರನ್ನು ಬಲಿ ಪಡೆದು ಮತ್ತಿಗೋಡು ಶಿಬಿರಕ್ಕೆ ಸ್ಥಳಾಂತರಗೊಂಡಿದ್ದ ಜೂಃ ಅಭಿ(23) ಸಾಕಾನೆ ಅನಾರೋಗ್ಯದಿಂದ ಸಾವನ್ನಪ್ಪಿದೆ.

ನಾಗರಹೊಳೆ ಹುಲಿ ಸಂರಕ್ಷಿತ ಪ್ರದೇಶ ವ್ಯಾಪ್ತಿಯ ಮತ್ತಿಗೋಡು ಸಾಕಾನೆ ಶಿಬಿರದಲ್ಲಿ 2023ರಿಂದ ಆಶ್ರಯ ಪಡೆದಿದ್ದ ಅಭಿ, ಭಾನುವಾರ ಸಂಜೆ ಶಿಬಿರದಲ್ಲಿಯೇ ಕುಸಿದು ಬಿದ್ದು ಸಾವನ್ನಪ್ಪಿರುವುದಾಗಿ ಅರಣ್ಯ ಇಲಾಖೆ ಅಧಿಕಾರಿಗಳು ತಿಳಿಸಿದ್ದಾರೆ.

ಮೃಗಾಲಯದಲ್ಲಿ ಬೆಳೆದಿದ್ದ ಅಭಿ ತನ್ನನ್ನು ಸಲುಹಿದ ಮಾವುತನನ್ನೇ ಬಲಿ ಪಡೆದಿತ್ತು. ಇದರಿಂದ ಮೇಲಾಧಿಕಾರಿಗಳ ಅನುಮತಿ ಪಡೆದು ಮೈಸೂರು ಮೃಗಾಲಯದಿಂದ ಮತ್ತಿಗೋಡು ಶಿಬಿರಕ್ಕೆ ಸ್ಥಳಾಂತರಿಸಲಾಗಿತ್ತು. ಶಿಬಿರದಲ್ಲಿ ಪರಿವರ್ತನೆಗೊಂಡು ಎಲ್ಲರ ಮನಗೆದ್ದಿತ್ತು. ಕಾಡಾನೆ ಸೆರೆ, ಹುಲಿ ಸೆರೆ ಕಾರ್ಯಾಚರಣೆಗೆ ತರಬೇತಿ ನೀಡಿ ಸಜ್ಜುಗೊಳಿಸಲಾಗಿತ್ತು.

ಆದರೆ ಕಾಡಿಗೆ ಮೇಯಲು ಹೋಗಿದ್ದಾಗ ಎಂಟು ತಿಂಗಳ ಹಿಂದೆ ಹಳ್ಳಕ್ಕೆ ಬಿದ್ದು ಕಾಲಿಗೆ ಗಾಯವಾಗಿತ್ತು. ನಿರಂತರವಾಗಿ ಚಿಕಿತ್ಸೆ ನೀಡುತ್ತಿದ್ದರೂ ಸುಧಾರಿಸಿರಲಿಲ್ಲ. ದಿನಕಳೆದಂತೆ ಅಭಿ ಆನೆಯ ಆರೋಗ್ಯ ಕ್ಷೀಣಿಸುತ್ತಲೇ ಇತ್ತು. ಕಳೆದೆರಡು ದಿನಗಳಿಂದ ತೀವ್ರ ಅನಾರೋಗ್ಯಕ್ಕೀಡಾಗಿ ಭಾನುವಾರ ಸಂಜೆ ಮೃತಪಟ್ಟಿದೆ.

ಪಶುವೈದ್ಯ ಡಾ.ರಮೇಶ್ ವೈದ್ಯಕೀಯ ಪರೀಕ್ಷೆ ನಡೆಸಿದ ನಂತರ ಹಿರಿಯ ಅಧಿಕಾರಿಗಳ ಸಮ್ಮುಖದಲ್ಲಿ ಜೂಃ ಅಭಿ ಆನೆಯ ಅಂತ್ಯಕ್ರಿಯೆ ನಡೆಸಲಾಯಿತು.

ಮಾ.18ರಿಂದ ಎಸ್‌ಎಸ್‌ಎಲ್‌ಸಿ ಪರೀಕ್ಷೆ; 136 ಕೇಂದ್ರಗಳಲ್ಲಿ 36,030 ವಿದ್ಯಾರ್ಥಿಗಳು



ಮೈಸೂರು, ಮಾ.9(ಎಸ್‌ಪಿಎನ್)– 2025–26ನೇ ಸಾಲಿನ ಎಸ್‌ಎಸ್‌ಎಲ್‌ಸಿ ಪರೀಕ್ಷೆ(ರಾಜ್ಯ ಪಠ್ಯಕ್ರಮ)ಗೆ ಮೈಸೂರು ಜಿಲ್ಲೆ ಸಂಪೂರ್ಣ ಸಿದ್ಧಗೊಂಡಿದ್ದು, ಈಗಾಗಲೇ ನಗರ ಮತ್ತು ಗ್ರಾಮೀಣ ಪ್ರದೇಶಗಳಲ್ಲಿ 136 ಪರೀಕ್ಷಾ ಕೇಂದ್ರಗಳನ್ನು ಸ್ಥಾಪಿಸಲಾಗಿದೆ. ಈ ಕೇಂದ್ರಗಳಲ್ಲಿ 36,030 ವಿದ್ಯಾರ್ಥಿ(ಆರ್‌ಎಫ್)ಗಳು ಮಾ.18 ರಿಂದ ಏ.2ರವರೆಗೆ ಪರೀಕ್ಷೆ ಬರೆಯಲಿದ್ದಾರೆ.

ಮೈಸೂರು ಜಿಲ್ಲೆಯಲ್ಲಿ 277 ಸರ್ಕಾರಿ ಪ್ರೌಢ ಶಾಲೆ, 122 ಅನುದಾನಿತ, 304 ಅನುದಾನರಹಿತ ಸೇರಿದಂತೆ ಒಟ್ಟು 703 ಪ್ರೌಢ'ಶಾಲಾ ವಿದ್ಯಾರ್ಥಿಗಳು 136 ಕೇಂದ್ರಗಳಲ್ಲಿ 36, 030 ವಿದ್ಯಾರ್ಥಿಗಳು ಪರೀಕ್ಷೆ ಬರೆಯಲಿದ್ದಾರೆ. ಇದರಲ್ಲಿ 44 ನಗರ ಪರೀಕ್ಷಾ ಕೇಂದ್ರಗಳು ಹಾಗೂ 92 ಗ್ರಾಮೀಣ ಪರೀಕ್ಷಾ ಕೇಂದ್ರಗಳು ಸೇರಿದಂತೆ ಒಟ್ಟು 136 ಪರೀಕ್ಷಾ ಕೇಂದ್ರಗಳನ್ನು ಸ್ಥಾಪಿಸಲಾಗಿದೆ.

ಹೆಚ್.ಡಿ.ಕೋಟೆ ತಾಲೂಕಿನಲ್ಲಿ 13 ಪರೀಕ್ಷಾ ಕೇಂದ್ರಗಳಲ್ಲಿ 3,096 ವಿದ್ಯಾರ್ಥಿಗಳು ಪರೀಕ್ಷೆ ಬರೆಯಲಿದ್ದಾರೆ. ಹುಣಸೂರು ತಾಲೂಕಿನಲ್ಲಿ 15 ಪರೀಕ್ಷಾ ಕೇಂದ್ರಗಳಲ್ಲಿ 4,083 ವಿದ್ಯಾರ್ಥಿಗಳು, ಕೆ.ಆರ್.ನಗರ ತಾಲೂಕಿನಲ್ಲಿ 11 ಪರೀಕ್ಷಾ ಕೇಂದ್ರಗಳಲ್ಲಿ 2,843 ವಿದ್ಯಾರ್ಥಿಗಳು, ಮೈಸೂರು ದಕ್ಷಿಣ ವಲಯದಲ್ಲಿ 16 ಕೇಂದ್ರಗಳಲ್ಲಿ 4,384 ವಿದ್ಯಾರ್ಥಿಗಳು, ಮೈಸೂರು ಉತ್ತರ ವಲಯದಲ್ಲಿ 19 ಪರೀಕ್ಷಾ ಕೇಂದ್ರಗಳಲ್ಲಿ 5,750 ವಿದ್ಯಾರ್ಥಿಗಳು, ಮೈಸೂರು ಗ್ರಾಮಾಂತರದಲ್ಲಿ 17 ಪರೀಕ್ಷಾ ಕೇಂದ್ರಗಳಲ್ಲಿ 4,735 ವಿದ್ಯಾರ್ಥಿಗಳು, ನಂಜನಗೂಡಿನಲ್ಲಿ 19 ಪರೀಕ್ಷಾ ಕೇಂದ್ರಗಳಲ್ಲಿ 4,689 ವಿದ್ಯಾರ್ಥಿಗಳು, ಪಿರಿಯಾಪಟ್ಟಣದಲ್ಲಿ 19 ಪರೀಕ್ಷಾ ಕೇಂದ್ರಗಳಿದ್ದು, 2,961 ವಿದ್ಯಾರ್ಥಿಗಳು ಹಾಗೂ ತಿ.ನರಸೀಪುರದಲ್ಲಿ 13 ಪರೀಕ್ಷಾ ಕೇಂದ್ರಗಳಿದ್ದು, 3,489 ವಿದ್ಯಾರ್ಥಿಗಳು ಒಟ್ಟು 136 ಕೇಂದ್ರಗಳಲ್ಲಿ 36,030 ವಿದ್ಯಾರ್ಥಿಗಳು ಪರೀಕ್ಷೆ ಬರೆಯಲು ಸಿದ್ಧರಿದ್ದಾರೆ.

ಜಿಲ್ಲೆಯ ಪರೀಕ್ಷಾ ಕೇಂದ್ರಗಳಲ್ಲಿ ಮುಖ್ಯ ಅಧೀಕ್ಷಕರು 136, ಉಪ ಮುಖ್ಯಅಧೀಕ್ಷಕರು 24, ಮಾರ್ಗಾಧಿಕಾರಿಗಳು 154, ಪ್ರಶ್ನೆ ಪತ್ರಿಕೆ ಪಾಲಕರು 136, ಸ್ಥಾನಿಕ ಜಾಗೃತ ದಳವರು 136, ಮೊಬೈಲ್ ಸ್ವಾಧೀನಾಧಿಕಾರಿಗಳು 136, ತಾಲೂಕು ಹಂತದ ಜಾಗೃತ ದಳ(ಪ್ರತಿ ಬ್ಲಾಕ್‌ಗೆ) 18, ಜಿಲ್ಲಾ ಜಾಗೃತ ದಳ 3, ಡಿಸಿ ಮತ್ತು ಸಿಇಓ ಸೂಚಿಸುವ ಜಾಗೃತದಳ 2 ಕಾರ್ಯ ನಿರ್ವಹಿಸಲಿವೆ ಎಂದು ಡಿಡಿಪಿಐ ಉದಯ ಕುಮಾರ್ 'ಮೈಸೂರು ಮಿತ್ರ'ನಿಗೆ ಮಾಹಿತಿ ನೀಡಿದರು.

ಎಸ್‌ಎಸ್‌ಎಲ್‌ಸಿ ಪರೀಕ್ಷಾ ವೇಳಾಪಟ್ಟಿ
ಮಾ.18 ಪ್ರಥಮ ಭಾಷೆ, ಮಾ.23 ವಿಜ್ಞಾನ, ಮಾ.25 ದ್ವಿತೀಯ ಭಾಷೆ ಮಾ.28 ಗಣಿತ, ಮಾ.30 ತೃತೀಯ ಭಾಷೆ, ಏ.2 ಸಮಾಜ ವಿಜ್ಞಾನ ಪರೀಕ್ಷೆ ಬೆಳಗ್ಗೆ 10ರಿಂದ ಮಧ್ಯಾಹ್ನ 1.15ರವರೆಗೆ ನಡೆಯಲಿದೆ

ಒಟ್ಟು 39,349 ವಿದ್ಯಾರ್ಥಿಗಳು: ಈ ಸಾಲಿನ ಎಸ್‌ಎಸ್‌ಎಲ್‌ಸಿ ಪರೀಕ್ಷೆಗೆ ನೋಂದಾಯಿಸಿದ ವಿದ್ಯಾರ್ಥಿಗಳ ವಿವರ: ಶಾಲಾ ರೆಗ್ಯುಲರ್ ವಿದ್ಯಾರ್ಥಿಗಳು(ಆರ್‌ಎಫ್) 36,030, ಶಾಲಾ ರೆಗ್ಯುಲರ್ ಪುನರಾವರ್ತಿತ (ಆರ್‌ಆರ್) 2458, ಖಾಸಗಿ ವಿದ್ಯಾರ್ಥಿಗಳು(ಆರ್‌ಆರ್) 728, ಖಾಸಗಿ ಪುನರಾವರ್ತಿತ(ಪಿಆರ್) 133 ಸೇರಿದಂತೆ ಒಟ್ಟು 39,349 ವಿದ್ಯಾರ್ಥಿಗಳು ಪರೀಕ್ಷೆ ಎದುರಿಸಲಿದ್ದಾರೆ.

ಅಕ್ರಮ ತಡೆಗಟ್ಟಲು ಸನ್ನದ್ಧು: ಪರೀಕ್ಷಾ ಅಕ್ರಮ ತಡೆಗಡೆಗಟ್ಟಲು ಜಿಲ್ಲೆಯ ಎಲ್ಲಾ ಪರೀಕ್ಷಾ ಕೇಂದ್ರಗಳಲ್ಲಿನ ಎಲ್ಲಾ ಕೊಠಡಿಗಳಿಗೆ ಸಿಸಿ ಕ್ಯಾಮರಾ ಮತ್ತು ವೆಬ್ ಕಾಸ್ಟಿಂಗ್ ಅಳವಡಿಸಲಾಗಿದೆ.

ಪರೀಕ್ಷಾ ಸಹಾಯವಾಣಿ ಆರಂಭ: ಮೈಸೂರು ಜಿಲ್ಲಾ ಮತ್ತು ತಾಲೂಕು ಹಂತದಲ್ಲಿ ಪರೀಕ್ಷಾ ಸಹಾಯವಾಣಿ ತೆರೆಯಲಾಗಿದೆ. ಪ್ರತಿ ಬ್ಲಾಕ್‌ನಲ್ಲಿ ವಿಷಯುವಾರು ಶಿಕ್ಷಕರ ತಂಡ ರಚಿಸಿ, ವಿಷಯವಾರು ಸಂಪನ್ಮೂಲ ಶಿಕ್ಷಕರು ಬೆಳಗ್ಗೆ 5ರಿಂದ 9, ಸಂಜೆ 6ರಿಂದ ರಾತ್ರಿ 10ರವರೆಗೆ ಸಹಾಯವಾಣಿಗೆ ಕರೆ ಮಾಡುವ ಮಕ್ಕಳ ಕರೆ ಸ್ವೀಕರಿಸಿ ಸೂಕ್ತ ತಿಳುವಳಿಕೆ ನೀಡಲು ಶಿಕ್ಷಕರ ತಂಡವನ್ನು ನಿಯೋಜನೆ ಮಾಡಲಾಗಿದೆ.

ಮಕ್ಕಳ ವ್ಯಾಸಂಗದ ಬಗ್ಗೆ ಪರಿಶೀಲನೆ: ಪ್ರತಿ ತಾಲೂಕಿನಲ್ಲಿ ಬಿಇಓ ನೇತೃತ್ವದ ತಂಡ, ಮುಖ್ಯಶಿಕ್ಷಕರು ಹಾಗೂ ಸಹ ಶಿಕ್ಷಕರ ತಂಡ ರಾತ್ರಿ 7ರಿಂದ 9ರವರೆಗೆ ಹಾಗೂ ಬೆಳಗಿನ ಜಾವಾ 5 ರಿಂದ 7 ಗಂಟೆಯವರೆಗೆ ಎಸ್‌ಎಸ್‌ಎಲ್‌ಸಿ ಪರೀಕ್ಷೆ ಬರೆಯುತ್ತಿರುವ ವಿದ್ಯಾರ್ಥಿಗಳ ಮನೆಮನೆಗೆ ಭೇಟಿ ನೀಡಿ, ಪರೀಕ್ಷಾ ಸಿದ್ಧತೆ ಕುರಿತು ಪರಿಶೀಲನೆ ಮಾಡಲಾಗುತ್ತಿದೆ.

ಜೆಎಸ್‌ಎಸ್ ಫಿಸಿಯೋಥೆರಪಿ ಕಾಲೇಜಿನ ವಾರ್ಷಿಕ ಕ್ರೀಡಾಕೂಟ



ಮೈಸೂರು, ಮಾ. 9– ಜೆಎಸ್‌ಎಸ್ ಫಿಸಿಯೋಥೆರಪಿ ಕಾಲೇಜಿನ 2025–26 ನೇ ಸಾಲಿನ ವಾರ್ಷಿಕ ಕ್ರೀಡಾಕೂಟವನ್ನು ಮೈಸೂರು ವಿಶ್ವವಿದ್ಯಾನಿಲಯದ ಓವೆಲ್ ಮೈದಾನದಲ್ಲಿ ಏರ್ಪಡಿಸಲಾಗಿತ್ತು. ಮುಖ್ಯ ಅತಿಥಿಗಳಾಗಿ ರಾಷ್ಟ್ರೀಯ ಕ್ರೀಡಾಪಟು ಮತ್ತು ಮಹಾಜನ ಕಾನೂನು ಕಾಲೇಜು ದೈಹಿಕ ಶಿಕ್ಷಣ ನಿರ್ದೇಶಕ ಡಾ. ಭರತ್‌ನಾಗ್ ಆಗಮಿಸಿದ್ದರು.

ರಾಷ್ಟ್ರಮಟ್ಟದ ಕ್ರೀಡಾಪಟುಗಳಾದ ವರುಣ್, ಬೆನ್ ಮತ್ತು ನಯನ್‌ಕುಮಾರ್ ಈ ಕ್ರೀಡಾಕೂಟದ ಕ್ರೀಡಾ ಜ್ಯೋತಿಯನ್ನು ತಂದರು. ಕ್ರೀಡಾಕೂಟದಲ್ಲಿ ಪುರುಷರ ವಿಭಾಗದಲ್ಲಿ ಹನುಮಂತಗೌಡ ಪಾಟೀಲ್ ಮತ್ತು ಮಹಿಳೆಯರ ವಿಭಾಗದಲ್ಲಿ ಗೌರಿ ವಿ ಚೈತನ್ಯ ಮತ್ತು ಸದಿಕಾ ಪೊನ್ನಮ್ಮ ಸಿ ಎನ್ ಜಂಟಿಯಾಗಿ ಅಥ್ಲೆಟಿಕ್ ಚಾಂಪಿಯನ್ ಆಗಿ ಹೊರಹೊಮ್ಮಿದ್ದಾರೆ.

ಕಾರ್ಯಕ್ರಮದಲ್ಲಿ ಕಾಲೇಜಿನ ಪ್ರಾಂಶುಪಾಲರಾದ ಡಾ.ಕವಿತಾ ರಾಜ, ಕಾಲೇಜಿನ ಪ್ರಾಧ್ಯಾಪಕರಾದ ಡಾ. ವಿಜಯ್ ಸಾಮ್ಯುಯಲ್ ರಾಜ್ ವಿ, ಶ್ರೀಮತಿ. ತೇಜಸ್ವಿನಿ ಎಸ್ ಎನ್, ಡಾ ಸಂದೀಪ್ ಪಿ ಹೆಚ್, ಹಾಗೂ ನೋಬಲ್ ಮತ್ತು ದೈಹಿಕ ಶಿಕ್ಷಣ ನಿರ್ದೇಶಕರಾದ ಸಿ. ಮಹೇಂದ್ರ ಉಪಸ್ಥಿತರಿದ್ದರು.

ಮಹಿಳಾ ದಿನಾಚರಣೆ ಅಂಗವಾಗಿ ವಿಶೇಷ ಅಭಿಯಾನ



ಅಲೆನ್ ಕೆರಿಯರ್ ಸಂಸ್ಥೆ ವತಿಯಿಂದ ಮಹಿಳಾ ದಿನಾಚರಣೆ ಅಂಗವಾಗಿ ವಿದ್ಯಾರ್ಥಿನಿಯರ ಸಬಲೀಕರಣಕ್ಕೆ ಉತ್ತೇಜನ ನೀಡುವ ಉದ್ದೇಶದಿಂದ ಮಾರ್ಚ್ 14ರವರೆಗೆ ವಿಶೇಷ ಅಭಿಯಾನ ಆರಂಭಿಸಲಾಗಿದೆ.

ಮೈಸೂರು, ಮಾ. 9–ಅಲೆನ್ ಕೆರಿಯರ್ ಸಂಸ್ಥೆಯ ವತಿಯಿಂದ ಮಹಿಳಾ ದಿನಾಚರಣೆ ಅಂಗವಾಗಿ ವಿದ್ಯಾರ್ಥಿನಿಯರ ಸಬಲೀಕರಣಕ್ಕೆ ಉತ್ತೇಜನ ನೀಡುವ ಉದ್ದೇಶದಿಂದ ಮಾರ್ಚ್ 14ರವರೆಗೆ ವಿಶೇಷ ಅಭಿಯಾನ ಆರಂಭಿಸಿದೆ.

'ಅವಳ ಕನಸುಗಳಿಗೆ ಧೈರ್ಯ ಕೊಡಿ, ಅಲೆನ್ ಜೊತೆಗೆ ಅದು ಸಾಧ್ಯ' ಎಂಬ ಸಂದೇಶದೊಂದಿಗೆ ಈ ವಿಶೇಷ ಅಭಿಯಾನ ಹಮ್ಮಿಕೊಳ್ಳಲಾಗಿದೆ.

ಇತ್ತೀಚಿನ ಶಿಕ್ಷಣ ಪ್ರವೃತ್ತಿಗಳ ಪ್ರಕಾರ ನೀಟ್ NEET ಮತ್ತು ಜೆಇಇ ಮುಂತಾದ ರಾಷ್ಟ್ರೀಯ ಮಟ್ಟದ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಹಾಜರಾಗುತ್ತಿರುವ ವಿದ್ಯಾರ್ಥಿನಿಯರ ಸಂಖ್ಯೆ ಹೆಚ್ಚುತ್ತಿರುವುದು ಗಮನಾರ್ಹವಾಗಿದೆ. ವಿಜ್ಞಾನ ಮತ್ತು ತಂತ್ರಜ್ಞಾನ ಕ್ಷೇತ್ರಗಳಲ್ಲಿ ಮಹಿಳೆಯರ ಪಾಲ್ಗೊಳ್ಳುವಿಕೆ ಹೆಚ್ಚುತ್ತಿರುವುದಕ್ಕೆ ಇದು ಸ್ಪಷ್ಟ ಸೂಚನೆಯಾಗಿದೆ ಎಂದು ಶಿಕ್ಷಣ ವಲಯದ ತಜ್ಞರು ಅಭಿಪ್ರಾಯಪಟ್ಟಿದ್ದಾರೆ.

ಈ ವೇಳೆ ಸಂಸ್ಥೆಯ ದಕ್ಷಿಣ ವಲಯದ ಮುಖ್ಯಸ್ಥ ಮಹೇಶ್ ಯಾದವ್ ಮಾತನಾಡಿ, ಮಹಿಳಾ ದಿನಾಚರಣೆಯ ಅಂಗವಾಗಿ ವಿದ್ಯಾರ್ಥಿನಿಯರ ಸಬಲೀಕರಣಕ್ಕೆ ಉತ್ತೇಜನ ನೀಡಲು ಈ ವಿಶೇಷ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ ಎಂದರು. ಇದರಡಿ ಪ್ರವೇಶ ಪಡೆಯುವ ವಿದ್ಯಾರ್ಥಿಗಳಿಗೆ ಸುಮಾರು 30,000 ಮೌಲ್ಯದ ದಾಖಲೆ ಉಪನ್ಯಾಸಗಳು, ಉಚಿತ ಸಮಗ್ರ ಅಕಾಡೆಮಿಕ್ ವಿಶ್ಲೇಷಣಾ ಪರೀಕ್ಷೆ ಹಾಗೂ ವಾರಪೂರ್ತಿ ವಿಶೇಷ ಪ್ರವೇಶ ಸೌಲಭ್ಯಗಳನ್ನು ನೀಡಲಾಗುತ್ತದೆ ಎಂದು ತಿಳಿಸಿದ್ದಾರೆ.

ಮಹಾಬಲೇಶ್ವರಸ್ವಾಮಿ ಮಹಾ ರಥೋತ್ಸವ



ಚಾಮುಂಡಿಬೆಟ್ಟದಲ್ಲಿ ಸೋಮವಾರ ಪುರಾತನ ಪ್ರಸಿದ್ಧ ಮಹಾಬಲೇಶ್ವರ ಸ್ವಾಮಿ ಮಹಾ ರಥೋತ್ಸವ ಶ್ರದ್ಧಾ-ಭಕ್ತಿಯೊಂದಿಗೆ ನೆರವೇರಿತು. ಚಾಮುಂಡೇಶ್ವರಿ ದೇವಸ್ಥಾನದ ಪ್ರಧಾನ ಆಗಮಿಕರಾದ ಡಾ.ಎನ್.ಶಶಿಶೇಖರ್ ದೀಕ್ಷಿತ್, ಶ್ರೀ ಚಾಮುಂಡೇಶ್ವರಿ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರದ ಕಾರ್ಯದರ್ಶಿ ಎಂ.ಜೆ.ರೂಪಾ, ಮಣೆಗಾರ್ ಪ್ರಸಾದ್ ಮತ್ತಿತರರು ಚಿತ್ರದಲ್ಲಿದ್ದಾರೆ.

ದೇವಾಲಯಗಳ 20 ಸಾವಿರ ಆಸ್ತಿ ಇಂಡೀಕರಣ

ಬೆಂಗಳೂರು: ಹಿಂದೂ ಧಾರ್ಮಿಕ ಹಾಗೂ ಧರ್ಮಾದಾಯ ದತ್ತಿಗಳ ಇಲಾಖೆಯ (ಮುಜರಾಯಿ) ಅಡಿಯಲ್ಲಿರುವ ದೇವಾಲಯಗಳ ಒಟ್ಟು ಆಸ್ತಿ 40 ಸಾವಿರ ಇದ್ದು, ಅದರಲ್ಲಿ 20 ಸಾವಿರ ಆಸ್ತಿಗಳನ್ನು ಇಂಡೀಕರಣ ಮಾಡಲಾಗಿದೆ ಎಂದು ಮುಜರಾಯಿ ಸಚಿವ ರಾಮಲಿಂಗಾರೆಡ್ಡಿ ತಿಳಿಸಿದ್ದಾರೆ. ವಿಶನ್ ಗ್ರೂಪ್ ಸಮಿತಿ ಸಭೆಯಲ್ಲಿ ಮಾತನಾಡಿದರು.

2023ರವರೆಗೆ ಕೇವಲ 3,500 ಆಸ್ತಿಗಳನ್ನು ಇಂಡೀಕರಿಸಲಾಗಿತ್ತು. ಇಲ್ಲಿವರೆಗೆ 20 ಸಾವಿರ ಆಸ್ತಿಗಳನ್ನು ಇಂಡೀಕರಿಸಲಾಗಿದೆ. ಉಳಿದಿರುವ 20 ಸಾವಿರ ಆಸ್ತಿಗಳನ್ನು ತಿಂಗಳ ಗುರಿಯನ್ನು ದ್ವಿಗುಣಗೊಳಿಸಿ ಇಂಡೀಕರಣ ಪೂರ್ಣಗೊಳಿಸಲು ತೀರ್ಮಾನಿಸಲಾಗಿದೆ ಎಂದು ಅವರು ಮಾಹಿತಿ ನೀಡಿದ್ದಾರೆ.

ದುರಸ್ತಿ ಅವಶ್ಯ ಇರುವ ದೇವಾಲಯಗಳನ್ನು ಗುರುತಿಸಿ ದತ್ತು ನೀಡಿ ಅಭಿವೃದ್ಧಿಪಡಿಸಬೇಕು. ಅದಕ್ಕಾಗಿ ಸರಳವಾದ ಮಾರ್ಗಸೂಚಿ ರಚಿಸಬೇಕು. ದತ್ತು ಪಡೆಯಲು ಮುಂದೆ ಬರುವ ಅನಿವಾಸಿ ಭಾರತೀಯರಿಗೆ ಆದ್ಯತೆ ನೀಡಲು ಸಭೆಯಲ್ಲಿ ತೀರ್ಮಾನಿಸಲಾಗಿದೆ. ಎಲ್ಲ ದೇವಾಲಯಗಳ ಆಸ್ತಿಯನ್ನು ಜಿಯೊ ಫೆನ್ಸಿಂಗ್ ಮಾಡಲು ಬೇಕಾದ ಹಣವನ್ನು ಸಾಮಾನ್ಯ ಸಂಗ್ರಹಣಾ ನಿಧಿಯಿಂದ ಒದಗಿಸುವ ಬಗ್ಗೆಯೂ ನಿರ್ಣಯ ಕೈಗೊಳ್ಳಲಾಯಿತು ಎಂದಿದ್ದಾರೆ.

ಕಾರ್ಪೊರೇಟ್ ಸಾಮಾಜಿಕ ಹೊಣೆಗಾರಿಕೆ (ಸಿಎಸ್‌ಆರ್) ನಿಧಿಯಿಂದ ಸಿ ವರ್ಗದ ದೇವಾಲಯಗಳ ಕಲ್ಯಾಣಿಗಳ ಜೀರ್ಣೋದ್ಧಾರ ಹಾಗೂ ಶೌಚಾಲಯಗಳ ನಿರ್ಮಾಣಕ್ಕೆ ಕ್ರಮ ಕೈಗೊಳ್ಳಲು ತೀರ್ಮಾನಿಸಲಾಯಿತು ಎಂದು ವಿವರಿಸಿದ್ದಾರೆ.

ದಾವತ್ ಇಫ್ತಾರ್ ಕೂಟದಲ್ಲಿ ಶಾಸಕ ಹರೀಶ್‌ಗೌಡ ಭಾಗಿ



ಕೆ.ಆರ್.ಪಾರ್ಕ್ ಕ್ಷೇಮಾಭಿವೃದ್ಧಿ ಸಂಘದ ವತಿಯಿಂದ ಲಷ್ಕರ್ ಮೊಹಲ್ಲಾದ ಕಾಂತರಾಜ ಪಾರ್ಕ್‌ನಲ್ಲಿ ಆಯೋಜಿಸಿದ್ದ ದಾವತ್ ಇಫ್ತಾರ್ ಕೂಟದಲ್ಲಿ ಮೈಸೂರಿನ ಸರ್‌ಖಾಜಿ ಹಜರತ್ ಮೌಲಾನಾ ಮೊಹಮ್ಮದ್ ಉಸ್ಮಾನ್ ಶರೀಫ್ ಸಾಹೇಬ್, ಸಂಘದ ಅಧ್ಯಕ್ಷ ಎ.ಮಜೀದ್ ಬೇಗ್, ಕಾರ್ಯದರ್ಶಿ ಮೊಹಮ್ಮದ್ ಅಮೀನ್, ಮಿರ್ಜಾ ಸುಹೇಲ್, ಶಾಸಕ ಹರೀಶ್‌ಗೌಡ, ಕರ್ನಾಟಕ ವಸ್ತುಪ್ರದರ್ಶನ ಪ್ರಾಧಿಕಾರದ ಮಾಜಿ ಅಧ್ಯಕ್ಷ ಅಬ್ದುಲ್ ಅಜೀಜ್ (ಅಬ್ದುಲ್ಲಾ), ಎಸ್‌ಡಿಪಿಐ ರಾಜ್ಯಾಧ್ಯಕ್ಷ ಅಬ್ದುಲ್ ಮಜೀದ್, ಎಸ್‌ಟಿಟಿಯು ಅಧ್ಯಕ್ಷ ಅಲ್ತಾಫ್ ಅಹ್ಮದ್, ಎಂಸಿಸಿ ಮಾಜಿ ಕಾರ್ಪೊರೇಟರ್ ನಾಸಿರುದ್ದೀನ್ ಬಾಬು, ಸುಹೇಲ್ ಬೇಗ್, ಮಸ್ಜಿದ್ ಅಕ್ಸಾದ ಖತೀಬ್ ಮೌಲಾನಾ ಅಬ್ದುಲ್ ಸಲಾಮ್ ರಜ್ವಿ, ಅಬ್ದುಲ್ ರಶೀದ್ ಖಾನ್, ಸೈಯದ್ ರೆಹಮತ್ ಉಲ್ಲಾ ಟಿಪ್ಪು, ಕಾಂಗ್ರೆಸ್ ಪಕ್ಷದ ಮುಖಂಡ ಮಿರ್ಜಾ ಕೌನೈನ್, ಅಬ್ದುಲ್ ಗಫೂರ್ ಆಜಾದ್, ರಿಜ್ವಾನ್ ಅಹ್ಮದ್, ಸೈಯದ್ ಮಜೀದ್, ಸೈಯದ್ ನಸೀಮ್, ತೌಹೀದ್ ಬೇಗ್, ಜಾವೀದ್ ಪಾಷಾ, ಮೊಹಮ್ಮದ್ ಅಜೀಮ್, ಸೈಯದ್ ನಸೀಮ್ ಭಾಗವಹಿಸಿದ್ದರು.

ವರ್ಗಾವಣೆಗೊಂಡ ಶಿಕ್ಷಕರ ಜನಗಣತಿಗೆ ನಿಯೋಜಿಸದಂತೆ ಸೂಚನೆ

ಮೈಸೂರು, ಮಾ.9(ಎಸ್‌ಪಿಎನ್)– 2024–25ನೇ ಸಾಲಿನಲ್ಲಿ ವರ್ಗಾವಣೆಗೊಂಡು ಬಿಡುಗಡೆಯಾಗದಿರುವ ಪ್ರಾಥಮಿಕ ಮತ್ತು ಪ್ರೌಢಶಾಲಾ ಶಿಕ್ಷಕರನ್ನು ಜನಗಣತಿ ಕಾರ್ಯಕ್ಕೆ ನಿಯೋಜಿಸದಂತೆ ಶಾಲಾ ಶಿಕ್ಷಣ ಇಲಾಖೆ ಆಯುಕ್ತ ಕಚೇರಿಯ ನಿರ್ದೇಶಕ(ಪ್ರಾಥಮಿಕ ಶಿಕ್ಷಣ)ರು ರಾಜ್ಯದ ಎಲ್ಲಾ ಡಿಡಿಪಿಐಗಳಿಗೆ ಸೂಚಿಸಿದ್ದಾರೆ.

2024–25ನೇ ಸಾಲಿನ ವರ್ಗಾವಣೆ ಪ್ರಕ್ರಿಯೆಯಲ್ಲಿ ಪ್ರಸ್ತುತ ಕಾರ್ಯ ನಿರ್ವಹಿಸುತ್ತಿರುವ ತಾಲೂಕಿನಿಂದ ಬೇರೆ ತಾಲೂಕುಗಳನ್ನು ಆಯ್ಕೆ ಮಾಡಿಕೊಂಡಿರುವ ಶಿಕ್ಷಕರನ್ನು ಈಗಿರುವ ಶಾಲಾ ವ್ಯಾಪ್ತಿಯ ಯಾವುದೇ ಗಣತಿ ಕಾರ್ಯಗಳಿಗೆ ನಿಯೋಜಿಸಬಾರದು ಎಂದು ರಾಜ್ಯದ ಎಲ್ಲಾ ನಿರ್ದೇಶಕರಿಗೆ ಹಾಗೂ ಬಿಇಓಗಳಿಗೆ ಸೂಕ್ತ ನಿರ್ದೇಶನ ನೀಡಲಾಗಿದೆ.

2024–25ನೇ ಸಾಲಿನ ವರ್ಗಾವಣೆ ಪ್ರಕ್ರಿಯೆ ಮುಕ್ತಾಯಗೊಂಡಿದ್ದು, ವರ್ಗಾವಣೆಗೊಂಡಿರುವ ಶಿಕ್ಷಕರು 9.4.2026 ರಂದು ಕರ್ತವ್ಯದಿಂದ ಬಿಡುಗಡೆ ಗೊಂಡು 10.4.2026ರಂದು ವರ್ಗಾವಣೆಗೊಂಡ ಶಾಲೆಗೆ ಹಾಜರಾಗುವಂತೆ ಸೂಚಿಸಿದೆ.

ತಾಲೂಕು ಮಟ್ಟದ ವರ್ಗಾವಣೆ ಪ್ರಾಧಿಕಾರಿಯಾಗಿ ಜಿಲ್ಲಾ ಉಪನಿರ್ದೇಶಕರಾಗಿದ್ದು, ಪ್ರಸ್ತುತ ಗಣತಿ ಕಾರ್ಯಕ್ಕೆ ಸಂಬಂಧಿಸಿದ ಸಭೆ ಮತ್ತು ಕಾರ್ಯಕ್ರಮಗಳಿಗೆ ರಾಜ್ಯದ ಆಯಾಯ ಡಿಡಿಪಿಐ(ಆಡಳಿತ)ಗಳನ್ನು ಒಳಪಡಿಸಿರುವ ಹಿನ್ನೆಲೆಯಲ್ಲಿ ಜಿಲ್ಲಾ/ತಾಲೂಕು ಹಂತದಲ್ಲಿ ವರ್ಗಾವಣೆ ಗೊಂಡ ಶಿಕ್ಷಕರನ್ನು ಗಣತಿ ಕಾರ್ಯಕ್ಕೆ ನಿಯೋಜನೆ ಮಾಡಿರುವ ಬಗ್ಗೆ ಖುದ್ದು ಪರಿಶೀಲಿಸುವಂತೆ ಸೂಚಿಸಿದ್ದಾರೆ.

ಪ್ರಸ್ತುಕ ಸಾಲಿನಲ್ಲಿ ವರ್ಗಾವಣೆಗೊಂಡ ಶಿಕ್ಷಕರನ್ನು ಆದೇಶದಂತೆ ಕರ್ತವ್ಯದಿಂದ ಬಿಡುಗಡೆಗೊಳಿಸಲು ಮತ್ತು ವರ್ಗಾವಣೆಗೊಂಡ ಹುದ್ದೆಯ ಕರ್ತವ್ಯಕ್ಕೆ ಹಾಜರಾಗಲು ಯಾವುದೇ ಅಡಚಣೆಯಾಗದಂತೆ ವಿಶೇಷ ಗಮನಹರಿಸುವಂತೆ ಆಯುಕ್ತರ ಕಚೇರಿಯ ನಿರ್ದೇಶಕರು(ಪ್ರಾಥಮಿಕ ಶಿಕ್ಷಣ) ಸಂಬಂಧಪಟ್ಟವರಿಗೆ ಸೂಚಿಸಿದ್ದಾರೆ.

ಅಂಬೇಡ್ಕರ್ ಪ್ರಶಸ್ತಿಗೆ ಅರ್ಜಿ ಸಲ್ಲಿಕೆ ಅವಧಿ ವಿಸ್ತರಣೆ

ಮೈಸೂರು: ಸಮಾಜ ಕಲ್ಯಾಣ ಇಲಾಖೆ ವತಿಯಿಂದ ಏ.5 ಹಾಗೂ ಏ.14ರಂದು ಕ್ರಮವಾಗಿ ರಾಜ್ಯಾದ್ಯಂತ ಡಾ.ಬಾಬು ಜಗಜೀವನ ರಾಂ, ಡಾ.ಬಿ.ಆರ್. ಅಂಬೇಡ್ಕರ್ ಜನ್ಮದಿನಾಚರಣೆ ಆಚರಿಸುವ ಹಿನ್ನೆಲೆಯಲ್ಲಿ ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ವರ್ಗದ ಜನಾಂಗದವರ ಶ್ರೇಯಸ್ಸಿಗಾಗಿ ಗಣನೀಯ ಸೇವೆ ಸಲ್ಲಿಸಿದ ಅರ್ಹ ವ್ಯಕ್ತಿಗಳನ್ನು ಗುರುತಿಸಿ ರಾಜ್ಯ ಮಟ್ಟದಲ್ಲಿ ಡಾ.ಬಾಬು ಜಗಜೀವನ ರಾಂ, ಡಾ.ಬಿ. ಆರ್.ಅಂಬೇಡ್ಕರ್ ಹೆಸರಲ್ಲಿ ಪ್ರಶಸ್ತಿಗಳನ್ನು ನೀಡಲು ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಪ್ರಶಸ್ತಿಗಳಿಗೆ ಅರ್ಜಿ ಸಲ್ಲಿಸುವ ಕೊನೇ ದಿನವನ್ನು ಮಾ.15ರವರೆಗೆ ವಿಸ್ತರಿಸಲಾಗಿದೆ ಎಂದು ಪ್ರಕಟಣೆ ತಿಳಿಸಿದೆ.

ಬಸ್‌ನಲ್ಲಿ ವೃದ್ಧೆ ಗಮನ ಬೇರೆಡೆ ಸೆಳೆದು ಮಾಂಗಲ್ಯ ಸರ ಕದ್ದ ಕಳ್ಳಿಯರು!

ಮೈಸೂರು, ಮಾ.9(ಎಂಕೆ)– ವೃದ್ಧೆಯ ಗಮನ ಬೇರೆಡೆಗೆ ಸೆಳೆದು 40 ಗ್ರಾಂ ಮಾಂಗಲ್ಯ ಸರ ಕದ್ದೊಯ್ದಿರುವ ಘಟನೆ ಎನ್.ಆರ್.ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ನಡೆದಿದೆ.

ಮೈಸೂರಿನ ಯರಗನಹಳ್ಳಿ ನಿವಾಸಿ ನೀಲಮ್ಮ(60) ಮಾಂಗಲ್ಯ ಸರ ಕಳೆದುಕೊಂಡವರು. ಮಾ.5 ರಂದು ಸಂಜೆ ಬೆಳ್ಳೂರು ಕ್ರಾಸ್‌ನಿಂದ ಮೈಸೂರಿಗೆ ಬಸ್‌ನಲ್ಲಿ ಬರುತ್ತಿದ್ದ ವೇಳೆ ಶ್ರೀರಂಗಪಟ್ಟಣದಲ್ಲಿ ಮಗು ಸಮೇತ ಬಸ್ ಹತ್ತಿದ ಇಬ್ಬರು ಅಪರಿಚಿತ ಹೆಂಗಸರು, ಮಗು ವಾಂತಿ ಮಾಡುತ್ತೆ ಕಿಟಕಿ ಪಕ್ಕ ಸೀಟ್ ನೀಡುವಂತೆ ನೀಲಮ್ಮರನ್ನ ಕೇಳಿದ್ದಾರೆ.

ಇದಕ್ಕೆ ನೀಲಮ್ಮ ಒಪ್ಪಿಲ್ಲ. ಬಳಿಕ ಬಸ್ ಮಣಿಪಾಲ್ ಆಸ್ಪತ್ರೆ ಜಂಕ್ಷನ್ ಬಳಿ ಬಂದಾಗ ಅಪರಿಚಿತ ಹೆಂಗಸರಿಬ್ಬರು ಇಳಿಯಲು ಮುಂದಾಗಿ ತಮ್ಮ ಲಗ್ಗೇಜ್ ಬ್ಯಾಗ್‌ನಲ್ಲಿದ್ದ ಚಿಲ್ಲರೆ ಹಣವನ್ನು ನೀಲಮ್ಮ ಅವರ ಮೇಲೆ ಬೀಳಿಸಿದ್ದಾರೆ. ಈ ವೇಳೆ ಚಿಲ್ಲರೆ ಎತ್ತಿಕೊಡಲು ನೀಲಮ್ಮ ಬಾಗಿದಾಗ ಕೊರಳಿನಲ್ಲಿದ್ದ ಚಿನ್ನದ ಮಾಂಗಲ್ಯ ಸರ ಕಟ್ ಮಾಡಿಕೊಂಡಿದ್ದು, ಬಳಿಕ ಎಲ್‌ಐಸಿ ಬಸ್ ಸ್ಟಾಪ್ ಇಳಿದು ಹೋಗಿದ್ದಾರೆ.

ಮನೆಗೆ ಬಂದು ನೋಡಿದಾಗ ತಮ್ಮ ಕೊರಳಿನಲ್ಲಿದ್ದ ಚಿನ್ನದ ಮಾಂಗಲ್ಯ ಸರ ಕಳ್ಳತನವಾಗಿರುವುದು ನೀಲಮ್ಮನಿಗೆ ಗೊತ್ತಾಗಿದ್ದು, ಚಿಲ್ಲರೆ ಕಾಸು ಮೈಮೇಲೆ ಬಿದ್ದಾಗ ಮಂಕು ಕವಿದಂತಾಯ್ತು ಆ ಅಪರಿಚಿತ ಹೆಂಗಸರಿಬ್ಬರೇ ಮಾಂಗಲ್ಯ ಸರ ಕಳ್ಳತನ ಮಾಡಿದ್ದಾರೆ ಎಂದು ದೂರಿನಲ್ಲಿ ತಿಳಿಸಿದ್ದಾರೆ ಈ ಸಂಬಂಧ ಎನ್.ಆರ್.ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ

ವೃದ್ಧೆಯ 30 ಗ್ರಾಂ ಚಿನ್ನದ ಸರ ಕಿತ್ತು ಪರಾರಿಯಾದ ಖದೀಮ

ಮನೆಯ ಬಾಗಿಲು ಬಳಿ ಕುಳಿತಿದ್ದ ವೃದ್ಧೆ ಮುಖಕ್ಕೆ ರಾಸಾಯನಿಕ ಹಾಕಿ ಕೃತ್ಯ

ಮೈಸೂರು,ಮಾ.9(ಪಿಎಂ)– ಮನೆಯಲ್ಲಿ ಟಿವಿ ನೋಡುತ್ತಾ ಕುಳಿತಿದ್ದ ವೃದ್ಧೆಯ ಚಿನ್ನದ ಸರ ಕಸಿದು ಖದೀಮ ಪರಾರಿಯಾಗಿರುವ ಘಟನೆ ಚಾಮರಾಜ ಮೊಹಲ್ಲಾದ ಡಿ.ಸುಬ್ಬಯ್ಯ ರಸ್ತೆಯಲ್ಲಿ ನಡೆದಿದೆ.

ಇಲ್ಲಿನ ನಿವಾಸಿ ಪಿ.ಇಂದ್ರಾಣಿ (69) ಚಿನ್ನದ ಸರ ಕಳೆದುಕೊಂಡವರು. ಈ ಸಂಬಂಧ' ಅವರು ನೀಡಿದ' ದೂರಿನನ್ವಯ ಲಕ್ಷ್ಮಿಪುರಂ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ನನ್ನ ಗಂಡ ಲಾರಿ ಚಾಲಕರಾಗಿದ್ದರು. ಅವರು ನಿಧನ ಹೊಂದಿದ್ದು, ಮಕ್ಕಳೂ ಇಲ್ಲದ ಕಾರಣ ಡಿ.ಸುಬ್ಬಯ್ಯ ರಸ್ತೆಯ ಮನೆಯೊಂದನ್ನು ಭೋಗ್ಯ ಮಾಡಿಕೊಂಡು ನಾನೊಬ್ಬಳೇ ವಾಸವಾಗಿದ್ದೇನೆ. ಹೀಗಿರುವಾಗ ಮಾ.7ರಂದು ರಾತ್ರಿ ಸುಮಾರು 10ರ ವೇಳೆಯಲ್ಲಿ ನಾನು ಮನೆಯ ಮುಂದಿನ ಬಾಗಿಲು ತೆರೆದು ಅಲ್ಲಿಯೇ ಹತ್ತಿರ ಚೇರಿನ ಮೇಲೆ ಕುಳಿತು ಟಿವಿ ನೋಡುತ್ತಿದ್ದೆ.

ಆಗ ಯಾರೋ ನನ್ನ ಹಿಂದಿನಿಂದ ಬಂದು ಕೈಯಿಂದ ನನ್ನ ಮುಖಕ್ಕೆ ಯಾವುದೋ ರಾಸಾಯನಿಕವನ್ನು ಉಜ್ಜಿದನು. ಆಗ ನನ್ನ ಕಣ್ಣುಗಳು ಉರಿಯಲು ಶುರುವಾಯಿತು. ಇದೇ ವೇಳೆ ಅವನು ನನ್ನ ಕತ್ತಿನಲ್ಲಿದ್ದ ಚಿನ್ನದ ಸರವನ್ನು ಕಿತ್ತುಕೊಂಡಿದ್ದಲ್ಲದೆ, ನನ್ನ ಕೈಗಳನ್ನು ತಿರುಗಿಸಿದನು. ಮುಖಕ್ಕೆ ನೀರು ಹಾಕಿಕೊಂಡು ನೋಡುವಷ್ಟರಲ್ಲಿ ಅವನು ನನ್ನ ಚಿನ್ನದ ಸರದೊಂದಿಗೆ ಪರಾರಿಯಾಗಿದ್ದ ಎಂದು ಇಂದ್ರಾಣಿ ದೂರಿನಲ್ಲಿ ತಿಳಿಸಿದ್ದಾರೆ.

ಟಿಬೆಟಿಯನ್ನರ 67ನೇ ರಾಷ್ಟ್ರೀಯ ಬಂಡಾಯ ದಿನದ ಪ್ರಯುಕ್ತ

ಮೈಸೂರಲ್ಲಿ ಟಿಬೆಟಿಯನ್ನರಿಂದ ಮೇಣದ ಬತ್ತಿ ಬೆಳಕಿನ ಜಾಗರಣೆ

ಚೀನಾ ವಿರುದ್ಧ ಹೋರಾಡಿ ಹುತಾತ್ಮರಾದ ಟಿಬೆಟಿಯನ್ನರಿಗೆ ಶ್ರದ್ಧಾಂಜಲಿ ಸಮರ್ಪಣೆ



ಮೈಸೂರು ಅರಮನೆ ಕೋಟೆ ಆಂಜನೇಯಸ್ವಾಮಿ ದೇವಸ್ಥಾನದ ಎದುರು ಸೋಮವಾರ ಸಂಜೆ ಟಿಬೆಟಿಯನ್ನರು ಮೇಣದ ಬತ್ತಿ ಬೆಳಕಿನ ಜಾಗರಣೆ ನಡೆಸಿದರು.

ಮೈಸೂರು,ಮಾ.9(ಪಿಎಂ)– ಟಿಬೆಟಿಯನ್ನರ 67ನೇ ರಾಷ್ಟ್ರೀಯ ಬಂಡಾಯ ದಿನದ ಅಂಗವಾಗಿ ಹಾಗೂ ಟಿಬೆಟ್‌ನಲ್ಲಿ ಚೀನಾ ಆಡಳಿತ ನಡೆಸುವುದರ ವಿರುದ್ಧ ಹೋರಾಡಿ ಪ್ರಾಣತ್ಯಾಗ ಮಾಡಿದ ಟಿಬೆಟಿಯನ್ನರಿಗೆ ಶ್ರದ್ಧಾಂಜಲಿ ಸಲ್ಲಿಸಲು ಸೋಮವಾರ ಸಂಜೆ ಟಿಬೆಟಿಯನ್ನರು ಮೇಣದ ಬತ್ತಿ ಬೆಳಕಿನ ಜಾಗರಣೆ ನಡೆಸಿದರು.

ಮೈಸೂರು ಅರಮನೆ ಕೋಟೆ ಆಂಜನೇಯಸ್ವಾಮಿ ದೇವಸ್ಥಾನದ ಎದುರು ಹುಣಸೂರು, ಬೈಲಕುಪ್ಪೆ, ಕೊಳ್ಳೇಗಾಲದ ಮಿಡಲ್ ವೇ ಟಿಬೆಟಿಯನ್ ಯೂತ್ ಕಾಂಗ್ರೆಸ್, ಪ್ರಾದೇಶಿಕ ಟಿಬೆಟಿಯನ್ ವುಮೆನ್ಸ್ ಅಸೋಸಿಯೇಷನ್ ಮತ್ತು ಮೈಸೂರು ಟಿಬೆಟಿಯನ್ ಸ್ಟೂಡೆಂಟ್ ಯೂನಿಯನ್ ನೇತೃತ್ವದಲ್ಲಿ ಜಮಾಯಿಸಿದ ಟಿಬೆಟಿಯನ್ನರು, ಮೇಣದ ಬತ್ತಿ ಬೆಳಗಿಸಿ ಮಡಿದವರಿಗೆ ಶ್ರದ್ಧಾಂಜಲಿ ಅರ್ಪಿಸಿದರಲ್ಲದೆ, ಚೀನಾ ವಿರುದ್ಧ ಕಿಡಿಕಾರಿದರು.

1959ರ ಮಾ.10ರಂದು ಟಿಬೆಟ್ ಇತಿಹಾಸದಲ್ಲಿ ಕರಾಳ ದಿನವಾಗಿದೆ. ಇದು ಟಿಬೆಟಿನ ಲಕ್ಷಾಂತರ ಪ್ರಜೆಗಳು ಚೀನಾದ ಕಮ್ಯುನಿಸ್ಟ್ ಪಾರ್ಟಿಯ ವಿರುದ್ಧ ತಿರುಗಿ ಬಿದ್ದ ಪ್ರತಿಭಟನೆ ನಡೆಸಿದ ದಿನವಾಗಿದೆ. ಚೀನಾ ಸೈನ್ಯವು ಪ್ರತಿಭಟನೆ ಹತ್ತಿಕ್ಕಿ ಸಾವಿರಾರು ಟಿಬೆಟಿಯನ್ನರನ್ನು ಕ್ರೂರವಾಗಿ ಕೊಂದಿತು. ಪ್ರಾಣತ್ಯಾಗ ಮಾಡಿದ ಟಿಬೆಟಿಯನ್ನರ ತ್ಯಾಗ ಬಲಿದಾನ ಸ್ಮರಿಸಿ ಗೌರವ ಸೂಚಿಸಲು ಮಾರ್ಚ್ 10 ಅನ್ನು ಟಿಬೆಟಿಯನ್ನರ ಬಂಡಾಯದ ದಿನವಾಗಿ ಆಚರಿಸಲಾಗುತ್ತಿದೆ. ಟಿಬೆಟ್‌ನಲ್ಲಿ ಟಿಬೆಟಿಯನ್ನರು ಚೀನಾ ಆಳ್ವಿಕೆಯಲ್ಲಿ ಊಹಿಸಲಾಗದ ಹಿಂಸೆ ಅನುಭವಿಸುತ್ತಿದ್ದಾರೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಟಿಬೆಟಿಯನ್ನರ ಕೇಂದ್ರೀಯ ಆಡಳಿತ ವ್ಯವಸ್ಥೆಯೊಂದಿಗೆ 14ನೇ ದಲಾಯಿ ಲಾಮರ ಮಧ್ಯಸ್ಥಿಕೆಯಲ್ಲಿ ಮಾತುಕತೆಗೆ ಮುಂದಾಗಬೇಕು ಎಂದು ಚೀನಾ ಸರ್ಕಾರಕ್ಕೆ ಆಗ್ರಹಿಸಿದರು. ಟಿಬೆಟಿನ ಅಸ್ತಿತ್ವದ ಬಗ್ಗೆ ವರದಿ ಮಾಡಲು ಅಂತಾರಾಷ್ಟ್ರೀಯ ಮಾಧ್ಯಮಕ್ಕೆ ಒಪ್ಪಿಗೆ ಸೂಚಿಸಬೇಕು. ಟಿಬೆಟಿಯನ್ನರ ಭಾವನೆಗಳನ್ನು ಗೌರವಿಸಿ ಗಣಿಗಾರಿಕೆ ಮೂಲಕ ಆಗುತ್ತಿರುವ ಪರಿಸರದ ಮೇಲಿನ ಮಾಲಿನ್ಯ ತಡೆಯಲು ಮುಂದಾಗಬೇಕು ಎಂದು ಒತ್ತಾಯಿಸಿದರು.

ಮೆರವಣಿಗೆ: ಟಿಬೆಟಿಯನ್ನರ 67ನೇ ರಾಷ್ಟ್ರೀಯ ಬಂಡಾಯ ದಿನದ ಅಂಗವಾಗಿ ನಾಳೆ ಮಾ.10ರಂದು ಬೆಳಗ್ಗೆ 11ಕ್ಕೆ ಮೈಸೂರು ಅರಮನೆ ಕೋಟೆ ಆಂಜನೇಯಸ್ವಾಮಿ ದೇವಸ್ಥಾನದ ಎದುರಿನಿಂದ ಮೈಸೂರು ವಿವಿ ಓವೆಲ್ ಮೈದಾನದವರೆಗೆ ಮೆರವಣಿಗೆ ಆಯೋಜಿಸಲಾಗಿದೆ.

ರಾಜ್ಯ ಬಜೆಟ್‌ನಲ್ಲಿ ಶ್ಲಾಘನೀಯ ಅಂಶಗಳಿದ್ದಾಗ್ಯೂ

ಮೈಸೂರಿನ ಕೈಗಾರಿಕಾ ಪ್ರದೇಶಗಳಲ್ಲಿ ಮೂಲ ಸೌಕರ್ಯ ಕಡೆಗಣಿಸಿರುವುದು ಸರಿಯಲ್ಲ

ಮೈಸೂರು ವಾಣಿಜ್ಯ ಮತ್ತು ಕೈಗಾರಿಕಾ ಸಂಸ್ಥೆ ಅಧ್ಯಕ್ಷ ಕೆ.ಬಿ.ಲಿಂಗರಾಜು ಬೇಸರ



ಕೆ.ಬಿ.ಲಿಂಗರಾಜು

ಮೈಸೂರು,ಮಾ.9(ಪಿಎಂ)– ರಾಜ್ಯ ಬಜೆಟ್‌ನಲ್ಲಿ ಕೈಗಾರಿಕೆ, ವಾಣಿಜ್ಯ, ಹೂಡಿಕೆ, ಸ್ಟಾರ್ಟ್‌ಅಪ್ ಮತ್ತು ನಗರಾಭಿವೃದ್ಧಿಗೆ ಹೆಚ್ಚಿನ ಒತ್ತು ನೀಡಲಾಗಿದ್ದು, ಇದು ಶ್ಲಾಘನೀಯ. ಆದರೆ ಮೈಸೂರಿನ ಕೈಗಾರಿಕಾ ಬಡಾವಣೆಗಳಲ್ಲಿ ಮೂಲಭೂತ ಸೌಕರ್ಯ ಒದಗಿಸುವ ಸಂಬಂಧ ಯಾವುದೇ ಯೋಜನೆ ಘೋಷಿಸದೇ ಕಡೆಗಣಿಸಲಾಗಿದೆ ಎಂದು ಮೈಸೂರು ವಾಣಿಜ್ಯ ಮತ್ತು ಕೈಗಾರಿಕಾ ಸಂಸ್ಥೆ ಅಧ್ಯಕ್ಷ ಕೆ.ಬಿ.ಲಿಂಗರಾಜು ಬೇಸರ ವ್ಯಕ್ತಪಡಿಸಿದ್ದಾರೆ.

ಬಜೆಟ್‌ನಲ್ಲಿ ಕೈಗಾರಿಕಾ ನೀತಿ 2025–30ರ ಅನುಷ್ಠಾನಕ್ಕೆ ಹೆಚ್ಚುವರಿ ಪ್ರೋತ್ಸಾಹಧನ ನೀಡಿರುವುದು ಶ್ಲಾಘನೀಯ. ಮೈಸೂರು ನಗರವನ್ನು 2ನೇ ಮಾಹಿತಿ ತಂತ್ರಜ್ಞಾನ ಕ್ಷೇತ್ರವನ್ನಾಗಿ ಪರಿವರ್ತಿಸುವುದು ಒಳ್ಳೆಯ ನಿರ್ಧಾರ. ಮೈಸೂರಿನ ಲಿಂಗಾಂಬುದಿ ಸಸ್ಯತೋಟದ ಅಭಿವೃದ್ಧಿಗೆ ಒತ್ತು ನೀಡಿರುವುದು ಹಾಗೂ ಮೈಸೂರಿನಲ್ಲಿ ಕ್ಯಾನ್ಸರ್ ಆಸ್ಪತ್ರೆ ಸ್ಥಾಪನೆಗೆ ಹಣ ಮೀಸಲಿಟ್ಟಿರುವುದು ಶ್ಲಾಘನೀಯ.

ಮೈಸೂರಿನ ಜಯದೇವ ಹೃದ್ರೋಗ ಆಸ್ಪತ್ರೆಯನ್ನು ಮೇಲ್ದರ್ಜೆಗೇರಿಸಲು ಹಣ ಮೀಸಲಿಟ್ಟಿರುವುದು, ಫಿಲ್ಮ್ ಸಿಟಿ ಸೌಲಭ್ಯಕ್ಕಾಗಿ ಥೀಮ್ ಪಾರ್ಕ್, ಸ್ಟಾರ್ ಹೋಟೆಲ್, ರೆಸ್ಟೋರೆಂಟ್‌ಗೆ ಅನುಮೋದನೆ, ವ್ಯವಹಾರ ವಹಿವಾಟುದಾರರ ನೇಮಕ ಈ ಎಲ್ಲದರಿಂದ ಪ್ರವಾಸೋದ್ಯಮದ ಬೆಳವಣಿಗೆ ಸಾಧ್ಯವಾಗಲಿದೆ. ಕೆಐಎಡಿಬಿ ಏರೋಸ್ಪೇಸ್ ಪಾರ್ಕ್‌ನಲ್ಲಿ ಕಾಮನ್ ಫೆಸಿಲಿಟಿ ಸೆಂಟರ್ ಸ್ಥಾಪನೆ, ಆಟೋಮೋಟಿವ್ ರಿಸರ್ಚ್ ಅಸೋಸಿಯೇಶನ್ ಆಫ್ ಇಂಡಿಯಾ ಘಟಕ ಸ್ಥಾಪನೆಗೆ ಯೋಜಿಸಿರುವುದು, 10 ಜಿಟಿಟಿಸಿ ಕೇಂದ್ರಗಳ ಸ್ಥಾಪನೆ, ಸ್ಟಾರ್ಟ್‌ಅಪ್‌ಗಳಿಗೆ ಇನ್‌ಕ್ಯೂಬೇಶನ್ ಸೆಂಟರ್‌ಗಳ ಸ್ಥಾಪನೆ, ನೂಲಿನ ಗಿರಣಿಗಳಿಗೆ 3 ರೂ. ವಿದ್ಯುತ್ ಸಹಾಯಧನ ನೀಡಿರುವುದು ಉತ್ತಮ ನಿರ್ಧಾರ.

ಆದರೆ ಮೈಸೂರು ಕೈಗಾರಿಕಾ ಪ್ರದೇಶದಲ್ಲಿ ಮೂಲಭೂತ ಸೌಕರ್ಯಗಳಿಲ್ಲದೇ ಕೈಗಾರಿಕೆಗಳು ಕಾರ್ಯನಿರ್ವಹಿಸಲು ಅತ್ಯಂತ ಕಷ್ಟಕರವಾಗಿದ್ದು, ಮುಚ್ಚುವ ಪರಿಸ್ಥಿತಿಯಲ್ಲಿವೆ. ಕೈಗಾರಿಕೆಗಳ ಅಭಿವೃದ್ಧಿ ದೃಷ್ಟಿಯಲ್ಲಿ ಮೂಲಭೂತ ಸೌಕರ್ಯಗಳಾದ ರಸ್ತೆ, ಒಳಚರಂಡಿ ಮತ್ತು ಬಸ್ ಸೌಕರ್ಯ ಒದಗಿಸುವುದು ಮುಖ್ಯ. ಈ ನಿಟ್ಟಿನಲ್ಲಿ ಮೈಸೂರು ವಾಣಿಜ್ಯ ಮತ್ತು ಕೈಗಾರಿಕಾ ಸಂಸ್ಥೆಯಿಂದ ಹಲವು ಮನವಿ ಸಲ್ಲಿಸಿದ್ದರೂ ಮುಖ್ಯಮಂತ್ರಿಗಳು ಆಸಕ್ತಿ ತೋರದೆ ಕಡೆಗಣಿಸಿದ್ದಾರೆ. ಈಗಲಾದರೂ ಕನಿಷ್ಠ ಪಕ್ಷ ಹೂಟಗಳ್ಳಿ ನಗರಸಭೆ ಅಥವಾ ಕೆಐಎಡಿಬಿಗೆ ಸೂಕ್ತ ಮಾರ್ಗದರ್ಶನ ನೀಡಿ ಕೈಗಾರಿಕಾ ಪ್ರದೇಶಗಳಿಗೆ ಮೂಲಭೂತ ಸೌಕರ್ಯ ಒದಗಿಸಿಕೊಡಬೇಕೆಂದು ಮುಖ್ಯಮಂತ್ರಿಗಳಲ್ಲಿ ಪ್ರಕಟಣೆ ಮೂಲಕ ಅವರು ಮನವಿ ಮಾಡಿದ್ದಾರೆ.

ಮೈಸೂರು ಮಿತ್ರ

ಮಂಗಳವಾರ 10 ಮಾರ್ಚ್ 2026

ನಂಜನಗೂಡು ಪಿಎಸಿಎಸ್‌ಗೆ ನಿರ್ದೇಶಕರ ಆಯ್ಕೆ



ನೂತನ ನಿರ್ದೇಶಕರನ್ನು ಮುಖಂಡರು ಸನ್ಮಾನಿಸಿದರು.

ನಂಜನಗೂಡು, ಮಾ.9– ನಗರದ ನಂಜನಗೂಡು ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ಚುನಾವಣೆಯಲ್ಲಿ 12 ಮಂದಿ ನಿರ್ದೇಶಕರು ಆಯ್ಕೆಯಾಗಿದ್ದಾರೆ.

ಬ್ಯಾಂಕ್ ಪ್ರತಿನಿಧಿ ಸೇರಿದಂತೆ 13 ಸದಸ್ಯ ಬಲದ ಸಂಘದ ಆವರಣದಲ್ಲಿ ನಡೆದ ನಿರ್ದೇಶಕರ ಚುನಾವಣೆಯಲ್ಲಿ 5 ಸಾಲಗಾರರ ಕ್ಷೇತ್ರಗಳಿಗೆ ಮತ್ತು ಸಾಲಗಾರರಲ್ಲದ ಒಂದು ಕ್ಷೇತ್ರಕ್ಕೆ ಒಟ್ಟು 12 ಮಂದಿ ನಾಮಪತ್ರ ಸಲ್ಲಿಸಿದ್ದರು. ಆ ಪೈಕಿ ಜಿ.ಕಿಟ್ಟಪ್ಪ ತಂಡದ ಐವರು ಚುನಾವಣೆಯಲ್ಲಿ ವಿಜಯಶಾಲಿಯಾಗಿ ನಿರ್ದೇಶಕರಾಗಿ ಆಯ್ಕೆಯಾದರು. ದೇವರಸನಹಳ್ಳಿ ಸಾಮಾನ್ಯ ಕ್ಷೇತ್ರದಿಂದ ಸ್ವತಂತ್ರ ಅಭ್ಯರ್ಥಿಯಾಗಿ ಆರ್.ಸಂಜಯ್(334), ನಂಜನಗೂಡು ಸಾಮಾನ್ಯ ಕ್ಷೇತ್ರದಿಂದ ಜಿ. ಕಿಟ್ಟಪ್ಪ (279), ಕೃಷ್ಣ(272), ಎನ್.ರಾಜು (242), ಬಿ.ಎಸ್. ಸತೀಶ್(231), ಸಾಲಗಾರರಲ್ಲದ ಕ್ಷೇತ್ರದಿಂದ ಎಸ್. ನಂಜುಂಡಸ್ವಾಮಿ (ಉ) ಅಂಬಿ(212) ಮತಗಳನ್ನು ಪಡೆದು ನಿರ್ದೇಶಕರಾಗಿ ಆಯ್ಕೆಯಾದರು.

ಅಲ್ಲದೇ ಮಹಿಳಾ ಕ್ಷೇತ್ರದಿಂದ ಪ್ರೇಮ, ಹೆಚ್.ಕೆ.ನಾಗರತ್ನ, ಪ್ರವರ್ಗ 'ಎ' ಕ್ಷೇತ್ರದಿಂದ ಆರ್.ಮಹೇಶ್, ಪ್ರವರ್ಗ (ಬಿ) ಯಿಂದ ವೆಂಕಟಸ್ವಾಮಿ, ಪ.ಜಾತಿಯಿಂದ ಡಿ.ಆರ್.ಶ್ರೀನಿವಾಸ್, ಪ.ಪಂಗಡದಿಂದ ಪುಟ್ಟಲಿಂಗ ಅವಿರೋಧವಾಗಿ ಆಯ್ಕೆಯಾದರು. ಚುನಾವಣೆ ಫಲಿತಾಂಶ ಘೋಷಣೆಯಾಗುತ್ತಿದ್ದಂತೆ ಬೆಂಬಲಿಗರು ಪಟಾಕಿ ಸಿಡಿಸಿ ಸಿಹಿ ಹಂಚಿ ಸಂಭ್ರಮಾಚರಣೆ ನಡೆಸಿದರು.

ಈ ವೇಳೆ ಜಿ.ಕಿಟ್ಟಪ್ಪ ಮಾತನಾಡಿ, ನಗರ ಪ್ರದೇಶ ಮತ್ತು ಸುತ್ತಮುತ್ತಲಿನ ಗ್ರಾಮಗಳ ರೈತರ ಹಿತದೃಷ್ಟಿಯಿಂದ 2010ರಲ್ಲಿ ನಂಜನಗೂಡು ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘವನ್ನು ಅಸ್ತಿತ್ವಕ್ಕೆ ತರಲಾಯಿತು. ನಮ್ಮ ತಂಡದ ಹೆಚ್ಚಿನ ಸದಸ್ಯರು ಆಯ್ಕೆಯಾಗಿರುವುದು ಸಂತೋಷ ತಂದಿದೆ. ನಮಗೆ ಸಿಕ್ಕ ಅವಕಾಶ ಸದುಪ ಯೋಗಪಡಿಸಿಕೊಂಡು ರೈತರಿಗೆ ದೊರಕುವ ಸವಲತ್ತುಗಳನ್ನು ಅವರ ಮನೆ ಬಾಗಿಲಿಗೆ ತಲುಪಿಸುವ ಮೂಲಕ ಪ್ರಾಮಾ ಣಿಕವಾಗಿ ಸೇವೆ ಸಲ್ಲಿಸಲು ಶ್ರಮಿಸ ಲಾಗುವುದು ಎಂದರು.

ಸಹಕಾರ ಸಂಘದ ಉಪ ನಿಬಂಧಕ ವಸಂತ ಕುಮಾರ್ ಚುನಾವಣಾಧಿಕಾರಿಯಾಗಿ ಕಾರ್ಯ ನಿರ್ವಹಿಸಿದರು. ಈ ವೇಳೆ ಮುಖಂಡರಾದ ಎನ್‌ಎಂ.ಮಂಜುನಾಥ್, ಎನ್.ಎಂ.ನಂಜುಂಡಸ್ವಾಮಿ, ಉಮೇಶ್ ಮೋದಿ, ಅರುಣ್ ಸೇರಿದಂತೆ ಸಹಕಾರ ಸಂಘದ ಸದಸ್ಯರು, ರೈತರು ಮತ್ತು ಮುಖಂಡರು ಉಪಸ್ಥಿತರಿದ್ದರು.

ಇಂದಿನಿಂದ ಶ್ರೀದಂಡಿನಮಾರಮ್ಮ ಜಾತ್ರಾ ಮಹೋತ್ಸವ



ತಿ.ನರಸೀಪುರ, ಮಾ.9– ತಾಲೂಕಿನ ಯಾಚೇನಹಳ್ಳಿ ಗ್ರಾಮದೇವತೆ ಶ್ರೀದಂಡಿನ ಮಾರಮ್ಮ ಜಾತ್ರಾ ಮಹೋತ್ಸವ ಮಾ.10, 11ರಂದು ನಡೆಯಲಿದೆ ಎಂದು ಪ್ರಕಟಣೆ ತಿಳಿಸಿದೆ. ಜಾತ್ರಾ ಮಹೋತ್ಸವ ಅಂಗವಾಗಿ ದೇವಾಲಯದಲ್ಲಿ ಹೋಮ, ಸಿದ್ದನ ಕಟ್ಟೆಯಿಂದ ಹೊಸ ನೀರು ತರುವುದು, ಬಂಡಿ ಉತ್ಸವ, ಮೀಸಲು ಅಳಿಯುವುದು, ಗ್ರಾಮದ ಬೀದಿಗಳಲ್ಲಿ ಶ್ರೀದಂಡಿನಮಾರಮ್ಮನವರ ಮೆರವಣಿಗೆ, ಮಡೆ ಹಾಗೂ ಬಾಯಿ ಬೀಗ, ಕೊಂಡೋತ್ಸವ ಹಾಗೂ ಕುರುಕ್ಷೇತ್ರ ಎಂಬ ಪೌರಾಣಿಕ ನಾಟಕ ನಡೆಯಲಿದೆ. ಭಕ್ತರು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಿ ದೇವರ ಕೃಪೆಗೆ ಪಾತ್ರರಾಗಬೇಕು ಎಂದು ಪ್ರಕಟಣೆ ತಿಳಿಸಿದೆ.

ವಾತ್ಸಲ್ಯ ಯೋಜನೆಯಡಿ ನೂತನ ಮನೆ ಹಸ್ತಾಂತರ



ಚಿಕ್ಕತಾಯಮ್ಮ ಅವರಿಗೆ ಮನೆ ಹಸ್ತಾಂತರಿಸಲಾಯಿತು.

ತಿ.ನರಸೀಪುರ, ಮಾ.9– ತಾಲೂಕಿನ ಬನ್ನೂರು ಯೋಜನಾ ವ್ಯಾಪ್ತಿಯ ಕುಪ್ಯಾ ಗ್ರಾಮದಲ್ಲಿ ಶ್ರೀಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ (ಬಿಸಿ ಟ್ರಸ್ಟ್) ವತಿಯಿಂದ ನಿರ್ಮಿಸಿರುವ ನೂತನ ಮನೆಯನ್ನು ನಿರ್ಗತಿಕ ಮಹಿಳೆ ಚಿಕ್ಕತಾಯಮ್ಮ ಅವರಿಗೆ ಹಸ್ತಾಂತರಿಸಲಾಯಿತು.

ಮಹಿಳಾ ಜ್ಞಾನ ವಿಕಾಸ ಕೇಂದ್ರದ ಅಡಿ ಬರುವ 'ವಾತ್ಸಲ್ಯ' ಕಾರ್ಯಕ್ರಮದ ಮೂಲಕ ಕುಪ್ಯಾ ಗ್ರಾಮದ ನಿವಾಸಿ ಚಿಕ್ಕತಾಯಮ್ಮ ಅವರಿಗೆ ಮನೆ ನಿರ್ಮಿಸಿಕೊಡಲಾಗಿದ್ದು, ನೂತನ ಮನೆಯನ್ನು ಯೋಜನೆ ಪ್ರಾದೇಶಿಕ ನಿರ್ದೇಶಕ ಜಯಂತ್ ಪೂಜಾರಿ ಹಾಗೂ ಜಿಲ್ಲಾ ನಿರ್ದೇಶಕ ವಿಜಯಕುಮಾರ್ ನಾಗನಾಳ ಅವರು ಫಲಾನುಭವಿಗೆ ಅಧಿಕೃತವಾಗಿ ಹಸ್ತಾಂತರಿಸಿದರು.

ಪ್ರಾದೇಶಿಕ ನಿರ್ದೇಶಕ ಜಯಂತ್ ಪೂಜಾರಿ ಮಾತನಾಡಿ, ಡಾ.ಡಿ.ವೀರೇಂದ್ರ ಹೆಗ್ಗಡೆಯವರ ಮಾರ್ಗದರ್ಶನದಲ್ಲಿ ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯು ಗ್ರಾಮೀಣ ಜನರ ಆರ್ಥಿಕ ಮತ್ತು ಸಾಮಾಜಿಕ ಅಭಿವೃದ್ಧಿಗಾಗಿ ನಿರಂತರವಾಗಿ ಶ್ರಮಿಸುತ್ತಿದೆ. ವಸತಿಹೀನ ಮತ್ತು ಶಿಥಿಲಾವಸ್ಥೆಯಲ್ಲಿರುವ ಮನೆಗಳಲ್ಲಿ ವಾಸಿಸುತ್ತಿರುವ ನಿರ್ಗತಿಕರನ್ನು ಗುರುತಿಸಿ, ಅವರಿಗೆ ಆಶ್ರಯ ಒದಗಿಸುವ ಸದುದ್ದೇಶದಿಂದ 'ವಾತ್ಸಲ್ಯ' ಯೋಜನೆ ಜಾರಿಗೊಳಿಸಿದೆ. ಈ ಯೋಜನೆ ಮೂಲಕ ಅನೇಕ ಬಡ ಕುಟುಂಬಗಳಿಗೆ ಸುಸಜ್ಜಿತ ನೂತನ ಮನೆಗಳನ್ನು ನಿರ್ಮಿಸಿ ಕೊಡಲಾಗುತ್ತಿದ್ದು, ಇದು ಬಡವರ ಪಾಲಿನ ಆಶಾಕಿರಣವಾಗಿದೆ ಎಂದು ವಿವರಿಸಿದರು.

ಇದೇ ವೇಳೆ ಮಾತನಾಡಿದ ಫಲಾನುಭವಿ ಚಿಕ್ಕತಾಯಮ್ಮ, ಧರ್ಮಸ್ಥಳ ಗ್ರಾಮಾಭಿವೃದ್ಧಿ ಸಂಸ್ಥೆಗೆ ಕೃತಜ್ಞತೆ ಸಲ್ಲಿಸಿದರು.

ಈ ವೇಳೆ ಕುಪ್ಯಾ ಗ್ರಾಪಂ ಅಧ್ಯಕ್ಷೆ ನಂದಿನಿ ರಾಜೇಶ್, ಮಾಜಿ ಅಧ್ಯಕ್ಷರಾದ ರಾಘವೇಂದ್ರ, ಗವಿಸಿದ್ದಯ್ಯ, ಮಾಜಿ ಉಪಾಧ್ಯಕ್ಷರಾದ ಪುಷ್ಪ ಶಿವಪ್ಪ, ಕುಪ್ಯಾ ಒಕ್ಕೂಟದ ಅಧ್ಯಕ್ಷ ನಾಗೇಂದ್ರ ಪ್ರಸಾದ್, ಜಿಲ್ಲಾ ಜನಜಾಗೃತಿ ಕೋಶಾಧಿಕಾರಿ ನಾರಾಯಣ್, ಬನ್ನೂರು ಯೋಜನಾಧಿಕಾರಿ ಉಮಾವತಿ, ಜ್ಞಾನ ವಿಕಾಸ ಸಮನ್ವಯಾಧಿಕಾರಿ ಪ್ರಮೀಳಾ, ವಲಯದ ಮೇಲ್ವಿಚಾರಕ ನಾಗರಾಜ್, ಸೇವಾ ಪ್ರತಿನಿಧಿಗಳಾದ ಚೆನ್ನರಾಜು, ಮಹದೇವಸ್ವಾಮಿ ಹಾಗೂ ಊರಿನ ಪ್ರಮುಖ ಮುಖಂಡರಾದ ಶಿವಣ್ಣ, ಸಿದ್ದರಾಜು, ಗವಿಸಿದ್ದಯ್ಯ, ಭೈರಯ್ಯ ಇತರರಿದ್ದರು.

ಮಾ.11,12ಕ್ಕೆ ಮಹದೇಶ್ವರಸ್ವಾಮಿ ದೇವಾಲಯ ಲೋಕಾರ್ಪಣೆ



ನಂಜನಗೂಡು, ಮಾ.9– ತಾಲೂಕಿನ ಹಂಡುವಿನಹಳ್ಳಿಯಲ್ಲಿ ನೂತನವಾಗಿ ನಿರ್ಮಿಸಿರುವ ಮಹದೇಶ್ವರಸ್ವಾಮಿ ದೇವಾಲಯ ಲೋಕಾರ್ಪಣೆ, ವಿಮಾನ ಗೋಪುರ, ಕಳಸ ಪ್ರತಿಷ್ಠಾಪನೆ, ಕುಂಬಾಭಿಷೇಕ ಕಾರ್ಯಕ್ರಮ ಮಾ.11, 12ರಂದು ನಡೆಯಲಿವೆ ಎಂದು ಹಂಡುವಿನಹಳ್ಳಿ ಗ್ರಾಮದ ಗೌಡಿಕೆ ನಾಗಪ್ಪ ತಿಳಿಸಿದರು.

ನಗರದ ಪತ್ರಕರ್ತರ ಭವನದಲ್ಲಿ ಸೋಮವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಗ್ರಾಮಸ್ಥರ ನೆರವಿನಿಂದ 1.6 ಕೋಟಿ ರೂ. ವೆಚ್ಚದಲ್ಲಿ ದೇವಾಲಯ ನಿರ್ಮಿಸಲಾಗಿದೆ. ಮಾ.11ರಂದು ಬೆಳಗ್ಗೆ 9 ಗಂಟೆಗೆ ವಿಗ್ರಹಗಳನ್ನು ಪೂರ್ಣ ಕುಂಭ ಸಮೇತ ಗ್ರಾಮದ ಪ್ರಮುಖ ಬೀದಿಗಳಲ್ಲಿ ಮಂಗಳವಾದ್ಯಗಳೊಂದಿಗೆ ಮೆರವಣಿಗೆ ಮಾಡಲಾಗುವುದು. ನಂತರ ಹೋಮ– ಹವನ, ವಿಮಾನ ಗೋಪುರ, ಕಳಸ ಪ್ರತಿಷ್ಠಾಪನೆ, ಕುಂಬಾಭಿಷೇಕ ಸೇರಿದಂತೆ ವಿವಿಧ ಧಾರ್ಮಿಕ ಪೂಜಾ ಕೈಂಕರ್ಯಗಳು ನಡೆಯಲಿದೆ. ಮಾ.12ರಂದು ಬೆಳಗ್ಗೆ 10.30ಕ್ಕೆ ದೇವಾಲಯ ಉದ್ಘಾಟನೆಯಾಗಲಿದೆ. ಬಳಿಕ ನಡೆಯುವ ಧಾರ್ಮಿಕ ಸಭೆಯಲ್ಲಿ ಸುತ್ತೂರು ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ತುಮಕೂರು ಸಿದ್ಧಗಂಗಾ ಮಠದ ಸಿದ್ಧಲಿಂಗ ಸ್ವಾಮೀಜಿ, ದೇವನೂರಿನ ಮಹಾಂತ ಸ್ವಾಮೀಜಿ, ಸಾಲೂರು ಮಠದ ಶಾಂತ ಮಲ್ಲಿಕಾರ್ಜುನ ಸ್ವಾಮೀಜಿ, ಮಲ್ಲನ ಮೂಲೆ ಗುರು ಕಂಬಳೀಶ್ವರ ಮಠದ ಇಮ್ಮಡಿ ಸಿದ್ಧಲಿಂಗ ಸ್ವಾಮೀಜಿ ಭಾಗವಹಿಸಿ ಸಭೆಯ ಸಾನಿಧ್ಯ ವಹಿಸಲಿದ್ದಾರೆ.

ಕಾರ್ಯಕ್ರಮದಲ್ಲಿ ಸುತ್ತಮುತ್ತಲ ಗ್ರಾಮದ 20 ಸಾವಿರಕ್ಕೂ ಹೆಚ್ಚು ಭಕ್ತರು ಪಾಲ್ಗೊಳ್ಳಲಿದ್ದು, 2 ದಿನಗಳ ಕಾಲ ಭಕ್ತರಿಗೆ ಪ್ರಸಾದದ ವ್ಯವಸ್ಥೆ ಮಾಡಲಾಗಿದೆ ಎಂದರು.

ಸುದ್ದಿಗೋಷ್ಠಿಯಲ್ಲಿ ಗ್ರಾಮದ ಮುಖಂಡರಾದ ಮಹದೇವಪ್ಪ, ರಾಜು, ನವೀನ್, ಪರಮೇಶ್, ವೀರಭದ್ರಪ್ಪ, ನಾಗಣ್ಣ, ಶಂಕರ್, ಜಗದೀಶ್, ಯೋಗೇಶ್ ಉಪಸ್ಥಿತರಿದ್ದರು.

ಪೆಟ್ರೋಲ್ ಬಂಕ್‌ನಲ್ಲಿ ದರೋಡೆ ಪ್ರಕರಣ: ಐವರ ಬಂಧನ



ಅಭಿ



ಉಮೇಶ



ರಕ್ಷಿತ್



ಲಕ್ಷ್ಮಣ



ಕಿರಣ್

ಹುಣಸೂರು, ಮಾ.9– ತಾಲೂಕಿನ ಪೆಟ್ರೋಲ್ ಬಂಕ್‌ನಲ್ಲಿ ನಡೆದ ದರೋಡೆ ಪ್ರಕರಣಕ್ಕೆ ಸಂಬಂಧಿಸಿದಂತೆ ಮೂವರು ದರೋಡೆಕೋರರನ್ನು ಬಂಧಿಸುವಲ್ಲಿ ಬಿಳಿಕೆರೆ ಠಾಣೆ ಪೊಲೀಸರು ಯಶಸ್ವಿಯಾಗಿದ್ದಾರೆ.

ಹಾಸನ ಮೂಲದ ಕಿರಣ್(30), ಮಂಡ್ಯದ ಲಕ್ಷ್ಮಣ (32), ಹುಣಸೂರು ತಾಲೂಕು ಕಿರಿಜಾಜಿ ಗ್ರಾಮದ ಉಮೇಶ(32) ಬಂಧಿತ ಆರೋಪಿಗಳು. ಇವರಿಂದ ಕೃತ್ಯಕ್ಕೆ ಬಳಸಿದ್ದ (ಕೆಎ.51, ಎಂಡಿ–9565) ಸ್ಕೋಡಾ ಕಾರು, 3200 ರೂ. ಹಾಗೂ ಮಾರಕಾಸ್ತ್ರಗಳನ್ನು ವಶಪಡಿಸಿಕೊಂಡಿದ್ದಾರೆ.

ಅಲ್ಲದೇ ಪ್ರಕರಣದಲ್ಲಿ ಭಾಗಿಯಾಗಿದ್ದ ಇನ್ನುಳಿದ ಇಬ್ಬರು ಆರೋಪಿಗಳಾದ ಚನ್ನಪಟ್ಟಣ ಮೂಲದ ರಕ್ಷಿತ್ ಅಲಿಯಾಸ್ ರಕ್ಷಿ, ಅಭಿ ಅಲಿಯಾಸ್ ಚೌಚೌ ಅವರನ್ನು ಬೇರೊಂದು ಪ್ರಕರಣ ಸಂಬಂಧ ಬೆಂಗಳೂರು ದಕ್ಷಿಣ ಜಿಲ್ಲೆಯ ಹಾರೋಹಳ್ಳಿ ಪೊಲೀಸರು ಬಂಧಿಸಿದ್ದಾರೆ.

ವಿವರ: ಐವರಿದ್ದ ದರೋಡೆಕೋರರ ಗುಂಪು ಫೆ.12ರಂದು ರಾತ್ರಿ 10 ಗಂಟೆ ಸಮಯದಲ್ಲಿ ನಂಬರ್ ಪ್ಲೇಟ್ ಇಲ್ಲದ ಸ್ಕೋಡಾ ಕಾರಿನಲ್ಲಿ ತಾಲೂಕಿನ ಕರಿಮುದ್ದನಹಳ್ಳಿ ಗ್ರಾಮದ ಸ್ವಾಮಿ ಸರ್ವೀಸ್ ಸ್ಟೇಷನ್ ಇಂಡಿಯನ್ ಆಯಿಲ್ ಪೆಟ್ರೋಲ್ ಬಂಕ್‌ಗೆ ನುಗ್ಗಿ ಅಲ್ಲಿನ ಇಬ್ಬರು ಸಿಬ್ಬಂದಿಗಳ ಮೇಲೆ ಮಾರಕಾಸ್ತ್ರಗಳಿಂದ ಹಲ್ಲೆ ಮಾಡಿ 15300 ರೂ. ದರೋಡೆ ಮಾಡಿ ಪರಾರಿಯಾಗಿದ್ದರು. ಈ ಸಂಬಂಧ ಬಿಳಿಕೆರೆ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿತ್ತು.

ಬಳಿಕ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಮಲ್ಲಿಕಾರ್ಜುನ ಬಾಲದಂಡಿ, ಎಎಸ್ಪಿ ಮಲ್ಲಿಕ್.ಸಿ ಹಾಗೂ ನಾಗೇಶ್.ಎಲ್, ಹುಣಸೂರು ಡಿವೈಎಸ್ಪಿ ರವಿ ಅವರ ಮಾರ್ಗದರ್ಶನದಲ್ಲಿ ಬಿಳಿಕೆರೆ ಠಾಣೆ ಇನ್ಸ್‌ಪೆಕ್ಟರ್ ಟಿ.ಎಂ.ಪುನೀತ್ ನೇತೃತ್ವದ ಪೊಲೀಸರ ತಂಡ ತನಿಖೆ ಕೈಗೊಂಡು ಆರೋಪಿಗಳ ಬಗ್ಗೆ ಮಾಹಿತಿ ಸಂಗ್ರಹಿಸಿ ಮಾ.6 ರಂದು ಮೈಸೂರಿನ ಹಿನಕಲ್ ಫ್ಲೈ ಓವರ್ ಬಳಿಯ ಗೌಡ್ರು ಪೋರ್ಕ್ ಹೋಟೆಲ್‌ನಲ್ಲಿ ಆರೋಪಿಗಳಾದ ಕಿರಣ್, ಲಕ್ಷ್ಮಣ ಹಾಗೂ ಉಮೇಶ ಅವರನ್ನು ಬಂಧಿಸಿ, ನ್ಯಾಯಾಲಯಕ್ಕೆ ಹಾಜರುಪಡಿಸಿ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿದ್ದಾರೆ.

ಕಾರ್ಯಾಚರಣೆಯಲ್ಲಿ ಬಿಳಿಕೆರೆ ಠಾಣೆ ಅಪರಾಧ ವಿಭಾಗದ ಎಸ್‌ಐ ಇಷರತ್ ಬೇಗಂ, ಸಿಬ್ಬಂದಿಗಳಾದ ಪ್ರತಾಪ್, ಶಶಿಕುಮಾರ್, ಜಯರಾಮ, ನಾಗಾರ್ಜುನ, ಅಶೋಕ್ ಕುಮಾರ್, ಶಿವಕುಮಾರ, ಪ್ರಸಾದ್, ಜಿಲ್ಲಾ ಟೆಕ್ನಿಕಲ್ ಶಾಖೆ ವಸಂತ್ ಕುಮಾರ್, ಸುನೀತಾ ಹಾಗೂ ಜೀಪ್ ಚಾಲಕ ಗೋವಿಂದ ಭಾಗವಹಿಸಿದ್ದರು.

ಶ್ರೀರಾಂಪುರ ಪಿಎಸಿಎಸ್‌ಗೆ ನಿರ್ದೇಶಕರ ಆಯ್ಕೆ



ನೂತನ ನಿರ್ದೇಶಕರನ್ನು ಸಹಕಾರ ಸಂಘದ ಅಧಿಕಾರಿಗಳು ಅಭಿನಂದಿಸಿದರು.

ಮೈಸೂರು, ಮಾ.9– ತಾಲೂಕಿನ ಶ್ರೀರಾಂಪುರ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಕ್ಕೆ ಒಟ್ಟು 12 ನಿರ್ದೇಶಕರು ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ಆಡಳಿತ ಮಂಡಳಿಯ 12 ಸ್ಥಾನಗಳಿಗೆ ಸಾಲಗಾರರ ಕ್ಷೇತ್ರದಿಂದ 11 ಮಂದಿ, ಸಾಲಗಾರರಲ್ಲದ ಕ್ಷೇತ್ರದಿಂದ ಓರ್ವ ಸೇರಿದಂತೆ ಒಟ್ಟು 12 ನಿರ್ದೇಶಕರು ಅವಿರೋಧವಾಗಿ ಆಯ್ಕೆಯಾದರು. ಎಪಿಎಂಸಿ ಮಾಜಿ ನಿರ್ದೇಶಕ ಕೋಟೆಹುಂಡಿ ಮಹದೇವು ಸೇರಿದಂತೆ ಇನ್ನಿತರ ಬೆಂಬಲಿಗರಾದ ಶ್ರೀರಾಂಪುರ ಎಲ್.ಜಿ. ಸುರೇಶ್, ಲಿಂಗಾಂಬುದಿ ಪಾಳ್ಯ ಪ್ರೇಮಾ, ಕೋಟೆಹುಂಡಿ ಪುಷ್ಪಾಂಜಲಿ, ಉದ್ಬೂರು ಜಯಮ್ಮ, ಲಿಂಗಾಂಬುದಿ ಪಾಳ್ಯ ಆರ್. ಮಹೇಶ್, ಉದ್ಬೂರು ಗೋವಿಂದ ನಾಯಕ ಆಯ್ಕೆಯಾಗಿದ್ದು, ಸಾಲಗಾರರಲ್ಲದ ಕ್ಷೇತ್ರದಿಂದ ಶ್ರೀರಾಂಪುರ ರಮೇಶ್ ಮಾಂಬಣ್ಣ, ಗುರೂರು ಮಹೇಶ್, ಉದ್ಬೂರು ಎನ್.ಪ್ರಕಾಶ್, ಗುರೂರು ನಾಗರಾಜು ಮತ್ತು ಶ್ರೀರಾಂಪುರ ಸಿ.ಮಂಜುನಾಥ್ ನಿರ್ದೇಶಕರಾಗಿ ಅವಿರೋಧವಾಗಿ ಆಯ್ಕೆಯಾಗಿದ್ದಾರೆ. ನೂತನ ನಿರ್ದೇಶಕರನ್ನು ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ಅಧಿಕಾರಿಗಳು ಅಭಿನಂದಿಸಿದರು. ಚುನಾವಣಾಧಿಕಾರಿಯಾಗಿ ಎನ್.ಮಂಜುನಾಥ್ ಕಾರ್ಯ ನಿರ್ವಹಿಸಿದರು. ಮುಖ್ಯ ಕಾರ್ಯ ನಿರ್ವಾಹಕಾಧಿಕಾರಿ ಎಂ.ರವಿಕುಮಾರ್ ಹಾಜರಿದ್ದರು.

ಹೆಚ್.ಡಿ.ಕೋಟೆ ಲಯನ್ಸ್ ಸಂಸ್ಥೆ ಜಿಲ್ಲೆಗೆ ಮಾದರಿ

ಲಯನ್ಸ್ ಸಂಸ್ಥೆ ಜಿಲ್ಲಾ ಗವರ್ನರ್ ಕೆ.ಎಲ್.ರಾಜಶೇಖರ್



ಶೌಚಾಲಯವನ್ನು ಲಯನ್ಸ್ ಸಂಸ್ಥೆ ಜಿಲ್ಲಾ ಗವರ್ನರ್ ರಾಜಶೇಖರ್ ಉದ್ಘಾಟಿಸಿದರು.

ಹೆಚ್.ಡಿ.ಕೋಟೆ, ಮಾ.9– ಲಯನ್ಸ್ ಸಂಸ್ಥೆ ತಾಲೂಕಿನಲ್ಲಿ ಅತ್ಯುತ್ತಮ ಸೇವಾ ಕಾರ್ಯಗಳನ್ನು ಮಾಡುತ್ತಾ ಬಂದಿದ್ದು, ಜಿಲ್ಲೆಗೆ ಮಾದರಿಯಾಗಿ ಹೆಚ್.ಡಿ.ಕೋಟೆ ಲಯನ್ಸ್ ಸಂಸ್ಥೆ ಹೊರ ಹೊಮ್ಮಿದೆ ಎಂದು ಲಯನ್ಸ್ ಸಂಸ್ಥೆ ಜಿಲ್ಲಾ ಗವರ್ನರ್ ಕೆ.ಎಲ್.ರಾಜಶೇಖರ್ ತಿಳಿಸಿದರು.

ಪಟ್ಟಣದ ಆದಿಚುಂಚನಗಿರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಲಯನ್ಸ್ ಸಂಸ್ಥೆಯಿಂದ ಉಚಿತವಾಗಿ ನಿರ್ಮಿಸಿದ್ದ 2 ಹೈಟೆಕ್ ಶೌಚಾಲಯಗಳನ್ನು ಉದ್ಘಾಟಿಸಿ ಮಾತನಾಡಿದ ಅವರು, ಇಲ್ಲಿನ ವಿದ್ಯಾರ್ಥಿನಿಯರ ಅನುಕೂಲಕ್ಕಾಗಿ 2 ಲಕ್ಷ ರೂ. ವೆಚ್ಚದಲ್ಲಿ 2 ಹೈಟೆಕ್ ಶೌಚಾಲಯ ನಿರ್ಮಿಸಿರುವುದು ಶ್ಲಾಘನೀಯ ಎಂದರು.

ತಾಲೂಕು ಲಯನ್ಸ್ ಸಂಸ್ಥೆ ತಾಲೂಕು ಅಧ್ಯಕ್ಷ ಭಾಸ್ಕರ್ ಮಾತನಾಡಿ, ಪಟ್ಟಣದ ಆದಿಚುಂಚನಗಿರಿ ಕಾಲೇಜಿನಲ್ಲಿ ಲಯನ್ಸ್ ಸಂಸ್ಥೆಯಿಂದ ಉಚಿತವಾಗಿ ಹೈಟೆಕ್ ಶೌಚಾಲಯ ನಿರ್ಮಿಸಲಾಗಿದ್ದು, ಅದನ್ನು ಸ್ವಚ್ಛತೆಯಿಂದ ಬಳಸುವಂತೆ ತಿಳಿಸಿದರು.

ಪಟ್ಟಣದ ಸಾರ್ವಜನಿಕ ಪಶು ಆಸ್ಪತ್ರೆಯಲ್ಲಿ ನೀರಿನ ಕೊರತೆ ಕಂಡು ಬಂದಿದೆ. ಹೀಗಾಗಿ ನೀರಿನ ಸೌಲಭ್ಯಕ್ಕಾಗಿ ಬೋರ್‌ವೆಲ್ ಕೊರೆಸಿ ಕೊಡಲಾಗುವುದು ಎಂದು ಭರವಸೆ ನೀಡಿದರು.

ಈ ವೇಳೆ ಜಿಲ್ಲಾ ಕಾರ್ಯದರ್ಶಿ ವೆಂಕಟೇಶ್, ಜಿಲ್ಲಾ ಪಿಎಸ್‌ಟಿ ಸಿದ್ದೇಗೌಡ, ತಾಲೂಕು ಕಾರ್ಯದರ್ಶಿ ಜಿ.ಎನ್.ನಾರಾಯಣಗೌಡ, ಖಜಾಂಚಿ ಬಸವರಾಜು, ಸಿ.ನಾಗಣ್ಣ, ವೀರಪ್ಪ, ಚಲುವರಾಜು, ನಾಗನಾಯಕ, ನಟರಾಜು, ಪಿ.ರವಿ, ಈರೇಗೌಡ, ಸಂಗಮೇಶ್ವರ್, ರಮೇಶ್, ಅಶೋಕ್, ಬಿ.ಪಿ.ಭಾಸ್ಕರ್, ರಾಜೇಶ್, ಪ್ರಕಾಶ್, ವೈ.ಟಿ.ಮಹೇಶ್, ವಕೀಲೆ ಹೆಚ್.ವಿ.ಸರಸ್ವತಿ, ಕುಮಾರ್ ಇದ್ದರು.

ರೈತರಿಗೆ ಸಮಗ್ರ ತೋಟಗಾರಿಕೆ ಕೃಷಿ ಕಾರ್ಯಾಗಾರ



ರೈತರಿಗೆ ಸಮಗ್ರ ತೋಟಗಾರಿಕೆ ಕೃಷಿ ಬಗ್ಗೆ ಕಾರ್ಯಾಗಾರ ಹಮ್ಮಿಕೊಳ್ಳಲಾಗಿತ್ತು.

ಹುಣಸೂರು, ಮಾ.9– ತಾಲೂಕಿನ ಕೃಷ್ಣಾಪುರ ಮತ್ತು ಸಿರಿಯೂರು ಗ್ರಾಮದಲ್ಲಿ ಶ್ರೀಕ್ಷೇತ್ರ ಧರ್ಮಸ್ಥಳ ಗ್ರಾಮೀಣಾಭಿವೃದ್ಧಿ ಸಂಸ್ಥೆಯಿಂದ ರೈತರಿಗೆ ಸಮಗ್ರ ತೋಟಗಾರಿಕೆ ಕೃಷಿ ಬಗ್ಗೆ ಕಾರ್ಯಾಗಾರ ಹಮ್ಮಿಕೊಳ್ಳಲಾಗಿತ್ತು.

ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಮೇಲ್ವಿಚಾರಕ ಕಿರಣ್, ಶ್ರೀಕ್ಷೇತ್ರ ಧರ್ಮಸ್ಥಳ ಸಂಸ್ಥೆಯಿಂದ ಸಾಲವನ್ನು ಬ್ಯಾಂಕ್ ಮೂಲಕ ಕೊಡಿಸುವುದಲ್ಲದೇ ಗ್ರಾಮೀಣ ರೈತರಿಗೆ ಕೆರೆ ಕಟ್ಟೆಗಳು, ಶಾಲೆಗಳು, ನಿರ್ಗತಿಕರಿಗೆ ಸೂರಿನ ವ್ಯವಸ್ಥೆ ಸೇರಿದಂತೆ ಮಕ್ಕಳ ವಿದ್ಯಾಭ್ಯಾಸಕ್ಕೆ ಸಹಾಯ ಮಾಡುವುದು ಸಂಸ್ಥೆಯ ಕಾರ್ಯವಾಗಿದೆ. ಅದನ್ನು ಸದುಪಯೋಗಪಡಿಸಿಕೊಳ್ಳಬೇಕು ಎಂದರು.

ಪ್ರಗತಿಪರ ಅರಗು ಕೃಷಿಕ ಚಲುವರಾಜು ಮಾತನಾಡಿ, ಇಂದು ನಾವೆಲ್ಲರೂ ಅರಣ್ಯ, ಜೀವ ಜಲ ಉಳಿಸಿದರೆ ಮಾತ್ರ ಮುಂದಿನ ಪೀಳಿಗೆಯನ್ನು ಉಳಿಸಬಹುದು. ರೈತರು ತಮ್ಮ ಜಮೀನುಗಳ ಬದುಗಳಲ್ಲಿ ಹಣ್ಣಿನ ಮರ, ತೆಂಗು, ಕಾಡು ಮರಗಳನ್ನು ಬೆಳೆಸುವುದರಿಂದ ಪ್ರಕೃತಿ ತಂಪಾಗಿ ಒಳ್ಳೆಯ ವಾತಾವರಣ, ಶುದ್ಧ ಗಾಳಿ, ಭೂಮಿಗೆ ಗೊಬ್ಬರ, ಪ್ರಾಣಿ ಪಕ್ಷಿಗಳಿಗೆ ಆಹಾರ ದೊರೆಯಲಿದೆ. ಸಮಗ್ರ ಕೃಷಿಯಲ್ಲಿ ರೈತನು ಕಾಲಕ್ಕೆ ತಕ್ಕಂತೆ ಹಣ್ಣುಗಳ ಗಿಡ, ತರಕಾರಿ ಇನ್ನಿತರ ಆಹಾರ ಪದಾರ್ಥಗಳನ್ನು ಬೆಳೆಯುವ ಜೊತೆಗೆ ಕಾಡು ಕೃಷಿ, ಮೇಕೆ, ಕುರಿ, ಕೋಳಿ ಸಾಕಾಣೆಯನ್ನು ಉಪಕಸುಬಾಗಿ ಮಾಡಿಕೊಂಡರೆ ಆರ್ಥಿಕ ಲಾಭ ಕಾಣಬಹುದು. ಇತ್ತೀಚಿನ ದಿನಗಳಲ್ಲಿ ರೈತರು ಬೆಳೆಗಳಿಗೆ ಹೆಚ್ಚು ರಸಗೊಬ್ಬರ ಬಳಸಿ ಬೆಳೆ ಹಾಳು ಮಾಡಿಕೊಳ್ಳುವುದಲ್ಲದೆ ತಮ್ಮ ಆರೋಗ್ಯ ಹಾಳು ಮಾಡಿಕೊಳ್ಳುತ್ತಿದ್ದಾರೆ. ಹೀಗಾಗಿ ಮನೆಯಲ್ಲಿ ಸಿಗುವ ಕೊಟ್ಟಿಗೆ ಗೊಬ್ಬರ ಬಳಸಿ ಬೆಳೆ ಬೆಳೆಯುವುದಾದರೆ ಭೂಮಿಗೆ ತಂಪು ಮನುಷ್ಯನಿಗೂ ಇಂಪು ಎಂಬಂತೆ ಕೃಷಿಯನ್ನು ಖುಷಿಯಿಂದ ಮಾಡಬೇಕು ಎಂದು ಸಲಹೆ ನೀಡಿದರು.

ಇತ್ತೀಚಿನ ದಿನಗಳಲ್ಲಿ ಗ್ರಾಮೀಣ ಪ್ರದೇಶದ ಹೆಚ್ಚು ಮಹಿಳೆಯರು ವಿದೇಶಿ ಹಸುಗಳನ್ನು ಸಾಕುತ್ತಿರುವುದು ಸಂತೋಷದ ವಿಷಯ. ಆದರೆ ದೇಶಿ ತಳಿಗಳಾದ ಹಳ್ಳಿಕಾರ್ ಹಸುಗಳನ್ನು ಹಾಕಬೇಕು. ರೈತರು ತಾವು ಬೆಳೆದಂತಹ ಸೊಪ್ಪು ತರಕಾರಿ, ಹಣ್ಣುಗಳನ್ನು ತಾವೇ ಆದಷ್ಟು ಮಾರಾಟ ಮಾಡಿದರೆ ಅದರಿಂದ ಆಗುವ ಲಾಭವನ್ನು ನೀವೇ ತಿಳಿದುಕೊಳ್ಳಬಹುದು ಎಂದು ತಿಳಿಸಿದರು.

ಕಾರ್ಯಾಗಾರದಲ್ಲಿ ಮೇಲ್ವಿಚಾರಕ ಮಹೇಶ್, ಮುಖಂಡರಾದ ಚಂದ್ರನಾಯಕ, ಸೇವಾ ಪ್ರತಿನಿಧಿಗಳು, ಸಂಘದ ಪದಾಧಿಕಾರಿಗಳು ರೈತರು ಭಾಗವಹಿಸಿದ್ದರು.

ಸರಣಿ ಕಳ್ಳತನದಲ್ಲಿ ಭಾಗಿಯಾಗಿದ್ದವನ ಬಂಧನ



ಬಂಧಿತ ಆರೋಪಿಯೊಂದಿಗೆ ನಂ.ಗೂಡು ಪೊಲೀಸರು.

ನಂಜನಗೂಡು, ಮಾ.9– ನಗರದ ವಿವಿಧೆಡೆ ನಡೆದ ಸರಣಿ ಕಳ್ಳತನದಲ್ಲಿ ಭಾಗಿಯಾಗಿದ್ದ ಕಳ್ಳನನ್ನು ಬಂಧಿಸುವಲ್ಲಿ ನಂಜನಗೂಡು ಪೊಲೀಸರು ಯಶಸ್ವಿಯಾಗಿದ್ದಾರೆ.

ಚಾಮರಾಜನಗರದ ಗಾಳಿಪುರ ಬಡಾವಣೆಯ ನಿವಾಸಿ ಸೈಯಾದ್ ರಿಯಾಜ್ ಅಲಿಯಾಸ್ ರಯ್ಯ ಬಂಧಿತ ಆರೋಪಿ. ಆತನಿಂದ 26 ಗ್ರಾಂ ಚಿನ್ನಾಭರಣ, 9700 ರೂ., ಕೃತ್ಯಕ್ಕೆ ಬಳಸಿದ್ದ ಬೈಕ್ ಹಾಗೂ ಮಾರಕಾಸ್ತ್ರಗಳನ್ನು ವಶಪಡಿಸಿಕೊಂಡಿದ್ದಾರೆ.

ವಿವರ: ಮಾ.1ರಂದು ರಾತ್ರಿ ನಗರದ ಹಳೇ ಕೆಎಸ್‌ಆರ್‌ಟಿಸಿ ಬಸ್ ನಿಲ್ದಾಣದ ಬಳಿಯ ಶ್ರೀ ಬೃಂದಾವನ್ ಹಾಸನ್ ಅಯ್ಯಂಗಾರ್ ಬೇಕರಿ ಬೀಗ ಮುರಿದು ಕಳ್ಳತನ ಮಾಡಿರುವ ಸಂಬಂಧ ಬಂದ ದೂರು ದಾಖಲಿಸಿಕೊಂಡು ತನಿಖೆ ಕೈಗೊಂಡಿದ್ದ ಪಟ್ಟಣದ ಪೊಲೀಸರು ಚಾಮರಾಜನಗರದ ಸೈಯಾದ್ ರಿಯಾಜ್ ಅಲಿಯಾಸ್ ರಯ್ಯನನ್ನು ವಶಕ್ಕೆ ಪಡೆದು ವಿಚಾರಣೆಗೆ ಒಳಪಡಿಸಿದಾಗ ಆತ 2025ರ ಡಿಸೆಂಬರ್‌ನಲ್ಲಿ ನಂಜನಗೂಡಿನಲ್ಲಿ ನಡೆದ ಹಲವು ಸರಣಿ ಕಳ್ಳತನದಲ್ಲಿ ಭಾಗಿಯಾಗಿರುವುದು ಬೆಳಕಿಗೆ ಬಂದಿದೆ. ಬಳಿಕ ಆತನಿಂದ ಕಳವು ಪದಾರ್ಥಗಳು ಸೇರಿದಂತೆ ಕಟ್ಟರ್ ಮಿಷನ್ ಹಾಗೂ 2 ಬ್ಯಾಟರಿಗಳನ್ನು ವಶಕ್ಕೆ ಪಡೆದು ಆರೋಪಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿದ್ದಾರೆ.

ಕಾರ್ಯಾಚರಣೆಯಲ್ಲಿ ನಂಜನಗೂಡು ಪೊಲೀಸ್ ಠಾಣೆಯ ರವೀಂದ್ರ ಸಿ.ಎಂ ನೇತೃತ್ವದಲ್ಲಿ ಎಎಸ್‌ಐಗಳಾದ ಶಿವ, ಸತೀಶ್, ಸಿಬ್ಬಂದಿಗಳಾದ ಅಬ್ದುಲ್ ಲತೀಫ್, ಎನ್.ಎ.ಅಶೋಕ, ಭಾಸ್ಕರ್, ಶ್ರೀನಿವಾಸ್, ಶಿವಕುಮಾರ್, ಮಹೇಶ್, ತಿಮ್ಮಯ್ಯ, ಚೇತನ್, ಕೃಷ್ಣ ಸೇರಿದಂತೆ ಇತರರು ಪಾಲ್ಗೊಂಡಿದ್ದರು.

ಇಂದಿನಿಂದ ಮರುಡೇಶ್ವರಸ್ವಾಮಿ ಜಾತ್ರಾ ಮಹೋತ್ಸವ



ತಿ.ನರಸೀಪುರ, ಮಾ.9– ತಾಲೂಕಿನ ಮಾದಾಪುರದಲ್ಲಿ ಮಾ.10ರಿಂದ 13ರ ವರೆಗೆ ಶ್ರೀಮರುಡೇಶ್ವರ ಸ್ವಾಮಿ ಜಾತ್ರಾ ಮಹೋತ್ಸವ ನಡೆಯಲಿದೆ.

ಜಾತ್ರಾ ಮಹೋತ್ಸವದ ಅಂಗವಾಗಿ ಮಾ.10ರಂದು ಮಧ್ಯಾಹ್ನ 1 ಗಂಟೆಗೆ ಕೊಂಡೋತ್ಸವ, ಮಾ.11ರಂದು ಮಧ್ಯಾಹ್ನ 1.30ಕ್ಕೆ ಮರುಡೇಶ್ವರಸ್ವಾಮಿ ಬ್ರಹ್ಮ ರಥೋತ್ಸವ, ಸುಬ್ರಹ್ಮಣ್ಯಸ್ವಾಮಿ ಹಾಗೂ ಶ್ರೀಗಣೇಶ ಮೂರ್ತಿಗಳ ರಥೋತ್ಸವ ಜರುಗಲಿದೆ. ಶ್ರೀ ಮರುಡೇಶ್ವರ ಸ್ವಾಮಿ ದೇವಸ್ಥಾನದ ಮುಂಭಾಗದಿಂದ ರಥದ ಬೀದಿಯಲ್ಲಿ ಸಾಗುವ ರಥೋತ್ಸವಕ್ಕೆ ಕಲಾ ತಂಡಗಳು ಜೊತೆಯಾಗಲಿವೆ. ಮಾ.12ರಂದು ರಾತ್ರಿ 8 ಗಂಟೆಗೆ ವಿದ್ಯುತ್ ದೀಪಾಲಂಕಾರದಿಂದ ಅಲಂಕೃತವಾದ ತಪ್ಪೋತ್ಸವ ಹಾಗೂ ಮಾ.13ರಂದು ಬೆಳಗ್ಗೆ 8.30ಕ್ಕೆ ಹೂವಿನ ಅಲಂಕೃತ ಕುರ್ಜಿನ ಮೆರವಣಿಗೆ ಗ್ರಾಮದ ಬೀದಿಯಲ್ಲಿ ನಡೆಯಲಿದೆ.

ಡಾ.ಅಂಬೇಡ್ಕರ್ ಒಳ ಮೀಸಲಾತಿ ಪರವಾಗಿದ್ದವರಲ್ಲ

ಸದರಿ ಮೀಸಲಾತಿ ನಿಷೇಧಕ್ಕೆ ಜಿಪಂ ಮಾಜಿ ಅಧ್ಯಕ್ಷ ಸಿದ್ದಪ್ಪ ಒತ್ತಾಯ



ಸುದ್ದಿಗೋಷ್ಠಿಯಲ್ಲಿ ಜಿಪಂ ಮಾಜಿ ಅಧ್ಯಕ್ಷ ಸಿದ್ದಪ್ಪ ಮಾತನಾಡಿದರು.

ಕೆ.ಆರ್.ನಗರ, ಮಾ.9– ಸಂವಿಧಾನ ಕೊಟ್ಟ ಡಾ.ಬಿ.ಆರ್.ಅಂಬೇಡ್ಕರ್ ಅವರು ಸಮಾಜದ ಕಟ್ಟ ಕಡೆಯ ವ್ಯಕ್ತಿಗೂ ಸರ್ಕಾರದ ಎಲ್ಲಾ ಕ್ಷೇತ್ರಗಳಲ್ಲಿ ಅವಕಾಶ ಸಿಗಬೇಕೆಂಬ ಸದುದ್ದೇಶದಿಂದ ನೀಡಿದ ಅವಕಾಶವೇ ಮೀಸಲಾತಿ. ಹೀಗಾಗಿ ಅಂಬೇಡ್ಕರ್ ಅವರು ಎಂದೂ ಒಳ ಮೀಸಲಾತಿ ಪರವಾಗಿದ್ದವರಲ್ಲ ಎಂದು ಜಿಪಂ ಮಾಜಿ ಅಧ್ಯಕ್ಷ ಸಿದ್ದಪ್ಪ ತಿಳಿಸಿದರು.

ಪಟ್ಟಣದ ಪತ್ರಕರ್ತರ ಭವನದಲ್ಲಿ ಒಳ ಮೀಸಲಾತಿ ರದ್ದುಗೊಳಿಸಿ ಹಳೇ ಮೀಸಲಾತಿ ಮುಂದುವರೆಸುವ ಸಂಬಂಧ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಇಡೀ ರಾಷ್ಟ್ರ ಮತ್ತು ರಾಜ್ಯದಲ್ಲಿ ದಲಿತರೆಲ್ಲರೂ ಒಗ್ಗಟ್ಟಾದಾಗ ಅದನ್ನು ನಿಯಂತ್ರಿಸುವುದು ಮೇಲ್ವರ್ಗದ ಜನರಿಗೆ ಕಷ್ಟಸಾಧ್ಯ. ಆದ್ದರಿಂದ ಸಮುದಾಯಗಳ ನಡುವೆ ಬಿರುಕು ಮೂಡಿಸುವ ಸಲುವಾಗಿ ಕೋಮುವಾದಿಗಳಿಗೆ ಸಿಕ್ಕ ಅಸ್ತ್ರವೇ ಒಳ ಮೀಸಲಾತಿ ಎಂದರು.

ಒಳ ಮೀಸಲಾತಿ ವರ್ಗೀಕರಣಕ್ಕೆ ನೇಮಕವಾದ ನ್ಯಾ.ನಾಗಮೋಹನ ದಾಸ್ ಅವರು ಮೊದಲ ಸಭೆಯಿಂದ ಸರ್ಕಾರಕ್ಕೆ ವರದಿ ಸಲ್ಲಿಸುವವರೆಗೂ ಒಂದು ಸಮುದಾಯದ ಪರವಾಗಿಯೇ ಇದ್ದರು ಎಂಬುದಕ್ಕೆ ಸಾಕ್ಷಿ ಸಿಗುತ್ತವೆ ಎಂದ ಅವರು, ನಾಗಮೋಹನದಾಸ್ ಅವರು ತಮ್ಮ ಮೊದಲ ಸಭೆ ಉದ್ದೇಶಿಸಿ ಮಾತನಾಡುವಾಗ ಒಂದು ಸಮುದಾಯ ಅತ್ಯಂತ ಹಿಂದುಳಿದಿದ್ದು, ಇನ್ನೊಂದು ಸಮುದಾಯ ಅತಿ ಹೆಚ್ಚು ಪಾಲು ಪಡೆದಿದೆ ಎಂದು ಹೇಳುತ್ತಾರೆ. ಹೆಚ್ಚು ಜನಸಂಖ್ಯೆ ಇರುವ ಸಮುದಾಯವನ್ನು ಕಡಿಮೆ ಎಂದು ಕಡಿಮೆ ಇರುವ ಸಮುದಾಯವನ್ನು ಹೆಚ್ಚು ಎಂದು ತಮ್ಮ ವರದಿಯಲ್ಲಿ ತೋರಿಸಿದ್ದಾರೆ. ನಗರ ಪ್ರದೇಶದಲ್ಲಿ ಅವರ ಸಮೀಕ್ಷೆ ಕಾರ್ಯ ಶೇ.100ರಷ್ಟು ಆಗದಿದ್ದರೂ ಅವಸರವಾಗಿ ಸಮೀಕ್ಷೆ ಪ್ರಕ್ರಿಯೆ ಅಂತ್ಯಗೊಳಿಸಿದ್ದಾರೆ. ಅಲ್ಲದೇ ಆದಿ ಕರ್ನಾಟಕ, ಆದಿ ದ್ರಾವಿಡ, ಆದಿ ಆಂಧ್ರ ಎಂದು ನಮೂದಿಸಿರುವವರನ್ನು ಪ್ರತ್ಯೇಕ ಗುಂಪಾಗಿ ಮಾಡಿರುವ ಜೊತೆಗೆ ಅಲೆಮಾರಿಗಳಿಗೂ ಸಹ ತೀವ್ರ ಅನ್ಯಾಯ ಮಾಡಿದ್ದಾರೆ ಎಂದರು.

ಈ ಮೇಲಿನ ಎಲ್ಲಾ ಕಾರಣಗಳಿಂದ ಅವೈಜ್ಞಾನಿಕವಾದ ಈ ಪೂರ್ವಗ್ರಹ ಪೀಡಿತ ನಾಗಮೋಹನದಾಸ್ ಅವರ ವರದಿ ತಿರಸ್ಕರಿಸಿ ದಲಿತರ ಅಸ್ಮಿತೆಗೆ ಹಾಗೂ ಐಕ್ಯತೆಗೆ ಕಂಟಕವಾಗಿರುವ ಒಳ ಮೀಸಲಾತಿಯನ್ನು ನಿಷೇಧಿಸಬೇಕೆಂದು ರಾಜ್ಯ ಸರ್ಕಾರವನ್ನು ಈ ಮೂಲಕ ಒತ್ತಾಯ ಮಾಡುತ್ತೇವೆ ಎಂದು ತಿಳಿಸಿದರು.

ಕಾಂಗ್ರೆಸ್ ಎಸ್‌ಸಿ ಘಟಕದ ಅಧ್ಯಕ್ಷ ನುದೀಶ್, ತಾಪಂ ಮಾಜಿ ಸದಸ್ಯ ನಂಜುಂಡ, ಪುರಸಭೆ ಮಾಜಿ ಸದಸ್ಯ ಶಂಕರ್ ಸ್ವಾಮಿ, ಮುಖಂಡರಾದ ನಂಜಯ್ಯ, ನಿವೃತ್ತ ಶಿಕ್ಷಕ ಪುಟ್ಟಸ್ವಾಮಿ, ಶಂಕರಪ್ಪ ಇತರರಿದ್ದರು.

ಮಾ.15, ದೇವಸ್ಥಾನ ಉದ್ಘಾಟನೆ

ಕಂಪಲಾಪುರ, ಮಾ.9– ಇಲ್ಲಿಗೆ ಸಮೀಪದ ಬೋರೆಹೊಸಳ್ಳಿ ಗೇಟ್‌ನಲ್ಲಿ ನೂತನವಾಗಿ ನಿರ್ಮಿಸಿರುವ ಶ್ರೀಲಕ್ಷ್ಮಿ ವೆಂಕಟೇಶ್ವರಸ್ವಾಮಿ ದೇವಸ್ಥಾನ ಉದ್ಘಾಟನೆ ಹಾಗೂ ಗಣಪತಿ, ಆಂಜನೇಯಸ್ವಾಮಿ, ಗರುಡಗಂಭ, ವಿಮಾನ ಗೋಪುರ ಪ್ರತಿಸ್ಥಾಪನೆ ಕಾರ್ಯಕ್ರಮ ಮಾ.15 ರಂದು ನಡೆಯಲಿದೆ ಎಂದು ಪ್ರಕಟಣೆ ತಿಳಿಸಿದೆ.

ಮಾ.13, 14ರಿಂದಲೇ ಪೂಜಾ ವಿಧಿ ವಿಧಾನಗಳು ಪ್ರಾರಂಭವಾಗಿ ಭಾನುವಾರ ವಿಗ್ರಹಗಳ ಪ್ರತಿಷ್ಠಾಪನೆ, ಸೋಮವಾರ ಸಂಜೆ 4 ಗಂಟೆಗೆ ಚಂಡೆ, ಮಂಗಳ ವಾದ್ಯದೊಂದಿಗೆ ವಿದ್ಯುತ್ ದೀಪಾಲಂಕಾರದ ಭವ್ಯ ಮಂಟಪದಲ್ಲಿ ಶ್ರೀಲಕ್ಷ್ಮಿ ವೆಂಕಟೇಶ್ವರ ಹಾಗೂ ಪವಾಡ ಬರವಣಿಗೆ ಮಹಾಲಕ್ಷ್ಮಿ ಮೂರ್ತಿ ಮೆರವಣಿಗೆ ನಡೆಯಲಿದೆ. ಭಕ್ತರು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಿ ದೇವರ ಕೃಪೆಗೆ ಪಾತ್ರರಾಗುವಂತೆ ಪ್ರಕಟಣೆ ತಿಳಿಸಿದೆ.

ಶ್ರೀನಿವಾಸಮೂರ್ತಿ ನಿಧನ



ಹುಣಸೂರು, ಮಾ.9– ನಗರದ ಬನ್ನಿಬೀದಿ ನಿವಾಸಿ ನಿವೃತ್ತ ಉಪ ನೋಂದಣಾಧಿಕಾರಿ ಲೇ. ಎಂಲ್ಲಿ ರಾಮಚಂದ್ರಯ್ಯ ಅವರ ಪುತ್ರ, ವಕೀಲ ಶ್ರೀನಿವಾಸ ಮೂರ್ತಿ(68) ಸೋಮವಾರ ಮಧ್ಯಾಹ್ನ ನಿಧನರಾದರು. ಮೃತರು ಪತ್ನಿ, ಓರ್ವ ಪುತ್ರ, ಪುತ್ರಿ ಸೇರಿದಂತೆ ಅಪಾರ ಬಂಧುಗಳನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಮಂಗಳವಾರ ಮಧ್ಯಾಹ್ನ ಮೃತರ ಜಮೀನಿನಲ್ಲಿ ನಡೆಯಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಮೈಸೂರು ಜಿಲ್ಲೆಯಲ್ಲಿ ಎರಡು ತಿಂಗಳಲ್ಲಿ 24 ಅಪರಾಧ ಕೃತ್ಯ ಪತ್ತೆ; 29.97 ಲಕ್ಷ ಮೌಲ್ಯದ ನಗದು, ಚಿನ್ನಾಭರಣ ಇತರ ಪದಾರ್ಥ ಜಪ್ತಿ

ವರಿಷ್ಠಾಧಿಕಾರಿ ಮಲ್ಲಿಕಾರ್ಜುನ ಬಾಲದಂಡಿ ಮಾಹಿತಿ

ಮೈಸೂರು, ಮಾ.9(ಎಂಟಿವೈ)– ಮೈಸೂರು ಜಿಲ್ಲೆಯಲ್ಲಿ ಕಳೆದ ಎರಡು ತಿಂಗಳ ಅವಧಿಯಲ್ಲಿ ನಡೆದ 24 ಅಪರಾಧ ಕೃತ್ಯಗಳನ್ನು ಪತ್ತೆ ಮಾಡಿ 29.97 ಲಕ್ಷ ರೂ. ಮೌಲ್ಯದ ಪದಾರ್ಥಗಳನ್ನು ವಶಪಡಿಸಿಕೊಳ್ಳುವಲ್ಲಿ ಮೈಸೂರು ಜಿಲ್ಲಾ ಪೊಲೀಸರು ಯಶಸ್ವಿಯಾಗಿದ್ದಾರೆ.

ಮೈಸೂರು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಮಲ್ಲಿಕಾರ್ಜುನ ಬಾಲದಂಡಿ ತಮ್ಮ ಕಚೇರಿ ಸಭಾಂಗಣದಲ್ಲಿ ಮಾತನಾಡಿ, ಜಿಲ್ಲೆಯಲ್ಲಿ ಅಪರಾಧ ಕೃತ್ಯಗಳಿಗೆ ಕಡಿವಾಣ ಹಾಕಲು ಜಿಲ್ಲಾ ಪೊಲೀಸ್ ವತಿಯಿಂದ ವಿಶೇಷ ಕ್ರಮ ಕೈಗೊಳ್ಳಲಾಗಿದ್ದು, ಅಪರಾಧ ಹಿನ್ನೆಲೆಯುಳ್ಳವರ ಮೇಲೆ ನಿಗಾ ಇಡಲಾಗಿದೆ. ಅಪರಾಧ ಕೃತ್ಯ ತಡೆಗಟ್ಟುವುದರೊಂದಿಗೆ ಈ ಹಿಂದೆ ನಡೆದ ಅಪರಾಧ ಕೃತ್ಯ ಪತ್ತೆಗೆ ವಿಶೇಷ ತಂಡ ರಚಿಸಲಾಗಿದ್ದು, ಈ ತಂಡ ಜಿಲ್ಲೆಯ ವಿವಿಧ ಪೊಲೀಸ್ ಠಾಣೆಯಲ್ಲಿ ಕಳೆದ ಎರಡು ತಿಂಗಳಲ್ಲಿ(ಜನವರಿ, ಫೆಬ್ರವರಿ) ವರದಿಯಾಗಿದ್ದ ಒಂದು ಡಕಾಯಿತಿ, 2 ಸುಲಿಗೆ, 7 ಮನೆಗಳ್ಳತನ, 5 ವಾಹನ ಕಳ್ಳತನ, 8 ಸಾಮಾನ್ಯ ಕಳ್ಳತನ, ಜಾನುವಾರು ಕಳ್ಳತನ ಪ್ರಕರಣಗಳನ್ನು ಬೇಧಿಸಿ, 29,97,788 ರೂ. ಮೌಲ್ಯದ ವಿವಿಧ ವಸ್ತುಗಳನ್ನು ವಶಪಡಿಸಿಕೊಂಡಿದೆ ಎಂದು ತಿಳಿಸಿದ್ದಾರೆ.

ಇದರೊಂದಿಗೆ ಎನ್‌ಡಿಪಿಎಸ್ ಕಾಯಿದೆಯಡಿ 55 ಪ್ರಕರಣ ದಾಖಲಿಸಿಕೊಂಡು, 1 ಕೆಜಿ 860 ಗ್ರಾಂ ಗಾಂಜಾ, 0.10 ಎಂಎಲ್ ಎಂಡಿಎಂಎ ವಶಪಡಿಸಿಕೊಳ್ಳಲಾಗಿದೆ. ಲಾಟರಿ ಕಾಯಿದೆಯಡಿ 14 ಪ್ರಕರಣ ದಾಖಲಿಸಿಕೊಂಡು 2.26 ಲಕ್ಷ ರೂ. ಮೌಲ್ಯದ ಲಾಟರಿ ಟಿಕೆಟ್ ವಶಪಡಿಸಿಕೊಳ್ಳಲಾಗಿದೆ ಎಂದರು.

ಅಪರಾಧ ಪತ್ತೆಗೆ ತಂಡ ರಚನೆ: ಜಿಲ್ಲೆಯ ಪ್ರತಿ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಇನ್ಸ್‌ಪೆಕ್ಟರ್, ಎಸ್‌ಐ ನೇತೃತ್ವದಲ್ಲಿ ಅಪರಾಧ ಪತ್ತೆಗಾಗಿ ನಾಲ್ಕರಿಂದ ಐದು ಮಂದಿ ಸಿಬ್ಬಂದಿಯುಳ್ಳ ಪ್ರತ್ಯೇಕ ತಂಡ ರಚಿಸಲಾಗಿದೆ. ಜಿಲ್ಲೆಯಲ್ಲಿ ದಾಖಲಾದ ಪ್ರಕರಣಗಳ ಪತ್ತೆಗೆ ಈ ತಂಡ ಕಾರ್ಯಾಚರಣೆ ನಡೆಸುವ ಮೂಲಕ ಅಪರಾಧ ಪ್ರಕರಣಗಳನ್ನು ಪತ್ತೆ ಹಚ್ಚಲಾಗುತ್ತಿದೆ ಎಂದು ತಿಳಿಸಿದರು.



ಮೈಸೂರು ಜಿಲ್ಲಾ ವ್ಯಾಪ್ತಿಯಲ್ಲಿ ವಿವಿಧ ಅಪರಾಧ ಪ್ರಕರಣ ಪತ್ತೆ ಮಾಡಿದ ಸಂಬಂಧ ವಿವರ ನೀಡಿದ ಎಸ್ಪಿ ಮಲ್ಲಿಕಾರ್ಜುನ ಬಾಲದಂಡಿ. ಎಎಸ್ಪಿಗಳಾದ ಎಲ್.ನಾಗೇಶ್, ಸಿ.ಮಲ್ಲಿಕ್, ಡಿವೈಎಸ್ಪಿ ರವಿ, ಟಿ.ಬಿ.ರಾಜಣ್ಣ, ಬಿಳಿಕೆರೆ ಠಾಣೆಯ ಸರ್ಕಲ್ ಇನ್ಸ್‌ಪೆಕ್ಟರ್ ಟಿ.ಎಂ.ಪುನೀತ್ ಅವರನ್ನು ಚಿತ್ರದಲ್ಲಿ ಕಾಣಬಹುದು.

ಮಾದಕ ವಸ್ತು ಮುಕ್ತ: ಮೈಸೂರು ಜಿಲ್ಲೆಯಲ್ಲಿ ಮಾದಕ ವಸ್ತು ಹಾವಳಿಯನ್ನು ಸಂಪೂರ್ಣವಾಗಿ ನಿಯಂತ್ರಿಸಲು ವಿಶೇಷವಾಗಿ ಕಾರ್ಯಾಚರಣೆ ನಡೆಸಲಾಗುತ್ತಿದೆ. ಈಗಾಗಲೇ 44 ಗಾಂಜಾ ಸೇವನೆ ಪ್ರಕರಣ ಪತ್ತೆ ಮಾಡಲಾಗಿದೆ. 11 ಪ್ರಕರಣದಲ್ಲಿ 15 ಮಂದಿ ಪೆಡ್ಲರ್‌ಗಳನ್ನು ಬಂಧಿಸಲಾಗಿದೆ. ಇತ್ತೀಚಿನ ದಿನಗಳಲ್ಲಿ ಗಾಂಜಾ ಹಾಗೂ ಮಾದಕ ವಸ್ತುಗಳ ಸೇವನೆ ಸಾಮಾಜಿಕ ಪಿಡುಗಾಗಿ ಪರಿಣಮಿಸಿದ್ದು, ಜಿಲ್ಲೆಯಲ್ಲಿ ಮಾದಕ ವಸ್ತುಗಳ ಸೇವನೆ, ಮಾರಾಟ, ಸರಬರಾಜು ಸಂಪೂರ್ಣವಾಗಿ ನಿಲ್ಲಿಸಲು ಕಠಿಣ ಕ್ರಮ ಕೈಗೊಳ್ಳಲಾಗಿದೆ ಎಂದರು.

ಸನ್ಮಿತ್ರ ಕಾರ್ಯಕ್ರಮ: ಈಗಾಗಲೇ ಪತ್ತೆಯಾಗಿರುವ 44 ಮಂದಿ ಗಾಂಜಾ ಸೇವನೆ, 15 ಪೆಡ್ಲರ್‌ಗಳ ಮೇಲೆ ನಿಗಾ ಇಡಲು ಜಿಲ್ಲೆಯಲ್ಲಿ 'ಸನ್ಮಿತ್ರ' ಹೆಸರಿನಲ್ಲಿ ಕಾರ್ಯಕ್ರಮವೊಂದನ್ನು ಜಾರಿಗೊಳಿಸ ಲಾಗಿದ್ದು, ಮಾದಕ ವಸ್ತು ಸೇವನೆ ಮಾಡುವವರು ಹಾಗೂ ಪೆಡ್ಲರ್‌ಗಳ ಮೇಲೆ ನಿಗಾ ಇಡಲು ಓರ್ವ ಪೊಲೀಸ್ ಸಿಬ್ಬಂದಿಯನ್ನು ನೇಮಕ ಮಾಡಲಾಗಿದೆ. ಸನ್ಮಿತ್ರ ತಂಡ ಪ್ರತಿದಿನ ಶಂಕಿತ ಮಾದಕ ವ್ಯಸನಿಯ ಚಲನವಲನದ ಮೇಲೆ ನಿಗಾ ಇಡಲಿದೆ ಇದರಿಂದ ಗಾಂಜಾ ಸೇವನೆ ಪುನರಾವರ್ತನೆಯಾಗಿದೆಯಾ, ಪೆಡ್ಲರ್‌ಗಳು ಮತ್ತೆ ಮಾದಕ ವಸ್ತು ಸರಬರಾಜು ಮಾಡುತ್ತಿದ್ದಾರಾ ಎಂದು ಸೂಕ್ಷ್ಮವಾಗಿ ಪರಿಶೀಲಿಸುತ್ತಿದ್ದಾರೆ. ಅಲ್ಲದೆ, ಮಾದಕ ವ್ಯಸನಿಗಳಿಗೆ ಕೌನ್ಸಿಲಿಂಗ್ ಮಾಡಿ, ಅವರನ್ನು ಸರಿದಾರಿಯತ್ತ ತರಲು ಪ್ರಯತ್ನಿಸುತ್ತಿದೆ ಎಂದು ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಎಎಸ್ಪಿಗಳಾದ ಎಲ್.ನಾಗೇಶ್, ಸಿ.ಮಲ್ಲಿಕ್, ಡಿವೈಎಸ್ಪಿ ರವಿ, ಬಿಳಿಕೆರೆ ಠಾಣೆಯ ಸರ್ಕಲ್ ಇನ್ಸ್‌ಪೆಕ್ಟರ್ ಟಿ.ಎಂ.ಪುನೀತ್ ಇದ್ದರು.

ವಶಪಡಿಸಿಕೊಂಡ ವಸ್ತುಗಳು

- **9** ಪ್ರಕರಣಗಳಲ್ಲಿ 10.46 ಲಕ್ಷ ರೂ. ಮೌಲ್ಯದ 279 ಗ್ರಾಂ. ಚಿನ್ನಾಭರಣ.
- **5** ಪ್ರಕರಣಗಳಲ್ಲಿ 3.76 ಲಕ್ಷ ರೂ. ನಗದು.
- **6** ಪ್ರಕರಣಗಳಲ್ಲಿ 14.33 ಲಕ್ಷ ರೂ. ಮೌಲ್ಯದ 8 ವಾಹನ.
- **3** ಪ್ರಕರಣಗಳಲ್ಲಿ 82 ಸಾವಿರ ರೂ. ಮೌಲ್ಯದ ಹಾರ್ಡ್‌ವೇರ್ ಮತ್ತು ಎಲೆಕ್ಟ್ರಿಕ್ ವಸ್ತು
- **1** ಪ್ರಕರಣದಲ್ಲಿ 58 ಸಾವಿರ ರೂ. ಮೌಲ್ಯದ 2 ಜಾನುವಾರು

ಮೈಸೂರು ಚಿತ್ರಮಂದಿರಗಳಲ್ಲಿ

ಪದ್ಮ	(ದೂ: 2521923)
ಒಡಂ (ತ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್	(ದೂ: 2422871)
ರೈಸ್ ಆಫ್ ಅಶೋಕ (ಕ)	4 ಪ್ರದರ್ಶನಗಳು
ಬಾಲಾಜಿ	(ದೂ: 2497199)
ಓ ರೋಮಿಯೋ (ಹಿ)	3 ಪ್ರದರ್ಶನಗಳು
ಮಹದೇಶ್ವರ	(ಮೊ:9900820093)
ರಕ್ಕಸ ಪುರದೋಳ್ (ಕ)	4 ಪ್ರದರ್ಶನಗಳು
ಗಾಯಿತ್ರಿ	
ಸಂಪತ್ತಿಗೆ ಸವಾಲ್ (ಕ)	4 ಪ್ರದರ್ಶನಗಳು
ರಾಜಕಮಲ್	
ತಾಯಿ ಕಿಳವಿ (ತ)	4 ಪ್ರದರ್ಶನಗಳು
ಸಂಗಂ	
ಹಯಗ್ರೀವ (ಕ)	4 ಪ್ರದರ್ಶನಗಳು
ಲಿಡೋ	
ಮೆಜೆಸ್ಟಿಕ್–2 (ಕ)	2 ಪ್ರದರ್ಶನಗಳು
ತಿಬ್ಬಾದೇವಿ	
–	–
ಪ್ರಭಾ	
ಓರಿಯೋ (ಕ) + ಜಯಕೃಷ್ಣ (ಕ)	2+2 ಪ್ರದರ್ಶನಗಳು

ಎಲ್‌ಪಿಜಿ ಗ್ರಾಹಕರಿಗೆ ಕೇಂದ್ರದಿಂದ ಹೊಸ ಮಾರ್ಗಸೂಚಿ: ಸಿಲಿಂಡರ್ ಬುಕಿಂಗ್‌ನಲ್ಲಿ ಮಹತ್ವದ ಬದಲಾವಣೆ



ನವದೆಹಲಿ ಮಾ.9: ದೇಶದಲ್ಲಿ ಎಲ್‌ಪಿಜಿ ಸಿಲಿಂಡರ್‌ಗಳ ಕೃತಕ ಅಭಾವ ಮತ್ತು ಕಾಳಸಂತೆಯನ್ನು ತಡೆಗಟ್ಟಲು ಕೇಂದ್ರ ಸರ್ಕಾರ ಈಗ ಕಠಿಣ ಕ್ರಮಗಳಿಗೆ ಮುಂದಾಗಿದೆ. ಗ್ಯಾಸ್ ಪೂರೈಕೆಯಲ್ಲಿ ವ್ಯತ್ಯಯವಾಗದಂತೆ ನೋಡಿಕೊಳ್ಳಲು ಹೊಸ ಮಾರ್ಗಸೂಚಿಗಳನ್ನು ಬಿಡುಗಡೆ ಮಾಡಿದೆ. ಗ್ಯಾಸ್ ಸಿಲಿಂಡರ್‌ಗಳ ದಾಸ್ತಾನು ಮಾಡುವುದನ್ನು ತಡೆಯಲು, ಎರಡು ಬುಕ್ಕಿಂಗ್‌ಗಳ ನಡುವಿನ ಅವಧಿಯನ್ನು 21 ದಿನಗಳಿಂದ 25 ದಿನಗಳಿಗೆ ಹೆಚ್ಚಿಸಲಾಗಿದೆ.

ಈ ಹಿಂದೆ 55 ದಿನಗಳಿಗೊಮ್ಮೆ ಸಿಲಿಂಡರ್ ಬುಕ್ ಮಾಡುತ್ತಿದ್ದವರು, ಈಗ ಯುದ್ಧದ ಭೀತಿಯಿಂದ ಕೇವಲ 15 ದಿನಗಳಲ್ಲೇ ಬುಕ್ಕಿಂಗ್ ಮಾಡುತ್ತಿರುವುದು ಕಂಡುಬಂದಿದೆ. ಇದನ್ನು ನಿಯಂತ್ರಿಸಲು ಹೊಸ ನಿಯಮ ಜಾರಿಗೆ ತರಲಾಗಿದೆ. ವಾಣಿಜ್ಯ ಬಳಕೆಯ ಸಿಲಿಂಡರ್‌ಗಳಿಗಿಂತ ಮನೆ ಬಳಕೆಯ ಗ್ರಾಹಕರಿಗೆ ಮೊದಲ ಆದ್ಯತೆ ನೀಡುವಂತೆ ಸರ್ಕಾರ ಸೂಚನೆ ನೀಡಿದೆ. ಮನೆ ಬಳಕೆಯ ಗ್ರಾಹಕರ ಹಿತವೇ ನಮಗೆ ಮುಖ್ಯ ಎಂದು ಸರ್ಕಾರ ಸ್ಪಷ್ಟಪಡಿಸಿದೆ.

ದೇಶೀಯ ರಿಫೈನರಿಗಳಿಗೆ ಎಲ್‌ಪಿಜಿ ಉತ್ಪಾದನೆಯನ್ನು ಗರಿಷ್ಠ ಮಟ್ಟಕ್ಕೆ ಹೆಚ್ಚಿಸುವಂತೆ ಸರ್ಕಾರ ಆದೇಶಿಸಿದೆ. ಗ್ಯಾಸ್ ಪೂರೈಕೆಯಲ್ಲಿ ಸ್ವಾವಲಂಬನೆ ಸಾಧಿಸಲು ಹೊಸ ದೇಶಗಳೊಂದಿಗೆ ಸರ್ಕಾರ ಮಾತುಕತೆ ನಡೆಸುತ್ತಿದೆ. ಅಲ್ಜೀರಿಯಾ, ಆಸ್ಟ್ರೇಲಿಯಾ, ಕೆನಡಾ ಮತ್ತು ನಾರ್ವೆ ದೇಶಗಳು ಭಾರತಕ್ಕೆ ಎಲ್‌ಪಿಜಿ ಮಾರಾಟ ಮಾಡಲು ಮುಂದೆ ಬಂದಿವೆ ಎಂದು ಮೂಲಗಳು ತಿಳಿಸಿವೆ.

ಹುಣಸೂರು ಆಭರಣ ಮಳಿಗೆ ದರೋಡೆ ಪ್ರಕರಣ ಸಂಬಂಧ ನಾಲ್ವರು ಅಂತಾರಾಜ್ಯ ಖದೀಮರ ಬಂಧನ

ಲೂಟಿ ಮಾಡಿದ 8 ಕೆಜಿ ಚಿನ್ನಾಭರಣ ವಶಪಡಿಸಿಕೊಳ್ಳಲು ಪೊಲೀಸರ ಹರಸಾಹಸ!

ಮೈಸೂರು,ಮಾ.9(ಎಂಟಿವೈ)– ಹುಣಸೂರಿನ ಆಭರಣ ಮಳಿಗೆ ದರೋಡೆ ಪ್ರಕರಣದಲ್ಲಿ ಭಾಗಿಯಾಗಿದ್ದ 11 ಆರೋಪಿಗಳಲ್ಲಿ ಈಗಾಗಲೇ ನಾಲ್ವರನ್ನು ಬಂಧಿಸಿದ್ದು, ತಲೆ ಮರೆಸಿಕೊಂಡಿರುವ ಏಳು ಆರೋಪಿಗಳು ಹಾಗೂ ದರೋಡೆ ಮಾಡಿರುವ 8 ಕೆಜಿ ಚಿನ್ನಾಭರಣ ವಶಪಡಿಸಿಕೊಳ್ಳುವುದು ಸವಾಲಾಗಿ ಪರಿಣಮಿಸಿದ್ದು, ವಿವಿಧ ಆಯಾಮ ಗಳಲ್ಲಿ ತನಿಖೆ ನಡೆಸಲಾಗುತ್ತಿದೆ ಎಂದು ಮೈಸೂರು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಮಲ್ಲಿಕಾರ್ಜುನ ಬಾಲದಂಡಿ ತಿಳಿಸಿದ್ದಾರೆ.

2025ರ ಡಿ.28ರಂದು ಹುಣಸೂರಿನಲ್ಲಿ ಚಿನ್ನಾಭರಣ ಅಂಗಡಿಯೊಂದಕ್ಕೆ ಐವರು ನುಗ್ಗಿ 8 ಕೆಜಿ ಚಿನ್ನಾಭರಣ ದೋಚಿ ಪರಾರಿಯಾಗಿದ್ದರು. ಇದೊಂದು ಅಂತರ ರಾಜ್ಯ ಡಕಾಯಿತರ ತಂಡವಾಗಿದ್ದು, ಸಿಸಿ ಕ್ಯಾಮರಾ ಫುಟೇಜ್ ಹೊರತುಪಡಿಸಿ ಬೇರೆ ಯಾವ ಸುಳಿವು ಸಿಕ್ಕಿರಲಿಲ್ಲ. ಆದರೂ ನಮ್ಮ ಪೊಲೀಸ್ ತಂಡ ಕಾರ್ಯಾಚರಣೆ ನಡೆಸಿ, ಬಿಹಾರ ಮೂಲದ ಇಬ್ಬರು ಆರೋಪಿಗಳಾದ ಚೋಟು ಸಿಂಗ್, ಪಂಕಜ್ ಎಂಬುವವರನ್ನು ಬಂಧಿಸಿದೆ. ಬಂಧಿತರು ನೀಡಿದ ಮಾಹಿತಿ ಮೇರೆಗೆ ಚಿನ್ನಾಭರಣ ದೋಚಿದ ಪ್ರಕರಣದಲ್ಲಿ ಒಟ್ಟು 11 ಆರೋಪಿಗಳು ಭಾಗಿಯಾಗಿರುವುದು ತಿಳಿದು ಬಂದಿದೆ. ಅವರಲ್ಲಿ ಒಬ್ಬ ಆಂಧ್ರ ಮೂಲದವನು, ಉಳಿದವರು ಬಿಹಾರದವರಾಗಿದ್ದಾರೆ ಎಂದರು.

ಆಭರಣದೊಂದಿಗೆ ತಲೆ ಮರೆಸಿಕೊಂಡಿದ್ದ ಉಳಿದ 9 ಆರೋಪಿಗಳ ಬಂಧನಕ್ಕೆ 3 ತಂಡ ರಚಿಸಲಾಗಿತ್ತು. ಈ ತಂಡ ಬೇರೆ ಬೇರೆ ರಾಜ್ಯಗಳಿಗೆ ಹೋಗಿ ಆರೋಪಿಗಳಿಗಾಗಿ ಶೋಧ ನಡೆಸುತ್ತಿದೆ. ಇತ್ತೀಚೆಗೆ ಬಿಹಾರ್ ಎಸ್‌ಟಿಎಫ್ ಸಹಯೋಗದೊಂದಿಗೆ ಇಬ್ಬರು ಆರೋಪಿಗಳಾದ ಮಹಮದ್ ಅರ್ಮಾನ್, ಸೋನು ಸಿಂಗ್‌ನನ್ನು ಬಂಧಿಸಿದ್ದು, ಬಂಧಿತರ ಸಂಖ್ಯೆ ನಾಲ್ಕಕ್ಕೆ ಏರಿದೆ ಎಂದು ತಿಳಿಸಿದರು.

ಎರಡು ತಂಡವಾಗಿ ವಿಂಗಡಣೆ: ಚಿನ್ನಾಭರಣ ದೋಚುವಾಗ ಐವರು ಮಾತ್ರ ಬಂದಿದ್ದು, ಉಳಿದವರು ಮಾಸ್ಟರ್ ಪ್ಲಾನ್ ಮಾಡಿ, ಇವರಿಗೆ ಮಾರ್ಗ ದರ್ಶನ ಮಾಡಿದ್ದಾರೆ. ಚಿನ್ನಾಭರಣ ದೋಚಿದ ಬಳಿಕ ಐವರು ಎರಡು ತಂಡವಾಗಿ ವಿಂಗಡಣೆಯಾಗಿದ್ದಾರೆ. ಅವರಲ್ಲಿ ಇಬ್ಬರು ಚಿನ್ನಾಭರಣವನ್ನು ತೆಗೆದುಕೊಂಡು ಹೋಗಿದ್ದು, ಅವರ ಬಗ್ಗೆ ಸುಳಿವು ಸಿಕ್ಕಿಲ್ಲ. ಕೃತ್ಯದಲ್ಲಿ ಭಾಗಿಯಾಗಿದ್ದ ಐವರಲ್ಲಿ ಒಬ್ಬನ ಬಂಧನ ವಾಗಿದ್ದು, ಉಳಿದ ನಾಲ್ವರು ಸೇರಿ ಇನ್ನು 7 ಮಂದಿ ಬಂಧನ ಆಗಬೇಕು. ಪ್ರಮುಖ ಆರೋಪಿಗಳು ಸಿಕ್ಕಾಗ ಮಾತ್ರ ಚಿನ್ನಾಭರಣ ವಶಕ್ಕೆ ಪಡೆಯಲು ಸಹಕಾರಿಯಾಗಲಿದೆ ಎಂದರು.

ಕೃತ್ಯ ನಡೆಸಿರುವುದು ಅಂತರರಾಜ್ಯ ಗ್ಯಾಂಗ್. ಅದನ್ನು ಪತ್ತೆ ಮಾಡಲು ಕರ್ನಾಟಕ, ಆಂಧ್ರ, ಒರಿಸ್ಸಾ ಮತ್ತು ಬಿಹಾರ ಪೊಲೀಸರ ತಂಡಗಳು ಕಾರ್ಯಾಚರಣೆ ನಡೆಸುತ್ತಿವೆ. ಆದಷ್ಟು ಬೇಗ ಆರೋಪಿಗಳನ್ನು ಪತ್ತೆ ಮಾಡಿ, ಚಿನ್ನಾಭರಣ ವಶಕ್ಕೆ ಪಡೆಯಲು ಕ್ರಮ ಕೈಗೊಳ್ಳಲಾಗುವುದು ಎಂದು ತಿಳಿಸಿದರು.


ದೋಚಿದ ಚಿನ್ನಾಭರಣವನ್ನು ನೇಪಾಳದಲ್ಲಿ ಮಾರಾಟ ಮಾಡಿರಬಹುದು ಎಂದು ಕೆಲವರು ಹೇಳಿದ್ದಾರೆ. ಆದರೆ, ಅದಕ್ಕೆ ಸಂಬಂಧಪಟ್ಟ ದಾಖಲೆ ಸಿಕ್ಕಿಲ್ಲ. ದೋಚಿದ ನಂತರ ಇಬ್ಬರು ಆರೋಪಿತರು ತೆಗೆದುಕೊಂಡು ಹೋಗಿದ್ದು, ಅದನ್ನು ಎಲ್ಲೋ ಬಚ್ಚಿಟ್ಟಿರಬಹುದು. ಚಿನ್ನ ತೆಗೆದುಕೊಂಡು ಹೋದ ಆರೋಪಿ ಸಿಕ್ಕರೆ ಚಿನ್ನಾಭರಣ ಎಲ್ಲಿದೆ ಎಂದು ಗೊತ್ತಾಗುತ್ತದೆ ಎಂದು ತಿಳಿಸಿದರು.

ವೈಫೈ ಬಳಸಿ ಕರೆ ಮಾಡಿದ್ದಾರೆ: ಆಭರಣದ ಅಂಗಡಿ ದೋಚಿದ ಆರೋಪಿಗಳು ವೈಫೈ ಕರೆ ಮೂಲಕ ಸಂವಹನ ನಡೆಸಿದ್ದಾರೆ. ಇದರಿಂದ ತಾಂತ್ರಿಕ ಮಾಹಿತಿ ಸಿಕ್ಕಿಲ್ಲ ಎಂದು ಪ್ರಶ್ನೆಯೊಂದಕ್ಕೆ ಪ್ರತಿಕ್ರಿಯಿಸಿದರು.

ಐದಾರು ದಿನ ಪ್ಲಾನ್: ದರೋಡೆ ಮಾಡಲೆಂದು ಬಂದ ಐದು ಮಂದಿ ಪಿರಿಯಾಪಟ್ಟಣ, ಹೊಳೆನರಸೀಪುರ, ಹುಣಸೂರು ಸೇರಿದಂತೆ ಸುತ್ತಮುತ್ತ ಓಡಾಡಿದ್ದಾರೆ. ಅಂತಿಮವಾಗಿ ಪಿರಿಯಾಪಟ್ಟಣ ಹಾಗೂ ಹುಣಸೂರಲ್ಲಿ ದರೋಡೆಗೆ ನಿರ್ಧರಿಸಿದ್ದಾರೆ. ಪಿರಿಯಾಪಟ್ಟಣದಲ್ಲಿ ಚಿನ್ನದ ಅಂಗಡಿ ದೋಚಲು ಉದ್ದೇಶಿಸಿದ್ದ ಆರೋಪಿಗಳು, ಅಲ್ಲಿ ಹನುಮ ಜಯಂತಿ ಅಂಗವಾಗಿ ಪೊಲೀಸ್ ಬಂದೋಬಸ್ತ್ ಹೆಚ್ಚಾಗಿದ್ದ ಕಾರಣ ಹಾಗೂ ರಾತ್ರಿಯಿಡೀ ಬ್ಯಾನರ್–ಬಂಟಿಂಗ್ಸ್ ಕಟ್ಟಲು ಜನ ಓಡಾಡುತ್ತಿದ್ದುದ್ದನ್ನು ಗಮನಿಸಿ, ಸಿಕ್ಕಿಬೀಳುವ ಭಯದಲ್ಲಿ ಹುಣಸೂರಿನಲ್ಲಿ ಚಿನ್ನಾಭರಣ ದೋಚುವ ಪ್ಲಾನ್ ಮಾಡಿದ್ದಾರೆ ಎಂದು ತಿಳಿಸಿದರು.

ಕಾನೂನಿನಡಿ ಬಗರ್ ಹುಕುಂ ಯೋಜನೆಯ ಭೂಮಿ ಮಂಜೂರಿಗೆ ಸರ್ಕಾರದ ಪ್ರಯತ್ನ

● ವಿಧಾನಸಭೆಯಲ್ಲಿ ಕಂದಾಯ ಸಚಿವರ ಸ್ಪಷ್ಟನೆ ● ಸೇಂದಿ ವನಗಳ ಭೂಮಿ ಮಂಜೂರಿಗೆ ಕೆಲ ನಿಯಮಗಳು ಅಡ್ಡಿ



ಬೆಂಗಳೂರು, ಮಾ. 9(ಕೆಎಂಶಿ)– ಅಕ್ರಮ–ಸಕ್ರಮ ಬಗರ್ ಹುಕುಂ ಯೋಜನೆಯಡಿ ಅರ್ಹ ರೈತರಿಗೆ ಜಮೀನು ಮಂಜೂರು ಮಾಡಬೇಕು ಎಂಬ ಸರ್ಕಾರದ ಉದ್ದೇಶದಲ್ಲಿ ಯಾವುದೇ ಬದಲಾವಣೆ ಇಲ್ಲ ಎಂದು ಸಚಿವ ಕೃಷ್ಣಬೈರೇಗೌಡ ವಿಧಾಸಭೆಯಲ್ಲಿ ಇಂದು ಸ್ಪಷ್ಟಪಡಿಸಿದರು.

ಪ್ರಶ್ನೋತ್ತರ ವೇಳೆ ಸದಸ್ಯ ಟಿ.ಬಿ.ಜಯಚಂದ್ರ ಪ್ರಸ್ತಾವಕ್ಕೆ ಉತ್ತರಿಸಿದ ಅವರು, ಹಿಂದೆ ಕರ್ನಾಟಕದಲ್ಲಿ ಹೆಂಡ (ಸೇಂದಿ) ಇಳಿಸುವ ಕುಲಕಸುಬು ಇತ್ತು ಇದೇ ಕಸುಬು ನಂಬಿಕೊಂಡಿದ್ದವರಿಗೆ ಕೆಲವು ಪ್ರದೇಶಗಳನ್ನು ಈಚಲು ವನ ಅಥವಾ ಸೇಂದಿವನ ಎಂಬುದಾಗಿ ಕಾಯ್ದಿರಿಸಲಾಗಿತ್ತು ಎಂದರು.

ಕಾಲಾನಂತರ ಈ ವೃತ್ತಿ ನಿಷೇಧಿಸಿದ ನಂತರ ಅಂತಹ ಜಮೀನಿನಲ್ಲಿ ಕೆಲವರು ಕೃಷಿ ಮಾಡಿಕೊಂಡಿದ್ದು, ಕೆಲವು ಪ್ರದೇಶಗಳನ್ನು ಸರ್ಕಾರವೇ ಜನ ಕಲ್ಯಾಣ ಕಾರ್ಯಕ್ರಮಗಳಿಗೆ ನೀಡಿದೆ. ಆ ಪ್ರದೇಶಗಳನ್ನು ಪ್ರಸ್ತುತ ಬಗರ್ ಹುಕುಂ ಯೋಜನೆ ಅಡಿ ಮಂಜೂರು ಮಾಡಲು 2003ರ ಸರ್ಕಾರಿ ಆದೇಶದ ಹಿನ್ನೆಲೆಯಲ್ಲಿ ಕೆಲವು ಕಾನೂನು ತೊಡಕುಗಳಿವೆ.

ಸೇಂದಿವನ ಪ್ರದೇಶ ಬಗರ್ ಹುಕುಂ ಯೋಜನೆಯಡಿ ರೈತರಿಗೆ ಮಂಜೂರು ಮಾಡಬೇಕು ಎಂಬ ಬೇಡಿಕೆ ನಮಗೂ ಅರ್ಥವಾಗುತ್ತದೆ. ಈ ವಿಚಾರದಲ್ಲಿ ಸಕಾರಾತ್ಮಕ ತೀರ್ಮಾನ ತೆಗೆದುಕೊಳ್ಳಬೇಕು ಎಂಬ ಉದ್ದೇಶವೂ ಸರ್ಕಾರಕ್ಕಿದೆ. ಆದರೆ, ಸೇಂದಿವನ ಜಮೀನನ್ನು ಅಬಕಾರಿ ಇಲಾಖೆಯಿಂದ ಕಂದಾಯ ಇಲಾಖೆಗೆ ವರ್ಗಾವಣೆ ಮಾಡುವಾಗ 2003ರಲ್ಲಿ ಅಂದಿನ ಸರ್ಕಾರ ರೂಪಿಸಿದ ಐದು ನಿಯಮಗಳು ಇಂದು ತೊಡಕಾಗಿ ಪರಿಣಮಿಸಿವೆ.

ಒಂದನೆಯದಾಗಿ 150 ಎಕರೆಗಿಂತ ಹೆಚ್ಚಿದ್ದರೆ ಆ ಜಮೀನನ್ನು ಅರಣ್ಯ ಇಲಾಖೆಗೆ ನೀಡಬೇಕು. ಎರಡನೆಯದಾಗಿ ಲಭ್ಯವಿರುವ ಗ್ರಾಮದಲ್ಲಿ ಕನಿಷ್ಟ 10 ಎಕರೆ ಜಾಗವನ್ನು ಸ್ಮಶಾನಕ್ಕೆ ಕಾಯ್ದಿರಿಸಬೇಕು. ಮೂರನೇಯದಾಗಿ ಪ್ರತಿಯೊಂದು ಗ್ರಾಮದಲ್ಲೂ ಸೇಂದಿವನ ಜಮೀನನ್ನು ಗಮನದಲ್ಲಿಟ್ಟುಕೊಂಡು ಆಶ್ರಯ ಯೋಜನೆ, ಮೊರಾರ್ಜಿ ದೇಸಾಯಿ ನವೋದಯ ವಸತಿ ಶಾಲೆ, ಪರಿಶಿಷ್ಠ ಜಾತಿ ಪಂಗಡ, ಹಿಂದುಳಿದ ವರ್ಗಗಳ ಹಾಸ್ಟೆಲ್ ಸ್ಮಶಾನ ಉದ್ದೇಶಕ್ಕಾಗಿ, ಸಾರ್ವಜನಿಕ ಶಿಕ್ಷಣ ಕಟ್ಟಡ ಆರೋಗ್ಯ ಕೇಂದ್ರ ಬಸ್ ನಿಲ್ದಾಣ ಉದ್ದೇಶಕ್ಕಾಗಿ ಕನಿಷ್ಟ 10 ರಿಂದ 50 ಎಕರೆ ಮೀಸಲಿಡಬೇಕು.

ನಾಲ್ಕನೆಯದಾಗಿ ಪ್ರತಿ ಗ್ರಾಮ ಪಂಚಾಯತಿ ಕೇಂದ್ರಕ್ಕೆ ಸಂಬಂಧಿಸಿದಂತೆ ಕೋಮುಗಲಭೆ ಪ್ರಕರಣಗಳಲ್ಲಿ ಸಂತ್ರಸ್ತರಾದ ಜನರಿಗೆ ಹಾಗೂ ಪರಿಶಿಷ್ಟ ಜಾತಿ–ಪಂಗಡಗಳ ಕುಟುಂಬಗಳ ಮೇಲೆ ದೌರ್ಜನ್ಯ ನಡೆದು ಸಂತ್ರಸ್ತರಾದವರ ಕುಟುಂಬಗಳಿಗೆ ಕನಿಷ್ಟ ಮೂರು ಎಕರೆ ನೀಡುವ ಉದ್ದೇಶಕ್ಕಾಗಿ ಜಮೀನು ಮೀಸಲಿರಿಸುವುದು.

ಐದನೇಯದಾಗಿ ಭೂರೈತ ಹಾಗೂ ಅತಿಸಣ್ಣ ಹಿಡುವಳಿದಾರರು 1990ಕ್ಕಿಂತ ಹಿಂದಿನಿಂದಲೂ ಬಗರ್ ಹುಕುಂ ಸಾಗುವಳಿ ಮಾಡಿರುವ ಜಮೀನನ್ನು ಸ್ವಂತ ಹಿಡುವಳಿ ಜಮೀನನ್ನಾಗಿ ಸೇರಿದಂತೆ 5 ಎಕರೆ ಮಿತಿಗೆ ಒಳಪಟ್ಟು ಸಕ್ರಮಗೊಳಿಸಬೇಕು ಎಂದರು.

ಬಗರ್ ಹುಕುಂ ಭೂ ಮಂಜೂರಾತಿ ಸಂದರ್ಭದಲ್ಲಿ ಎಲ್ಲಾ ಐದು ನಿಯಮಗಳನ್ನು ಯಥಾವತ್ ಪಾಲಿಸಿದರೆ ಯಾವುದೇ ಕೆಲಸಗಳೂ ಆಗುವುದಿಲ್ಲ. ಇದಲ್ಲದೆ, ಸುಮಾರು ಜಮೀನುಗಳು ಕಡತದಲ್ಲಿ ಈಗಾಗಲೇ ಅರಣ್ಯ ಇಲಾಖೆ ಎಂದು ನಮೂದಿಸಲಾಗಿದೆ.

ಅರಣ್ಯ ಜಮೀನು ರಕ್ಷಣೆಗೆ ಸುಪ್ರೀಂಕೋರ್ಟ್‌ನಿಂದ ಕಟ್ಟುನಿಟ್ಟಿನ ಆದೇಶ ಇದೆ. ರೈತರಿಗೆ ಸಹಾಯ ಮಾಡಬೇಕು ಎಂಬ ಉದ್ದೇಶದಿಂದ ವಲಯ ಆಯುಕ್ತರ ಅಧ್ಯಕ್ಷತೆಯಲ್ಲಿ ಒಂದು ಸಮಿತಿ ರಚಿಸಿ ನಿಯಮಗಳನ್ನು ಸರಳೀಕರಿಸಲು ಮುಂದಾಗಿದ್ದೇವೆ.

ಬಗರ್ ಹುಕುಂ ಬಾಕಿ ಅರ್ಜಿ ಪರಿಗಣಿಸಬೇಕು ಎಂಬ ಉದ್ದೇಶ ಸ್ಪಷ್ಟವಾಗಿದೆ. ಈ ಕೆಲಸ ಮಾಡುವಾಗ ಎಲ್ಲಾ ನಿಯಮಗಳನ್ನೂ ಗಮನದಲ್ಲಿಟ್ಟು ಮಾಡಬೇಕಿದೆ. ಆದರೆ, ಈ ಕೆಲಸಗಳನ್ನು ಕಾನೂನು ಚೌಕಟ್ಟು ಮೀರಿ ಮಾಡಿ ಎಂದರೆ ನಮ್ಮಿಂದ ಸಾಧ್ಯವಿಲ್ಲ ಎಂದು ಕೃಷ್ಣ ಬೈರೇಗೌಡ ಸ್ಪಷ್ಟಪಡಿಸಿದರು.

ಶ್ರೀ ಅಟಲ್ ಜೀ ಕಪ್ ಗೆದ್ದ ಶ್ರೀ ವಿನಾಯಕ ತಂಡ



ಮೈಸೂರಿನ ಕನ್ನೇಗೌಡ ಟೈಗರ್ಸ್ ವತಿಯಿಂದ ರಾಕೇಶ್ ಗೌಡ ಅವರ ಹುಟ್ಟುಹಬ್ಬದ ಅಂಗವಾಗಿ ಆಯೋಜಿಸಿದ್ದ 'ಶ್ರೀ ಅಟಲ್ ಜೀ ಕಪ್' ಕ್ರಿಕೆಟ್ ಪಂದ್ಯಾವಳಿಯಲ್ಲಿ ಹೆಬ್ಬಾಳ್ ಬಡಾವಣೆಯ ಶ್ರೀ ವಿನಾಯಕ ಗ್ರೂಪ್ಸ್ ಪ್ರಥಮ ಬಹುಮಾನ ಪಡೆಯಿತು. ಈ ತಂಡಕ್ಕೆ 75 ಸಾವಿರ ನಗದು ಬಹುಮಾನ ಹಾಗೂ ಆಕರ್ಷಕ ಟ್ರೋಫಿ ನೀಡಲಾಯಿತು. ರನ್ನರ್ ಅಪ್ ತಂಡಕ್ಕೆ 50 ಸಾವಿರ ಹಾಗೂ ಎರಡನೇ ರನ್ನರ್ ಅಪ್ ತಂಡಕ್ಕೆ 25 ಸಾವಿರ ನಗದು ಹಾಗೂ ಆಕರ್ಷಕ ಟ್ರೋಫಿ ನೀಡಲಾಯಿತು. ಈ ಸಂದರ್ಭದಲ್ಲಿ ಬಿಜೆಪಿ ಮೈಸೂರು ನಗರ ಯುವ ಮೋರ್ಚಾ ಅಧ್ಯಕ್ಷ ರಾಕೇಶ್ ಗೌಡ, ಮೋಹನ್, ಅನಿಲ್, ಕಿರಣ್, ವಿವೇಕ್, ವೆಂಕಟೇಶ ಪ್ರಸಾದ್, ಎಸ್‌ಎನ್‌ಇವಿ ರವಿ, ಮಹೇಶ್, ರವಿ, ಪ್ರವೀಣ್ ಶೆಟ್ಟಿ, ಕಾರ್ತಿಕ್ ಗೌಡ(ಪಂಪ), ವಿನೋದ್, ದಿಲೀಪ್, ಭರತ್, ಶರತ್, ಜಗದೀಶ್, ಪೃಥ್ವಿ, ಹರ್ಷಿತ್ ಮಾದೇವ್, ಮನೋಜ್ ಇತರರು ಉಪಸ್ಥಿತರಿದ್ದರು.

ಆಯಿಷ್‌ನಲ್ಲಿ ನಿಂತರೆ, ನಡೆದರೆ ನಿಮ್ಮ ಮೇಲೆ ಚಿನ್ನದ ಮಳೆಯಾಗುತ್ತೆ...!?



ಮೈಸೂರಿನಲ್ಲಿರುವ ಅಖಿಲ ಭಾರತ ವಾಕ್ ಮತ್ತು ಶ್ರವಣ ಸಂಸ್ಥೆ (ಆಯಿಷ್)

ಮೈಸೂರು, ಮಾ.9(ಎಂಕೆ)– ಸಾಂಸ್ಕೃತಿಕ ನಗರಿ ಮೈಸೂರಿನಲ್ಲಿರುವ ಅಖಿಲ ಭಾರತ ವಾಕ್ ಮತ್ತು ಶ್ರವಣ ಸಂಸ್ಥೆ (ಆಯಿಷ್)ಯ ಆವರಣದಲ್ಲಿ ವಿಹರಿಸುವವರ ಮೇಲೆ ಬೀಳಲಿದೆ ಚಿನ್ನದ ಮಳೆ...!

ದಿನೇ ದಿನೆ ಗಗನಕ್ಕೇರುತ್ತಿರುವ ಚಿನ್ನದ ಬೆಲೆಯ ನಡುವೆ ಚಿನ್ನದ ಮಳೆಯೇ ಏನಿದು...!! ಇಂತಹ ಹಲವು ಕೌತುಕಗಳು ನಿಮ್ಮ ಮನಸ್ಸಲ್ಲಿ ಮೂಡುವ ಮುನ್ನವೇ ಆಯಿಷ್ ಆವರಣದಲ್ಲಿ ವಿಹರಿಸಿ ಚಿನ್ನದ ಮಳೆಯಲ್ಲಿ ನೆನೆದು ಆಹ್ಲಾದಕರ ಅನುಭವ ಪಡೆಯಿರಿ...

ಅಂದಹಾಗೆ ಆಯಿಷ್ ಆವರಣದಲ್ಲಿರುವ ಕಟ್ಟಡಗಳ ಮೇಲೆ, ವಿಹರಿಸುವ ಸ್ಥಳದಲ್ಲೆಲ್ಲಾ ಆವರಿಸಿರುವ 'ಗೋಲ್ಡನ್ ಶವರ್ ಟ್ರೀ' ಎಂದೇ ಕರೆಯುವ 'ಕ್ಯಾಸಿಂಯಾ ಫಿಸ್ಟುಲಾ (Cassia fistula)' ಬಳ್ಳಿಯ ಹಸಿರೆಲೆಗಳ ನಡುವೆ ಕಂಗೊಳಿಸುವುತ್ತಿರುವ ಚಿನ್ನದ ಬಣ್ಣವುಳ್ಳ ಹೂಗಳ ರಾಶಿ ಚಿನ್ನದ ಮಳೆಯನ್ನೇ ಸುರಿಸುವ ಅನುಭವ ನೀಡುತ್ತಿವೆ.

ನೈಸರ್ಗಿಕವಾಗಿ ಶುದ್ಧ ಚಿನ್ನದಂತೆ ಹಳದಿ (ಕೆಂಪು–ಹಳದಿ ಮಿಶ್ರಿತ) ಬಣ್ಣವುಳ್ಳ ಗೋಲ್ಡನ್ ಶವರ್ ಟ್ರೀಯ ಹೂಗಳು ಆಯಿಷ್ ಆವರಣಕ್ಕೆ ಹೊಸ ರೂಪವನ್ನಷ್ಟೇ ಅಲ್ಲದೆ ಪ್ರಕೃತಿ ಸೌಂದರ್ಯವನ್ನು ಇಮ್ಮಡಿಗೊಳಿಸಿದೆ ಆಯಿಷ್‌ಗೆ ಬರುವ ವಿಶೇಷಚೇತನ ಪುಟಾಣಿಗಳ ಚೆಂದದ ಮೊಗದ ಮೇಲೆ ಮಳೆ ಹನಿಯಂತೆ ಬಿದ್ದು, ಮುತ್ತಿಕ್ಕುವ ಹೂಗಳು ಮನಸ್ಸಿಗೆ ಮುದ ನೀಡಲಿವೆ.

ವಾಕ್ ಮತ್ತು ಶ್ರವಣ ದೋಷವುಳ್ಳ ಚಿಣ್ಣರ ಚಿಲಿಪಿಲಿಗೆ ಇಂಬು ನೀಡುತ್ತಿರುವ ಹಳದಿ ಹೂವಿನ ಹೊದಿಕೆ ವಿಶೇಷ ಮಕ್ಕಳಲ್ಲಿ ಕಲಿಯುವ, ಆಟವಾಡುವ ಆತ್ಮವಿಶ್ವಾಸದ ಚಿಲುಮೆಯಾಗಿವೆ. ಮಾಗಿ ಮಾಸ ಮುಗಿದು ಬೇಸಿಗೆ ಆರಂಭವಾಗುತ್ತಿದ್ದಂತೆ ಅರಳುವ ಈ ಹಳದಿ ಬಣ್ಣದ ಆಕರ್ಷಕ 'ಗೋಲ್ಡನ್ ಶವರ್ ಟ್ರೀ' ಬಳ್ಳಿಯ ಹೂಗಳು, ಆಯಿಷ್‌ನಲ್ಲಿ ವರ್ಣರಂಜಿತ ವಾತಾವರಣವನ್ನು ಸೃಷ್ಟಿಸಿದ್ದು, ನೋಡುಗರ ಕಣ್ಮನ ಸೆಳೆಯುತ್ತಿವೆ.

ಹಾಗೆಯೇ ಆಯಿಷ್‌ನಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಶ್ರವಣಶಾಸ್ತ್ರಜ್ಞರು, ವಾಕ್ ಭಾಷಾ ರೋಗಶಾಸ್ತ್ರಜ್ಞರು, ವಿಶೇಷ ಶಿಕ್ಷಕರು, ಇಎನ್‌ಟಿ ತಜ್ಞರು, ಮನಶಾಸ್ತ್ರಜ್ಞರು ಮತ್ತು ಇತರ ಸಂಬಂಧಿತ ಆರೋಗ್ಯ ವೃತ್ತಿಪರರ ತಂಡಗಳ ನಡುವೆ ಹೂಗಳು ಕೂಡ ಮಕ್ಕಳ ಆರೈಕೆಗೆ, ಚಿಕಿತ್ಸೆಗೆ ಪ್ರಾಕೃತಿಕ ಬಲ ನೀಡುತ್ತಿವೆ.

ಪ್ರತಿಯೊಂದು ಸಸ್ಯಕ್ಕೂ ಬೆಳಕು, ನೀರು ಮತ್ತು ಮಣ್ಣಿನ ಸಂಯೋಜನೆಯ ಅಗತ್ಯವಿದೆ ಎಂಬುದನ್ನು ಮಕ್ಕಳಿಗೆ ಅರ್ಥ ಮಾಡಿಸಲು ಇಲ್ಲಿನ ಸುಂದರ ತಾಣ ಸಹಕಾರಿಯಾಗುತ್ತಿದೆ. ಆಯಿಷ್‌ನ ಆವರಣದಲ್ಲಿರುವ ಹಸಿರು ಸ್ಥಳಗಳು, ಹೂಬಿಡುವ ಬಳ್ಳಿಗಳು ಮತ್ತು ನೆರಳಿನ ಕೆಳಗೆ ಕುಳಿತು ಶಾಂತ ವಾತಾವರಣವನ್ನು ಅನುಭವಿಸುತ್ತಾ ಮನಸ್ಸನ್ನೂ ಪ್ರಶಾಂತವನ್ನಾಗಿಸಬಹುದಾಗಿದೆ ಚಿಕಿತ್ಸಾ ಕೊಠಡಿಗಳ ಕಿಟಕಿಗಳ ನಡುವೆ ಇಣುಕುವ ಹೂ ಬಳ್ಳಿಗಳು ಶೃಂಗಾರಮಯ ಮಾತ್ರವಲ್ಲದೆ ನಿರ್ಮಲ ಗಾಳಿಯನ್ನು ನೀಡುವ ಹೊರಸೂಸುವ ಮೂಲಕ ಆರೋಗ್ಯದಾಯಕವಾಗಿಯೂ ಸಹಕರಿಸುತ್ತಿವೆ.

ಆಯಿಷ್‌ನಲ್ಲಿ ಹಳದಿ ವನ: ಅಖಿಲ ಭಾರತ ವಾಕ್ ಮತ್ತು ಶ್ರವಣ ಸಂಸ್ಥೆ ಆವರಣದಲ್ಲಿ ಹಳದಿ ವನ ಸೃಷ್ಟಿಯಾಗಿದೆ. ಕಣ್ಣು ಹಾಯಿಸಿದ ಕಡೆಯೆಲ್ಲಾ, ವಿಹರಿಸಿದ ಸ್ಥಳದಲ್ಲಿ ಹೂವಿನ ಪರಿಮಳ ಬೀರುತ್ತಿದೆ. ಪ್ರತಿನಿತ್ಯ ಆಯಿಷ್‌ಗೆ ಭೇಟಿ ನೀಡುವವರು ಚಿಕಿತ್ಸೆಯ ಜೊತೆಗೆ ಪ್ರಕೃತಿ ಸೌಂದರ್ಯವನ್ನು ಸವಿಯುತ್ತಿದ್ದಾರೆ. ಕಾಳಜಿಯೇ ಧ್ಯೇಯವಾಗಿರುವ ಆಯಿಷ್‌ಗೆ 'ಗೋಲ್ಡನ್ ಶವರ್ ಟ್ರೀ' ಬಳ್ಳಿಯ ಹೂಗಳು ಚಿನ್ನದ ಹೊದಿಕೆಯನ್ನೇ ಹೊದ್ದಿವೆ ಎಂದು ಆಯಿಷ್ ನಿರ್ದೇಶಕರಾದ ಡಾ.ಪುಷ್ಪವತಿ 'ಮೈಸೂರು ಮಿತ್ರ'ನಿಗೆ ತಿಳಿಸಿದರು.



ಇರಾನ್ ಪರಮೋಚ್ಛ ನಾಯಕನಾಗಿ ಮೊಜ್ತಬಾ ಖಮೇನಿ ನೇಮಕ



ಸರ್ಕಾರದ ಅಧಿಕೃತ ಘೋಷಣೆ

ಟೆಹ್ರಾನ್: ಅಮೆರಿಕಾ ಮತ್ತು ಇಸ್ರೇಲ್ ನೇತೃತ್ವದ ಆಪರೇಶನ್ ಎಪಿಕ್ ಫ್ಯೂರಿ ಹತ್ತನೇ ದಿನಕ್ಕೆ ಕಾಲಿಟ್ಟಿದ್ದು, ಇರಾನ್‌ನ ನೂತನ ಪರಮೋಚ್ಛ ನಾಯಕನ ಹೆಸರನ್ನು ಸರ್ಕಾರ ಘೋಷಿಸಿದೆ.

ಇರಾನ್ ದೇಶದ ಮಾಧ್ಯಮಗಳ ವರದಿಯ ಪ್ರಕಾರ, ಮೊಜ್ತಬಾ ಖಮೇನಿ ಅವರು ತಮ್ಮ ತಂದೆ ಅಯತೊಲ್ಲಾ ಅಲಿ ಖಮೇನಿ ಅವರ ನಂತರ ಸುಪ್ರೀಂ ಲೀಡರ್ ಆಗಿ ಅಧಿಕಾರ ವಹಿಸಲಿದ್ದಾರೆ. ಅಲಿ ಖಮೇನಿ ಅವರು ಟೆಹ್ರಾನ್‌ನಲ್ಲಿರುವ ತಮ್ಮ ನಿವಾಸದಲ್ಲಿ ಅಮೆರಿಕಾ ಮತ್ತು ಇಸ್ರೇಲ್ ನಡೆಸಿದ ಮೊದಲ ದಾಳಿ ವೇಳೆ ಹತ್ಯೆಗೀಡಾಗಿದ್ದರು. ಇಸ್ರೇಲ್ ಈಗಾಗಲೇ ಇರಾನ್‌ಗೆ ಎಚ್ಚರಿಕೆ ನೀಡಿದ್ದು, ಹೊಸ ಉತ್ತರಾಧಿಕಾರಿಯನ್ನು ನಾವು ಬಿಡುವುದಿಲ್ಲ, ದಾಳಿ ನಡೆಸುತ್ತೇವೆ ಎಂದು ಎಚ್ಚರಿಕೆ ನೀಡಿದೆ.

ಇದೇ ವೇಳೆ, ಯುಎಇಯಲ್ಲಿ ಇರಾನ್ ನಡೆಸಿದ ದಾಳಿಗಳು ನಿನ್ನೆ ಸಹ ಅಬುಧಾಬಿಯನ್ನು ಗುರಿಯಾಗಿಸಿಕೊಂಡು ಮುಂದುವರಿದವು, ಆದರೆ ಕ್ಷಿಪಣಿಗಳನ್ನು ಮಧ್ಯದಲ್ಲೇ ತಡೆಹಿಡಿಯಲಾಯಿತು.

ದೆಹಲಿ ಗಲಭೆ ಪ್ರಕರಣ: ಶರ್ಜೀಲ್ ಇಮಾಮ್‌ಗೆ ಮಧ್ಯಂತರ ಜಾಮೀನು

ನವದೆಹಲಿ: 2020 ರ ಈಶಾನ್ಯ ದೆಹಲಿ ಗಲಭೆ ಪಿತೂರಿ ಪ್ರಕರಣದ ಆರೋಪಿ ಶಾರ್ಜೀಲ್ ಇಮಾಮ್‌ಗೆ ತನ್ನ ಸಹೋದರನ ಮದುವೆಯಲ್ಲಿ ಪಾಲ್ಗೊಳ್ಳಲು ಮತ್ತು ಅನಾರೋಗ್ಯ ಪೀಡಿತ ತಾಯಿಯನ್ನು ನೋಡಿಕೊಳ್ಳಲು ನ್ಯಾಯಾಲಯ 10 ದಿನಗಳ ಮಧ್ಯಂತರ ಜಾಮೀನು ನೀಡಿದೆ.

CHANGE OF NAME

I, Ajit Janaba Desai, S/o. Janaba Krishna Desai, residing at No-173, 10th Cross, 3rd stage, Gokulam, Devaraja Mohalla, Mysore - 570002, Karnataka India have changed my name from **Ajit Desai to Ajit Janaba Desai** on my own free will vide affidavit sworn in before Notary **C. Mangala, Mysore on 06.03.2026**

Sd/- Ajit Janaba Desai

ಸಾರ್ವಜನಿಕ ತಿಳುವಳಿಕೆ ಪತ್ರ

ನಮ್ಮ ಕಕ್ಷಿದಾರರು ಮೈಸೂರು ಸಿಟಿ ಬೋಗಾದಿ ಎಸ್.ಬಿ.ಎಂ. ಬಡಾವಣೆ, ಇ-ಬ್ಲ್ಯಾಕ್ ಮನೆ ನಂ. 239 ರಲ್ಲಿ ವಾಸವಾಗಿರುವ ಗಜಾನನ ನಾರಾಯಣ ರಾಯ್ಕರ್‌ರವರ – ಮಗ ಶ್ರೀ ನಾಗರಾಜು ಜಿ. ರಾಯ್ಕರ್‌ರವರಿಂದ ಷೆಡ್ಯೂಲ್ ಆಸ್ತಿಯನ್ನು ಖರೀದಿ ಮಾಡಿಕೊಳ್ಳಲು ಒಪ್ಪಂದ ಮಾಡಿಕೊಂಡಿದ್ದು ಈ ಕ್ರಯದ ವ್ಯವಹಾರಕ್ಕೆ ಯಾರದಾದರೂ ಯಾವುದಾದರೂ ತಕರಾರು ಅಥವಾ ಈ ಆಸ್ತಿಯ ಬಗ್ಗೆ ಹಕ್ಕು ಬಾಧ್ಯತೆಗಳಿದ್ದಲ್ಲಿ ಈ ತಿಳುವಳಿಕೆ ಪತ್ರ ಪ್ರಕಟವಾದ ಒಂದು ವಾರದ ಒಳಗಾಗಿ ಲಿಖಿತವಾಗಿ ಅದಕ್ಕೆ ಸಂಬಂಧಿಸಿದ ದಾಖಲಾತಿಗಳೊಡನೆ ಈ ಕೆಳಗೆ ಸಹಿ ಮಾಡಿದವರಿಗೆ ಸಲ್ಲಿಸಬಹುದಾಗಿದೆ. ಒಂದು ವೇಳೆ ಯಾವುದೇ ಕಾನೂನುಬದ್ಧ ತಕರಾರು ಬರದಿದ್ದಲ್ಲಿ ಈ ವ್ಯವಹಾರಕ್ಕೆ ಯಾರದು ಯಾವ ಆಕ್ಷೇಪಣೆಯೂ ಇಲ್ಲ ಎಂದು ತಿಳಿದು ಕ್ರಯದ ವ್ಯವಹಾರವನ್ನು ಪೂರ್ಣಗೊಳಿಸಲಾಗುವುದು ಮತ್ತು ನಂತರ ಬರುವ ಯಾವ ತಕರಾರಿಗೂ ನಮ್ಮ ಕಕ್ಷಿದಾರರು ಬಾಧ್ಯರಾಗುವುದಿಲ್ಲ ಎಂದು ತಿಳಿಯುವುದು.

ಷೆಡ್ಯೂಲ್

ಶ್ರೀರಂಗಪಟ್ಟಣ ತಾಲೂಕು, ಬೆಳಗೊಳ ಹೋಬಳಿ, ಬೆಳಗೊಳ ಗ್ರಾಮದ ಸರ್ವೆ ನಂ. 1269/7 ರಲ್ಲಿ 4 ಗುಂಟೆ, ಆಸ್ತಿಗೆ ಚಕ್ಕುಬಂದಿ: ಪೂರ್ವಕ್ಕೆ: ರಸ್ತೆ ; ಪಶ್ಚಿಮಕ್ಕೆ: ರಸ್ತೆ ; ಉತ್ತರಕ್ಕೆ: ಹೆಳವೇಗೌಡರ ಜಮೀನು ; ದಕ್ಷಿಣಕ್ಕೆ: ರಸ್ತೆ ಮತ್ತು ಲಕ್ಷ್ಮಣ್‌ರವರ ಜಮೀನು.

Sd/- O. Shama Bhat, B.A., LL.B.
O. Sathisha, B.Sc., LL.B.,
Advocates, #20/C, 2nd Floor,
Near Airlines Hotel, Jayalakshmi
Vilas Road, Chamarajapuram,
Mysuru-570 005.
Ph: 0821-4262475

Date: 9-3-2026

ಮಾನ್ಯ ಜಿಲ್ಲಾಧಿಕಾರಿಗಳ ತಾಂತ್ರಿಕ ಸಹಾಯಕರು ಹಾಗೂ ಭೂ ದಾಖಲೆಗಳ ಉಪ ನಿರ್ದೇಶಕರು, ಮಂಡ್ಯ.

ಮೇಲ್ಮನವಿ ಸಂಖ್ಯೆ: 833/2025

ಮೇಲ್ಮನವಿದಾರರು: ಶ್ರೀಮತಿ ಮಮತ, ಕೋಂ ನಂಜುಂಡೇಗೌಡ, ಹೊಸಹಳ್ಳಿ ಗ್ರಾಮ, ಬೆಳಗೊಳ ಹೋಬಳಿ, ಶ್ರೀರಂಗಪಟ್ಟಣ ತಾಲ್ಲೂಕು, ಮಂಡ್ಯ ಜಿಲ್ಲೆ

ವಿರುದ್ಧ

ಎದುರುದಾರರು

1. ಶ್ರೀ ಹೆಚ್.ಟಿ.ಶ್ರೀನಿವಾಸ್, ಬಿನ್ ತ್ಯಾಗರಾಜು, ವಯಸ್ಸು 55 ವರ್ಷ, ವಿಳಾಸ: ಹೊಸ ಆನಂದೂರು ಗ್ರಾಮ ಬೆಳಗೊಳ ಹೋಬಳಿ, ಶ್ರೀರಂಗಪಟ್ಟಣ ತಾಲ್ಲೂಕು, ಮಂಡ್ಯ ಜಿಲ್ಲೆ : 2. ಶ್ರೀ ಐ.ಜಿ.ಚಂದ್ರಶೇಖರ್, ಬಿನ್ ಗಂಗಾನಾಯಕ, ವಯಸ್ಕರು, ವಿಳಾಸ: ಮನೆ ನಂ. 248 ವಿನಾಯಕ ದೇವಸ್ಥಾನದ ಎದುರು ಬೃಂದಾವನ ಬಡಾವಣೆ, ಮೈಸೂರು–20 : 3. ಶ್ರೀಮತಿ ಕೆ.ಜಿ.ಮಂಜುಳ, ಕೋಂ ಎಸ್.ಟಿ.ಸೋಮಶೇಖರ್, ವಯಸ್ಕರು, ವಿಳಾಸ: ಕಡತನಾಳು ಗ್ರಾಮ, ಕೆಶೆಟ್ಟಿಹಳ್ಳಿ ಹೋಬಳಿ, ಶ್ರೀರಂಗಪಟ್ಟಣ ತಾಲ್ಲೂಕು : 5. ಶ್ರೀ ಹೆಚ್.ಎಂ.ಸಿದ್ದಯ್ಯ, ಬಿನ್ ಮುದ್ದೇಗೌಡ, ವಯಸ್ಕರು, ವಿಳಾಸ: ಹುಲಿವಾನ ಗ್ರಾಮ ಕೆರಗೋಡು ಹೋಬಳಿ, ಮಂಡ್ಯ ತಾಲ್ಲೂಕು. : 7. ಶ್ರೀಮತಿ ಕೆ.ಬಿ.ಸುಜಾತ, ಕೋಂ ಟಿ.ತಮ್ಮೇಗೌಡ, ವಯಸ್ಕರು, ವಿಳಾಸ: ಮೊಗರಹಳ್ಳಿ ಗ್ರಾಮ, ಬೆಳಗೊಳ ಹೋಬಳಿ, ಶ್ರೀರಂಗಟ್ಟಣ ತಾಲ್ಲೂಕು : 9. ಶ್ರೀ ಎ.ಪಿ.ವಡಿವೇಲ್ ಬಿನ್ ಪಳನಿಸ್ವಾಮಿ ಸುಮಾರು 65ವರ್ಷ ವಿಳಾಸ: ಮೊಗರಹಳ್ಳಿ ಗ್ರಾಮ ಬೆಳಗೊಳ ಹೋಬಳಿ, ಶ್ರೀರಂಗಪಟ್ಟಣ ತಾಲ್ಲೂಕು.

ಪತ್ರಿಕಾ ಪ್ರಕಟಣೆ

ಈ ಪ್ರಕರಣದ ಮೇಲ್ಮನವಿದಾರು ಕರ್ನಾಟಕ ಭೂ ಕಂದಾಯ ಅಧಿನಿಯಮ 1964 ರ ಕಲಂ 49(ಎ)ರಡಿಯಲ್ಲಿ ಎದುರುದಾರರ ವಿರುದ್ಧ ಮೇಲ್ಕಂಡ ನ್ಯಾಯಾಲಯದಲ್ಲಿ ಅಪೀಲು ಸಂಖ್ಯೆ 833/2025 ರಂತೆ ಮೇಲ್ಮನವಿ ಸಲ್ಲಿಸಿ, ಶ್ರೀರಂಗಪಟ್ಟಣ ತಾಲ್ಲೂಕು, ಬೆಳಗೊಳ ಹೋಬಳಿ, ಮೊಗರಹಳ್ಳಿ ಗ್ರಾಮದಲ್ಲಿರುವ ಸರ್ವೆ ನಂ. 29/1 ರಲ್ಲಿರುವ ಸ್ವತ್ತನ್ನು 9ನೇ ಎದುರುದಾರರು ಸ.ನಂ.29/6 ಎಂದು ಅವರ ಸ್ವಾಧೀನಕ್ಕೆ ವಿರುದ್ಧವಾಗಿ ನಕಾಶೆ ಮತ್ತು ತತ್ಕಾಲ್ ಪೋಡಿ ಮಾಡಿಸಿಕೊಂಡಿರುವುದನ್ನು ಪ್ರಶ್ನಿಸಿದ್ದು, ಸದರಿ ಅರ್ಜಿಯಲ್ಲಿ ಮೇಲಿನ ಮೇಲ್ಕಾಣಿಸಿರುವ ನೀವುಗಳು ಎದುರು ಪಕ್ಷಕಾರರಾಗಿದ್ದು, ಸದರಿ ಪ್ರಕರಣವು ಮೇಲ್ಕಂಡ ನ್ಯಾಯಾಲಯದಲ್ಲಿ ದಿನಾಂಕ 12/03/2026 ರಂದು ಸುನಾವಣೆಗೆ ಇದ್ದು, ಸದರಿ ದಿನಾಂಕದಂದು ನೀವುಗಳು ಮಧ್ಯಾಹ್ನ 03–00 ಗಂಟೆಗೆ ಮೇಲ್ಕಂಡ ನ್ಯಾಯಾಲಯಕ್ಕೆ ಖುದ್ದಾಗಿಯಾಗಲಿ ಅಥವಾ ವಕೀಲರ ಮೂಲಕವಾಗಲೀ ಹಾಜರಾಗಿ ತಮ್ಮ ಅಹವಾಲು/ತಕರಾರು ಇದ್ದಲ್ಲಿ ಸಲ್ಲಿಸತಕ್ಕದೆಂದು ತಿಳಿಯ ಪಡಿಸಲಾಗಿದೆ. ತಪ್ಪಿದ್ದಲ್ಲಿ ಸದರಿ ಪ್ರಕರಣವನ್ನು ಏಕಪಕ್ಷಿಯವಾಗಿ ಪರಿಗಣಿಸಿ ಪ್ರಕರಣವನ್ನು ಮುಂದುವರಿಸಲಾಗುವುದು. ನ್ಯಾಯಲಯದ ಆದೇಶದ ಮೇರೆಗೆ ಮೊಹರಿನೊಂದಿಗೆ ದಿನಾಂಕ: 26–02–2026 ರಂದು ನೋಟೀಸ್ ಪ್ರಚುರ ಪಡಿಸಲಾಗಿದೆ.

ನ್ಯಾಯಾಲಯದ ಅಪ್ಪಣೆ ಮೇರೆಗೆ
ಸಹಿ/– ಮಾನ್ಯ ಜಿಲ್ಲಾಧಿಕಾರಿಗಳ ತಾಂತ್ರಿಕ ಸಹಾಯಕರು ಹಾಗೂ ಪದನಿಮಿತ್ತ ಭೂ–ದಾಖಲೆಗಳ ಉಪನಿರ್ದೇಶಕರ ನ್ಯಾಯಲಯ, ಮಂಡ್ಯ

ಸಹಿ/– ಎಂ.ಜೆ.ಜೈನ್,
ಅರ್ಜಿದಾರರ ಪರ ವಕೀಲರು

24ನೇ ವಿವಾಹ ವಾರ್ಷಿಕೋತ್ಸವ



ಶ್ರೀಮತಿ ಮಹದೇವಮ್ಮ, ಶ್ರೀ ಗುರುಸ್ವಾಮಿ
ಕೊಡಗಾಪುರ

ಎಂದೆಂದೂ ನಗುನಗುತಾ ಜೀವನದುದ್ದಕ್ಕೂ ನೂರು ವರ್ಷ ಸುಖವಾಗಿ ಬಾಳಿ ಎಂದು ಹಾರೈಸುತ್ತ ನಿಮ್ಮನ್ನು ಒಂದು ಮಾಡಿದವರಾದ

ಕೆ ಬಿ ಹೆಮಚಂದ್ರ
ಹಿರಿಯ ವಕೀಲರು, ಸಿದ್ದಾಪುರ, ಕೊಡಗು

ಸಾರ್ವಜನಿಕ ಪ್ರಕಟಣೆ

ಸಾರ್ವಜನಿಕರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ, ಈ ಕೆಳಗೆ ವಿವರಿಸಿರುವ ಷೆಡ್ಯೂಲ್ ಸ್ವತ್ತಿನ ಮಾಲೀಕರಾದ ಮೆ. ಸೆಂಥಿಲ್ ಕುಮಾರ್ ಟೆಕ್ಸ್ ಟೈಲ್ಸ್, ಪರವಾಗಿ ಇದರ ವ್ಯವಸ್ಥಾಪಕ ಪಾಲುದಾರರಾದ ಶ್ರೀ. ಎಸ್.ವಿ. ಕಾಲಿಚೆಟ್ಟಿರವರ ಮಗ ಶ್ರೀ. ಜಯರಾಮನ್ ಕಾಲಿಚೆಟ್ಟಿ, ಈ ಕೆಳಗೆ ವಿವರಿಸಿರುವ ಷೆಡ್ಯೂಲ್ ಸ್ವತ್ತನ್ನು ನನ್ನ ಕಕ್ಷಿದಾರರಿಗೆ ಮಾರಾಟ ಮಾಡಲು ಅಪೇಕ್ಷಿಸಿರುತ್ತಾರೆ. ಅದರಂತೆ ನನ್ನ ಕಕ್ಷಿದಾರರು ಷೆಡ್ಯೂಲ್ ಸ್ವತ್ತನ್ನು ಶುದ್ಧಕ್ರಯಕ್ಕೆ ಪಡೆಯಲು ಸಿದ್ಧರಿರುವುದರಿಂದ ಸದರಿ ಸ್ವತ್ತಿನ ಮೇಲೆ ಯಾರಿಗಾದರೂ ಬ್ಯಾಂಕ್ ಮತ್ತು ಇನ್ನಿತರ ಆರ್ಥಿಕ ಸಂಸ್ಥೆಗಳನ್ನು ಒಳಗೊಂಡಂತೆ, ಯಾವುದೇ ರೀತಿಯ ಹಕ್ಕು, ಅಧಿಕಾರ, ಹಿತಾಸಕ್ತಿ, ಆಕ್ಷೇಪಣೆ, ಸಿವಿಲ್ ವ್ಯಾಜ್ಯ, ತಂಟೆ–ತಕರಾರುಗಳು ಇದ್ದಲ್ಲಿ ಈ ಪ್ರಕಟಣೆ ಪ್ರಕಟವಾದ ದಿನದಿಂದ 10 (ಹತ್ತು) ದಿನಗಳ ಒಳಗಾಗಿ ತಮ್ಮ ಆಕ್ಷೇಪಣೆಗಳನ್ನು ಲಿಖಿತ ರೂಪದಲ್ಲಿ ಅಥವಾ ಖುದ್ದಾಗಿ ಸೂಕ್ತ ದಾಖಲಾತಿಗಳೊಂದಿಗೆ ಈ ಕೆಳಗೆ ನಮೂದಿಸಿರುವ ಕಛೇರಿ ವಿಳಾಸಕ್ಕೆ ಸಲ್ಲಿಸಬಹುದಾಗಿದೆ. ತಪ್ಪಿದ್ದಲ್ಲಿ ನನ್ನ ಕಕ್ಷಿದಾರರು ಷೆಡ್ಯೂಲ್ ಸ್ವತ್ತನ್ನು ಶುದ್ಧಕ್ರಯಕ್ಕೆ ಪಡೆದುಕೊಳ್ಳುತ್ತಾರೆ. ಮೇಲ್ಕಂಡ ಅವಧಿ ನಂತರ ಬರುವ ಆಕ್ಷೇಪಣೆ, ತಂಟೆ–ತಕರಾರುಗಳಿಗೆ ನನ್ನ ಕಕ್ಷಿದಾರರು ಬಾಧ್ಯರಾಗುವುದಿಲ್ಲ ಎಂಬ ಅಂಶವನ್ನು ಈ ಮೂಲಕ ತಿಳಿಯಪಡಿಸಲಾಗಿದೆ.

ಷೆಡ್ಯೂಲ್ ಸ್ವತ್ತಿನ ವಿವರ

ಮೈಸೂರು, ಲಷ್ಕರ್ ಮೊಹಲ್ಲಾ, ಕೆ.ಟಿ. ರಸ್ತೆಯಲ್ಲಿರುವ ಸ್ವತ್ತಿನ ಸಂಖ್ಯೆ. 795, 795/1 (L2, L2/1), ರ ವಿಸ್ತೀರ್ಣ ಪೂರ್ವ–ಪಶ್ಚಿಮ 15.57 ಮೀಟರ್ ಮತ್ತು ಉತ್ತರ–ದಕ್ಷಿಣ 15.79 ಮೀಟರ್ ಉಳ್ಳ ಸ್ವತ್ತಿಗೆ ಚಕ್ಕುಬಂದಿ ಪೂರ್ವಕ್ಕೆ– ಕುಂಬಾರಗೇರಿ ರಸ್ತೆ ಪಶ್ಚಿಮಕ್ಕೆ – ಪಶ್ಚಿಮ ಪಾರ್ಶ್ವದಕಡೆಗಿರುವ ದಕ್ಷಿಣೋತ್ತರ 2 ಅಡಿಯ ಕಾಮನ್ ಪ್ಯಾಸೇಜ್ ಮತ್ತು ಅನಂತರಾಜಯ್ಯನವರ ಸ್ವತ್ತು [ಹಳೆಯ ಸಂಖ್ಯೆ 794 – L10], ಜಯಪದ್ಮ ಮತ್ತು ಇತರರುಗಳ ಸ್ವತ್ತು [ಹಳೆಯ ಸಂಖ್ಯೆ 791/A, (L9/A), 791/1B (L2/A), 794/A (L10/A), ಉತ್ತರಕ್ಕೆ – ಮೊಹಮ್ಮದ್ ಖಾನ್ ಸಾಹಿಬ್ ರವರ ಸ್ವತ್ತು [ಹಳೆಯ ಸಂಖ್ಯೆ 796-L3, 797-L3/1] ಮತ್ತು ಮಾಲೀಕರ ಉಳಿಕೆ ಸ್ವತ್ತಿನ ನಂ. 795, 795/1 (L2, L2/1) ಮತ್ತು ದಕ್ಷಿಣಕ್ಕೆ – ಡಿ. ವೆಂಕಟೇಶ್ ಮತ್ತು ಡಿ. ರಾಜು ರವರ ಸ್ವತ್ತು [ಹಳೆಯ ಸಂಖ್ಯೆ 795 – L2/11]. ಹಾಲೀ ಮೈಸೂರು ಮಹಾನಗರ ಪಾಲಿಕೆ ವ್ಯಾಪ್ತಿಗೊಳಪಟ್ಟಿದ್ದು, ಇ–ಸ್ವತ್ತಿನ ಸಂಖ್ಯೆ: 27-1-41-22A, ವಾರ್ಡ್ ಸಂಖ್ಯೆ 27, ಹಳೆಯ ಸಂಖ್ಯೆ ಮತ್ತು ಅಸೆಸ್ಮೆಂಟ್ ನಂ. 795, 795/1 (L2, L2/1), ರಲ್ಲಿ ಪೂರ್ತಾ ವಿಸ್ತೀರ್ಣ 341.44 ಚದರ ಮೀಟರ್, ಪೈಕಿ ದಕ್ಷಿಣ ಭಾಗದ ಮೇಲ್ಕಂಡ ಚೆಕ್ಕುಬಂದಿಯಲ್ಲಿರುವ 245.85 ಚದರ ಮೀಟರ್, ಮಾತ್ರ

ಎಸ್‌ಎಲ್‌ಡಿ ಲಾ ಫರ್ಮ್
ಸಹಿ/– ಶ್ರೀಲತಾ ದೀಕ್ಷಿತ್, ವಕೀಲರು
ನಂ. 1416, ನಾರಾಯಣಶಾಸ್ತ್ರಿ ರಸ್ತೆ, ಸಪ್ನ ಬುಕ್ ಹೌಸ್ ಹತ್ತಿರ, ಮೈಸೂರು. ಮೊ: 9844640641
email: sldlawfirm2021@gmail.com